TEXT CUT WITHIN THE BOOK ONLY

UNIVERSAL
LIBRARY
OU_200472
UNIVERSAL
LIBRARY

OUP--786—13-6-75—10,000.

OSMANIA UNIVERSITY LIBRARY

Call No. K83/S175 Accession No. K185

Author

Title

This book should be returned on or before the date last marked below.

ಶ್ರೀಃ.

ಶ್ರೀಮತ್ಸರಬ್ರಹ್ಮಣೇಪರಮಾತ್ಮನೇನಮಃ

ಶ್ರೀ ಕೃಷ್ಣಭಗವಂತನು ಅರ್ಜುನನಿಗೆ ಬೋಧಿಸಿದ

ವೇದಾಂತಸಾರ ಭರಿತವಾದ

ಶ್ರೀ ಕೃಷ್ಣ ಬೋಧಾಮೃತಸಾರ

— ಎಂಬ —

ಹನ್ನೆರಡುಜನರಾಜಪುತ್ರರಕಥೆಯು.

ಪೇ|| ದೇವನಹಳ್ಳಿ ಶಂಕರಶಾಸ್ತ್ರಿಗಳಿಂದ ರಚಿಸಲ್ಪಟ್ಟು

ಪರಿಷ್ಕರಿಸಲ್ಪಟ್ಟಿದೆ.

ಇದರ ಸ್ವಾತಂತ್ರ್ಯವನ್ನು ಪಡೆದಿರುವ

ಬೆಂಗಳೂರು ಸಿಟಿ ಚಿಕ್ಕಪೇಟೆ ಬುಕ್‌ಡಿಪೊ ಪ್ರೊಪ್ರೈಟರ್

ಟಿ. ಎಸ್. ಕೃಷ್ಣಯ್ಯ ಸೆಟ್ಟ್ಯರವರ

ಸ್ವಕೀಯ

ಶ್ರೀ ವೆಂಕಟೇಶ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಿ

ಪ್ರಚುರಗೊಂಡಿದೆ.

ಪ್ರಥಮ ಮುದ್ರಣ ೧,೫೦೦ ಪ್ರತಿಗಳು.

ರಿಜಸ್ಟರ್ಡ್ ಕಾಪಿರೈಟ್.

ಕ್ರಯ ೧೦ ಆಣೆ.

1920

ವಿಷಯಾನುಕ್ರಮಣಿಕೆ.

ಸಂಖ್ಯೆ. ಪುಟಸಂಖ್ಯೆ.

ಸತ್ಯಜಿತ್ತು ಮಹಾರಾಯನ ಕಥೆ

೧. ಸತ್ಯಜಿತ್ತು ಮಹಾರಾಯನಿಗೆ ಧರದ್ವಾಜಮುನಿಯು ಸಾಂಖ್ಯಸೂತ್ರವನ್ನು ಬೋಧಿಸಿದ್ದು. ೬

ಶಶಬಿಂದುಮಹಾರಾಯನ ಕಥೆ.

೨. ಶಶಬಿಂದು ಮಹಾರಾಯನಿಗೆ ಭಾಯಾಪುರುಷಲಕ್ಷಣವನ್ನು ಭಾಸ್ಕರಮುನಿಯು ಬೋಧಿಸಿದ್ದು. ೨೩

ಸೂರ್ಯಸೇನ ಮಹಾರಾಯನ ಕಥೆ.

೩. ಸೂರ್ಯಸೇನಮಹಾರಾಯನಿಗೆ ಬೌದ್ಧಮುನಿಯು ನಾದಾನಂದ ಪ್ರಭಾವವನ್ನು ಬೋಧಿಸಿದ್ದು. ೩೮

ಅಗ್ನಿದತ್ತಮಹಾರಾಯನ ಕಥೆ.

೪. ಅಗ್ನಿದತ್ತಮಹಾರಾಯನಿಗೆ ಜಟಿಲಮಹಾಮುನಿಯು ಪಂಚಮುದ್ರಿಕೆಯ ಪ್ರಭಾವವನ್ನು ಉಪದೇಶ ಮಾಡಿದ್ದು. ೪೭

ವಿಚಿತ್ರವಾಹನನ ಕಥೆ.

೫. ವಿಚಿತ್ರವಾಹನನಿಗೆ ಭುಜಂಪಮಹಾಮುನಿಯು ತಾರಕಮುಂತ್ರಪ್ರಭಾವವನ್ನು ಉಪದೇಶಿಸಿದ್ದು. ೫೪

ಶ್ರುತಕೀರ್ತಿಮಹಾರಾಯನ ಕಥೆ

೬ ಶ್ರುತಕೀರ್ತಿ ಮಹಾರಾಯನಿಗೆ ಕಾಳಿಕಾದೇವಿಯು ಸಚ್ಚಿದಾನಂದ ಪ್ರಭಾವವನ್ನು ವಿವರಿಸಿದ್ದು. ೬೨

ಚಂದ್ರಗುಪ್ತಮಹಾರಾಯನ ಕಥೆ.

೭. ಚಂದ್ರಗುಪ್ತ ಮಹಾರಾಯನಿಗೆ ಏಕದಂಡ ಮಹಾಮುನಿಯು ಸಾಕಾರಪ್ರಭಾವವನ್ನು ವಿವರಿಸಿದ್ದು ೭೧

ವಿಕ್ರಮಸೇನ ಮಹಾರಾಯನ ಕಥೆ.

೮. ವಿಕ್ರಮಸೇನಮಹಾರಾಯನಿಗೆ ಜಲಂಧರಮಹಾಮುನಿಯು ಬೋಧಿಸಿದ ನಿರಾಕಾರಪ್ರಭಾವ. ೧೦೭

ರಾಜಹಂಸಮಹಾರಾಯನ ಕಥೆ.

೯. ರಾಜಹಂಸಮಹಾರಾಯನಿಗೆ ವಾಲ್ಮೀಕಿಮುನಿಯು ಅಮನಸ್ಕಭಾವವನ್ನು ವಿವರಿಸಿದ್ದು. ೧೧೮

ವೀರಸೇನಮಹಾರಾಯನ ಕಥೆ.

೧೦. ವೀರಸೇನಮಹಾರಾಯನಿಗೆ ಅಗಸ್ತ್ಯಮಹರ್ಷಿಯು ಜ್ಞಾನದರ್ಪಣಭಾವವನ್ನು ವಿವರಿಸಿದ್ದು. ೧೩೭

ಸೂರ್ಯದತ್ತಮಹಾರಾಯನ ಕಥೆ.

೧೧. ಸೂರ್ಯದತ್ತಮಹಾರಾಯನಿಗೆ ನಾರಾಯಣಮುನಿಯು ಏಕಪ್ರಭಾವವನ್ನು ಬೋಧಿಸಿದ್ದು. ೧೫೪

ಚಂದ್ರಕೇತುಮಹಾರಾಯನ ಕಥೆ.

೧೨. ಚಂದ್ರಕೇತು ಮಹಾರಾಯನಿಗೆ ಭೃಗುಮುನಿಯು ವೇದಾಂತರಹಸ್ಯವನ್ನು ಬೋಧಿಸಿದ್ದು. ನಾಗಕನ್ನಕೆಯರಿಂದ ಚಂದ್ರಕೇತುವು ಅಚಲಪರಿಪೂರ್ಣ ಪ್ರಭಾವವನ್ನು ತಿಳಿದದ್ದು ೧೭೧

೧೩. ನರನಾರಾಯಣರಿಂದ ಖಾಂಡವವನವು ದಹಿಸಲ್ಪಟ್ಟು ಅಗ್ನಿಪುರುಷನ ಶಾಪವಿಮೋಚನೆಯಾದದ್ದು. ೧೯೨

॥ ಶ್ರೀಃ ॥

ಶ್ರೀಮತ್ಪರಬ್ರಹ್ಮಣೇ ಪರಮಾತ್ಮನೇನಮಃ.

ಶ್ರೀಕೃಷ್ಣಬೋಧಾಮೃತಸಾರ

ಎಂಬ

ಹನ್ನೆರಡು ಜನರಾಜರ ಕಥೆಯು.

ಶ್ಲೋ॥ ಚಿನ್ಮಯಾಮಿಹರಿಮೇವಸನ್ತತಂ । ಮುಂದವಮ್ಮಂದಹಿತಾನನಾಂಬುಜಂ ॥
ನನ್ದಗೋಪತನಯಂಪರಾತ್ಪರಂ । ನಾರದಾದಿಮುನಿವೃಂದವಂದಿತಂ ॥

ವಿಷಯ ವಿವರಣವು.

ಶ್ರೀಮದಖಂಡ ಭೂಮಂಡಲ ಕವಿಜನಪ್ರಕಾಶನೂ, ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧ್ಯಷ್ಟಾಂಗ ಲಕ್ಷಣ ಲಕ್ಷಿತನೂ, ಶ್ರೀಮನ್ನಾರಾಯಣ ಮೂರ್ತಿಯು ಅಂಕದಿಂದ ಉತ್ಪನ್ನನೂ ಆಗಿರುವ ಶ್ರೀಕೃಷ್ಣ ಭಗವಂತನಲ್ಲಿ ಪರಮ ಭಕ್ತಿಯನ್ನೂ, ನಿಷ್ಕಲ್ಮಷಹೃದಯವನ್ನೂ ಉಳ್ಳವನಾಗಿ, ಮತ್ತು ಸಕಲ ನಿಗಮಾಗಮ ಶಾಸ್ತ್ರ ಪುರಾಣೇತಿಹಾಸಜ್ಞನಾಗಿರುವ ಗುರುವಿನ ಪಾದಾರವಿಂದಗಳಿಗೆ ಮನಸ್ಸಿನಲ್ಲಿಯೇ ಭಕ್ತಿಪುರಸ್ಸರವಾದವಂದನೆಗಳನ್ನರ್ಪಿಸಿ, ಕೃಷ್ಣದ್ವೈಪಾಯನ ಮಹರ್ಷಿಗಳಿಗೆ ನಮಸ್ಕಾರವಂಗೈದು, ಆ ಮಹಾತ್ಮನಿಂದ ವಿರಚಿತವಾಗಿರುವ ಶ್ರೀ ಮಹಾಭಾರತದ ಆದಿಪರ್ವದಲ್ಲಿರತಕ್ಕ ಕೃಷ್ಣಾರ್ಜುನರು ವನವಾಸ ತಪಸ್ಸುತು ಕಾಲದಲ್ಲಿ ಯಮುನಾನದೀ ತೀರದೊಳು ಇರುವ ರಮ್ಯಗಿರಿ ಪರ್ವಾಂತದಲ್ಲಿ ಸುಖವಿಂದ ವಿಹರಿಸಿದರೆಂಬುದನ್ನೆ ಲಕ್ಷ್ಯವಾಗಿಟ್ಟುಕೊಂಡು, ಕೃಷ್ಣಾರ್ಜುನರೀರ್ವರಿಗೂ ಅತ್ಯಾನಂದವುಂಟಾದ ಕಾಲದಲ್ಲಿ ಶ್ರೀಕೃಷ್ಣ ಭಗವಂತನು ತನ್ನ ಬಕ್ತನಾದ ಅರ್ಜುನನಿಗೆ ಬೋಧಿಸಿದ ನೀತಿಕಥೆಗಳು.

ಪವಿತ್ರವಾಗಿರುವ ವೇದಾಂತ ರಹಸ್ಯವನ್ನು ಸಕಲ ಜನರೂ ಸುಲಭವಾಗಿ ತಿಳಿಯುವಂತೆಯೂ, ಶೃಂಗಾರರಸದಿಂದ ಆನಂದವುಂಟಾಗುವಂತೆಯೂ, ದೈವಭಕ್ತಿಯೂ ಗುರುಭಕ್ತಿಯೂ ಹೆಚ್ಚುವಂತೆಯೂ, ಒಂದೊಂದು ಕಥೆಯಲ್ಲಿ ಒಂದೊಂದು ವೇದಾಂತರಹಸ್ಯವು ಗರ್ಭಿತವಾಗಿರುವಂತೆ ಹನ್ನೆರಡು ಮಂದಿರಾಜರ ಕಥೆಗಳನ್ನು ಕನ್ನಡ ಭಾಷೆಯಲ್ಲಿ ಬರೆದಿಧೇನೆ. ಕೃಷ್ಣಪರಮಾತ್ಮನು ಅರ್ಜುನನಿಗೆ ಬೋಧಿಸಿದ ಅಮೃತಸದೃಶವಾದ ಈ ಗ್ರಂಥಕ್ಕೆ "ಕೃಷ್ಣಬೋಧಾಮೃತಸಾರ" ಎಂದು ಹೆಸರನ್ನಿಟ್ಟು ಕಥಾ ಪ್ರಾರಂಭವನ್ನು ಮಾಡುವೆನು.

ಶ್ರೀಮತ್ಸಕಲ ಭೂಮಂಡಲ ರಕ್ಷಕನಾಗಿಯೂ, ಸಚ್ಚಿದಾನಂದ ಸ್ವರೂಪನಾಗಿಯೂ, ಶಂಖ ಚಕ್ರಗದಾ ಪದ್ಮಂಗಳಿಂದಲಂಕೃತನಾಗಿಯೂ, ಪೀತಾಂಬರಧಾರಿಯಾಗಿಯೂ, ಆದಿಮಧ್ಯಾಂತ ರಹಿತನಾಗಿಯೂ, ಅಶರೀರನಾಗಿಯೂ, ಭಕ್ತರಕ್ಷಕನಾಗಿಯೂ ಇರುವ ಶ್ರೀವಿಷ್ಣುನಾರಾಯಣನು ಲೀಲೆಯಿಂದ ವಾಮನವಟುವೆಂಬಡೆದು, ಭೂವೈಕುಂಠವೆನಿಸಿಕೊಂಡಿರತಕ್ಕ ದ್ವಾರಕಾನಗರದೊಳು, ಲೀಲಾಜಾಲದಿಂದ ಗೋಪಿಕಾ ಸ್ತ್ರೀಯರಿಗೆ ಆನಂದಾತಿಶಯವನ್ನುಂಟುಮಾಡುತ್ತಾ ಸುಖವಾಗಿರುತ್ತಿದ್ದನು. ಹೀಗಿರುತ್ತಿರುವಲ್ಲಿ ಒಂದಾನೊಂದುದಿನ ದೇವಕೀ ವಸುದೇವರೀರ್ವರೂ ಶ್ರೀಕೃಷ್ಣನ ಅರಮನೆಗೆ ಬಂದು ಪುತ್ರನಾದ ಕೃಷ್ಣಮೂರ್ತಿಯಿಂದಲೂ, ಸೊಸೆಯರಾದ ರುಕ್ಮಿಣಿ ಸತ್ಯಭಾಮೆಯರಿಂದಲೂ ಪೂಜಿಸಲ್ಪಟ್ಟವರಾಗಿ, ಅವರನ್ನು ಆದರ್ವದಿಸಿ, ಅನಂತರ ಆ ಪುತ್ರನಾದ ಕೃಷ್ಣಸ್ವಾಮಿಯನ್ನು ಕುರಿತು "ಅಯ್ಯಾ; ಸುಕುಮಾರನೆ, ನಿನ್ನ ತಂಗಿಯಾದ ಸುಭದ್ರೆಯನ್ನು ಅರ್ಜುನನು ಒಂಬಿಯೊಳಾಗಿ ಕರೆದುಕೊಂಡು ಹೋಗಿ ಬಹಳದಿನಗಳಾದವು. ಆ ದಿನದಿಂದಲೂ ನಮ್ಮ ಸುಭದ್ರೆಯು ಬೇಗನೆ ಬರುವಳೊ ತಿಳಿಯದು. ನೀನು ಕೂಡಲೆ ಚತುರಂಗ ಬಲವನ್ನೂ, ವಿವಿಧವಾದ ವಸ್ತುಗಳನ್ನೂ ತೆಗೆದುಕೊಂಡು ಹೋಗಿ ಧರ್ಮಾದಿಗಳಾದ ನಿನ್ನ ಭಾವಮೈದಂದಿರಿಗೂ, ಸೋದರತ್ತೆಯಾದ ಕುಂತೀದೇವಿಗೂ, ಯಜ್ಞದಲ್ಲಿ ಹುಟ್ಟಿದ ದ್ರೌಪದೀ ದೇವಿಗೂ, ಅನೇಕಾನೇಕ ವಸ್ತುವಾಹನಗಳನ್ನು ಕೊಟ್ಟು ಬರುವೀಕೆಂದು ಹೇಳಿದನು. ಶ್ರೀಕೃಷ್ಣನಾದರೊ ಮಾತಾ ಪಿತೃಗಳಾದ ದೇವಕೀ ವಸುದೇವರ ಇಷ್ಟವನ್ನು ನೆರವೇರಿಸಬೇಕೆಂದು ತನ್ನ ಪತ್ನಿಯರಾದ ರುಕ್ಮಿಣಿ ಸತ್ಯಭಾಮೆಯರಿಗೆ ಸಂತೋಷದಿಂದ ತಿಳಿಸಿದವನಾಗಿ, ಸರ್ವತೋಭದ್ರವಾನಂಗಳಾದ ರಥಗಳನ್ನೂ, ಐರಾವತವೆಂಬ ಇಂದ್ರನ ಆನೆಗೆ ಸರಿಯಾದ ಆನೆಗಳನ್ನೂ, ಗಂಧರ್ವಾಶ್ವಂಗಳಿಗೆಣೆಯಾದ ತುರಗಂಗಳನ್ನೂ, ಮೃಗನಕಟ್ಟಾಳುಗಳಂತೆಭಯಂಕರಾಕಾರವಾದ ಕಾಲಾಳುಗಳನ್ನೂ ಮೇಲಾತಾಪಿ ಲಸ್ವಲ್ಪ ಸೌಂದ

ರ್ಯವನ್ನು ತಿರಸ್ಕರಿಸುವ ಸ್ತ್ರೀಜನವನ್ನೂ, ಅನೇಕ ದಾಸ ದಾಸೀ ಜನಂ
ಗಳನ್ನೂ, ನವರತ್ನ ಖಚಿತಗಳಾದ ಆಭರಣಗಳನ್ನೂ, ಸುವರ್ಣಮಯ
ವಾದ ಸಾಲಭಂಜಿಕೆಗಳನ್ನೂ, ವಿಧವಿಧವಾದ ಸುಗಂಧ ದ್ರವ್ಯಗಳನ್ನೂ ತೆ
ಗೆಯಿಸಿಕೊಂಡು ದಿವ್ಯ ರಥಾರೂಢನಾಗಿ ಮಂಗಳವಾದ್ಯಗಳೊಂದಿಗೆ ದ್ವಾ
ರಕಾಪಟ್ಟಣದ ರಾಜಬೀದಿಯಲ್ಲಿ ಬರುತ್ತಿರಲಾಗಿ, ಪುರಜನರೆಲ್ಲಾ ರೆಪ್ಪೆಒಟ್ಟ
ದ ನೇತ್ರಗಳಿಂದ ಆ ಕೃಷ್ಣಪರಮಾತ್ಮನನ್ನೇ ನೋಡುತ್ತಲಿದ್ದರು. ಅ
ವರಲ್ಲಿ ಕೆಲವರು ಈ ಮಹಾತ್ಮನು ಎಲ್ಲಿಗೆ ಹೋಗುವನೊ ಮತ್ತೆ ಯಾವಾ
ಗ ಹಿಂತಿರುಗುವನೊ ಎನ್ನುತ್ತಲಿದ್ದರು. ಇನ್ನೂ ಕೆಲವರು ನಮ್ಮನ್ನು
ತನ್ನ ಸೌಂದರ್ಯದಿಂದ ವಿವಶರಾಗಿ ಬಾಧೆಗೆ ಸಿಕ್ಕಿಸಿ ಈರೀತಿ ಹೊರಟು
ಹೋಗುತ್ತಿರುವುದರಿಂದ ಈ ಕೃಷ್ಣನು ಇನ್ನೆಂಥ ಕಠಿಣ ಹೃದಯನೋ
ಎನ್ನುತ್ತಿದ್ದರು. ಈ ಸ್ತ್ರೀಯರು ನುಡಿವ ಕಠಿಣವಾದ ಈ ಮಾತುಗಳನ್ನು
ಕೇಳಿದ ಮತ್ತೆ ಕೆಲವು ಯುವತಿಯರು ಈಗ ಹೊರಟುಹೋದರೂ ಶ್ರೀ
ಕೃಷ್ಣಮೂರುತಿಯು ಜಾಗ್ರತೆಯಾಗಿ ಹಿಂದಿರುಗಿ ಬಂದು ನಮಿಗೆ ಸುಖವ
ನ್ನುಂಟುಮಾಡುವನೆಂದು ಸಮಾಧಾನಪಡಿಸುತ್ತಿದ್ದನು. ಜೀರೆ ಕೆಲವುಮಂದಿ
ಕಾಮಿನಿಯರು ಕೃಷ್ಣಭಗವಂತನಸೌಂದರ್ಯವನ್ನು ಮನಸ್ಸಿನಲ್ಲಿ ಜ್ಞಾಪಕ
ಕ್ಕೆ ತಂದುಕೊಂಡು ಮೂರ್ಛಿತರಾಗುತ್ತಲಿದ್ದರು ಕೆಲವುಜನ ಯುವತಿಯ
ರು ಕೃಷ್ಣನನ್ನು ಆಗಲಿ ಒಂದು ಗಳಿಗೆಯಾದರೆ ಅಯೇ ನಮಿಗೆ ಒಂದು ಯು
ಗವಾಗುತ್ತೆಂದು ಪೇಚಾಡುತ್ತಲಿದ್ದರು. ಮತ್ತೆ ಕೆಲವರು ಸುಂದರಿಯರು
ಶ್ರೀಕೃಷ್ಣನು ಹೊರಟುಹೋಗುವನೆಂಬ ವ್ಯಥೆಯನ್ನು ಮನಸ್ಸಿನಲ್ಲಿ ಜ್ಞಾಪ
ಕಕ್ಕೆ ತಂದುಕೊಂಡು ಯಾವ ಮಾತನ್ನಾಡುವುದಕ್ಕೂ ತೋಚದೆ ಸ್ತಂಭೀ
ಭೂತರಾಗಿ ನಿಂತಿದ್ದರು. ತನ್ನನ್ನೆ ನಂಬಿಕೊಂಡಿರತಕ್ಕ ಸ್ತ್ರೀಯರು ಈ
ತೆರನಾಗಿ ವ್ಯಥೆಪಡುತ್ತಿರುವಾಗ ಶ್ರೀ ಕೃಷ್ಣನು ರಥಾರೂಢನಾಗಿ ತಡಮಾ
ಡದೆ ಪ್ರಯಾಣಮಾಡಿ, ಇಂದ್ರಪ್ರಸ್ಥ ಪುರಕ್ಕೆ ಹೊರಟುಹೋಗುತ್ತಲಿದ್ದನು
ಶ್ರೀ ಕೃಷ್ಣಸ್ವಾಮಿಯು ಇಂದ್ರಪ್ರಸ್ಥಪುರದ ಬಳಿ ಬರುತ್ತಿರುವ ಸುದ್ದಿ
ಯನ್ನು ಧರ್ಮಾತ್ಮನಾದ ಧರ್ಮನಂದನನು ಕೇಳಿದವನಾಗಿ, ಜಾಗ್ರತೆ
ಹೊರಟು, ಕೃಷ್ಣಮೂರುತಿಯನ್ನು ಎದುರ್ಗೊಂಡು, ಪಟ್ಟಣಕ್ಕೆ ಸುಖ
ವಾಗಿ ಕರೆದುಕೊಂಡು ಬಂದನು. ಆ ಬಳಿಕ ಧರ್ಮರಾಯನು ಕೃಷ್ಣಸ್ವಾ
ಮಿಯನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ಅಭ್ಯರ್ಹಣಾದಾ ವಿಗಳಿಂದ ಸತ್ಕರಿ
ಸಿದ ಬಳಿಕ ಪರಸ್ಪರ ಕುಶಲ ಪ್ರಶ್ನೆಗಳನ್ನು ಮಾಡುತ್ತಲಿದ್ದನು. ಆಗ ಧ
ರ್ಮರಾಯನು ,, ಮಹಾನುಭಾವನೇ ; ನಿನ್ನ ದರ್ಶನದಿಂದ ನಾವು ಧನ್ಯ
ರಾದೆವು. ನಮ್ಮ ಭಾಗ್ಯಕ್ಕೆ ಎಣೆಯೇ ಇಲ್ಲವು. ಎಲೈ ಮಹಾನುಭಾವನೆ;

ಪ್ರಶ್ನೆಗೈದ ಧರ್ಮಜನಿಗೆ ಶ್ರೀ ಕೃಷ್ಣಸ್ವಾಮಿಯು ತಾನು ಬಂದ ಸಮಾ
ಚಾರವನ್ನೆಲ್ಲಾ ವಿಸ್ತರಿಸಿದನು. ಆ ಬಳಿಕ ಶ್ರೀ ಕೃಷ್ಣಮೂರ್ತಿಯು ತಾ
ನು ತಂದಿದ್ದ ದಿವ್ಯವಾದ ವಸ್ತುಗಳನ್ನು ಭಾವಮೈದಂದರಾದ ಧರ್ಮರಾ
ಯ,ಭೀಮ,ಅರ್ಜುನ,ನಕುಲ,ಸಹದೇವರೆಂಬ ಐವರಿಗೂ ಬೀರೆಬೀರೆಯಾಗಿ
ಕೊಟ್ಟು, ಅಂತಃಪುರದಲ್ಲಿದ್ದ ತನ್ನ ಸೋದರತ್ತೆಯಾದ ಕುಂತೀ ದೇವಿಗೆ
ನಮಸ್ಕಾರವಮಾಡಿ, ಆಕೆಯ ಆಶೀರ್ವಚನವಂ ಕೈಕೊಂಡು, ತಾನು ತಂ
ದಿದ್ದ ದಿವ್ಯೋ ವಸ್ತುಗಳನ್ನು ಆಕೆಯು ಕಾಣದಂತೆ ಅಲ್ಲಿಯೇ ಇರಿಸಿದವನಾ
ಗಿ, ದ್ರೌಪದೀ ಸುಭದ್ರೆಯರಿಗೆ ವಿಧವಿಧವಾದ ವಸ್ತ್ರಾಭರಣಗಳನ್ನು ಕೊ
ಟ್ಟು ಸಂತೈಸಿ, ತಾನು ತಂದಿದ್ದ ವಿವಿಧ ವಸ್ತುಗಳನ್ನೂ, ದಾಸದಾಸಿಯು
ರನ್ನೂ ತಂಗಿಯಾದ ಸುಭದ್ರೆಗೆ ಒಪ್ಪಿಸಿ, ಸಾಧುವಾದ ಬುದ್ಧಿ ಮಾತುಗ
ಳನ್ನು ಜೋಧಿಸಿ, ಧರ್ಮನಂದನನಿಗೆ ಕಾಣದಂತೆ ತಾನು ತಂದಿದ್ದ
ಚತುರಂಗ ಬಲವನ್ನೂ ಒಪ್ಪಿಸಿದನು. ಇದನ್ನು ತಿಳಿದ ಧರ್ಮಪುತ್ರ
ನಾದರೊ, ಮಹಾತ್ಮನಾದ ಕೃಷ್ಣ ಭಗವಂತನೆ, ನಿನ್ನ ಕೃಪಾಕಟಾಕ್ಷದಿಂ
ದ ನಾವು ಸದಾ ಪೋಷಿತರಾಗಿರುವಲ್ಲಿ ಈ ಚತುರಂಗ ಬಲದಿಂದ ನಮಿಗೇ
ನು ಪ್ರಯೋಜನವೆಂದು ನಾನಾ ವಿಧವಾಗಿ ಶ್ರೀ ಕೃಷ್ಣನ ಗುಣಾವಳಿಯ
ನ್ನು ಕೀರ್ತಿಸುತ್ತಲೂ, ಆ ಭಗವಂತನಿಂದ ಧರ್ಮಾಧರ್ಮ ವಿಚಾರವಂ ಚ
ರ್ಚಿಸಿ ತಿಳಿದುಕೊಳ್ಳುತ್ತಲೂ ಸುಖವಿಂದ ಇರುತ್ತಿದ್ದನು. ಹೀಗಿರುವಲ್ಲಿ ಒಂ
ದಾನೊಂದು ದಿನ ಅರ್ಜುನನು ಕೃಷ್ಣಸ್ವಾಮಿಯನ್ನು ಕುರಿತು, " ಎಲ್ಲಿ
ಪರಮಾತ್ಮನೆ, ಈ ವನವಾಸಾವಧಿಯು ಕಾಲದಲ್ಲಿ ನಾವೀರ್ವರೂ ಆನಂದದಾ
ಯಕವಾದ ಯಮುನಾನದೀ ಪ್ರಾಂತಕ್ಕೆ ಹೋಗಿ ಸಂತೋಷದಿಂದ ಕಾ
ಲವಂ ಕಳೆದುಕೊಂಡು ಬರೋಣವೆನ್ನಲು, ಶ್ರೀ ಕೃಷ್ಣನು ಅರ್ಜುನನಆಕೆ
ಯನ್ನು ನೆರವೇರಿಸಲೋಸುಗ ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಆಗ
ಅರ್ಜುನನು ಅನೇಕ ಭೋಜನ ಪದಾರ್ಥಗಳನ್ನೂ ತೆಗೆಯಿಸಿಕೊಂಡು ಪ
ರಿಚಾರಕ ಜನರೊಂದಿಗೆ ಶ್ರೀ ಕೃಷ್ಣನ ಜೊತೆಯಲ್ಲಿ ಅಶ್ವಾರೂಢನಾಗಿ ಯ
ಮುನಾನದೀ ಪ್ರಾಂತಕ್ಕೆ ಪ್ರಯಾಣಮಾಡಿದನು. ಆಗ ಕೃಷ್ಣಾರ್ಜುನರಿಬ್ಬ
ರೂ ದಾರಿಯಲ್ಲಿ ಸಿಕ್ಕುವ ವನಮೃಗಗಳನ್ನು ಬೇಟೆಯಾಡುತ್ತಲೂ, ಸರೋ
ವರಗಳಲ್ಲಿ ಇಳಿದು ಪರಸ್ಪರ ಜುರಡಿನಿಂದ ಈಜಾಡುತ್ತಲೂ, ಅಲ್ಲಲ್ಲಿ ಸಿಕ್ಕು
ವ ಸುವಾಸನೆಯೊಡಪ ಹೂವಿನ ಗಿಡಗಳ ಹೂವನ್ನು ಕೊಯ್ದು ಮೂಸಿನೋ
ಡುತ್ತಲೂ, ಶುಕಶಾರಿಕಾ ನಿವಹಂಗಳ ಕಲಕಲ ಧ್ವನಿಯನ್ನು ಕೇಳಿ ಆನಂ
ದಿಸುತ್ತಲೂ, ಎಳೆದಳಿರುಗಳ ಸೊಗಸನ್ನು ನೋಡಿನೋಡಿ ಸಂತೋಷಿಸು
ತ್ತಲೂ, ಸವಿಯಾದ ಹಣ್ಣುಗಳನ್ನು ತಿಂದು ತಣ್ಣಗಿರುವ ನೀರನ್ನು ಕುಡಿದು,

ತಮಾಲವೃಕ್ಷಂಗಳ ಬುಡಗಳಲ್ಲಿ ಕುಳಿತು ವಿಶ್ರಮಿಸಿಕೊಳ್ಳುತ್ತಲೂ, ಆ ಬಳಿಕ ಸುಖಭೋಜನವನ್ನು ಮಾಡಿಕೊಂಡು ಮುಂದಕ್ಕೆ ಪ್ರಯಾಣವಂ ಮಾಡುತ್ತಲೂ ಯಮುನಾ ನದಿಯ ದಡವನ್ನು ಹೋಗಿ ಸೇರಿದರು. ಪ್ರತಿದಿನವೂ ಹಗಲ ಹೊತ್ತು ನೆರಳಿರುವ ಮರಗಳ ಬುಡಗಳಲ್ಲಿ ಸಂತೋಷದಿಂದ ಕಾಲವಂ ಕಳೆಯುತ್ತಲಿದ್ದರು. ರಾತ್ರಿಯಾದ ಕೂಡಲೆ ಸುಖಭೋಜನವಂ ತೀರಿಸಿಕೊಂಡ ಬಳಿಕ ಯಮುನಾ ನದಿಯೆ ದಡದಲ್ಲಿರತಕ್ಕ ಮರಳ ದಿಣ್ಣೆಯ ಮೇಲೆ ಕುಳಿತುಕೊಂಡು ತಾಂಬೂಲವಂ ಸೇವಿಸುತ್ತ ಸುವಾಸನೆಯಾದ ಪುಷ್ಪಗಳಿಂದಲೂ, ಸುಗಂಧದಿಂದಲೂ, ಮಧುರವಾದ ಫಲಗಳಿಂದಲೂ, ಸಂತೋಷವನ್ನನುಭವಿಸುತ್ತ ಯೆಮುನಾ ನದಿಯ ಅಲೆಗಳಿಂದ ಬರುತ್ತಲಿರುವ ತಂಗಾಳಿಯಿಂದ ಆನಂದವನ್ನು ಹೊಂದುತ್ತಿರುವವರಾಗಿ ಸರಸಸಲ್ಲಾಪಂಗಳಿಂದ ವಿಹರಿಸುತ್ತಿದ್ದರು. ಹೀಗಿರುತ್ತಿರುವಲ್ಲಿ ಒಂದು ದಿನ ಅರ್ಜುನನು ಕೃಷ್ಣನನ್ನು ಕುರಿತು, ಗೋವಿಂದನೆ! ಆಪದ್ಬಂಧುವೆ ! ಅನಾಥರಕ್ಷಕನೆ ! ಭಕ್ತಜನಹೃದಯಾನಂದದಾಯಕಾ! ಶ್ರೀ ಕೃಷ್ಣ ಪರಮಾತ್ಮಾ ! ಈಗಲಾದರೊ ಆಕಾಶದಲ್ಲಿ ನಕ್ಷತ್ರಗಳ ಒಡೆಯನಾದ ಚಂದ್ರನು ಚನ್ನಾಗಿ ಪ್ರಕಾಶಿಸುತ್ತಲಿದ್ದಾನೆ. ನನ್ನ ಮನಸ್ಸಾದರೊ ನಿಷ್ಕಲ್ಮಷವಾಗಿರುವುದು. ಎಲ್ಲೆ ಸ್ವಾಮಿಯೆ ! ದೇವತೆಗಳೂ ಮಾನವರೂ ಯಾವ ಮಾರ್ಗವನ್ನು ಕೈಕೊಂಡು ಪುನರ್ಜನ್ಮವಿಲ್ಲದಂತೆ ಮೋಕ್ಷವನ್ನು ಹೊಂದಿ ಅನಂತ ಸುಖವನ್ನು ಪಡೆಯಬಹುದೊ ಅಂತಹ ಅಪವರ್ಗ ಮಾರ್ಗವನ್ನು ಭಕ್ತನಾದ ನನಿಗೆ ಬೋಧಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಂಡನು. ಈ ರೀತಿಯಲ್ಲಿ ಪ್ರಾರ್ಥಿಸುತ್ತಲಿರುವ ಅರ್ಜುನನ್ನು ಕುರಿತು ವಾಸುದೇವನು, ಎಲ್ಲೆ ಪಾರ್ಥನೆ, ನೀನು ಇದುವರೆಗೆ ಯಾವಾಗಲೂ ಕೇಳಿದೆ ಇರುವುದು ಮಾತ್ರ ಅಪವರ್ಗಮಾರ್ಗವನ್ನು ಬೋಧಿಸಬೇಕೆಂದು ಕೇಳಿಲು ಕಾರಣವೇನು? ಇದನ್ನು ನೋಡಿದರೆ ನೀನು ಪೂರ್ವಜನ್ಮದಲ್ಲಿ ನರನಾಗಿ ನಾರಾಯಣಋಷಿಯ ಸಂಸರ್ಗದಿಂದಲೂ ಅದು ನಿನ್ನ ಬುದ್ಧಿಗೆ ಬಂದಿರಬಹುದೆಂದು ತೋರುತ್ತದೆ. ಈ ಜ್ಞಾನವು ಭಗವದ್ಭಕ್ತರಾದವರಿಗೆ ಮಾತ್ರವಲ್ಲದೆ ಇತರರಿಗೆ ಲಭಿಸತಕ್ಕದ್ದಲ್ಲವು. ಎಲ್ಲೆ ಅರ್ಜುನನೆ, ನಿನ್ನ ಭಾಗ್ಯವೇ ಭಾಗ್ಯವು, ನಿನ್ನ ಆನಂದವೇ ಆನಂದವು, ಮೋಕ್ಷವೆಂದರೆ ವಿದೇಹಕೈವಲ್ಯವು, ಈ ಮೋಕ್ಷವೆಂಬುದು ತತ್ವಜ್ಞಾನಿಗಳಿಗಲ್ಲದೆ ಇತರರಿಗೆ ಲಭಿಸತಕ್ಕದ್ದಲ್ಲವು. ವಸಿಷ್ಠ,ಅತ್ರಿ,ಭರದ್ವಾಜ,ವಿಶ್ವಾಮಿತ್ರ,ಗೌತಮ,ಕಶ್ಯಪ, ಗಾರ್ಗೇಯ,ನಾರದ,ಕಣ್ವ,ಕಪಿಲ,ವ್ಯಾಸ,ವಾಲ್ಮೀಕಿ,ಶುಕ ಕೌನಕಾದಿ ಮಹರ್ಷಿಗಳೂ ಪ್ರಹ್ಲಾದ,ಅಂಬರೀಷ,ರುಕ್ಮಾಂಗದ,ಧ್ರುವ, ಮೊದಲಾದ ರಾಜರ್ಷಿಗಳೂ ಅನೇಕ ರಾಜರ್ಷಿಗಳೂ ಸಹ ಭಗವದ್ಭಕ್ತರಾಗಿವೇದಾಂತ

ರಹಸ್ಯವನ್ನು ತಿಳಿದುಕೊಂಡು, ಬ್ರಹ್ಮಜ್ಞಾನಿಯಾಗಿ ಮುಕ್ತಿಯನ್ನು ಹೊಂದಿದರಲ್ಲದೆ ಬೇರೆ ಇನ್ನು ಯಾವ ಮಾರ್ಗದಿಂದಲೂ ಸಾಧಿಸಲಿಲ್ಲವು. ಮುಂತ್ರಯಂತ್ರ ತಂತ್ರಗಳನ್ನು ಧ್ಯಾನಿಸುವುದರಿಂದಲೂ, ನಾದಿ ಫಲಗಳಿಂದಲೂ, ಪ್ರಾಕಾರಧ್ಯಾನದಿಂದಲೂ, ದಾರುಲೋಹಾದಿಗಳಿಗ ಹೆಸರುಗಳನ್ನಿಟ್ಟು ಪೂಜಿಸುವುದರಿಂದಲೂ, ತ್ರಿಗುಣಗಳ ಧ್ಯಾನದಿಂದಲೂ ಮೋಕ್ಷಮಾರ್ಗವು ಸಿಕ್ಕಲಾರದು. ತತ್ವಮಾರ್ಗವನ್ನು ತಿಳಿಯುತ್ತ, ಸಾಕಾರ ಬ್ರಹ್ಮವಾದ ಸದ್ಗುರು ಸ್ವಾಮಿಗೆ ಅರ್ಚನೆ ವಂದನೆಗಳನ್ನು ಅರ್ಪಿಸುತ್ತ ನಿರಾಕಾರ ಬ್ರಹ್ಮವಾದ ಪರಾತ್ಮನ ಧ್ಯಾನವನ್ನು ಮಾಡುತ್ತ ಮೋಕ್ಷವನ್ನು ಪಡೆಯಬಹುದೆಂದು ಬೋಧಿಸಿದ ಕೃಷ್ಣಪರಮಾತ್ಮನನ್ನು ಕುರಿತು, ಅರ್ಜುನನು ಸಂತೋಷಭರಿತನಾಗಿ ಎಲೈ ಸ್ವಾಮಿಯೆ, ದೇವಮಾನವಸೋಹಿತನೆ! ಮಹಾನುಭಾವನೇ! ನನ್ನ ಭಾಗ್ಯಾತಿಶಯದಿಂದಲೆ ಮಹಾನುಭಾವನಾದ ನೀನು ನನಿಗೆ ಸದ್ಗುರುವಾಗಿರುತ್ತಿ; ವೇದಾಂತ ಸಾರವು ಎಷ್ಟು ವಿಧವಾಗಿರುವುದು. ದೇವತೆಗಳಿಗೂ, ಮಾನವರಿಗೂ, ಋಷಿಗಳಿಗೂ ಯಾವ ವಿಧವಾಗಿ ಮುಕ್ತಿಯುಂಟೊ ಅಂತಹ ಮಾರ್ಗವನ್ನು ನನಿಗೆ ಬೋಧಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ನಮಸ್ಕಾರವಂ ಮಾಡಿದನು. ಆಗ ಶ್ರೀ ಕೃಷ್ಣನು ಅರ್ಜುನನ್ನು ಕುರಿತು ಇಂತೆಂದನು.

ಕೇಳ್ದೆ ಅರ್ಜುನ; ನಾನು ಈಗ ಹೇಳಲುದ್ದೇಶಿಸಿರುವ ದೇವರಹಸ್ಯವನ್ನು ಸ್ವಸ್ಥಚಿತ್ತನಾಗಿ ಕೇಳು. ವೇದಾಂತ ಸಾರದಲ್ಲಿ ಸಾಂಖ್ಯಸೋತ, ಛಾಯಾಪುರುಷಲಕ್ಷಣ,ನಾದಾನಂದ,ಪಂಚಮುದ್ರ,ತಾರಕಮಂತ್ರ, ಸಚ್ಚಿದಾನಂದ,ಸಾಕಾರ,ನಿರಾಕಾರ,ಅಮನಸ್ಕ,ಪರ್ಣ,ಉದಕ,ಅಚಲ,ಪರಿಪೂರ್ಣವೆಂಬ ಹನ್ನೆರಡು ಭಾಗಗಳುಂಟು. ಈ ಹನ್ನೆರಡು ಮಾರ್ಗಗಳನ್ನೂ ಸ್ಥಿರ ಮನಸ್ಸಿನಿಂದ ಕೇಳಿ ಆಚರಣೆಯಲ್ಲಿ ತಂದ ಮಾನವರೂ, ದೇವತೆಗಳೂ, ಋಷಿಗಳೂ ಶಾಶ್ವತವಾದ ಕೈವಲ್ಯವನ್ನು ಪಡೆವ್ರದಲ್ಲಿ ಸಂಶಯವಿಲ್ಲವು. ಈ ಹನ್ನೆರಡು ಮಾರ್ಗಗಳನ್ನೂ ಯಾರು ಗುರುಮುಖದಿಂದ ಭಕ್ತಿಪುರಸ್ಸರವಾಗಿ ಕೇಳುತ್ತಾರೆಯೊ ಅವರ ಸಕಲ ಪಾಪಗಳೂ ಪರಿಹರವಾಗಿ ಶಾಶ್ವತವಾದ ಕೈವಲ್ಯವು ಲಭಿಸುತ್ತದೆ. ಅಂತಹ ಮಹನೀಯರ ಪೂರ್ವ ಸುಖಾನಂದಗಳನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲವು ಪೂರ್ವದಲ್ಲಿ ಕೆಲವರು ವೇದಾಂತ ರಹಸ್ಯದ ಒಂದೊಂದು ಭಾಗವನ್ನು ತಿಳಿದು ಕೊಂಡ ಮಾತ್ರದಿಂದಲೇ ಶಾಶ್ವತವಾದ ಮುಕ್ತಿಯನ್ನು ಕೈಕೊಂಡಿರುವರು. ಹೀಗಿರುವಲ್ಲಿ ಈ ಹನ್ನೆರಡು ಭಾಗಗಳನ್ನೂ ಗುರುಮುಖದಿಂದ ತಿಳಿದವರ ಪುಣ್ಯಕ್ಕೆ ಎಣೆಯೇ ಇಲ್ಲವು. ಈ ರೀತಿಯಲ್ಲಿ ಬೋಧಿಸುತ್ತಲಿರುವ

ಮೊದಲನೆಯದಾದ ಸಾಂಖ್ಯಸೂತ್ರವನ್ನು ನನಿಗೆ ಬೋಧಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ಕೇಳಿಕೊಂಡನು ಆಗ ಶ್ರೀ ಕೃಷ್ಣಮೂರುತಿಯು ಎಲೈ ಪಾರ್ಥನೆ, ಸಾಂಖ್ಯಸೂತ್ರವನ್ನು ಗುರುಮುಖದಿಂದ ತಿಳಿದು ಮೋಕ್ಷವನ್ನು ಪಡೆದ ,,ಸತ್ಯಜಿತ್ತು" ಮಹಾರಾಜನ ಚರಿತ್ರೆಯನ್ನು ವಿವರಿಸುವೆನೆಂದು ಇಂತೆಂದನು.

ಸತ್ಯಜಿತ್ತು ಮಹಾರಾಜನ ಚರಿತ್ರೆ.

ಶ್ಲೋ॥ ಕೃಷ್ಣತ್ವದೀಯಪದಪಙ್ಕಜಪಞ್ಜರಾಂತ । ಮದ್ಯೈವಮೇಷ್ಯತುಮಾನಸ ರಾಜಹಂಸಃ ॥ ಪ್ರಾಣಪ್ರಯಾಣಸಮಯೆ ಕಫವಾತಪಿತ್ತೈಃ । ಕಣ್ಠಾವ ರೋಧನವಿಧೌ ಸ್ಮರಣಂಕುತಸ್ತೇ ॥

ಕೇಳು ಅರ್ಜುನ; ಪೂರ್ವದಲ್ಲಿ ಕರ್ಣಾಟಕ ದೇಶದಲ್ಲಿ ಜಯಂತನೆಂಬ ಮಹಾರಾಜನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಅವನಿಗೆ ಚಂದ್ರನಿಭಾನನನಾ ಎಂಬ ಸತಿ ಇದ್ದಳು. ಇವರಿಗೆ ಬಹುದಿನಗಳಿಂದಲೂ ಮಕ್ಕಳಾಗದೆ ಕಡೆಗೆ ಸುಂದರನಾದ ಸುಕುಮಾರನೋರ್ವನು ಜನಿಸಿದನು. ರಾಜನ ಮತ್ತು ರಾಣಿಯ ಸಂತೋಷಕ್ಕೆ ಪಾರವೇ ಇಲ್ಲವು. ಸುಕುಮಾರನು ಹುಟ್ಟಿದನೆಂಬ ಸುದ್ದಿಯನ್ನು ರಾಜನು ಕೇಳಿದ ಕೂಡಲೆ, ಕೋಟಿಪ್ರಕಾರವಾದ ಧನವನ್ನು ಸತ್ಪಾತ್ರರಿಗೆ ದಾನವಂ ಮಾಡಿದನು. ಜಾತಕರ್ಮಾದಿ ಕರ್ಮಗಳನ್ನೆಲ್ಲಾ ಸಾಂಗವಾಗಿ ನೆರವೇರಿಸಿ ನತ್ಯಜಿತ್ತು ವೆಂದು ಹೆಸರನ್ನಿಟ್ಟು ಸಂತೋಷದಿಂದ ಇರುತ್ತಿದ್ದನು. ಹೀಗಿರುವಲ್ಲಿ ಆ ಕುಮಾರನು ಐದುವರ್ಷ ವಯಸ್ಸಿನವನಾದನು. ಕೂಡಲೆ ರಾಜನು ಆ ಬಾಲನನ್ನು ವಿದ್ಯಾಭ್ಯಾಸಕ್ಕೆ ಬಿಟ್ಟನು ಪೂರ್ಣಚಂದ್ರನಂತೆ ದಿನೇದಿನೆ ಅಭಿವೃದ್ಧಿಯೆನ್ನೆಯದುತ್ತಲಿರುವ ಆ ಬಾಲನಾದರೊ ಕೆಲವು ಕಾಲದಲ್ಲಿ ತನ್ನ ಬುದ್ಧಿ ಚಾತುರ್ಯದಿಂದ ವಿವಾಸ್ತ್ರಪ್ರಯೋಗಗಳನ್ನೂ ಆ ಅಸ್ತ್ರಗಳ ಉಪಸಂಹಾರ ಕ್ರಮಗಳನ್ನೂ ಸಾಂಗವಾಗಿ ಕಲಿಯುವ ಕಾಲಕ್ಕೆ ಈ ಬಾಲನು ಪ್ರಾಪ್ತವಯಸ್ಕನಾದನು. ಆಗ ವಿದ್ಯಾಸಮರ್ಥನಾದ ಈ ರಾಜಕುವರನಿಗೆ ದೇಶಸಂಚಾರಮಾಡಬೇಕೆಂಬ ಆಸೆಯುಂಟಾಗಿ, ಒಂದುದಿನ ರಾತ್ರಿ ತನ್ನ ತಾಯಿತಂದೆಗಳಿಗೆ ತಿಳಿಸದಂತೆ ತನಗಿಷ್ಟವಾದಷ್ಟು ಧನವನ್ನೂ ಅನೇಕ ವಸ್ತ್ರಾಭರಣಗಳನ್ನೂ ತೆಗೆದುಕೊಂಡು ಯಾರೂ ಕಾಣದಂತೆ ಹೊರಟು ಉತ್ತರಾಭಿಮುಖವಾಗಿ ಪ್ರಯಾಣಮಾಡಿದನು. ಬೆಳಗಾದ ಮೇಲೆ ರಾಜನೂ ರಾಣಿಯೂ ಪುತ್ರನನ್ನು ಕಾಣದೆ ಕಳವಳಪಟ್ಟು ಎಲ್ಲೆಲ್ಲಿಯೂ ಹುಡುಕಿಸಿದರು ಸುಕುಮಾರನಸುದ್ದಿಯೇ ತಿಳಿಯದೆ ಹೋಯಿತು.

ಅರ್ಜುನ! ಆಗ ಅವರ ದುಃಖವನ್ನು ಯಾರಿಂದತಾನೆ ವರ್ಣಿಸಲಾದೀತು! ದುಃಖಾಕ್ರಾಂತನಾದ ರಾಜನು ಅನೇಕಚಾರರನ್ನು ನಾನಾ ದಿಕ್ಕುಗಳಿಗೂ ಕಳುಹಿಸಿದನು. ಅವರು ಎಲ್ಲೆಲ್ಲಿಯೂ ಹುಡುಕುತ್ತಲಿದ್ದರು. ಇತ್ತಲಾಗಿ ಅಶ್ವಾರೂಢನಾಗಿ ಪಯಣವಂ ಮಾಡಿದ ರಾಜಕುಮಾರನಾದರೊ ಉತ್ತರಾಭಿಮುಖವಾಗಿ ಹೊರಟು, ಅಲ್ಲಿ ಸಿಕ್ಕಿದ ಅರಣ್ಯಕ್ಕೆ ಧೈರ್ಯದಿಂದ ನುಗ್ಗಿ ಅಲ್ಲಲ್ಲಿ ಭಯಂಕರವಾಗಿ ಧ್ವನಿಮಾಡುವ ದುಷ್ಟ ಮೃಗಗಳನ್ನು ಓಡಿಸುತ್ತ, ಎದುರುಬೀಳುವ ಕಾಡು ಮೃಗಗಳನ್ನು ಕತ್ತರಿಸಿ ನೇಲಕ್ಕೆ ಉರುಳಿಸುತ್ತ, ಇರ್ಕಡೆಗಳಲ್ಲಿಯೂ ಇರುವ ವೃಕ್ಷಗಳಲ್ಲಿನ ಹಣ್ಣುಗಳನ್ನು ಮನದಣಿಯೆ ತಿಂದು, ಸುಪುಷ್ಪಗಳನ್ನು ಆಘ್ರಾಣಿಸಿ, ವನಶೈಂಗಾರವನ್ನು ಎವೆಯಿಕ್ಕದೆ ನೋಡಿನೋಡಿ, ಅಲ್ಲಲ್ಲಿಯೆ ಸಿಕ್ಕುವ ದಿವ್ಯ ಸರಸ್ಸುಗಳ ತಿಳಿನೀರನ್ನು ಕುಡಿದು ದಾಹವನ್ನ ಪಗಿಸಿಕೊಂಡು ಮುಂದಮುಂದಕ್ಕೆ ಹೋಗುತ್ತಿರುವಲ್ಲಿ ಎದುರುಕಡೆ ಒಂದು ಉದ್ಯಾನವನವು ಕಾಣಿಸಿತು. ಅರ್ಜುನಾ! ಆ ಉದ್ಯಾನವನವನ್ನು ನೆನೆಂದು ವರ್ಣಿಸಲಿ; ಇಂದ್ರನ ಉದ್ಯಾನವನದ ಸೊಬಗನ್ನೆಲಗಳೆಯುತ್ತಿದ್ದ ಇದರ ಸುತ್ತಲೂ ದಾಟಲಸಾಧ್ಯವಾದ ಬೇಲಿಯಿತ್ತಲ್ಲದೆ ಉದ್ಯಾನದ ಬಾಗಿಲನ್ನೂ ಕೂಡ ಹಾಕಿಬಿಟ್ಟಿತ್ತು. ಸತ್ಯಜಿತ್ತುಮಹಾರಾಯನಾದರೊ ಸ್ವಲ್ಪವೂ ಹೆದರದೆ ತಾನು ಹತ್ತಿದ್ದ ಕುದುರೆಯನ್ನು ಪಕ್ಕದಲ್ಲಿದ್ದ ಒಂದು ಮರಕ್ಕೆ ಬಿಗಿದು, ಆ ಕುದುರೆಯ ಮೇಲೆ ನಿಂತು ಅಲ್ಲಿಂದ ತೋಟದೊಳಗಡೆಗೆ ಕುಪ್ಪಳಿಸಿ ಮುಂದೆ ಹೋಗುತ್ತಿರುವಲ್ಲಿ, ಸುವಾಸನೆಯನ್ನು ಬೀರುತ್ತಿರುವ ವಿಧವಿಧವಾದ ವೃಕ್ಷಗಳೂ, ಲತೆಗಳೂ ಕಂಗೊಳಿಸುತ್ತಿದ್ದ ಸೊಬಗನ್ನು ನೋಡಿ ನೇತ್ರಾನಂದವನ್ನು ಪಡೆಯುತ್ತಾ ಮುಂದೆ ಹೋಗುತ್ತಿರಲು, ಕಮಲಗಳ ಕಾಂತಿಯಿಂದ ಕೂಡಿರುವ ಸ್ಫಟಿಕಶಿಲೆಯು ಸೋಪಾನಗಳುಳ್ಳ ಸ್ವಚ್ಛವಾದ ತಿಳಿನೀರಿನಿಂದ ಕೂಡಿರುವ ಸರೋವರವೊಂದು ಕಾಣಿಸಿತು. ಸತ್ಯಜಿತ್ತುವು ಆ ಸರೋವರದೊಳಕ್ಕಿಳಿದು ಸ್ನಾನವನ್ನು ಮಾಡಿ, ದಾಹವನ್ನು ಅಡಗಿಸಿಕೊಂಡ ಬಳಿಕ, ಮೇಲಕ್ಕೆದ್ದುಬಂದು ಸಮೀಪದಲ್ಲಿದ್ದ ಒಂದು ಮಾವಿನ ಮರದ ಬುಡದಲ್ಲಿ ಕುಳಿತು, ಆ ವನದ ಸೌಂದರ್ಯವನ್ನು ಬಣ್ಣಿಸುತ್ತಿದ್ದನು. ಹೀಗಿರುವಲ್ಲಿ ಸಮೀಪದಲ್ಲಿಯೇ ಸ್ತ್ರೀಯರ ಧ್ವನಿಯು ಕೇಳಿಸಿತು. ಸತ್ಯಜಿತ್ತುವು ಓಹೋ! ಇದು ಸ್ತ್ರೀಯರು ಜಲಕ್ರೀಡೆಯೆನ್ನಾಡುವ ಸರಸ್ಸಿರಬಹುದೆಂದು ತೋರುವುದು ಈಗ ನಾನು ಇಲ್ಲಿರುವುದು ಸರಿಯಲ್ಲವೆಂದು ಭಾವಿಸಿ ಕೂಡಲೆ ಆ ಮಾವಿನ ಮರದ ಮೇಲೆ ಹತ್ತಿ ಮರೆಯಾಗಿ ಕುಳಿತು ನೋಡುತ್ತಿದ್ದನು. ಅಷ್ಟರೊತ್ತಿಗೆ ಆ ಕನ್ನಿಕೆಯರೆಲ್ಲಾ ಪಲ್ಲಕ್ಕಿ ಸಮೇತ ಸರೋವರದ ಬಳಿಗೆ ಬಂದು ಪಲ್ಲ[illegible] ಕುಳಿತು

ಅಮ್ಮಾ! ರಾಜಕನ್ನಿಕಾರತ್ನವೇ! ಪಲ್ಲಕ್ಕಿಯಿಂದ ಕಳಗಿಳಿದು ಬಾರಮ್ಮಾ! ಎಂದು ಕರೆದರು. ಆಗ ರಾಜಕನ್ನಿಕೆಯು ಪಲ್ಲಕ್ಕಿಯಿಂದ ಹೊರಗೆ ಬರುತ್ತಿರಲು ಆಕಾಶದಲ್ಲಿನಿಂದ ಮಿಂಚು ಹೊರಟಂತೆ ಮಾನಿನ ಮುದದ ಮೇಲ್ಗಡೆ ಕುಳಿತಿದ್ದ ರಾಜಕುವರನಾದ ಸತ್ಯಜಿತ್ತುವಿಗೆ ಕಾಣಿಸಿ ಅವನ ಮನಸ್ಸನ್ನು ಚಂಚಲಗೊಳಿಸಿತು. ಈರೀತಿ ಮಿಂಚುತ್ತಿರುವ ಸೌಂದರ್ಯದಿಂದ ಕೂಡಿದ ಆ ಕನ್ಯಕಾಮಣಿಯನ್ನು ನೋಡಿದ ಕೂಡಲೆ ಕಣ್ಣನ್ನು ಮುಚ್ಚಿಕೊಂಮು, ಸ್ವಲ್ಪಹೊತ್ತಿಗೆ ಕಣ್ಣನ್ನು ತೆರೆದು, ಆ ಕನ್ನಿಕೆಯ ಕಡೆಯೆ ನೋಡುತ್ತ, ಆಹಾ! ಕಾಂತಿಯೆರಾಶಿಯೊ; ಅಥವಾ ಪೂರ್ಣಚಂದ್ರನೊ; ಅಯ್ಯೋ, ಪೂರ್ಣಚಂದ್ರನಿಗೆ ಅವಯವಗಳಿಲ್ಲಿಯುವು, ಆದ್ದರಿಂದ ಪೂರ್ಣಚಂದ್ರನು ಅಲ್ಲವು. ಇಲ್ಲವಾದರೆ ಈಕೆಯು ತ್ರಿಲೋಕಾಧಿಪತಿಯ ರಾಣಿಯಾದ ಲಕ್ಷ್ಮೀದೇವಿಯಾಗಿರಬಹುದೆ! ಅಲ್ಲವು, ಲಕ್ಷ್ಮೀದೇವಿಯೇ ಆಗಿದ್ದರೆ ಮನುಷ್ಯಜಾತಿಯು ಕನ್ನಿಕೆಯರ ಜತೆಯಲ್ಲಿ ಸೇರುತ್ತಲೇ ಇರಲಿಲ್ಲ. ಆದ್ದರಿಂದ ಈಕೆಯು ರಾಜಕನ್ನಿಕೆಯೆ ಹೊರತು ಬೇರೆ ಅಲ್ಲವು. ಬ್ರಹ್ಮನು ಸುವರ್ಣದ ಧೂಳಿಯನ್ನು ಅಮೃತದೊಂದಿಗೆ ಬೆರಸಿಕೊಂಡು ಈಕನ್ಯಕಾಮಣಿಯ ದೇಹವನ್ನು ನಿರ್ಮಿಸಿರುವುದರಿಂದಲೆ ಈ ತೆರದ ಸೌಂದರ್ಯವು ಈಕೆಗೆ ಉಂಟಾಗಿದೆಯೆಂದು ನಾನಾ ತೆರವಾಗಿ ಬಣ್ಣಿಸುತ್ತಲಿದ್ದನು. ಅತ್ತ ಸರೋವರದ ಬಳಿ ಇರುವ ಕನ್ನಿಕೆಯರೆಲ್ಲಾ ಜಲಕ್ರೀಡಾರ್ಥವಾಗಿ ತಮ್ಮ ತಮ್ಮ ವಸ್ತ್ರಗಳನ್ನೆಲ್ಲಾ ಬಿಚ್ಚಿ ಸರೋವರದ ದಡದಲ್ಲಿಟ್ಟು ನೀರಿನ ಬಳಿಗೆ ಹೋಗಿರು. ರಾಜಕನ್ನಿಕೆಯೂ ಕೂಡ ತನ್ನ ಉಡಿಗೆಗಳನ್ನು ತೆಗೆದು ದಡದಲ್ಲಿಟ್ಟು ತಾನು ನೀರಿನೊಳಕ್ಕೆ ಇಳಿದಳು. ಆ ಕಾಲದಲ್ಲಿ ಈ ರಾಜಪುತ್ರನು ಆ ಕನ್ನಿಕೆಯ ಅವಯವಗಳನ್ನೆಲ್ಲಾ ನೋಡಿದ್ದರಿಂದ ಇವನಿಗೆ ಕಾಮವಿಕಾರವಾಗಿ ಬುದ್ಧಿಯು ಚಂಚಲವಾಯಿತು. ಸತ್ಯಜಿತ್ತುವು ಮನ್ಮಥವೇಧೆಯನ್ನು ತಡೆಯಲಾರದೆ, ಅಯ್ಯೋ ದೇವತೆ! ನನ್ನನ್ನು ಏಕನ್ಯಹಿಸಿದೆ; ಈ ಉದ್ಯಾನವನಕ್ಕೆ ಕರೆದುಕೊಂಡುಬಂದು ಈ ಕನ್ಯಕಾಮಣಿಯನ್ನು ಏಕೆ ತೋರಿಸಿದೆ; ಈ ಕಾಮಾಗ್ನಿಯ ಬಾಧೆಯನ್ನು ತಪ್ಪಿಸಿಕೊಳ್ಳುವುದು ಹೇಗೆ! ಒಳ್ಳೇದು ಆದದ್ದೆಲ್ಲಾ ಆಗಲಿ, ಈಗಲೆ ಮಾಡಿಂದ ಇಳಿದು ಈ ರಾಜಕುವರಿಯನ್ನು ನೆಳೆದುಕೊಂಡು ಕಾಮಬಾಧೆಯನ್ನು ಯಥೇಷ್ಟವಾಗಿ ತೀರಿಸಿಕೊಳ್ಳುತೆನು. ಅಯ್ಯಯ್ಯೋ! ಅದು ಬಹಳ ಪ್ರಮಾದವಾಯೀತೆಂದು ಮನಸ್ಸನ್ನು ಬಿಗಿ ಹಿಡಿದುಕೊಂಡು, ಅಯ್ಯೋ, ನಿರ್ಭಾಗ್ಯನಾದ ನನಿಗೆ ಈ ಕನ್ನಿಕೆಯು ವಶವಾಗುವಳೊ ಇಲ್ಲವೊ ಎಂದು ಯೋಚಿಸುತ್ತಾ, ಏನೂ ತೋರದೆ, ತನ್ನ ಕೈಯಲ್ಲಿದ್ದ ಧನುಸ್ಸಿಗೆ ಬಾಣವನ್ನು ತಗಲಿಸಿ ಮೆಲ್ಲಗೆ ಕೆಳಗೆ ಬಿಟ್ಟು, ಆ ರಾಜಪುತ್ರಿಯು ಸರೋವರದ ದಡದಲ್ಲಿ ಬಿಚ್ಚಿಟ್ಟಿದ್ದ ಪೀ

ತಾಂಬರವನ್ನೂ ಕುಪ್ಪಸವನ್ನೂ ನೆಳೆದುಕೊಂಡು ಇದನ್ನುದರೂ ನೋಡಿ ಕೊಂಡು ಇರೋಣವೆಂದು ಬಚ್ಚಿಟ್ಟುಕೊಂಡು ಅವುಗಳನ್ನು ನೋಡಿನೋಡಿ ಆಶ್ಚರ್ಯಪಡುತ್ತಿದ್ದನು. ಸರೋವರದಲ್ಲಿಳಿದ ಕನ್ನಿಕೆಯರಾದರೊ, ಒಬ್ಬರ ಮೇಲೊಬ್ಬರು ನೀರನ್ನು ಎರಚುತ್ತಾ, ಪಕಪಕನೆ ಕೇಕೆಹಾಕಿಕೊಂಡು ನಗುತ್ತಾ, ಹುರಡಿನಿಂದ ನೀರಿನಲ್ಲಿ ಮುಳುಗಾಡುತ್ತಾ ಪುನಃ ಏಳುತ್ತಾ, ಸರೋವರದಲ್ಲಿರುವ ಸುವಾಸನೆಯುಳ್ಳ ಹೂವನ್ನು ಕೊಯ್ದು ರಾಜಕನ್ನಿಕೆಗೆ ಕೊಡುತ್ತಾ ಸ್ವೇಚ್ಛೆಯಾಗಿ ಜಲಕ್ರೀಡೆಯಾಡಿದಮೇಲೆ ಹೊತ್ತಾಗುತ್ತಾ ಬಂತೆಂದು ಎಲ್ಲರೂ ಮೇಲಕ್ಕೆ ಬಂದು ತಮ್ಮತಮ್ಮ ವಸ್ತ್ರಗಳನ್ನುಟ್ಟುಕೊಂಡರು. ರಾಜಕನ್ನಿಕೆಯು ತಾನು ಬಚ್ಚಿಟ್ಟಿದ್ದ ಪೀತಾಂಬರವನ್ನೂ ಕುಪ್ಪಸವನ್ನೂ ಕಾಣದೆ ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಅಲ್ಲಿ ಒಂದು ಬಿಲವನ್ನು ಕಾಣಿಸಿತು. ಆಗ ರಾಜಕುವರಿಯು ಇತರ ಕನ್ನಿಕೆಯರನ್ನು ಕುರಿತು ನನ್ನ ವಸ್ತ್ರಗಳು ಮಾಯವಾಗಲು ಕಾರಣವೇನು, ಈ ಬಿಲದಲ್ಲಿ ಯಾರಾದರೂ ಕೊಂಡು ಹೋಗಿರಬೇಕು. ಈಗ ನಾನೇನು ಮಾಡಲಿ ಎಂದು ಯೋಚಿಸಿ ಯೋಚಿಸಿ, ಏನೂ ತೋಚದೆ ಕೊನೆಗೆ ಬೇರೆಯವರದೊಂದುವಸ್ತ್ರವನ್ನುಟ್ಟುಕೊಂಡು ಪಲ್ಲಕ್ಕಿಯಲ್ಲಿ ಕುಳಿತು ಪಟ್ಟಣಕ್ಕೆ ಹೋಗಿ ಅರಮನೆಯನ್ನು ಸೇರಿದ ಕೂಡಲೆ ತಾಯಿತಂದೆಗಳಿಗೆ ನಡೆದವರ್ತಮಾನವನ್ನೆಲ್ಲಾ ತಿಳಿಸಿದಳು. ಜನಕರಾದರೋ, ಮಗಳನ್ನು ಕುರಿತು, ಅಮ್ಮಾ! ಇದು ದೇವತೆಗಳ ಮಾಯೆಯಾಗಿರಬಹುದು, ನೀನೇನೂ ಯೋಚಿಸಬೇಡ, ನಾನು ನಿಚಾರಮಾಡುತ್ತೇನೆಂದು ಸಮಾಧಾನವನ್ನು ಹೇಳಿದನು. ಕೂಡಲೆ ರಾಜನು ಮಂತ್ರಿಯನ್ನು ಕರೆದು ನಡೆದ ಸುದ್ದಿಯನ್ನೆಲ್ಲಾ ಹೇಳಿ ಕಾರಣವೇನಿರಬಹುದು. ಆ ಬಿಲವು ಯಾವುದೂ? ಇದು ದೇವತೆಗಳ ಕೆಲಸವೇ ಆಗಿರಬಹುದೋ ಏನೋ ಎಂದು ಅನುಮಾನಪಟ್ಟುಕೊಂಡು ಕಳವಳಿಸುತ್ತಿದ್ದನು. ಸುನೀತಿ ಎಂಬ ಮಂತ್ರಿಯಾದರೊ ರಾಜನನ್ನು ಕುರಿತು, ಪ್ರಭೂ! ತಾವು ಈ ರೀತಿ ಯೋಚಿಸಕೆಲಸವಿಲ್ಲ. ಬೆಳಿಕಾದ ಕೂಡಲೇ ಆ ಬಿಲವನ್ನು ನೋಡಿ ಆಮೇಲೆ ಯೋಚನೆ ಮಾಡಬಹುದು. ಇದು ದೇವತೆಗಳ ಕೆಲಸವಾಗಿ ಕಾಣಬರುವುದಿಲ್ಲ. ಮನುಷ್ಯನ ಕೆಲಸವೇ ಆಗಿರಬೇಕು. ಪರೀಕ್ಷಿಸಿ ನೋಡಬೇಕೆಂದು ರಾಜನನ್ನು ಸಮಾಧಾನ ಮಾಡಿದನು. ಅತ್ತ ಮಗದಮೇಲಿದ್ದ ರಾಜಕುವರನಾದ ಸತ್ಯಜಿತ್ತು ಮಹಾರಾಯನಾದರೋ, ಆ ಪೀತಾಂಬರವನ್ನೂ, ಕುಪ್ಪಸವನ್ನೂ ತೆಗೆದುಕೊಂಡು ಮರದಿಂದ ಕೆಳಕ್ಕಿಳಿದು ಆ ಉದ್ಯಾನವನವನ್ನು ದಾಟಿ ತನ್ನ ಕುದುರೆಯ ಬೆನ್ನಿನಮೇಲೆ ಆ ರಾಜಕನ್ನಿಕೆಯ ವಸ್ತ್ರಗಳನ್ನು ಭದ್ರವಾಗಿ ಕಟ್ಟಿ, ಅಶ್ವಾರೂಢನಾಗಿ ಹೊರಟು ಪೂರ್ವದಂ

ಪ್ಪನೇಕಿಸಿ, ಅಲ್ಲಿ ಒಬ್ಬಾನೊಬ್ಬ ಅಡಗೂಲಜ್ಜಿಯಮನೆಗೆ ಹೋಗಿ, ಊಟವನ್ನು ತೀರಿಸಿಕೊಂಡು, ಆ ಅಡಗೂಲಜ್ಜಿಯನ್ನು ಕುರಿತು, ಅಮ್ಮಾ ಈ ಪಟ್ಟಣವು ಯಾವದು? ಈ ಪಟ್ಟಣದ ಬೊರೆಯಾರು? ಆತನ ಕೀರ್ತಿ ಎಂಥಾಪ್ಪೆಂದು ಕೇಳಲು ಆ ಅಡಗೂಲಜ್ಜಿಯು ಹೇಳುತ್ತಾಳೆ—

ಅಯ್ಯಾ! ಇದು ಕಳಿಂಗದೇಶವು. ಪ್ರತಾಪರುದ್ರ ರಾಜನೆಂಬುವನು ಆಳುತ್ತಿರುವನು, ಸಚ್ಚರಿತ್ರನೆಂದು ನುಡಿದಳು. ಆಗ ಸತ್ಯಚಿತ್ತು ಮಹಾರಾಯನಾರೋ! ಆಹಾ! ಈ ಕನ್ಯಕಾಮಣಿಯು ಈ ರಾಜನ ಮಗಳೇ ಆಗಿರಬೇಕು. ನಾನು ಮಾಡಿದ ಈ ಕಾರ್ಯವನ್ನು ರಾಜಪುತ್ರಿಯು ತಂದೆಗೆ ಹೇಳಿದಮೇಲೆ ಆತನು ಇದನ್ನು ವಿಚಾರಮಾಡಿ ಅವನಿಗೇ ಮಗಳನ್ನು ಕೊಟ್ಟು ಮದುವೆ ಮಾಡಿದರೂ ಮಾಡಬಹುದು. ಅಥವಾ ಇಂಥಾ ಕಾರ್ಯವನ್ನು ಮಾಡಿದ್ದಕ್ಕಾಗಿ ಶಿಕ್ಷೆಗೆ ಗುರಿಮಾಡಿದರೂ ಮಾಡಬಹುದು. ಹೀಗೆಂದು ಯೋಚಿಸುತ್ತಾ ಬೆಳಗಿನಜಾವವಾದ ಕೂಡಲೇ ಪ್ರಯಾಣ ಸಿದ್ಧನಾಗಿ ಹೊಳಗುತ್ತಲಿದ್ದನು. ಬೆಳಗಾದಕೂಡಲೇ ಕಳಿಂಗಾಧಿಪತಿಯಾದ ಪ್ರತಾಪರುದ್ರರಾಜನು ಮಂತ್ರಿಯನ್ನೂ ಸಾಮಂತರಾಜರನ್ನೂ ಜೊತೆಯಲ್ಲಿ ಕರೆಸುಕೊಂಡು ಉದ್ಯಾನವನದ ಸರೋವರದ ಬಳ ಹೋಗಿ ನೋಡಲು ಅಲ್ಲಿ ಒಂದು ಬೆಲವು ಕಾಣಿಸಿತು. ಮಂತ್ರಿಯು ಈ ಬೆಲವನ್ನು ನೋಡಿ, ಚನ್ನಾಗಿ ಆಲೋಚಿಸಿ, ರಾಜನನ್ನು ಕುರಿತು, ಇದು ದೈವಕೃತ್ಯವಲ್ಲವು, ಯಾರೋ ಒಬ್ಬ ಬೆಲ್ದಾರನು ಮಾನಿನವರನ ಮೇಲೆ ಕುಳಿತುಕೊಂಡು ರಾಜಪುತ್ರಿಯು ಜಲಕ್ರೀಡೆಯಾಡುವಾಗ ಇಲ್ಲಿಟ್ಟಿದ್ದ ವಸ್ತ್ರಗಳನ್ನು ತನ್ನ ಬಲ್ಲನ ಸಾಮರ್ಥ್ಯದಿಂದ ಮೇಲಕ್ಕೆ ತೆಗೆದುಕೊಂಡಾಗ ಈ ಬೆಲವು ಉಂಟಾಗಿರಬೇಕೆಂದೂ ಹೀರೆ ಅಲ್ಲವೆಂದು ನುಡಿದನು. ರಾಜನು ಮಂತ್ರಿಯಮಾತನ್ನು ಕೇಳಿದ ಕೂಡಲೇ ಮೂಗಿನ ಮೇಲೆ ಬೆರಳನ್ನಿಟ್ಟುಕೊಂಡು, ಆ ಬೆಲ್ದಾರನ ಸಾಹಸವನ್ನು ವರ್ಣಿಸುತ್ತಾ, ಪಟ್ಟಣಕ್ಕೆ ಹೋಗಿ ತನ್ನ ಕುಮಾರಿಯೊಂದಿಗೆ ನುಡಿದನು. ತಂದೆಯು ಮಾತನ್ನು ಕೇಳಿ ಮೊಡನೆಯೇ ರಾಜಪುತ್ರಿಯ ಮೈ ರೋಮಾಂಚವಾಗಿ ಬೆವರು ಹತ್ತಿತು, ಸ್ವಲ್ಪ ಹೊತ್ತಾದಮೇಲೆ ಆ ರಾಜಕನ್ನಿಕೆಯು ತಂದೆಯನ್ನು ಕುರಿತು, ಜನಕನೆ, ಆ ಬೆಲ್ದಾರನೊಬ್ಬ ರಾಜಪುತ್ರನಾಗಿರಬೇಕು. ಇಲ್ಲವಾದರೆ ಅಲ್ಪನಿಗೆ ಇಂತಹ ಶೌರ್ಯವೂ ಕಾಂತಿಯೂ ಚಾತುರ್ಯವೂ ಹೇಗೆ ಬಂದೀತು! ಆತನು ನನ್ನ ಅವಯವಗಳನ್ನು ಚನ್ನಾಗಿ ನೋಡಿಯೇ ಇರಬೇಕು. ಹೀಗಿರುವಲ್ಲಿ ನಾನು ಬೇರೊಬ್ಬನನ್ನು ಹೇಗೆ ಮದುವೆಯಾಗಲಿ, ಆದ್ದರಿಂದ ನೀನು ಸ್ವಸ್ಯಕಾರದಿಂದಲೂ ಆ ಬೆಲ್ದಾರನನ್ನು ಹುಡುಕಿಸಿ ಅವನಿಗೇ ನನ್ನನ್ನು ಕೊಟ್ಟು ಮದುವೆಯಾಗುವಂತೆ ಮಾಡಬೇಕು ಎಂದು

ನಿಗೆ ಆಹುತಿಯಾಗುವುದೇ ನಿಜವೆಂದು ನುಡಿದಳು. ತಂದೆಯಾದರೋ ಕೂಡಲೇ ಮಂತ್ರಿವರ್ಯನಾದ ಸುನೀತಿಯನ್ನು ಕರೆಯಿಸಿ, ಮಂತ್ರಿಶ್ರೇಷ್ಠನೆ! ನೀನು ನಿನ್ನ ಚಾತುರ್ಯದಿಂದ ಹೇಗಾದರೂ ಹೂಡಿ ಆ ಬಿಲ್ವಾರನನ್ನು ಹುಡಕಿಕೊಂಡು ಬಂದು ನನ್ನ ಕುವರಿಯನ್ನು ಅವನಿಗೆ ಕೊಟ್ಟು ಮದುವೆ ಮಾಡಿಸಬೇಕೆನ್ನಲು ಮಂತ್ರಿಯು ಹಾಗೆಯೇ ಆಗಲೆಂದು ಒಪ್ಪಿಕೊಂಡು ನಿಮಿತವಾದ ಪರಿಚಾರಕರೊಂದಿಗೆ ಆ ಬಿಲ್ವಾರನನ್ನು ಹುಡುಕಿಕೊಂಡು ಬರಲು ಪ್ರಯಾಣವಾಡಿದನು.

ಅತ್ತಲಾಗಿ ಆ ಸತ್ಯಜಿತ್ತುಮಹಾರಾಯನು ಧೈರ್ಯವಾಗಿ ದಟ್ಟವಾದ ಅಡವಿಗಳಲ್ಲಿ ಸಂಚಾರಮಾಡುತ್ತಾ, ಎದುರಾಗಿ ಬರುತ್ತಿರುವ ಹೆಬ್ಬುಲಿಗಳನ್ನು ಹೊಡೆದು ಕಡವ್ರತ್ತಾ, ಕರಡಿಗಳನ್ನೆಲ್ಲಾ ನೆಲಕ್ಕೆ ಅಪ್ಪಳಿಸುತ್ತಾ, ಮದ್ವಾನೆಗಳ ಬಳಗವನ್ನು ಬಹುದೂರ ಓಡಿಸುತ್ತಾ, ಮುಂದುಮುಂದಕ್ಕೆ ಪ್ರಯಾಣವಂ ಮಾಡುತ್ತಿರುವಲ್ಲಿ, ಆ ಕನ್ಯಕಾಮಣಿಯನ್ನು ಜ್ಞಾಪಿಸಿಕೊಂಡು, ಮನ್ಮಥವಿಕಾರದಿಂದ ನಿಶ್ಚೇಷ್ಟಿತನಾಗಿ ಏನೂತೋರದೆ ಅಲ್ಲಲ್ಲಿಸಿಕ್ಕುವ ಮರದ ಬುಡದಲ್ಲಿ ನಿಂತು, ವನಫಲಗಳನ್ನು ತಿಂದು ತೀರ್ಥೋದಕವನ್ನು ಕುಡಿದು, ದಣುವನ್ನು ಆರಿಸಿಕೊಂಡು, ಆ ಚಂದ್ರಮುಖಿಯನ್ನು ಮರೆಯುವೆ ಕಳವಳಪಡುತ್ತಿರುವಲ್ಲಿ ಪೂರ್ವದಿಕ್ಕಿನಲ್ಲಿ ಪೂರ್ಣಚಂದ್ರನ ಪ್ರಕಾಶವು ಕಾಣಿಸಲಾರಂಭಿಸಿತು, ಆಗ ಆ ಸತ್ಯಜಿತ್ತುವಿನ ಮನೋವಿರಹತಾಪವನ್ನು ಯಾರು ತಾನೆ ಬಣ್ಣಿಸಲಾತೀತು! ಅರ್ಜುನಾ ಕೇಳು, ಆ ಸತ್ಯಜಿತ್ತುವು ಆ ರಾಜಪುತ್ರಿಯನ್ನು ಮನದಲ್ಲಿ ಜ್ಞಾಪಕಕ್ಕೆ ತಂದುಕೊಂಡು, ಅಯ್ಯೋ, ಕಮಲಮುಖಿ, ನನ್ನನ್ನು ಮರೆತು ಸ್ವಲ್ಪವಾದರೂ ಕನಿಕರವಿಲ್ಲದೆ ನಿನ್ನ ಅಂತಃಪುರಕ್ಕೆ ಹೊರಟುಹೋಗಬಹುದೆ? ನಿನ್ನಂಥ ನಿಷ್ಕರುಣಿಗಳು ಲೋಕದಲ್ಲಿ ಮತ್ತೆಯಾರಿರುವರು? ನಾನು ಸುಂದರ ಸುಕುಮಾರನಾದ ರಾಜಪುತ್ರನಲ್ಲವೆ? ಇಂದಾದರೂ ಬೇಗಬಂದು ನನ್ನೊಂದಿಗೆ ರತಿಸುಖವನ್ನು ಪಡೆದು ಹೋಗಬಾರದೆ? ನಿನ್ನ ವಿರಹದಿಂದ ನನ್ನ ಪ್ರಾಣಗಳೇಹೋಗುತ್ತಿರುವುವಲ್ಲಾ! ಜಾಗ್ರತೆಯಾಗಿ ಬಾರೆಂದು ಆ ಪೂರ್ಣಚಂದ್ರನ ಕಡೆ ನೋಡಿ ನೋಡಿ ಹೇಳುತ್ತಾ, ಕಳವಳದಿಂದ ಚಿಂತಿಸುತ್ತಿರುವಲ್ಲಿ, ಯಾವ ಪ್ರತ್ಯುತ್ತರವೂ ಬಾರದಿರುವುದನ್ನು ನೋಡಿ ಸ್ವಲ್ಪಹೊತ್ತು ಚಿಂತಿಸುತ್ತಾ, ಕಡೆಗೆ ಅಯ್ಯೋ, ಇದೇನು, ನನಿಗೆ ಇಂತಹ ಭ್ರಾಂತಿಯುಂಟಾಗಬಹುದೆ? ಪೂರ್ಣಚಂದ್ರನ ಕಾಂತಿಯನ್ನು ಕಾಂತಾಮಣಿಯೆಂದುಭ್ರಮಿಸಿದೆನಲ್ಲಾ! ನನ್ನಂತಹ ಅಜ್ಞಾನಿಗಳು ಮತ್ತೆಯಾರಿರುವರು? ಅಯ್ಯೋ! ದುರ್ದೈವವೆ! ನನ್ನನ್ನು ಇನ್ನೆಷ್ಟುಪರೀಕ್ಷಿಸಬೇಕೆಂದಿರುವೆಯೋ ಕಾಣೆನಲ್ಲಾ! [illegible] ಆಬಾಲಿಕ ತನ್ನ ಬಲಿ ಇದ ಆ ರಾಜ

ಪುತ್ರಿಯು ಪಟ್ಟಿ ಪೀತಾಂಬರವನ್ನೂ ಕುಪ್ಪಸವನ್ನೂ ಈಚೆಗೆ ತೆಗೆದು ಆ ಬಿಳಿದಿಂಗಳಿಗೆ ಹಿಡಿದು ಅವ್ರಗಳನ್ನು ಆನಂದದಿಂದ ಮುತ್ತಿಟ್ಟುಕೊಂಡು, ಆ ರಾಜಪುತ್ರಿಯನ್ನು ಸರೋವರದ ಬಳಿ ನೋಡಿದಾಗ ಉಂಟಾದ ವಿರಹ ತಾಪಕ್ಕಿಮ್ಮಡಿಯಾದ ವಿರಹವೇದನೆಯನ್ನು ಹೊಂದಿ, ಭ್ರಾಂತಚಿತ್ತನಾಗಿ ತಿರುಗಾಡುತ್ತಿರುವಲ್ಲಿ ಮುಂದುಗಡೆ ರಮಣೀಯವಾದ ಉದ್ಯಾನವೊಂದು ಕಾಣಿಸಿತು, ಇದನ್ನು ನೋಡಿದಕೂಡಲೆ ಆ ಸತ್ಯಜಿತ್ತು ಮಹಾರಾಯನು ಆಹಾ ! ನನ್ನ ಭಾಗ್ಯಕ್ಕೆ ಎಣೆಯೇ ಇಲ್ಲವು. ಇದು ಕಳಿಂಗದೇಶಾಧೀಶನ ಉದ್ಯಾನವನವಾಗಿರುವುದು. ಈ ಉದ್ಯಾನವನದಲ್ಲಿ ಹಿಂದೆ ನಾನು ನೋಡಿದ ದಿವ್ಯಸರಸ್ಸಿನ ಬಳಿಗೆ ಹೋಗಿ ಸೇರುವೆನು. ಆ ಸರಸ್ಸಿಗೆ ಯಥಾಪ್ರಕಾರ ಆ ರಾಜಪುತ್ರಿಯು ಸಖಿಯರೊಂದಿಗೆ ಈವೇಳೆಗೂ ನೀರಾಟಕ್ಕೆ ಬರುವಳು. ಆಗ ನಾನು ಆ ಕನ್ಯಕಾರತ್ನದೊಂದಿಗೆ ಸ್ವೇಚ್ಛೆಯಾಗಿ ನನ್ನಿಷ್ಟವನ್ನು ತೀರಿಸಿಕೊಳ್ಳುವೆನೆಂಬುಭ್ರಾಂತಿಯಿಂದ ಮರದಸರಳಿನಲ್ಲಿಯೇ ಯಾರೂ ಕಾಣಕೂಡದೆಂದು ಹೋಗುತ್ತಿದ್ದನು. ಈ ವನವು ಭರದ್ವಾಜಾಶ್ರಮವೆಂದು ಈ ರಾಜಪುತ್ರನಿಗೆ ಗೊತ್ತಿಲ್ಲಗಲಿಲ್ಲ, ಕಳಿಂಗದೇಶದ ಉದ್ಯಾನವನವೆಂದೇ ಭ್ರಾಂತನಾಗಿದ್ದನು. ಹೀಗಿರುವಲ್ಲಿ ಅಲ್ಲಲ್ಲಿ ತಿರುಗುತ್ತಿದ್ದ ಆ ಮಹಾಮುನಿಯ ಶಿಷ್ಯರಲ್ಲಿ ಕೆಲವರು ಮರದಡಿಯಲ್ಲಿಯೇ ಹೋಗುತ್ತಿರುವ ಈ ರಾಜಪುತ್ರನನ್ನು ನೋಡಿ ಇವನು ಹುಚ್ಚನೆಂದು ಹಿಡಿದುಕೊಂಡು ಹೋಗಿ, ಆ ಋಷಿಯಮುಂದೆ ಬಿಟ್ಟು ಇವನ ನಡವಳಿಕೆಯನ್ನೆಲ್ಲಾ ತಿಳಿಸಿದರು, ಆ ಮಹಾಮುನಿಯು ಈ ರಾಜಕುವರನನ್ನು ಹತ್ತಿರ ಕೂಡಿಸಿಕೊಂಡು, ಎಲೈ ಸುಕುವರನೆ, ನೀನು ಈ ವನದಲ್ಲಿ ಮರದಡಿಯಲ್ಲಿಈರೀತಿ ತಿರುಗುತ್ತಿರುವುದು ಏತಕ್ಕೆ! ನಿನ್ನ ತಾಯಿತಂದೆಗಳು ಯಾರು ? ನಿನ್ನ ವರ್ತಮಾನವೇನು? ಎಂದು ಕೇಳಿದ್ದಕ್ಕೆ ಆ ರಾಜಪುತ್ರನು ನಡೆದ ವರ್ತಮಾನವನ್ನೂ ತನ್ನ ಚರಿತ್ರೆಯನ್ನೂ ಮುನಿಪುಂಗವನಿಗೆ ಸಾಂಗವಾಗಿ ವಿಜ್ಞಾಪಿಸಿಕೊಂಡು, ಆ ರಾಜಪುತ್ರಿಯು ಪಟ್ಟಿ ಮಡಿಯನ್ನೂ ಕುಪ್ಪಸವನ್ನೂ ತೋರಿಸಿ, ತನಿಗೆ ಆ ಕನ್ನಿಕೆಯನ್ನು ಮದುವೆಮಾಡಿಕೊಳ್ಳಬೇಕೆಂಬ ಭ್ರಮೆಯಿಂದ ಹೀಗೆ ಆಗಿದೆಯೆಂದು ತಿಳಿಸಿದನು. ಆಗ ಆಮಹರ್ಷಿಯು ಆ ಸುಕುಮಾರನನ್ನು ಸಮಾಧಾನೋಕ್ತಿಗಳಿಂದ ಸಂತೈಸಿ, ಅಯ್ಯಾ, ರಾಜಪುತ್ರನೆ ! ನೀನು ಧನುರ್ಧರಾಗ್ರೇಸರನು, ಧೈರ್ಯಶೌರ್ಯಸಾಹಸಗುಣಯುಕ್ತನು, ಸುಂದರಾಕಾರನು. ಇಂತಹ ನೀನು ಒಬ್ಬಸ್ತ್ರೀಗೆ ಆಶೆಪಟ್ಟು, ಈರೀತಿ ಭ್ರಾಂತನಾಗಬಹುದೆ ! ಇಂದ್ರಾದಿಲೋಕಪಾಲಕರೂ ಕೂಡ ಪೂರ್ವದಲ್ಲಿ ಸ್ತ್ರೀಯರನಿಮಿತ್ತವಾಗಿಯೇ ಅಪಯಶಸ್ಸನ್ನೂ ಅವಮಾನವನ್ನೂ ಪಟ್ಟಿರುವುದು ನಿನಿಗೆ ತಿಳಿಯದೆ? ನಿನ್ನಂಥ ಹುಚ್ಚರು ಲೋಕ

ದಲ್ಲಿ ಮತ್ತೆಯಾರಿರುವರು ? ನಿನ್ನ ಈ ದುರಾಶೆಯನ್ನು ಬಿಟ್ಟು ನಮ್ಮ ಆಶ್ರಮದಲ್ಲಿಯೇನಿಲ್ಲು. ನಿನಗೆ ಶರೀರೋತ್ಪತ್ತಿಕ್ರಮವನ್ನೂ, ಧರ್ಮಾರ್ಥಗ್ರಹಿ ಚಾರವನ್ನೂ ತಿಳಿಸುವೆನು, ಅವುಗಳನ್ನು ನೀನು ಚನ್ನಾಗಿ ಗ್ರಹಿಸು. ನಿನಿಗೆ ಶಬ್ದಭೇದಿಯೆಂಬ ಮಹಾಮಂತ್ರವನ್ನು ಉಪದೇಶ ಮಾಡುವೆನು. ಈ ಉಪದೇಶದಿಂದ ಮುಂದೆ ನಿನಗೆ ಯಾವವಿಧನಾದ ಮನೋವ್ಯಾಕುಲವೂ ಸಂಭವಿಸುವುದಿಲ್ಲವು, ಲೋಕದಲ್ಲೆಲ್ಲಾ ಪೂಜ್ಯನಾಗುತ್ತೀಯೆ. ಈ ತೆರನಾದ ಶಬ್ದಭೇದಿಯೆಂಬ ಉಪದೇಶವನ್ನು ಕೈಕೊಂಡು ಹೊರಡೆಂಬುದಾಗಿ ಹೇಳಿದನು. ಸತ್ಯಜಿತ್ತು ಮಹಾರಾಯನಾದರೋ, ಆಹಾ ! ಇದೇನಾಶ್ಚರ್ಯವು ! ನನ್ನಮನಸ್ಸಿನಲ್ಲಿದ್ದ ಶಬ್ದಭೇದಿಯೆಂಬ ಮಹಾಮಂತ್ರವನ್ನೇ ಈ ಮಹಾಮುನಿಯೂ ಉಪದೇಶಿಸುವೆನೆಂದು ನುಡಿಯುತ್ತಿರುವನು ! ಆಹಾ ! ಸಾಕ್ಷಾನ್ನಾರಾಯಣಮೂರ್ತಿಯೇ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಈ ಮಹರ್ಷಿಯಾಗಿ ನನ್ನೆದುರಿಗೆ ಕಂಗೊಳಿಸುವಂತೆ ತೋರುವುದು. ಆಹಾ ! ನಾನೇ ಧನ್ಯನೆಂದುಕೊಂಡು, ಆ ಮಹಾಮುನಿಯ ಪಾದಾರವಿಂದಗಳಿಗೆ ಸಾಷ್ಟಾಂಗಪ್ರಣಾಮವಂಗೈದು, ಮಹಾತ್ಮಾ! ನನ್ನ ಮನಸ್ಸುಸ್ವಸ್ಥವಾಗುವಂತೆ, ತತ್ತ್ವೋಪದೇಶವಮಾಡಿ, ದಿವ್ಯಾಸ್ತ್ರ ಪ್ರಯೋಗವನ್ನು ಅವುಗಳ ಉಪಸಂಹಾರವನ್ನೂ ಬೋಧಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಅಂಜಲಿಬದ್ಧನಾಗಿ ಕೇಳಿಕೊಂಡನು. ಆ ಮುನಿಯು ರಾಜಪುತ್ರನಿಗೆ ಸಾಂಖ್ಯಸೂತ್ರವನ್ನು ಬೋಧಿಸಲುಪಕ್ರಮಿಸಿದ್ದು ಹೇಗೆಂದರೆ. —

ಭರದ್ವಾಜಮುನಿಯು ಮಂತ್ರೋಪದೇಶ ಮಾಡುವಿಕೆ,

ರಾಜಪುತ್ರನನ್ನು ಪತ್ತಿರಕರೆದುಕೊಂಡು, ಅಷ್ಟಾಕ್ಷರೀಮಂತ್ರಾರ್ಥಮೂಲವನ್ನೂ, ಮಂತ್ರಸಾರವನ್ನೂ ಉಪದೇಶಮಾಡಿ, ಈ ಎಂಟು ಅಕ್ಷರಗಳನ್ನೂ ಎಳು ಕಮಲಗಳಲ್ಲಿಯೂ, ನಾದಬ್ರಹ್ಮನಲ್ಲಿಯೂ ನಿಲ್ಲಿಸಿ, ಆ ಕಮಲವನ್ನು ವರ್ಣಿಸಿ, ತತ್ತ್ವದಧಿದೇವತೆಗಳನ್ನೂ ಉಪದೇಶಮಾಡಿ, ಆ ಬಳಿಕ ಎಲ್ಲಿ ನುಕುವಾರನೆ ! ನೀನು ಈ ಮಹಾಮಂತ್ರೋಪದೇಶದಿಂದ ಪಾವನನಾದೆ. ನಿನಿಗೆ ದೇವರಹಸ್ಯವನ್ನು ಬೋಧಿಸಿರುವೆನು, ನಿನ್ನ ಶರೀರದಲ್ಲಿರುವ ಮಾಂಸಪಿಂಡಗಳನ್ನೆಲ್ಲಾ ಮಂತ್ರಪಿಂಡಗಳಾಗಿ ಮಾಡಿರುವೆನು, ನಿನಗೆ ದೇವರದರ್ಶನವು ಲಭಿಸುವುದರಲ್ಲಿ ಸಂದೇಹವಿಲ್ಲವು. ಈಮಂತ್ರೋಪದೇಶದಿಂದ ಅನೇಕರು ಪುಣ್ಯಲೋಕವನ್ನು ಪಡೆದಿರುವಂತೆ ನಿನಗೂ ಪುಣ್ಯಲೋಕವಾಪ್ತಿಯಾಗುವುದು, ಮೊದಲು ಸರ್ವಪರಿಪೂರ್ಣನಾಗಿ, ನಯನದ್ವಯವೆಂಬ ಬ್ರಹ್ಮನಲ್ಲಿ ಆಕಾಶವೂ, ಆ ಆಕಾಶದಿಂದ ವಾಯುವೂ, ಆ ವಾಯುವಿನಿಂದ ಅಗ್ನಿಯೂ, ಆ ಅಗ್ನಿಯಿಂದ ನೀರೂ, ಆ ನೀರಿನಿಂದ

ಭೂಮಿಯೂ ಉಂಟಾದದ್ದು. ಆಕಾಶಕ್ಕೆ ತತ್ಸಂಬಂಧದಿಂದ ಜ್ಞಾನವೂ, ಆಕಾಶಕ್ಕೆ ವಾಯುವಿನ ಸಂಬಂಧದಿಂದ ಮನಸ್ಸೂ, ಆಕಾಶಕ್ಕೆ ಅಗ್ನಿಸಂಬಂಧದಿಂದ ಬುದ್ಧಿಯೂ, ಆಕಾಶಕ್ಕೆ ನೀರಿನ ಸಂಬಂಧದಿಂದ ಚಿತ್ತವೂ, ಆಕಾಶಕ್ಕೆ ಭೂಮಿಯ ಸಂಬಂಧದಿಂದ ಅಹಂಕಾರವೂ ಹುಟ್ಟಿದವುದು. ಇನ್ನು ಆಕಾಶಸಂಬಂಧವಾಗಿ ಅಂತರಿಂದ್ರಿಯಗಳೂ, ಸಮಾನ, ಉದಾನ, ಪ್ರಾಣ, ಅಪಾನ ಇವುಗಳೈದೂ ವಾಯುಸಂಬಂಧವಾದ ಪ್ರಾಣೇಂದ್ರಿಯಗಳೂ, ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಇವು ಐದೂ ಅಗ್ನಿಸಂಬಂಧವಾದ ಜ್ಞಾನೇಂದ್ರಿಯಗಳೂ, ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ಐದೂ ಜಲಸಂಬಂಧವಾದ ಪಂಚತನ್ಮಾತ್ರವೂ. ವಾಕ್ಕು, ಪಾಣಿ, ಪಾದ, ಗುಹ್ಯ, ವಾಯುವೆಂಬ ಐದೂ ಪೃಥ್ವಿಸಂಬಂಧವಾದ ಕರ್ಮೇಂದ್ರಿಯಗಳೂ ಒಟ್ಟು ಈ ಇಪ್ಪತ್ತೈದು ತತ್ವಗಳು ಕೂಡಿ ಶರೀರವುಂಟಾಗಿರುವುದು.

ಜ್ಞಾತ	ಮನಸ್ಸು	ಬುದ್ಧಿ	ಚಿತ್ತ	ಅಹಂಕಾರ
ಸಮಾನ	ವ್ಯಾನ	ಉದಾನ	ಪ್ರಾಣ	ಅಪಾನ
ಶ್ರೋತ್ರ	ತ್ವಕ್ಕು	ಚಕ್ಷು	ಜಿಹ್ವ	ಘ್ರಾಣ
ಶಬ್ದ	ಸ್ಪರ್ಶ	ರೂಪ	ರಸ	ಗಂಧ
ವಾಕ್ಕು	ಪಾಣಿ	ಪಾದ	ಗುಹ್ಯ	ಪಾಯು
ಇವು ಆಕಾಶ	ಇವು ವಾಯು	ಇವು ಅಗ್ನಿ	ಇವು ಉದಕ	ಇವು ಪೃಥ್ವಿ
ಪಂಚಕವು	ಪಂಚಕವು	ಪಂಚಕವು	ಪಂಚಕವು	ಪಂಚಕವು

ಶ್ರೋತ್ರಕ್ಕೆ ವಿಷಯವಾದಯ್ದ ಶಬ್ದವು. ದಿಕ್ಕು ಅಧಿದೇವತೆಯು.

ತ್ವಕ್ಕಿಗೆ ವಿಷಯವಾದದ್ದು ಸ್ಪರ್ಶವು. ವಾಯುವು ಅಧಿದೇವತೆ.

ಚಕ್ಷುವಿಗೆ ವಿಷಯವಾದದ್ದು ರೂಪವು. ಸೂರ್ಯನು ಅಧಿದೇವತೆಯು.

ಜಿಹ್ವೆಗೆ ವಿಷಯವಾದದ್ದು ರಸವು. ವರುಣನು ಅಧಿದೇವತೆಯು.

ಘ್ರಾಣೇಂದ್ರಿಯಕ್ಕೆ ವಿಷಯವು ಗಂಧ ಅಶ್ವಿನಿ ಅಧಿದೇವತೆಯು.

ವಾಕ್ಕಿಗೆ ವಿಷಯವಾದದ್ದು ವಚನವು. ಅಗ್ನಿಯು ಅಧಿದೇವತೆ.

ಪಾಣಿಗೆ ವಿಷಯವು ದಾನವು. ಇಂದ್ರದೇವನು ಅಧಿದೇವತೆ.

ಪಾದಕ್ಕೆ ವಿಷಯವು ಗಮನವು. ವಿಷ್ಣುವು ಅಧಿದೇವತೆಯು.

ಗುಹ್ಯಕ್ಕೆ ವಿಷಯವು ಆನಂದವು. ಬ್ರಹ್ಮನು ಅಧಿದೇವತೆಯು.

ವಾಯುವಿಗೆ ವಿಷಯವು ವಿಸರ್ಜನೆಯು. ಮೃತ್ಯುವು ಅಧಿದೇವತೆಯು

ಸಮಾನವಾಯುವು ನಾಭಿಯಲ್ಲಿಯೂ, ಪ್ರಾಣವಾಯುವು ಹೃದಯದಲ್ಲಿಯೂ, ಅಪಾನವಾಯುವು ಗುದಸ್ಥಾನದಲ್ಲಿಯೂ, ಉದಾನವಾಯುವು ಕಂಠನಾಳದಲ್ಲಿಯೂ. ನಾಗವಾಯುವು [illegible]

ಬರುವುದು. ಉಪವಾಯುಗಳಾದ ನಾಗ, ಕೂರ್ಮ, ಕೃಕರ, ದೇವದತ್ತ ಧನಂಜಯನೆಂಬ ಐದೂ ಶರೀರದಲ್ಲೆಲ್ಲಾ ವ್ಯಾಪಿಸಿರುವುದು. ಪಾದಗಳಲ್ಲಿ ಕಾಲಾಗ್ನಿಯೂ, ಕುಕ್ಷಿಯಲ್ಲಿ ಜಠರಾಗ್ನಿಯೂ, ಹೃದಯದಲ್ಲಿ ಶೀತಾಗ್ನಿಯೂ, ನೇತ್ರಂಗಳಲ್ಲಿ ಕೋಪಾಗ್ನಿಯೂ, ಎರಡು ಕಣ್ಣುಬ್ಬುಗಳ ನಡುವೆ ಜ್ಞಾನಾಗ್ನಿಯೂ ಉಂಟಾಗಿವೆ. ಈ ಪಂಚಾಗ್ನಿಗಳ ಮಧ್ಯೆ ಆತ್ಮನು ಏಕರೂಪವಾಗಿ ಪ್ರಕಾಶವುಳ್ಳವನಾಗಿರುವನು. ಜಾಗರವು ತ್ರಿಕೂಟದಲ್ಲಿಯೂ, ಸ್ವಪ್ನವು ಕಂಠದೊಳಗೂ, ಸುಷುಪ್ತಿಯು ಹೃದಯದಲ್ಲಿಯೂ ಇರುತ್ತದೆ. ಈ ಮೂರು ಗೃಹಸ್ಥಾಶ್ರಮಾನಲಂಬಿಗಳಿಗೂ, ತುರ್ಯವು ತುರ್ಯಾತೀತವೂ ಯೋಗಿಗಳಿಗೂ ನಿಯಮಿತಂಗಳಾಗಿವೆ. ಆತ್ಮನು ಇಂದ್ರಿಯಗಳಿಗೆ ದೂರನಾಗಿ ನಿಷ್ಕಲ್ಮಷನಾದ್ದರಿಂದ ಸುಷುಪ್ತ್ಯವಸ್ಥೆಯೇ ಶ್ರೇಷ್ಠವೆಂದು ಹೇಳುವರು. ಚಿತ್ತವಾದರೋ ಪ್ರಾಣವಾಯುವಿನೊಂದಿಗೆ ಸೇರಿ, ಜಿಹ್ವೇಂದ್ರಿಯದ ಮೂಲಕವಾಗಿ ರಸವನ್ನು ಹೊಂದಿ, ಗುಹ್ಯೋಪಸ್ಥಗಳಿವೆರಡೂ ಮಿಸುಬುದರಿಂದ ಶುಕ್ಲಶೋಣಿತಗಳು ದ್ರವಿಸುವವು. ಇವೆರಡೂ ಏಕವಾಗಿ ಪಿಂಡರೂಪವನ್ನು ಪಡೆಯುವವು. ಅನಂತರ ಮಣಿಪೂರಕ ಕಮಲವಾದ ಶ್ರೀ ವಿಷ್ಣುಸ್ಥಾನಾಧ್ಯದಲ್ಲಿರುವ ಸವಾನವಾಯುವಿನಿಂದ ಪೋಷಿಸಲ್ಪಟ್ಟು, ಅವಯವಗಳುಂಟಾಗಿ, ಒಂಭತ್ತು ತಿಂಗಳು ಮಲಮೂತ್ರಗಳಲ್ಲಿ ಬೆಳೆದು, ಅನಂತರ ಮೂತ್ರದ್ವಾರದಿಂದ ತಪ್ಪಿಸಿಕೊಂಡು ಹೊರಕ್ಕೆ ಬಂದು ತಾಯಿಯ ಪೋಷಣೆಯಲ್ಲಿರುವುದು. ತಾಯಿಯ ರಕ್ತವು ಕಡಿಮೆಯಾಗಿ ಸ್ರವಿಸಿದರೆ ಕಂಪುಬಣ್ಣವೂ, ತಂದೆಯ ಶುಕ್ಲವು ಕಡಿಮೆಯಾಗಿ ಸ್ರವಿಸಿದರೆ ಕಪ್ಪಗೂ, ಎರಡೂ ಸಮನಾದರೆ ಸಾಧಾರಣ ಶ್ಯಾಮಲವರ್ಣವೂ ಆಗಿ ದೇಹಗ್ರಹಾವಾಸಕ್ಕನುಗುಣವಾಗಿ ಸ್ತ್ರೀಪುರುಷರು ಹುಟ್ಟುವರು. ಅಯ್ಯಾ, ಸತ್ಯಜಿತ್ತುವೆ, ಅಂತಹ ಮಲಿನವಾದ ಯೋನಿಮಂಡಲಕ್ಕೆ ನೀನೇಕೆ ಆಸೆಪಡುತ್ತಿ? ಇದರಿಂದ ಅನೇಕರು ಕೆಟ್ಟುಹೋದರೆಂದು ನಿನಗೆ ಗೊತ್ತಿಲ್ಲವೇ? ಹೀಗೆಂದು ಬೋಧಿಸಿದನು. ಇವನ ಮನಸ್ಸಿನ ಕಳವಳವೆಲ್ಲಾ ಹೋಗಿ ಪುಣ್ಯಲೋಕಪ್ರಾಪ್ತಿಯಾಗಬೇಕೆಂದು ಶಬ್ದಭೇದಿಯೆಂಬ ಮಹಾಮಂತ್ರವನ್ನು ಉಪದೇಶಮಾಡಿದನು, ಆ ರಾಜಕುಮಾರನು ಭರದ್ವಾಜಋಷಿಯ ಉಪದೇಶವನ್ನು ಕೈಕೊಂಡು, ಆ ಮುನಿನಾಥನಿಗೆ ಫಲಮೂಲಾದಿಗಳನ್ನು ತಂದು ಕೊಡುತ್ತಾ ಅಲ್ಲಿಯೇ ಶಿಕ್ಷಾಷೆಯನ್ನು ಮಾಡುತ್ತಿದ್ದನೆಂದು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಕೂಡಲೇ ಅರ್ಜುನನು ಶ್ರೀಕೃಷ್ಣನ ಪಾದಗಳಿಗೆ ಅಡ್ಡಬಿದ್ದು ನನಿಗೆ ಸಾಂಖ್ಯಸೂತ್ರವು ಚನಾಗಿ ಗೊತಾಯಿತು. ಆ ಸತ್ಯಜಿತ್ತುಮಹಾರಾಯನ ವರ್ತಮಾನವೇನಾಯಿತು? ಕಳಿಂಗದೇಶದ ಮಂತ್ರಿನಾಯನಿಸಿದ್ದ ಆತನಿಗೆ ಸಕಲಸಂಪತ್ತುಗಳೂ ಸಾಂಗವಾಗಿ ತಿಳಿಸಿ

ಕೃತಾರ್ಥನನ್ನು ಮಾಡಬೇಕೆಂದು ಕೇಳಿದ ಅರ್ಜುನನನ್ನು ಕುರಿತು ಶ್ರೀ ಕೃಷ್ಣಸ್ವಾಮಿಯು ಇಂತೆಂದನು.

ಕೇಳೈ ಅರ್ಜುನನೆ ; ಆ ಸತ್ಯಜಿತ್ತುವು ಫಲಕಾಷ್ಟಂಗಳನ್ನು ತರಲು ಒಂದಾನೊಂದು ದಿನ ಬಹುದೂರದವರೆಗೂ ಹೋಗುತ್ತಿರುವಲ್ಲಿ ಕೆಲವುಜನ ಪ್ರಯಾಣಿಕರನ್ನು ಕಂಡನು. ರಾಜಪುತ್ರನು ಅವರನ್ನು ಕುರಿತು ನೀವು ಎಲ್ಲಿಗೆ ಹೋಗುವಿರೆಂದು ಕೇಳಿದನು, ಆ ಪಥಿಕರು ರಾಜಪುತ್ರನನ್ನು ಕುರಿತು, ಅಯ್ಯಾ ! ನಾವು ಮತ್ಸ್ಯದೇಶವಾಸಿಗಳು, ನಮ್ಮದೇಶದ ರಾಜನು ಬಹಳ ಸೊಗಸಾದ ಒಂದಾನೊಂದು ಶೌರಿಕಾಯಂತ್ರವನ್ನಿಟ್ಟಿರುವನು, ಆ ಎಂತ್ರಕ್ಕೆ ಹೆದೆಯೇರಿಸಿ ಯಾರು ಧನುಸ್ಸನ್ನು ಕಡಿಯುವರೋ ಅಂತಹ ಶೂರನಿಗೆ ತನ್ನ ಮಗಳಾದ ಚಂದ್ರರೇಖೆಯನ್ನು ಕೊಟ್ಟುಮದುವೆಮಾಡುವೆನೆಂದು ಪ್ರಕಟಿಸಿರುವನು. ನಾವು ಆ ಮಹೋತ್ಸವವನ್ನು ನೋಡಿ ಆನಂದಪಡಬೇಕೆಂದು ಹೋಗುತ್ತಿರುತ್ತಿರುವೆವೆಂದರು. ಆ ರಾಜಪುತ್ರನು ಕೂಡಲೇ ಭರದ್ವಾಜ ಋಷಿಗಳ ಬಳಿಗೆ ಬಂದು, ನಮಸ್ಕಾರಮಾಡಿ, ಈ ವರ್ತಮಾನವನ್ನು ಹೇಳಿ ತಾನು ಅಲ್ಲಿಗೆ ಹೋಗಿ ಆ ಧನುಸ್ಸನ್ನು ಮುರಿದು ಆ ಚಂದ್ರರೇಖೆಯನ್ನು ಮದುವೆ ಮಾಡಿಕೊಂಡು ಬರಲು ಅಪ್ಪಣೆ ಕೊಡಿಸಬೇಕೆಂದು ಕೇಳಿಕೊಂಡನು. ಆಗ ಭರದ್ವಾಜಮಹಾಮುನಿಯು ಹುಸಿನಗೆಯಿಂದ, ರಾಜಕುಮಾರನನ್ನು ಕುರಿತು, ಎಲೈ ರಾಜಾತ್ಮಜಾ ! ನೀನು ಹೋಗಬಹುದು. ನಿನಗೆ ಜಯವಾಗುವುದೆಂದು ಕಳುಹಿಸಿದನು. ಸತ್ಯಜಿತ್ತುಮಹಾರಾಯನಾದರೋ ಭರದ್ವಾಜಮುನಿಯ ಅಪ್ಪಣೆಯನ್ನು ಪಡೆದು, ಆ ಮಾರ್ಗಸ್ಥರು ಹೋಗುತ್ತಿದ್ದ ದಾರಿಯನ್ನು ಹಿಡಿದು, ಅತ್ಯುತ್ಸಾಹದಿಂದ ಮತ್ಸ್ಯದೇಶಕ್ಕೆ ಪ್ರಯಾಣಮಾಡುತ್ತಿದ್ದನು, ಹೀಗಿರುವಲ್ಲಿ ಕಳಿಂಗದೇಶಾಧೀಶನಿಂದ ಕಳುಹಿಸಲ್ಪಟ್ಟ ಸುನೀತಿಯೆಂಬ ಮಂತ್ರಿಯಾದರೋ, ಗಟ್ಟಿವಿಟ್ಟಿಗಳಲ್ಲೆಲ್ಲಾ ಅಲೆದು, ಗುಹೆಗಳನ್ನು, ಕೊಳಗಳನ್ನು, ಹಳ್ಳಿಪಳ್ಳಿಗಳನ್ನೂ ದಾಟಿ ಎಲ್ಲಿಯೂ ಆ ಬಿಲ್ವಾಧನನ್ನು ಕಾಣದೆ ವಿಚಾರದರನಾಗಿ, ತಿರುತಿರುಗಿ, ಬಳಲಿ, ಬೇಸತ್ತು ಎಲ್ಲಿಯೂ ಅವನ ವರ್ತಮಾನವೇ ತಿಳಿಯದಿರುವಲ್ಲಿ, ಮತ್ಸ್ಯದೇಶದಲ್ಲಿ ಈಗ ನಡೆಯುವ ಸ್ವಯಂವರಕ್ಕೆ ನಾನೂ ಹೋಗಿಬಂದರೆ ಅಲ್ಲಿಯಾದರೂ ಆ ಬಿಲ್ವಾಧನಿರಬಹುದೆಂದು ಯೋಚಿಸಿ ಪ್ರಯಾಣಮಾಡುತ್ತಿರುವಲ್ಲಿ, ಮುಂದುಗಡೆ, ಏಕಾಂಗಿಯಾಗಿ ಕುದುರೆಯಮೇಲೆ ಕುಳಿತುಕೊಂಡು, ದಿವ್ಯಾಸ್ತ್ರಾಂಗಳನ್ನೂ, ಧನುರ್ಬಾಣಗಳನ್ನೂ ಧರಿಸಿ, ಸುಂದರಾಕಾರನಾಗಿ, ಕೃಶಾಂಗನನಾಗಿ ಪ್ರಯಾಣಮಾಡುತ್ತಿರುವ ಒಬ್ಬಾನೊಬ್ಬ ರಾಜಪುತ್ರನನ್ನು ಕಂಡನು. ಆಗ ಮಂತ್ರಿಯಾದ ಸುನೀತಿಯು, ಆಹಾ ! ಇವನನ್ನು ನೋಡಿದರೆ ಹಿಂದೆ ನಮ್ಮದೇಶದ ರಾಜಪುತ್ರಿಯನ್ನು [illegible]

ಹರಿಸಿದ ಬಿಲ್ಲಾರನೆಂದು ಅನುಮಾನವಾಗುತ್ತಿರುವುದು, ಇವನನ್ನು ಅನುಸರಿಸಿಕೊಂಡು ಇವನ ವರ್ತಮಾನವನ್ನು ತಿಳಿದುಕೊಳ್ಳಬೇಕೆಂದು, ಆ ಸುನೀತಿಯು ಕೂಡಲೇ ತನ್ನ ಕುದುರೆಯನ್ನು ಹಿಂದೆ ಬಿಟ್ಟುಕೊಂಡು ಹೋಗುತ್ತಾ, ಆ ರಾಜಕುಮಾರನ ಸನಿಹಪವನ್ನು ಸೇರಿದನು.

ಆ ಮಂತ್ರಿಯೊದರೋ ನಾನು ಈಗ ಈ ರಾಜಪುತ್ರನೊಂದಿಗೆ ಕಾವೋದ್ರೇಕವಾಗುವ ಮಾತುಗಳನ್ನಾಡಿ, ಇವನ ನಿಜತ್ವವನ್ನು ತಿಳಿಯಬೇಕೆಂದು ಯೋಚಿಸಿ, ಆ ರಾಜಕುಮಾರನ ಸವಿಾಪಕ್ಕೆ ಬಂದು, ರಾಜಕುಮಾರನನ್ನು ಕುರಿತು, ಎಲೈ ರಾಜನಂದನನೇ! ಇಂತಹ ರಮಣೀಯವಾದ ವನವನ್ನು ನೀವೆಲ್ಲಿಯಾದರೂ ನೋಡಿರುವಿರಾ! ಎಂದನು. ಕೂಡಲೇ ರಾಜಪುತ್ರನು ಕುದುರೆಯನ್ನು ನಿಲ್ಲಿಸಿ, ಪಕ್ಕದಿಕ್ಕಿಗೂ ನೋಡುತ್ತಾ, ಅಮಂತ್ರಿಯನ್ನು ಕುರಿತು, ಓಹೋ! ನಿನಗೆ ಈ ವನವು ಅಷ್ಟು ರಮಣೀಯವೆಂದು ತೋಗುವುದೇ? ಅಯ್ಯೋ! ಇಂತಹ ಎಷ್ಟು ವನಗಳು ಸೇರಿದರೆತಾನೆ ಆ ಕಳಿಂಗದೇಶದ ಉದ್ಯಾನವನಕ್ಕೆ ಸಾಟಿಯಾಗಿವೀತೆಂದು ನುಡಿದನು. ಇದನ್ನು ಕೇಳಿದಕೂಡಲೇ ಆ ಸುನೀತಿಗೆ ತಾನು ಹುಡುಕುತ್ತಿದ್ದ ಶೂರನಾದ ಬಿಲ್ಲಾರನು ಇವನೇ ಎಂದು ವ್ಯಕ್ತವಾಯಿತು. ಇವನ ಸಂತೋಷವು ಕ್ಷಣ ಕ್ಷಣಕ್ಕೆ ಹೆಚ್ಚುತ್ತಿತ್ತು. ಅನಂತರ ಮಂತ್ರಿಯು ಇನ್ನು ಸ್ವಲ್ಪ ದೂರಹೋಗಿ, ಅಲ್ಲಿದ್ದ ಸರೋವರವೊಂದನ್ನು ನೋಡಿ, ರಾಜಶ್ರೇಷ್ಠನೆ! ರಮಣೀಯವಾದ ಈ ಸರಸ್ಸನ್ನು ನೋಡೆಂದನು. ರಾಜಕುಮಾರನಾದರೋ, ಆಹಾ! ನೀವೆಂದೂ ಸರೋವರವನ್ನೇ ಕಂಡಿಲ್ಲ. ಇಂತಹ ಎಷ್ಟು ಸರೋವರಗಳನ್ನು ಹತಾಕಿದರೆತಾನೆ ಆ ಕಳಿಂಗದೇಶದ ರಾಜಪುತ್ರಿಯು ಜಲಕ್ರೀಡೆಯಾಡುವ ಸರೋವರಕ್ಕೆ ಸಮಾನವಾಗಿವೀತೆಂದು ನುಡಿದನು, ಮಂತ್ರಿಗೆ ತನ್ನ ಮನಸ್ಸಿನ ಅಪನಂಬಿಕೆಯು ಹೋಯಿತು. ಆಗ ಮಂತ್ರಿಯು ಅಯ್ಯಾ, ರಾಜೋತ್ತಮನೆ, ನೀವು ಆ ರಾಜಕುವರಿಯು ಜಲಕ್ರೀಡೆಯನ್ನಾಡುವ ಸರೋವರವನ್ನು ಯಾವಾಗ ನೋಡಿದಿರಿ? ಹೇಗೆ ನೋಡಿದಿರಿ? ಅದರ ಶೃಂಗಾರವನ್ನು ನಾನು ಕೇಳಿ ತಿಳಿದುಕೊಳ್ಳಬೇಕೆಂಬ ಆಶೆಯು ಬಾಧಿಸುತ್ತಿರುವುದು, ಅದರ ಅಂದವನ್ನು ನನಿಗೆ ತಿಳಿಸಬೇಕೆಂದು ಕೇಳಿಕೊಳ್ಳಲು, ಆ ರಾಜಪುತ್ರನು ಆ ಸರಸ್ಸನ್ನು ಜ್ಞಾಪಕಕ್ಕೆ ತಂದುಕೊಂಡು, ಕಣ್ಣೀರನ್ನು ಸುರಿಸುತ್ತಾ ಅದನ್ನು ವರ್ಣಿಸಿದನು, ಆಗ ಮಂತ್ರಿಯು, ರಾಜಶ್ರೇಷ್ಠನೇ! ಆಕೊಳವನ್ನು ನೀನು ವರ್ಣಿಸಿದಮಾತ್ರಕ್ಕೆ ನಿನಗೆ ಕಣ್ಣಿನಲ್ಲಿ ನೀರುಸುರಿಯಲು ಕಾರಣವೇನು? ಆ ರಾಜಪುತ್ರಿಯನ್ನು ನೀನು ನೋಡಿದೆಯಾ ಎಂದು ಕೇಳಿದನು ಆ ರಾಜಪುತ್ರನಿಗೆ ಮತ್ತಷ್ಟು ದುಃಖವು ಹೆಚ್ಚಿತು. ಆ ರಾಜಪುತ್ರಿಯನ್ನು ವರ್ಣಿಸಿ [illegible] ರಾಜಪುತ್ರಿ ಕೈಯಿಂದಲೆ ನನಿಗೆ ಸುಚಿ ಹಿಡಿದಿದೆಯೆಂದನು

ಆಗ ಮಂತ್ರಿಯು, ಆಹಾ! ನೀವು ಬಹಳ ಧೈರ್ಯಶಾಲಿಗಳು, ನೀವು ಮನ್ಮಥನನ್ನು ಜಯಿಸಿರುವಿರಿ. ಹಾಗಿಲ್ಲದಿದ್ದರೆ ಇತರರು ಯಾರುತಾನೇ ಅಂಥಾ ಸುಂದರಿಯನ್ನು ಬಿಟ್ಟುಬಂದಾರು? ನೀವು ಆ ಸುಕುಮಾರಿಯನ್ನು ಬಿಟ್ಟು ಹೇಗೆ ಮನಸ್ಸನ್ನು ತೃಪ್ತಿಪಡಿಸಿಕೊಂಡು ಬಂದಿರೋ ನಾನು ಕಾಣೆನು. ಇದನ್ನು ನನಿಗೆ ತಿಳಿಸಬೇಕೆಂದು ಪ್ರಶ್ನೆ ಮಾಡಿದನು. ಆ ರಾಜಕುಮಾರನ್ನ ಆ ಕನ್ನಿಕೆಯು ಉಟ್ಟಿದ್ದ ಪೀತಾಂಬರವನ್ನೂ ಕುಸ್ಸುಮವನ್ನೂ ತೋರಿಸಿ, ಇನ್ನುಗಳಿಂದ ತೃಪ್ತಿಯನ್ನು ಹೊಂದಿ ಬಂದೆನೆಂದು ನುಡಿದನು, ಹಾಗಾದರೆ ನೀವು ಆ ಕನ್ಯಾರತ್ನದ ವಸ್ತ್ರಗಳನ್ನು ಜೊತೆಯಲ್ಲಿಯೇ ತಂದಿರಾ ಅಥವಾ ಅಲ್ಲಿಯೇ ಬಿಟ್ಟುಬಿಟ್ಟಿರಾ ಎಂದು ಮಂತ್ರಿಯು ಪ್ರಶ್ನೆ ಮಾಡಿದ ಕೂಡಲೇ, ಆ ರಾಜಪುತ್ರನು ಕೂದುವೆಯಿಂದ ಥಟ್ಟನೆ ಕೆಳಗಿಳಿದು, ಆ ವಸ್ತ್ರಗಳನ್ನು ಮಂತ್ರಿಗೆ ತೋರಿಸಿ ಅದಕ್ಕೆ ಮುತ್ತಿಟ್ಟುಕೊಂಡು ಪುನಃ ಹಾಗೆಯೆ ಕೆಟ್ಟಿದನು. ಆಗ ಮಂತ್ರಿಯಾದ ಸುನೀತಿಯು ಆ ರಾಜಪುತ್ರನಿಗೆ ನಮಸ್ಕಾರವನ್ನು ಮಾಡಿ, ರಾಜಶ್ರೇಷ್ಠನೆ! ನಾನು ಕಳಿಂಗದೇಶದ ಮಂತ್ರಿಯು, ಆ ರಾಜಪುತ್ರಿಯು ನಿಮ್ಮನ್ನಲ್ಲದೆ ಬೇರೆ ಯಾರನ್ನೂ ಮದುವೆಯಾಗುವದಿಲ್ಲವೆಂದು ಹಟಮಾಡಿರುವುದರಿಂದ ನಮ್ಮರಾಜನು ನಿಮ್ಮನ್ನು ಹುಡುಕಿಕೊಂಡು ಬರಬೇಕೆಂದು ನನ್ನನ್ನು ಕಳುಹಿಸಿ ಆರುತಿಂಗಳಾಯಿತು. ಅನೇಕಕಡೆಗಳಲ್ಲೆಲ್ಲಾ ಹುಡುಕಿದನು ನನ್ನ ಭಾಗ್ಯೋದಯದಿಂದ ಈವಿನ ತಮ್ಮದರ್ಶನವಾಯಿತು ನಿಮ್ಮ ಶೌರ್ಯ ಸಾಹಸ ಧೈರ್ಯ ಗಾಂಭೀರ್ಯಾದಿ ಸದ್ಗುಣಗಳಿಗೂ, ನಿಮ್ಮ ಬಿಲ್ವಾರಿಕೆಯ ಸಾಹಸಕ್ಕೂ ನನಿಗೆ ಅತಾಶ್ಚರ್ಯವುಂಟಾಗಿಧೆಯೆಂದು ನಾನಾಪ್ರಕಾರವಾಗಿ ವರ್ಣಿಸಿ, ಕಳಿಂಗರಾಜ್ಯಕ್ಕೆ ಹಿಂದಿರ್ಗಿ ನನ್ನೊಂದಿಗೆ ಬಂದು ಆ ಕನ್ಯಕಾಮಣಿಯನ್ನು ಮದುವೆ ಮಾಡಿಕೊಂಡು ಸುಖವಾಗಿರಿರೆಂದು ನುಡಿದನು. ರಾಜಕುಮಾರನಾದರೋ, ತಾನು ಪಟ್ಟ ಕಷ್ಟಗಳನ್ನೆಲ್ಲಾ ಮಂತ್ರಿಯಾದ ಸುನೀತಿಗೆ ತಿಳಿಸಿ, ಭರದ್ವಾಜಮುನಿಯ ಪರಮಾನುಗ್ರಹದಿಂದ ತಾನು ಧನ್ಯನಾದೆನು, ಮತ್ಸ್ಯದೇಶಕ್ಕೆ ಹೋಗಿ ಗುರುಕಟಾಕ್ಷದಿಂದ ಆ ಶೌರಿಕಾಯಂತ್ರವನ್ನು ಮುರಿದು, ಆ ದೇಶದ ರಾಜಪುತ್ರಿಯಾದ ಚಿತ್ರಲೇಖೆಯನ್ನು ಮದುವೆ ಮಾಡಿಕೊಂಡು, ಅನಂತರ ಕಳಿಂಗರಾಜ್ಯಕ್ಕೆ ನಿನ್ನ ಇಷ್ಟಪ್ರಕಾರ ಬರುವೆನು. ನನ್ನ ಬಿಲ್ವಾರಿಕೆಯ ನಿಪುಣತೆಯನ್ನು ನೀನೂ ನೋಡುವುದಕ್ಕೆ ಬಾ ಎಂದನು ಮಂತ್ರಿಯು ರಾಜಕುಮಾರನ ಇಷ್ಟದಂತೆ ಅವನ ಜತೆಯಲ್ಲಿಯೇ ಹೊರಟು ಕೆಲವು ದಿನಗಳ ಮೇಲೆ ಮತ್ಸ್ಯದೇಶವನ್ನು ಸೇರಿ ಆ ಶೌರಿಕಾಯಂತ್ರದ ಬಳಿಗೆ ಬಂದರು. ಅಷ್ಟುಹೊತ್ತಿಗೆ ಅನೇಕ ರಾಜರುಗಳು ತಮ್ಮತಮ್ಮ ಸೈನ್ಯಗಳೊಂದಿಗೆ ಇಲ್ಲಿಗೆ ಬಂದು, ಆ ಶೌರಿಕಾಯಂತ್ರವನ್ನು ನೋಡಿ ನಿರ್ಜಲನಗರವನ್ನು ನಾಡಿ

ತ್ತಿದ್ದರು. ಆಗ ಮತ್ಸ್ಯದೇಶದ ಮಂತ್ರಿಯಾದರೋ ಆ ರಾಜಸಭೆಗೆಬಂದು ಈ ಸಭೆಯಲ್ಲಿ ಈ ಶಾರಿಕಾಯಂತ್ರದ ಬುಡದಲ್ಲಿ ನಿಂತು ಕೆಳಗಿಟ್ಟಿರುವ ಕನ್ನಡಿಯಿಂದ ಮೇಲ್ಗಡೆ ಇರುವ ಯಂತ್ರವನ್ನು ಯಾವಕೂರನು ಭೇದಿಸಿ ಹೊಡೆಯುವನೋ ಅವನನ್ನೇ ನಮ್ಮ ರಾಜಪುತ್ರಿಯು ವರಿಸುವಳು. ಯಾ ರಾದರೂ ಬಂದು ಈ ಯಂತ್ರವನ್ನು ಭೇದಿಸಬಹುದೆಂದು ನುಡಿದನು. ಆಗ ಅಲ್ಲಿದ್ದ ರಾಜಪುತ್ರರು ಓಹೋ ! ಇದು ಬಹುದೊಡ್ಡಯಂತ್ರವು, ಇದನ್ನು ಮೇಲ್ಗಡೆ ನೋಡಿ ಹೊಡೆಯುವುದೇ ಕಷ್ಟವಾಗಿರುವಾಗ ಆ ಯಂತ್ರದ ಅಡಿಯಲ್ಲಿಟ್ಟಿರತಕ್ಕ ಕನ್ನಡಿಯಲ್ಲಿ ನೋಡಿಕೊಂಡು ಮೇಲ್ಗಡೆಗೆ ಗುರಿಯಿಟ್ಟು ಯಂತ್ರವನ್ನು ಭೇದಿಸುವುದು ಹೇಗೆ ಸಾಧ್ಯವು ? ಈ ಯಂತ್ರವು ಎಲ್ಲಾ ರಾಜರ ಗರ್ವವನ್ನೂ ಭಂಗಪಡಿಸತಕ್ಕದ್ದೇಸರಿ. ಈ ಮತ್ಸ್ಯದೇಶಾಧೀಕನು ಹಿಂದೆ ಎಲ್ಲಿಯೂ ಇಲ್ಲದ ಈ ದೊಡ್ಡಯಂತ್ರವನ್ನು ನಿರ್ಮಿಸಿ, ನಮ್ಮ ಗೌರವಭಂಗವನ್ನು ಮಾಡಬೇಕೆಂದು ಎಷ್ಟುದಿನದಿಂದ ಕಾದಿದ್ದನ್ನೋ ತಿಳಿಯದು, ನಾವೆಲ್ಲರೂ ಸೇರಿ ಇವನ ಗರ್ವಭಂಗ ಮಾಡಬೇಕೆಂದೇ ನಾನಾಪ್ರಕಾರವಾಗಿ ಮಾತನಾಡುತ್ತಿದ್ದರು. ಹೀಗಿರುವಲ್ಲಿ ಈ ರಾಜ ಪುತ್ರನು ಧೈರ್ಯದಿಂದ ದಾರಿಬಿಡಿಸಿಕೊಂಡು ಯಂತ್ರದ ಬಳಿಗೆ ಬಂದು, ಅಲ್ಲಿದ್ದ ದೊಡ್ಡಗೊಟಿಯನ್ನು ಬಾರಿಸಿದನು, ಕೂಡಲೇ ಇತರ ರಾಜರುಗಳು ಈ ರಾಜಪುತ್ರನಕಡೆಗೆ ತಿರಿಗಿನೋಡಿ, ಓಹೋ ! ಇವನು ! ಕೃಶಾಂಗನಾಗಿ ಛಿದ್ರವಸ್ತ್ರಗಳನ್ನು ಧರಿಸಿರುವ ಇವನು ಈ ಯಂತ್ರವನ್ನು ಭೇದಿಸುವನೆ ! ರಾಜಾಧಿರಾಜರೆಲ್ಲಾ ಸುಮ್ಮನಿರುವರಲ್ಲಾ ! ಅಸಾಧ್ಯವೇಸರಿ. ಹೀಗೆಂದು ಮಾತನಾಡಿಕೊಳ್ಳುತ್ತಿದ್ದರು. ಆಗ ಆ ಸತ್ಯಜಿತ್ತುಮಹಾರಾಯನಾದರೋ ಆ ಶಾರಿಕಾಯಂತ್ರದ ಬಳಿ ಹೋಗಿ ಆ ಬಿಲ್ಲಿನಧಾರವನ್ನು ಆಕರ್ಣಾಂತವಾಗಿ ಸೆಳೆದು, ಬಾಣವನ್ನು ತಗಲಿಸಿ, ಮನಸ್ಸಿನಲ್ಲಿ ಭೇದಾದ್ವಾಜಮುನಿಯನ್ನು ಸ್ಮರಿಸಿಕೊಂಡು, ಕನ್ನಡಿಯಲ್ಲಿ ಕೆಳಗಡೆ ನೋಡುತ್ತಾ, ಆ ಮುನೀಂದ್ರನು ಉಪದೇಶಿಸಿದ್ದ ಶಬ್ದಭೇದಿಯೆಂಬ ಮಹಾಮಂತ್ರವನ್ನು ಪುನಶ್ಚರಣೆ ಮಾಡಿ ಹೊಡೆಸಕೂಡಲೇ ಆ ಬಾಣವು ಮೇಲ್ಗಡೆಯಿದ್ದಯಂತ್ರಕ್ಕೆ ತಗಲಿ ಕಳಕ್ಕೆ ಉರುಳಿಹೋಯಿತು. ರಾಜರುಗಳ ಗುಂಡಿಗೆಯು ಒಡೆದ್ದು ಹೋಯಿತು. ಎಲ್ಲರೂ ಗುಳ್ಳೆಂದು ಶಬ್ದಮಾಡಿ ಕೈಚಪ್ಪಾಳೆ ಹೊಡೆದರು. ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದವು ಪುಷ್ಪವೃಷ್ಟಿಯಾಯಿತು,

ಅನಂತರ ಕಳಿಂಗರಾಜನ ಮಂತ್ರಿಯೊದ ಸುನೀತಿಯು ಈ ಸತ್ಯಜಿತ್ತುವಿನ ಸಮಾಚಾರವನ್ನೆಲ್ಲಾ ಮತ್ಸ್ಯದೇಶಾಧೀಶನಿಗೆ ತಿಳಿಯುಪಡಿಸಿದನು. ರಾಜನಿಗೆ ಅತ್ಯಾನಂದವಾಯಿತು. ಮಂಗಳವಾದ್ಯಗಳು ಮೊಳಗುತ್ತಿದ್ದವು. ಆಗ ಆ ಚಂದ್ರಲೇಖೆಯು ಸಖೀಜನಗಳೊಂದಿಗೂ, ಬಾಹ್ಮಣಕನ್ನಿ

ಕೆಯುರೊಂದಿಗೆ ಬಂದು ಆ ಸತ್ಯಜಿತ್ತುವಿನ ಕೊರಳಿಗೆ ಪೂಮಾಲೆಯನ್ನು ಹಾಕಿದಳು, ನೆರೆದಿದ್ದ ರಾಜರುಗಳೆಲ್ಲಾ ಮೂಗಿನಮೇಲೆ ಬೆರಳನ್ನಿಟ್ಟು ಕೊಂಡು, ತಲೆಯನ್ನು ಬಾಗಿಸಿ, ತಮ್ಮು ತಮ್ಮು ದೇಶಕ್ಕೆ ಹೊರಟುಹೋದರು. ಮತ್ಸ್ಯಭೂಪತಿಯು ತನ್ನ ಪಟ್ಟಪ್ರಧಾನೆಯೆನೆಮೇಲೆ ಅಳಿಯನನ್ನು ಕೂಡಿಸಿ, ಊರಲ್ಲೆಲ್ಲಾ ಮೆರವಣಿಗೆ ಮಾಡಿಸಿ, ಶುಭಮುಹೂರ್ತದಲ್ಲಿ ಚಿತ್ರ ಲೇಖೆಯನ್ನು ಸತ್ಯಜಿತ್ತುವಿಗೆ ಮದುವೆ ಮಾಡಿಕೊಟ್ಟನು, ಐದನೆಯದಿನ ರಾತ್ರಿ ಆ ಸತ್ಯಜಿತ್ತುವು ತನ್ನಲ್ಲಿದ್ದ ಕಳಿಂಗದೇಶದ ರಾಜಪುತ್ರಿಯವಸ್ತ್ರಗಳನ್ನು ಆ ಚಿತ್ರಲೇಖೆಗೆ ತೋರಿಸಿ, ಆ ರಾಜಪುತ್ರಿಯು ವರ್ತಮಾನವನ್ನೂ, ತನ್ನ ಚರಿತ್ರೆಯನ್ನೂ ಹೇಳಿ, ನೀನು ಎರಡನೆಯ ಹೆಂಡತಿಯೆಂದು ತಿಳಿಸಿ, ಆ ಚಂದ್ರಲೇಖೆಯೊಂದಿಗೆ ಕೆಲವುದಿನ ಸುಖವಾಗಿ ಕಾಲಕಳೆದುಕೊಂಡಿದ್ದು, ಅನಂತರ ತನ್ನ ಮಾವನು ಕೊಟ್ಟ ಬಳುವಳಿಯೆನ್ನು ಚತುರಂಗಬಲವನ್ನೂ ತೆಗೆದುಕೊಂಡು, ಕಳಿಂಗದೇಶದ ಮಂತ್ರಿಯೊದ ಸುನೀತಿಯೊಂದಿಗೆ ಕಳಿಂಗರಾಜ್ಯಕ್ಕೆ ಹೋಗುತ್ತಿದ್ದನು. ಸುನೀತಿಯಾದರೋ ಇದಕ್ಕೆ ಮೊದಲೇ ತಾನು ಕಳಿಂಗರಾಜ್ಯದಿಂದ ಹೊರಟಮೇಲೆ ಅಲ್ಲಲ್ಲಿ ಕಿರುಗಿದ ಸಮಾಚಾರ ವನ್ನೂ, ಆ ರಾಜಪುತ್ರಿಯು ವಸ್ತ್ರಗಳನ್ನು ಪರಿಸಿದ ಶೂರನು ಸಿಕ್ಕಿರುವ ನೆಂದೂ, ಅವನೇ ಮತ್ಸ್ಯದೇಶದ ಸ್ವಯಂವರದಲ್ಲಿ ಶಬ್ದವೇಧಿಯೆಂತ್ರವನ್ನು ಭೇದಿಸಿ ಆ ರಾಜಕುವರಿಯಾದ ಚಿತ್ರಲೇಖೆಯನ್ನೂ ವರಿಸಿರುವನೆಂದೂ, ಕೂಡಲೇ ಆ ರಾಜಪುತ್ರನನ್ನು ಕರತರುವೆನೆಂದೂ ಪತ್ರನನ್ನು ಬರದು ಕಳುಹಿಸಿದ್ದನು. ಕಳಿಂಗರಾಜನು ಈ ಪತ್ರವನ್ನು ನೋಡಿಕೊಂಡು ಅತ್ಯಂತ ಪರಮಸಂತೋಷದಿಂದ ತನ್ನ ಮಂತ್ರಿಯ ಚಮತ್ಕಾರವನ್ನೂ, ಅಳಿಯನ ಸಾಹಸ ಪರಾಕ್ರಮಗಳನ್ನೂ ಮೆಚ್ಚಿ, ತನ್ನ ಪುತ್ರಿಗೆ ಈ ವರ್ತಮಾನವನ್ನೆಲ್ಲಾ ತಿಳಿಸಿ, ಕೂಡಲೇ ಪಟ್ಟಣವನ್ನೆಲ್ಲಾ ಅಲಂಕರಿಸಿ, ಮಂತ್ರಿಯನ್ನೂ ಅಳಿಯನನ್ನೂ ಎದುರುಗೊಳ್ಳಲು ಮಂಗಳವಾದ್ಯಗಳೊಂದಿಗೆ ಬರುತ್ತಿದ್ದನು. ಅಷ್ಟರೊತ್ತಿಗೆ ಆ ಸತ್ಯಜಿತ್ತು ಮಹಾರಾಯನೂ ಮಂತ್ರಿಯೂ ಸೇನಾಸಮೇತರಾಗಿ ಬಂದರು. ರಾಜನು ಅವರನ್ನು ಎದುರುಗೊಂಡು, ಅತ್ಯಾನಂದದಿಂದ ಆ ಸತ್ಯಜಿತ್ತು ಮಹಾರಾಯನನ್ನು ತಬ್ಬಿಕೊಂಡು, ಸಂತೋಷದಿಂದ ಪುರಪ್ರವೇಶವಮಾಡಿ, ವಿತಾರದಲ್ಲಿಳಿದನು. ಆಮೇಲಿಕ ಶುಭಮುಹೂರ್ತದಲ್ಲಿ ತನ್ನ ಪುತ್ರಿಯನ್ನು ಕೊಟ್ಟು ಸಂಭ್ರಮದಿಂದ ಮದುವೆ ಮಾಡಿದನು. ಐದನೆಯ ದಿನರಾತ್ರಿ ಶಯ್ಯಾಗೃಹದಲ್ಲಿರುವಾಗ ಆಕನ್ನಿಕೆಯು ಮಹಾರಾಯನೆ! ನನ್ನನ್ನು ನಿನ್ನ ಪಟ್ಟದರಸಿಯೆಂತಾಗಿ ಮಾಡಿಕೊಳ್ಳಲು ಅನುಮಾನವುಂಟೆ ಎಂದು ಕೇಳಲು, ಆ ಸತ್ಯಜಿತ್ತುವಾದರೋ, ರಾಜಪುತ್ರಿಯೆ! ನಿನ್ನ ನಿಮಿತ್ತವಾಗಿ ನಾನು ಹಂದಿ ಹುಲಿ ಕರಡಿ ನಿನಾದ [illegible]

ಲ್ಲಿ ಹುಚ್ಚನಂತೆ ತಿರುತಿರುಗಿ, ಕಡೆಗೆ ಭಗದ್ವಾಜಮುನಿಯು ಆಶ್ರಮವನ್ನು ಸೇರಿ ಆ ಮಹಾಮುನಿಯ ದರ್ಶನದಿಂದ ಸಾಂಖ್ಯಸೂತ್ರವನ್ನು ಚನ್ನಾಗಿ ಕಲಿತು, ಶಬ್ದಭೇದಿಯೆಂದು ಹೆಸರ್ಗೊಂಡಿರುವ ಮಹಾಮಂತ್ರವನ್ನು ಪದೇ ಶಮಾಡಿಸಿಕೊಂಡು ಆ ಉಪದೇಶಬಲವಿಂದ ಮತ್ಸ್ಯದೇಶದ ರಾಜಪುತ್ರಿಯಾದ ಈ ಚಿತ್ರಲೇಖೆಯನ್ನು ವರಿಸಿಬಂದಿರುವೆನೆಂದೂ, ಇದನ್ನು ಮೊದಲೇ ಮಂತ್ರಿಗೆ ತಿಳಿಸಿರುವೆನೆಂದೂ ನುಡಿದನು. ಅನಂತರ ಆ ರಾಜಪುತ್ರಿಯು ಅತ್ಯಂತ ಸಂತೋಷದಿಂದ ಆ ಸತ್ಯಜಿತ್ತುವಿನೊಂದಿಗೆ ಸುಖದಿಂದಿದ್ದಳು. ಸತ್ಯಜಿತ್ತುವಾದರೋ ಈ ಇಬ್ಬರು ಸತಿಯರೊಂದಿಗೆ ಸುಖವಾಗಿ ಆರುತಿಂಗಳವರೆಗೂ ಕಾಲಕಳೆಯುತ್ತಾ ಕಳಿಂಗರಾಜ್ಯದಲ್ಲಿಯೇ ಇದ್ದು ಅನಂತರ ತನ್ನದೇಶವಾದ ಕರ್ನಾಟಕರಾಜ್ಯಕ್ಕೆ ಪ್ರಯಾಣ ಸಿದ್ಧನಾದನು. ರಾಜನು ಅಳಿಯನಿಗೆ ಬೇಕಾದಷ್ಟು ಚತುರಂಗಬಲವನ್ನೂ, ವಸ್ತ್ರಾಭರಣಗಳನ್ನೂ ಬಳುವಳಿಯಾಗಿ ಕೊಟ್ಟನು. ತರುವಾಯ ಆ ಸತ್ಯಜಿತ್ತುವು ಇಬ್ಬರು ಸತಿಯರನ್ನೂ, ಬಳುವಳಿಯಾಗಿ ಬಂದ ಸರ್ವಸ್ವವನ್ನೂ ತೆಗೆದುಕೊಂಡು, ತನಿಗೆ ಸಹಾಯಕನಾಗಿದ್ದ ಕಳಿಂಗದೇಶದ ಮಂತ್ರಿಯಾದ ಸುನೀತಿಯ ಮಗನಾದ ಧರ್ಮನೀತಿ ಎಂಬುವನನ್ನು ತನ್ನ ಮುಖ್ಯಮಂತ್ರಿಯಾಗಿ ಮಾಡಿಕೊಂಡು, ಕರ್ನಾಟಕರಾಜ್ಯಕ್ಕೆ ಹೊರಟು ತಂದೆಗೆ ತಾನು ಬರುತ್ತಿರುವ ವರ್ತಮಾನವನ್ನು ಹೇಳಿಕಳುಹಿಸಿದನು. ಆಗ ಆ ಜನನೀಜನಕರ ಸಂತೋಷಕ್ಕೆ ಪಾರವೇ ಇಲ್ಲವು. ಇವನತಂದೆಯಾದ ಜಯಂತಮಹಾರಾಯನಾದರೋ, ಪಟ್ಟಣವನ್ನೆಲ್ಲಾ ಇಂದ್ರಲೋಕದಂತೆ ಅಲಂಕರಿಸಿ, ಮಂಗಳವಾದ್ಯದೊಂದಿಗೆ ಪುತ್ರನನ್ನು ಎದುರ್ಗೊಳ್ಳಲು ಸೇನಾಸಮೇತನಾಗಿ ಬರುತ್ತಿದ್ದನು. ಸತ್ಯಜಿತ್ತುವು ಕೂಡಲೇ ಹೋಗಿ ತನ್ನ ತಾಯಿತಂದೆಗಳಿಗೆ ನಮಸ್ಕಾರ ಮಾಡಿದನು. ಅನಂತರ ಇವನ ಪತ್ನಿಯರಾದ ಚಂದ್ರಮುಖಿ, ಚಂದ್ರಲೇಖೆ ಇವರಿಬ್ಬರೂ ನಮಸ್ಕಾರಮಾಡಿದರು. ಜನನೀಜನಕರು ತನ್ನ ಪುತ್ರನಿಗೂ ಸೊಸೆಯರಿಗೂ ಆಶೀರ್ವಾದ ಮಾಡಿದ ಬಳಿಕ, ಕುವರನೆ! ನೀನು ಭೂಸಂಚಾರ ಮಾಡಿದ ಸಮಾಚಾರವನ್ನೆಲ್ಲಾ ವಿಶದವಾಗಿ ಹೇಳೆಂದು ಕೇಳಿ, ಪುತ್ರನಿಂದ ಸಕಲವನ್ನೂ ತಿಳಿದುಕೊಂಡು, ಅತ್ಯಾನಂದಭರಿತನಾಗಿ, ಅವರನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಿ, ಶುಭಮುಹೂರ್ತದಲ್ಲಿ ಅವರಿಗೆ ವಿವಾಹಕಾರ್ಯಗಳನ್ನು ನಡೆಯಿಸಿ, ಅನಂತರ ಅವರಿಗೇ ರಾಜ್ಯಾಭಿಷೇಕವನ್ನು ಮಾಡಿ, ಸುಖಸಾಮ್ರಾಜ್ಯವನ್ನನುಭವಿಸುತ್ತಲಿದ್ದನು. ಆ ಸತ್ಯಜಿತ್ತುವಾದರೋ, ಪಟ್ಟಾಭಿಷಿಕ್ತನಾದಬಳಿಕ ಧರ್ಮದಿಂದ ತನ್ನ ರಾಜ್ಯವನ್ನು ಪರಿಪಾಲಿಸುತ್ತಾ, ತನ್ನ ಭುಜಬಲದಿಂದ ಸಕಲರಾಜ್ಯಗಳನ್ನೂ ಜಯಿಸಿ, ತ್ರಿಲೋಕವಿಖ್ಯಾತಕೀರ್ತಿಯುಳ್ಳವನಾಗಿ, ಧರ್ಮ

ವನ್ನು ನಾಲ್ಕುವಾದಗಳಿಂದ ನಡೆಯಿಸುತ್ತಾ, ಬಹುದಿನಗಳು ರಾಜ್ಯಭಾರ ಮಾಡುತ್ತಾ, ಜನನೀಜನಕರನ್ನೂ, ಯೋಗಿಗಳನ್ನೂ ಪೂಜಿಸುತ್ತಾ ರಾಜ್ಯಪರಿಪಾಲನೆಯುಂ ಮಾಡಿ, ಆ ಬಳಿಕ ವಿಷ್ಣುಲೋಕದಲ್ಲಿ ಸಾಮಾನ್ಯ ಸುಖವನ್ನು ಪಡೆದನೆಂದು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಆಗ ಅರ್ಜುನನು ಅತ್ಯಾಶ್ಚರ್ಯಹೊಂದಿ, ಮಹಾನುಭಾವನೇ! ನಿನ್ನ ದಯೆಯಿಂದ ನನ್ನ ಜನ್ಮವು ಸಫಲವಾಯಿತು, ನಾನು ಕೃತಾರ್ಥನಾದೆನು. ನಿದ್ರೆಯು ಕಣ್ಣನ್ನು ಮುಚ್ಚುತ್ತಿರುವುದು. ನಿದ್ರೆಮಾಡೋಣ ಎನ್ನಲು ಶ್ರೀಕೃಷ್ಣನೂ ಒಡಂಬಟ್ಟು, ಆ ಮರಳದಿಣ್ಣೆಯಮೇಲೆಯೇ ಮಲಗಿ ಸುಖನಿದ್ರೆಯುಂ ಮಾಡಿದರೆಂಬಲ್ಲಿಗೆ,

ಮೊದನೆಯ ಕಥೆಯು ಸಂಪೂರ್ಣಮಾದುದು.

ಎರಡನೆಯ ಕಥೆ.

ಎರಡನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾನದೀದಡದಲ್ಲಿರುವ ಮರಳದಿಬ್ಬದ ಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತಾ ದಿವ್ಯವಾದ ಅಗರು ಗಂಧವನ್ನು ಮೈಗೆ ಬಳಿದುಕೊಂಡು, ಸುವಾಸನೆಯೊಡನೆ ಪುಷ್ಪಗಳನ್ನು ಅಪೇಕ್ಷಿಸುತ್ತಾ ನಂತೋಷದಿಂದಿರುವಾಗ ಅರ್ಜುನನು ಶ್ರೀಕೃಷ್ಣನನ್ನು ನೋಡಿ, ಎಲೈ ಕೃಷ್ಣಸ್ವಾಮಿಯೆ! ಅಪವರ್ಗಮಾರ್ಗವಾದ ವೇದಾಂತಸಾರದಲ್ಲಿ ಎರಡನೆಯ ವಿಧವಾದ ಛಾಯಾ ಪುರುಷಲಕ್ಷಣವನ್ನು ತಿಳಿದುಕೊಳ್ಳಲೇಕೆಂದು ನನಿಗೆ ಇಷ್ಟವಾಗಿರುವುದು. ನನಿಗೆ ವಿಚಿತ್ರವಾದ ಒಂದು ಕಥೆಯು ಮೂಲಕವಾಗಿ ಈ ಛಾಯಾ ಪುರುಷಲಕ್ಷಣವನ್ನು ಬೋಧಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದನು. ಆಗ ಶ್ರೀಕೃಷ್ಣಸ್ವಾಮಿಯು ಕಿರುನಗೆಯಿಂದ ಅರ್ಜುನನನ್ನು ನೋಡಿ, ಎಲೈ ಪಾರ್ಥನೆ, ಶ್ರದ್ಧೆಯಿಂದ ಈಗ ನಾನು ಹೇಳಲುದ್ಯುಕ್ತನಾಗಿರುವ ಶಶಿಬಿಂದುಮಹಾರಾಯನ ಕಥೆಯನ್ನು ಕೇಳೆಂದು ಪ್ರಾರಂಭಿಸಿದನು.

ಶ್ಲೋ॥ ಸರಸಿಜನಯನೆ ಸಶಬ್ದಾಚಕ್ರೇ। ಮುರಭಿದಿಮಾಪಿರಮಸ್ವಚಿತ್ತರನ್ತಂ॥
ಸುಖತರಮವರಂನಜಾತಜಾನೆ। ಹರಿಚರಣಸ್ಮರಣಾತ್ಮನೇನತುಲ್ಯಂ॥

ಶಶಿಬಿಂದು ಮಹಾರಾಯನ ಕಥೆ.

ಕೇಳೈ ಅರ್ಜುನಾ! ಪೂರ್ವಕಾಲದಲ್ಲಿ ವಾರಣಾವತಿ ಎಂಬ ಪುರಿಯನ್ನು ಸೂರ್ಯಬಿಂದುವೆಂಬ ಮಹಾರಾಯನು ಧರ್ಮದಿಂದ ಪಾಲಿಸುತ್ತಲಿದನು. ಆ ರಾಜನಿಗೆ ಶಶಿಬಿಂದುವೆಂಬ ಒಬ್ಬ ಕುವರನಿದ್ದನು. ಆ ದೇಶದ

ಮಂತ್ರಿಗೆ ನೀತಿಮಂತ್ರನೆಂಬ ಪುತ್ರನಿದ್ದನು. ಶಶಿಬಿಂದುವೂ ಮಂತ್ರಿಕುಮಾರನಾದ ನೀತಿಮಂತನೂ ಸಹ ಒಬ್ಬಾಗಿ ಸಕಲ ವಿದ್ಯೆಗಳಲ್ಲಿ ಪರಿಣತರಾಗಿ ಧನುರ್ವಿದ್ಯೆಯನ್ನು ಸಾಂಗವಾಗಿ ಕಲಿತರು. ಹೀಗಿರುವಲ್ಲಿ ರಾಜಪುತ್ರನೂ ಮಂತ್ರಿಸುತನೂ ಸಂಪ್ರಾಪ್ತವಯಸ್ಕರಾದರು, ರಾಜಪುತ್ರನು ಭೂಸಂಚಾರಮಾಡಿಕೊಂಡು ಬರಬೇಕೆಂದು ಇಚ್ಛೆಯುಳ್ಳವನಾಗಿ, ಮಂತ್ರಿಪುತ್ರನನ್ನೂ ಜತೆಯಲ್ಲಿ ಕರೆದುಕೊಂಡು ಬೇಕಾದಷ್ಟು ಧನವಸ್ತ್ರಗಳೊಂದಿಗೆ ಅರ್ಧರಾತ್ರಿಯಲ್ಲಿ ಯಾರೂ ಕಾಣದಂತೆ ಅತ್ಯಾಪ್ತರಾಗಿ ಉತ್ತರದಿಕ್ಕಿಗೆ ಪ್ರಯಾಣಮಾಡಿದರು. ಬೆಳಗಾದಮೇಲೆ ರಾಜನೂ ಮಂತ್ರಿಯೂ ತಮ್ಮ ತಮ್ಮ ಮಕ್ಕಳನ್ನು ಕಾಣದೆ ನಾಲ್ಕು ದಿಕ್ಕುಗಳಿಗೂ ದೂತರನ್ನು ಕಳುಹಿಸಿ ಹುಡುಕುತ್ತಲಿದ್ದರು. ಆ ಶಶಿಬಿಂದುವೂ ನೀತಿಮಂತನೂ ಸಹ ಬಹುದೂರ ಪ್ರಯಾಣಮಾಡಿ, ದಟ್ಟವಾದ ಅರಣ್ಯವನ್ನು ಪ್ರವೇಶಿಸಿ, ಅಲ್ಲಲ್ಲಿ ಎದುರುಬೀಳುವ ವ್ಯಾಘ್ರ, ಭಲ್ಲೂಕಾದಿ ದುಷ್ಟಮೃಗಗಳನ್ನು ಹೊಡೆದು ಕೆಡವುತ್ತಾ, ವನಫಲಗಳನ್ನು ಭಕ್ಷಿಸಿ ನೀರು ಕುಡಿಯುತ್ತಾ, ಮುಂದುಮುಂದಕ್ಕೆ ಪ್ರಯಾಣಮಾಡುತ್ತಿರುವಲ್ಲಿ ಆ ಶಶಿಬಿಂದುವು ಸೂರ್ಯಕಿರಣಗಳ ತಾಪವನ್ನು ತಪ್ಪಿಸುವಾರದೆ ಒಂದು ಹೊಂಗೆ ಮರದಡಿಯಲ್ಲಿ ವಿಶ್ರಮಿಸಿಕೊಳ್ಳುತ್ತಾ, ಮಂತ್ರಿಸುತನನ್ನು ಕುರಿತು, ಮಿತ್ರನೆ, ನನಿಗೆ ದಾಹವು ಬಲವಾಗಿದೆ. ಎಲ್ಲಿಯಾದರೂ ಸ್ವಲ್ಪನೀರನ್ನು ತಂದು ಕೊಡೆಂದು ಕೇಳಿದನು. ಆಗ ಮಂತ್ರಿಕುಮಾರನು ಕೂಡಲೇ ಹೊರಟು ಹೋಗುತ್ತಿರುವಲ್ಲಿ ಒಂದಾನೊಂದುಬಿಲವ್ರು ಕಾಣಿಸಿತು. ಅವನು ಆ ಬಿಲಕ್ಕೆ ಧೈರ್ಯದಿಂದನುಗ್ಗಿ ಹೋಗುತ್ತಿರುವಲ್ಲಿ ಬಹಳ ದೊತ್ತದಾಗಿ ಬೆಳಕುಕಾಣಿಸಿತು. ಮಂತ್ರಿಕುಮಾರನಿಗೆ ಧೈರ್ಯಕುಂದಿತು. ಓಹೋ, ಇಲ್ಲಿ ಯಾರೋಮಹರ್ಷಿಗಳು ಅಗ್ನಿಕುಂಡದಲ್ಲಿ ಅಗ್ನಿಯನ್ನು ಪ್ರಜ್ವಲಿಸಿರುವುದರಿಂದ ಅಲಗ್ನಿಭಾಯೆಯಂತೆ ತೋರುವುದು, ಹೀಗೆಂದು ನಿಧಾನವಾಗಿ ಸಂಕಯುಪಡುತ್ತಾ ಹೆಜ್ಜೆಯಿಟ್ಟುಕೊಂಡು ಹೋಗುತ್ತಿರುವುದನ್ನು ಒಬ್ಬಯುವತಿಯು ಕಂಡು, ಎಲ್ಲಿ ನರನೆ, ಯೂರೂಪ್ರವೇಶಿಸಲಸಾಧ್ಯವಾದ ಈ ಬಿಲವನ್ನು ನಿರ್ಭಯವಾಗಿ ನೀನು ಹೇಗೆ ಪ್ರವೇಶಿಸಿದೆಯೆಂದು ನುಡಿಯುತ್ತಾ ನೀರನ್ನು ಅಭಿಮಂತ್ರಿಸಿ ಆ ಮಂತ್ರಿಕುಮಾರನಮೇಲೆ ಎರಚಲು ಅವನು ಒಂದು ಕೋತಿಯಾದನು. ಅಲ್ಲಿದ್ದ ತನ್ನಸಖಿಯಾದ ಸಂಪೂರ್ಣಚಂದ್ರಿಕೆಗೆ ಈ ಕಥೆಯನ್ನು ತೋರಿಸಿ ಮೊದಲುಕಟ್ಟಿದ್ದ ಕುನಕವಾನಗಳೊಂದಿಗೆ ಈ ಕಪಿಯನ್ನೂ ಕಟ್ಟಿದಳು. ಇಷ್ಟರಲ್ಲಿ ಅಲ್ಲಿದ್ದ ರಾಜಪುತ್ರನಾದರೋ ಬಾಯಾರಿಕೆಯನ್ನು ತಡೆಯಲಾರದೆ ಮಂತ್ರಿಸುತನು ಹಿಂದಿರುಗಿ ನೀರನ್ನು ತರುವುದರೊಳಗೆ ನಾನು ಸ್ವಲ್ಪದಾಹವನ್ನು ಅಡಗಿಸಿಕೊಳ್ಳುವೆನೆಂದೆಣಿಸಿ, ಹತ್ತರದಲ್ಲಿದ್ದ ನೆಲ್ಲಿಯಮರಕ್ಕೆ ಹತ್ತಿ ಅದರಹಣ್ಣುಗಳ

ಳನ್ನು ಭಕ್ಷಿಸುತ್ತಲಿದ್ದನು ಯಥೇಷ್ಟವಾಗಿ ತಿಂದಬಳಿಕ ಒಂದು ನೇರ ಳಿಮರಕ್ಕೆ ದಾಪಿ ಆ ಹಣ್ಣುಗಳನ್ನು ತಿಂದು, ಬೇಕಾದಷ್ಟು ಮೂಟೆಕಟ್ಟಿ ಕೊಂಡು, ಎಷ್ಟು ಕೊತ್ತಾದರೂ ತನ್ನ ಜೊತೆಗಾರನಾದ ಮಂತ್ರಿಸುತನು ನೀರನ್ನು ತೆಗೆದುಕೊಂಡು ಬಾರದಿರಲು, ಮನಸ್ಸಿನಲ್ಲಿ ಕಳವಳಗೊಂಡು, ಮಂತ್ರಿಪುತ್ರನ ಹೆಸರನ್ನು ಹಿಡಿದು ಗಟ್ಟಿಯಾಗಿ ಕೂಗಿದನು. ಪ್ರತ್ಯುತ್ತರವೇ ಇಲ್ಲದಿರಲು ರಾಜಪುತ್ರನಿಗೆ ವ್ಯಸನವುಂಟಾಗಿ ಗಟ್ಟಿಯಾಗಿ ಗೋಳಿಡುತ್ತಾ, ಮರದಮಿಂದ ಕೆಳಗಿಳಿದು ತನ್ನ ಕುದುರೆಯನ್ನೇರಿ ಮಂತ್ರಿಸುತನ ಕುದುರೆಯನ್ನೂ ಹಿಡಿದುಕೊಂಡು ಹತ್ತುದಿನಗಳವರೆಗೂ ಆ ಅರಣ್ಯವೆಲ್ಲಾ ತಿರುಗಿದರೂ ಮಂತ್ರಿಸುತನ ವರ್ತಮಾನವೇ ಇಲ್ಲದೆ, ವ್ಯಸನಾಕ್ರಾಂತನಾಗಿ ಮುಂದೆ ಹೋಗುತ್ತಿರುವಲ್ಲಿ ಒಂದು ಪ್ರಮಾದವು ಕಾಣಿಸಿತು. ಈ ಶಶಬಿಂದು ಮಹಾರಾಯನಾದರೋ ಆ ಪ್ರಮಾದದ ಪಕ್ಕದಲ್ಲಿಯೇಕುದುರೆಯಮೇಲೆ ಹೋಗುತ್ತಾ ಪ್ರಮಾದದ ಸೊಬಗನ್ನು ನೋಡುತ್ತಿರುವಲ್ಲಿ ಪ್ರಕಾಶವಾನವಾಗಿಯೂ ಬಗೆಬಗೆ ಉದ್ದವಾಗಿಯೂ ಇಪ್ಪ ಒಂದು ಕೂದಲು ಹೊತೆದುಕೊಂಡು ಬರುತ್ತಿದ್ದದನ್ನು ಕಂಡು ತಟ್ಟನೆ ಕೆಳಗಿಳಿದು ಆ ಕೂದಲನ್ನು ಕೈಗೆ ಸಿಕ್ಕಿದುಕೊಂಡನು. ಅನಂತರ ಶಶಬಿಂದುವು ಆ ಕೂದಲನ್ನು ನೋಡಿ ಆಹಾ! ಇಷ್ಟು ಉದ್ದದ ಕೂದಲು ಯಾವಪುರುಷನಿಗೂ ಇರುವುದಿಲ್ಲ. ತಲೆ ಕೂದಲಿನಮೇಲೆ ಸ್ತ್ರೀಯರಿಗೆ ಆಸೆಹೆಚ್ಚು. ಈ ಕೂದಲನ್ನು ನೋಡಿದರೆ ಹನ್ನೆರಡು ಮಳ ಉದ್ದವಿದೆ. ಇಂತಹ ಕೂದಲನ್ನು ಧರಿಸಿರುವ ಸ್ತ್ರೀಯು ಇನ್ನೆಷ್ಟು ಸುಂದರಿಯೋ ನಾನುಕಾಣೆನು. ಅಹಾ! ನಾನು ಆ ತರುಣಿಯನ್ನು ನೋಡುವ ಬಗೆ ಹೇಗೆಂದು ಚಿಂತಿಸುತ್ತಾ ಮುಂದಕ್ಕೆ ಹೋಗುತ್ತಿರುವಲ್ಲಿ ಭಾಸ್ಕರಮಹರ್ಷಿಯ ಆಶ್ರಮವು ಸಿಕ್ಕಿತು, ಶಶಬಿಂದುವು ಆ ಮುನಿನಾಥನ ಆಶ್ರಮಕ್ಕೆ ಹೋಗಿ ಬರುಕಾಲ ಆ ಮುನಿಯು ಕುಶೂಷೆಯನ್ನು ಮಾಡುತ್ತಿದ್ದನು. ಈ ರಾಜಪುತ್ರನ ಕುಶೂಷೆಯಿಂದ ಮುನಿಯು ಸಂತಸಗೊಂಡು, ಒಂದಾನೊಂದು ದಿನ ರಾಜಪುತ್ರನನ್ನು ಕುರಿತು, ಎಲೈ ರಾಜಪುತ್ರನೆ, ನೀನು ಯಾರು? ನಿಮ್ಮತಾಯಿತಂದೆಗಳನ್ನು ಬಿಟ್ಟು ಈ ಘೋರಾರಣ್ಯದಲ್ಲಿ ಬಂದು ಇರಲು ಕಾರಣವೇನು? ಇದನ್ನೆಲ್ಲಾ ವಿಸ್ತಾರವಾಗಿ ಕೇಳಿನ್ನಲು ಆ ಶಶಬಿಂದುವು ಋಷಿಯವರಾದಗಳಿಗೆ ಅತ್ತಿಬಿನ್ನ, ತನ್ನ ಹೆಸರನ್ನೂ, ತನ್ನ ದೇಶವನ್ನೂ, ತಾಯಿತಂದೆಗಳ ಹೆಸರನ್ನೂ ತಿಳಿಸಿ ವರವಾಗಿ, ಭೂಸಂಚಾರಾರ್ಥವಾಗಿ ಮಂತ್ರಿಪುತ್ರನೊಂದಿಗೆ ಬಂದೆನೆಂದೂ, ಮಂತ್ರಿಪುತ್ರನ ವಿಯೋಗದಿಂದಲೂ, ತಾನು ತಂದಿದ್ದ ಕೂದಲನ್ನು ಧರಿಸಿದ ತರುಣಿಯಾರೆಂಬುದನ್ನೂ ತಿಳಿದು ಅಕೆಯನ್ನು ಮದುವೆ ಮಾಡಿಕೊಳ್ಳಬೇಕೆಂಬ ಮನೋದುಃಖವನ್ನೂ, ಋಷಿಶ್ರೇಷ್ಠನಿಗೆ ತಿಳಿಸಿ

ದನು ಕೂಡಲೇ ಆ ಮುನಿಯು ಏಕ್ಕನೆ ನಕ್ಕು ರಾಜಕುಮಾರಾ ; ನೀನು ಮಂತ್ರಿಪುತ್ರನ ನಿಯೋಗವನ್ನೇ ತಿಳಿಯಲಾರದೆ ಈರೀತಿ ದುಃಖಪಡುವೆನು ಈ ಕೂದಲನ್ನು ಧರಿಸಿದ ತರುಣಿಯ ವಿಷಯವನ್ನು ತಿಳಿದರೆ ಇನ್ನೆಷ್ಟುದುಃಖಿಸುವೆನೆಯೋ ನಾನುಕಾಣೆನು. ಅದು ನಿನಗೆ ಕಷ್ಟಸಾಧ್ಯವೆಂದೆನು. ರಾಜಪುತ್ರನಾದರೋ ಕೂಡಲೆ ಮುನಿಯ ಪಾದಗಳಿಗೆ ಅಡ್ಡಬಿದ್ದು ನಾನು ಕ್ಷತ್ರಿಯನು, ಧನುರ್ವಿದ್ಯೆಯನ್ನು ಕಲಿತು ವೀರನೆನ್ನಿಸಿಕೊಂಡಿರುವೆನು. ಆ ತರುಣಿಯುಸುದ್ದಿಯನ್ನು ಕೇಳಬೇಕೆಂಬ ಆಕೆಯು ನನ್ನನ್ನು ಬಾಧಿಸುತ್ತಲಿರುವುದು, ದಯೆಮಾಡಿ ನನಿಗೆ ತಿಳಿಸಿ ನನ್ನ ಮನೋದುಃಖವನ್ನು ನೀಗಿ ಕೃತಾರ್ಥನನ್ನಾಗಿ ಮಾಡಬೇಕೆನ್ನಲು, ಆ ಮುನಿಯು ಕನಿಕರವಿಂದ ರಾಜಾತ್ಮಜಾ ಕೇಳು :— ಉಲೂಪಿ ಎಂಬೊಬ್ಬ ದೇವತಾಸ್ತ್ರೀಯು ವಿಂಧ್ಯಪರ್ವತದ ಮಾರ್ಗದಲ್ಲಿ ಸಂಚರಿಸುತ್ತಿರುವಾಗ ಮರುನ್ಮಹಾರಾಜನ ಸಂಬಂಧವೆಂಬಾಗಿ ಒಂಭತ್ತುಗಳಿಗೆಯೊಳಗಾಗಿ ಕೋಟಿಸೂರ್ಯಪ್ರಕಾಶಮಾನವಾದ ತೇಜಸ್ಸಿನಿಂದ ಕೂಡಿದ ಒಬ್ಬಕನ್ನಿಕೆಯನ್ನು ಹೆತ್ತಳು. ಆಗ ಮರುನ್ಮಹಾರಾಯನಾದರೋ ಈ ಕನ್ನಿಕೆಯನ್ನು ನೀನೇ ಪೋಷಿಸಿಕೊಳ್ಳೆಂದು ಹೇಳಿ ಹೊರಟುಹೋದನು. ಆ ಉಲೂಪಿಯೆಂಬ ದೇವತಾಸ್ತ್ರೀಯು ಈ ಕನ್ನಿಕೆಯನ್ನು ದೇವಲೋಕಕ್ಕೆ ಕರೆದುಕೊಂಡುಹೋದರೆ ದೇವತೆಗಳು ಅಕ್ಷೇಪಣೆ ಮಾಡುವರೆಂಬಭಯದಿಂದ ಭೂಲೋಕದಲ್ಲಿಯೇ ಕೆಲವುದಿನ ಪೋಷಿಸುತ್ತಾ ಕೊನೆಗೆ ಅಲ್ಲಿ ಒಂದು ಬಿಲವನ್ನು ನೋಡಿ, ಅದರೊಳಗೆ ಕರೆದುಕೊಂಡು ಹೋಗಿ ಆ ಮಗುವನ್ನು ಅಲ್ಲಿಯೇ ಇಟ್ಟು ಅವರಪೋಷಣೆಗೆ ೩-೪ ಜನ ದಾಯಿಯರನ್ನಿಟ್ಟು, ತಾನು ದೇವಲೋಕಕ್ಕೆ ಹೋಗಿ ಆಗಾಗ್ಗೆ ಬಂದು ನೋಡಿಕೊಂಡು ಹೋಗುತ್ತಿದ್ದಳು. ಈಗ ಆ ಕನ್ನಿಕೆಯು ಯುವತಿಯಾಗಿದ್ದಾಳೆ, ಆ ತರುಣಿಗೆ ಸಂಪೂರ್ಣಚಂದ್ರಿಕಾ ಎಂಬು ಹೆಸರು. ಈ ಸಂಪೂರ್ಣಚಂದ್ರಿಕೆಯು ಮಾನವರನ್ನು ವರಿಸುವುದಿಲ್ಲವೆಂದು ಪ್ರತಿಜ್ಞೆಮಾಡಿಕೊಂಡು ತನ್ನ ಸಖಿಯರನ್ನು ಕಾವಲಿಟ್ಟು ಈ ಬಿಲಕ್ಕೆ ಬರುವ ಮಾನವರನ್ನು ನಾಯಿಗಳಾಗಿಯೂ, ಕೋತಿಗಳಾಗಿಯೂ ಮಾಡಿರೆಂದು ಆಜ್ಞಾಪಿಸಿದ್ದಳು. ನಿಮ್ಮಮಂತ್ರಿಸುತನು ಇದನ್ನು ತಿಳಿಯದೆ ಆ ಬಿಲಕ್ಕೆ ಹೋಗಿ ಕೋತಿಯೋ ನಾಯಿಯೋ ಆಗಿರಬಹುದೆಂದು ತೋರುವುದು. ಆ ಸಂಪೂರ್ಣಚಂದ್ರಿಕೆಯು ಸ್ನಾನಮಾಡುವಾಗ ಹೊಡೆದುಕೊಂಡು ಬಂದಿರುವಂತೆ ಈ ತಲೆಯಕೂದಲು ಕಾಣುತ್ತಿರುವುದೆಂದು ನುಡಿದನು, ಆಗ ಶಶಿಬಿಂದುವು ಓಹೋ ! ಸಂಪೂರ್ಣಚಂದ್ರಿಕಾ ! ಎಂದು ಮೂರ್ಛಾಕ್ರಾಂತನಾಗಿ ಕೆಳಗೆ ಬಿದ್ದು ಪ್ರಜ್ಞೆತಪ್ಪಿರಲು, ಆ ಮುನಿಯು ಅಂತಃಕರಣದಿಂದ ಮೇಲಕ್ಕೆಬ್ಬಿಸಿ, ಅಯ್ಯಾ ರಾಜಪುತ್ರನೆ!

ಈಗ ನಿನ್ನ ಧೈರ್ಯಕಾರ್ಯಗಳೇನಾದವು ? ಕೂರರು ಹೀಗೆ ಹೆದರಬಹುದೇ ಎಂದು ಅವನನ್ನು ಸಮಾಧಾನಪಡಿಸಿದನು. ಆಗ ಶಶಬಿಂದುವು ಮುನಿಯವರ ಪಾದಗಳಿಗೆ ಅಡ್ಡಬಿದ್ದು ಮುನಿವರ್ಯನೇ ನನಿಗೆ ಆ ಸಂಪೂರ್ಣಚಂದ್ರಿಕೆಯು ಲಭಿಸುವಂತೆಯೂ, ಮಂತ್ರಿಸುತನನ್ನ ಬಳಿಗೆ ಬರುವಂತೆಯೂ ವರವನ್ನು ಕರುಣಿಸಬೇಕೆಂದು ಕೇಳಿಕೊಂಡನು. ಆಗ ಭಾಸ್ಕರಮಹರ್ಷಿಯು, ರಾಜಪುತ್ರನೇ ! ಶರೀರಭಂಗವನ್ನೂ ಮರಣವನ್ನೂ ತಿಳಿದುಕೊಳ್ಳುವಹಾಗೆ ಛಾಯಾಪುರುಷನೆಂಬ ದೇವಗಣಸ್ಥನೊಬ್ಬನುಂಟು, ಅದನ್ನು ಶೋಧಿಸುವೆನು, ದೃಷ್ಟಿಯನ್ನು ನಿಲ್ಲಿಸಿ, ದೃಶ್ಯವಾದ ಪುರುಷನನ್ನು ನೋಡಿ, ಆ ಪುರುಷನಿಂದ ತೋರಿದ ಲಕ್ಷಣವನ್ನು ತಿಳಿಸುತ್ತೇನೆ. ಅನಂತರ ನಿನ್ನಿಷ್ಟವನ್ನು ನೆರವೇರಿಸಲು ಯೋಚಿಸುವೆನೆಂದು ಹೇಳಿದನು.

ಭಾಸ್ಕರಮಹಾಮುನಿಯು ಶಶಬಿಂದುಮಹಾರಾಯನಿಗೆ ಶೋಧಿಸಿದ ಛಾಯಾಪುರುಷಲಕ್ಷಣವು.

ರಾಜಾತ್ಮಜಾ ! ಸಕಾರ, ಓಕಾರ, ಮಂ ಕಾರಗಳನ್ನು ಜಪಿಸುತ್ತಾ ಸೂರ್ಯನಿಗೆ ವಿಮುಖನಾಗಿ ನಿಂತು ನಿನ್ನ ದೇಹವನ್ನು ನೋಡಿ, ಜೀವಾಕ್ಷರದಲ್ಲಿನ ಸ್ಥಾನದಲ್ಲಿ ದೃಷ್ಟಿಯನ್ನಿಟ್ಟು, ಆ ದೃಷ್ಟಿಯನ್ನು ನಿಶ್ಚಲವಾಗಮಾಡಿಕೊಂಡು, ಮೇಳಗಳಕಡೆಗೆ ನೋಡು. ಅಲ್ಲಿ ಅವಯವಸಹಿತನಾದ ಒಬ್ಬ ಛಾಯಾಪುರುಷನು ಕಾಣುವನು. ಆ ಪುರುಷನಿಗೆ ತಲೆಯೇ ಹೀನವಾದ ಆರುತಿಂಗಳಿಗೂ, ಕಾಲುಗಳು ಹೀನವಾದ ಮೂರುತಿಂಗಳಿಗೂ, ಬಾಹುಹೀನವಾದ ಒಂದು ತಿಂಗಳಿಗೂ ಮರಣವು ಸಂಭವಿಸುತ್ತದೆ. ಆ ಛಾಯೆಯು ಕೆಂಪುಬಣ್ಣವಾದರೆ ಸಾಮ್ರಾಜ್ಯಪದವಿಯು ಲಭಿಸುತ್ತದೆ. ಹಸುರು ಬಣ್ಣವಾಗಿ ಕಂಡರೆ ಭೂಮಂಡಲಾಧಿಪತ್ಯವೂ, ಬಿಳಿಯಾಗಿ ಕಂಡರೆ ಶರೀರಸುಖವೂ, ಕಪ್ಪಾಗಿ ಕಂಡಲ್ಲಿ ದಾರಿದ್ರ್ಯ, ರೋಗ, ದುಃಖಾದಿಗಳೂ, ಮುಚ್ಚಿ ಮುಚ್ಚಿ ಗಳಾಗಿ ಕಂಡಲ್ಲಿ ದೇಹದಲ್ಲಿ ಅನೇಕ ಬದಲಾವಣೆಗಳೂ ಉಂಟಾಗುತ್ತವೆ. ಚನ್ನಾಗಿ ನಿನ್ನ ಛಾಯೆಯನ್ನು ಪರೀಕ್ಷಿಸಿ ಹೇಳೆಂದು ನುಡಿದನು. ಆ ಶಶಬಿಂದುವು ನಿಶ್ಚಲನಾಗಿ ನಿಂತು ಆ ಮಂತ್ರವನ್ನು ಜಪಿಸುತ್ತಾ ಛಾಯಾಪುರುಷನನ್ನು ನೋಡಿ ಮುನಿನಾಥನೆ ! ಬಿಳೀಛಾಯೆಯು ಮೇಲೆ ಕೆಂಪಾಗಿ ಕಾಣಿಸುವುದೆಂದನು. ಆ ಮುನಿಯು ಸಂತೋಷಪಟ್ಟು, ಎಲೈ ರಾಜಸೂನುವೆ ! ನಿನ್ನ ಶರೀರಕ್ಕೆ ಯಾವಭಯವೂ ಇಲ್ಲ. ನೀನು ಚತುಸ್ಸಮುದ್ರ ಮುದ್ರಿತವಾದ ಭೂಮಂಡಲಾಧಿಪತಿಯಾಗುತ್ತಿ. ನೀನು ಧಾರಾಳವಾಗಿ ಆ ಗುಹೆಯೊಳಕ್ಕನುಗ್ಗು. ಎಸುರಾಗಿ ಬಂದು ನಿನ್ನನ್ನು ಕೇಳಿದರೆ ನಾನು ದೇವದೂತನೆಂದು ಹೇಳು. ಆಗ ಹೆಚ್ಚಾದ ಬೆಳಕು ಕಾಣಿಸುವುದು, ಕೂಡಲೇ ಸಂಪೂರ್ಣಚಂದ್ರಿಕಾ [illegible]

ವನ್ನೆಲ್ಲಾ ವಿಚಾರಿಸಿ ನಿನ್ನನ್ನು ವರಿಸುವಳು, ನೀನು ಹೋಗಿ ಬಾರೆಂದು ಆ ಬಿಲದ ಗುರ್ತನ್ನೆಲ್ಲಾ ಹೇಳಿಕಳುಹಿಸಿದನು. ಇದನ್ನು ಕೇಳಿ, ಆ ಅರ್ಜುನನು ಅತ್ಯಾಶ್ಚರ್ಯನಿಮಗ್ನನಾಗಿ, ಓ ಕೃಷ್ಣಪರಮಾತ್ಮ! ಯಾವಕಾಲದಲ್ಲಿ ಛಾಯಾಪುರುಷನನ್ನು ನೋಡಬಹುದೋ ಅದನ್ನು ವಿಶದವಾಗಿ ತಿಳಿಯಪಡಿಸೆಂದು ಕೇಳಿಕೊಂಡನು.

ಅರ್ಜುನಾ! ಕೇಳು, ಪ್ರಾತಃಕಾಲ ಎಂಟುಗಳಿಗೆಯಿಂದ ಹನ್ನೆರಡು ಗಳಿಗೆಯವರೆಗೂ, ಸಾಯಂಕಾಲ ಇಪ್ಪತ್ತುಗಳಿಗೆಯಿಂದ ಇಪ್ಪತ್ತೈದುಗಳಿಗೆಯವರೆಗೂ, ರಾತ್ರಿಯಲ್ಲಿ ಚಂದ್ರನ ಪ್ರಕಾಶದಲ್ಲಿಯೂ, ಸೂರ್ಯಚಂದ್ರನ ಪ್ರಕಾಶವು ಕಾಣದಿರುವಾಗ ಮೇಘಾದಿಗಳಿಂದಲ್ಲಿಯೂ ಕಾಣಬಹುದು. ಮತ್ತೊಂದು ವಿಶೇಷವುಂಟು. ತನ್ನ ಛಾಯೆಯಲ್ಲಿ ದೃಷ್ಟಿಯನ್ನು ನಿಲ್ಲಿಸಿ ನೋಡಿದರೆ ಜುಟ್ಟಿನಲ್ಲಿ ಮತ್ತೊಂದಿಳಿಕನಂತೆ ಬೇರೆ ಛಾಯೆಯು ಕಾಣುವುದು. ಶರೀರವನ್ನು ಅಶ್ವತ್ಥವೃಕ್ಷದ ಹಾಗೆ ಮಾಡಿ, ನಂತರಾಯಾನೇ ಕಾರಣನೆಂದು ಹೇಳಿ ತೋರಿಸಿದನು. ಇದನ್ನು ನೋಡಿ ಅರ್ಜುನನು ತನಗೂ ಶರೀರಾನಂದವುಂಟಾಗುವುದೆಂದು ಹೇಳಿ ಆ ಕೃಷ್ಣಮೂರ್ತಿಯನ್ನು ಕೊಂಡಾಡಿ, ಓ ಮಹಾನುಭಾವನಾದ ಸ್ವಾಮಿಯೇ! ನನಿಗೆ ಆ ಶಶಿಬಿಂದುಮಹಾರಾಯನ ಕಥೆಯನ್ನು ಸಂಪೂರ್ಣವಾಗಿ ತಿಳಿಸೆಂದು ಕೇಳಿಕೊಳ್ಳುತ್ತಿರುವ ಅರ್ಜುನನನ್ನು ಕುರಿತು ಶ್ರೀಕೃಷ್ಣನು ಆ ಶಶಿಬಿಂದು ಮಹಾರಾಯನ ಕಥೆಯನ್ನು ಹೇಳಲಾರಂಭಿಸಿದನು. ಅರ್ಜುನಾ ಕೇಳು, ಆ ಶಶಿಬಿಂದುಮಹಾರಾಯನು ಋಷಿಯ ಅಪ್ಪಣೆಯಂತೆ ಆ ಬಿಲವನ್ನು ಹೊಕ್ಕು, ತನ್ನನ್ನು ತಡೆಮಾಡಲು ಬಂದ ಮಂತ್ರಗಾರ್ತಿಯರಿಗೆ ತಾನು ದೇವದೂತನೆಂದು ತಿಳಿಸಿ, ಮುಂದೆ ಮುಂದೆ ಹೊಗುತ್ತಿರುವಲ್ಲಿ ಹೆಚ್ಚಾದ ಬೆಳಕು ಕಂಗೊಳಿಸಿತು. ಆಗ ಆ ಶಶಿಬಿಂದುವು ಸಂಪೂರ್ಣಚಂದ್ರಿಕಾ ಎಂಬ ಗಟ್ಟಿಯಾಗಿಯೂ ನಿರ್ಭಯವಾಗಿಯೂ ಕೂಗಿದನು. ಕಯ್ಯಾಗಾರದಲ್ಲಿ ಮಲಗಿದ್ದ ಸಂಪೂರ್ಣಚಂದ್ರಿಕೆಯು ಈಗದ್ದಲವು ಕೇಳಿಸಿದ ಕೂಡಲೇ ಥಟ್ಟನೆ ಎದ್ದುಬಂದು ಆ ಶಶಿಬಿಂದುವನ್ನು ನೋಡಿ, ನನ್ನ ಹೆಸರು ಯಾರಿಗೂ ತಿಳಿಯದು, ನೀನು ಹೇಗೆ ತಿಳಿದುಕೊಂಡೆ, ನರಮಾತ್ರರಿಗೆ ಅಸಾಧ್ಯವಾದ ಈ ಬಿಲಕ್ಕೆ ನೀನು ಹೇಗೆ ಬಂದೆ? ಎಂದು ಕೇಳಲು, ಆ ಶಶಿಬಿಂದುವು ತಾನುಬಂದವರ್ತಮಾನವನ್ನೂ, ನಿನ್ನನ್ನು ವರಿಸಲು ಬಂದಿರುವೆನೆಂದೂ ನುಡಿದನು. ಕೂಡಲೇ ಆ ಕನ್ನಿಕೆಯು ಮಂತ್ರಗಾರ್ತಿಯರನ್ನು ಕರೆದು, ನೀವು ಈ ಮನುಷ್ಯನನ್ನು ಹೇಗೆ ಒಳಕ್ಕೆ ಬಿಟ್ಟಿರೆಂದು ಕೇಳಿದಳು. ಆಗ ಮಂತ್ರಗಾರ್ತಿಯರಾದರೋ ಈ ತನು ದೇವದೂತನೆಂದು ಹೇಳಿದ್ದರಿಂದ ನಾವು ನಿಜವೆಂದು ಒಳಕ್ಕೆ ಬಿಟ್ಟವೆಂದು ನುಡಿದರು. ಆಗ ಆ ಸಂಪೂರ್ಣಚಂದ್ರಿಕೆಯು, ನೀನು ಯಾವನಾ

ತನೆಂದು ಇವರಿಗೆ ಸುಳ್ಳು ಹೇಳಿಬರಬಹುದೇ ಎಂದು ಕೇಳಿದಳು. ಶಶಿಬಿಂ
ದುವು ಧೈರ್ಯದಿಂದ ಆ ಕನ್ನಿಕಾರತ್ನವನ್ನು ಕುರಿತು, ತನ್ನ ವರ್ತಮಾನವನ್ನೂ
ಭಾಸ್ಕರಮಹರ್ಷಿಯ ಅನುಗ್ರಹದಿಂದ ತಾನು ಇಲ್ಲಿಗೆ ಬಂದಿರುವೆನೆಂದೂ
ಹೇಳಿದನು. ಕೂಡಲೇ ಆ ಇಂದುಮುಖಿಯೂ, ಮಂತ್ರಿಗಾರ್ತಿಯರೂ
ಗಾಬರಿಪಟ್ಟು ತಾಯಿಯಾದ ಉಲೂಖಿಯನ್ನು ಸ್ಮರಿಸಿದಕೂಡಲೆ, ಆ ದೇವ
ಕನ್ನಿಕೆಯು ಮನೋವೇಗದಿಂದ ಬಂದು ಮಗಳನ್ನೂ, ಎದುರಿಗೆ ನಿಂತಿರು
ವ ರಾಜಪುತ್ರನನ್ನೂ ನೋಡಿದಳು. ಆ ದೇವಕನ್ನಿಕೆಯು, ರಾಜಪುತ್ರ
ನನ್ನು ನೋಡಿ, ನೀನು ಯಾರು? ಇಲ್ಲಿಗೆ ಬರಲು ಕಾರಣವೇನೆಂದು ಕೇ
ಳಲು, ನಾನು ಶಶಿಬಿಂಬುವೆಂಬ ಸೂರ್ಯಬಿಂಬುಮಹಾರಾಜನ ಮಗನು.
ನಾನು ದೇಶದೇಶಗಳನ್ನೂ ತಿರುಗುತ್ತಾ ಗಟ್ಟಪಟ್ಟಗಳೆಲ್ಲಲ್ಲಾ ಅಲೆದು,
ಕಡೆಗೆ ಒಂದು ಪ್ರವಾಹದ ಬಳಿಗೆ ಬರಲು, ಆ ಪ್ರವಾಹದಲ್ಲಿ ಹೊಡೆದು
ಕೊಂಡು ಬರುತ್ತಿದ್ದ ಸುಂದರವಾದ ಕೂದಲನ್ನು ಹಿಡಿದುಕೊಂಡು, ಈಕೂದ
ಲನ್ನು ಧರಿಸಿರುವ ಕನ್ನಿಕಾರತ್ನವನ್ನೇ ಮದುವೆಯಾಗಬೇಕೆಂಬ ಆಸೆಯಿಂದ
ಅಲ್ಲಲ್ಲಿ ತಿರುಗುತ್ತಾ, ಭಾಸ್ಕರಮಹಾಮುನಿಯ ಆಶ್ರಮವನ್ನು ಹೊಕ್ಕು, ಆ
ಮಹರ್ಷಿಯ ಅನುಗ್ರಹದಿಂದ ಈ ಕನ್ನಿಕಾರತ್ನದ ಸುದ್ದಿಯನ್ನು ತಿಳಿದು
ಈಕೆಯನ್ನು ಮದುವೆಯಾಗಬೇಕೆಂದು ಇಲ್ಲಿಗೆ ಬಂದಿರುವೆನೆಂದು ನುಡಿದು
ಆ ಕೂದಲನ್ನು ಆ ದೇವಕನ್ನಿಕೆಗೆ ಕೊಡಲು, ಆಕೆಯು ಕೂಡಲೇ ತನ್ನ
ಮಗಳ ಬಳಿ ಬಂದು ಈ ವರ್ತಮಾನವನ್ನೆಲ್ಲಾ ತಿಳಿಸಿ, ನೀನು ಈ ಮಹಾ
ನುಭಾವನನ್ನೇ ಮದುವೆಯಾಗೆಂದು ನುಡಿದಳು. ಆ ಇಂದುಮುಖಿಯಾದ
ರೋ, ತಾಯಿಯೆ! ನಾನು ಮನುಷ್ಯರನ್ನು ವರಿಸುವುದಿಲ್ಲವೆಂದು ಪ್ರತಿ
ಜ್ಞೆಮಾಡಿರುವಲ್ಲಿ ನೀನು ಹೀಗೆ ಹೇಳಬಹುದೆ? ಎನ್ನಲು, ತಾಯಿಯು ಮ
ಗಳನ್ನು ಕುರಿತು, ಅಮ್ಮಾ! ಮನುಷ್ಯಸಂಬಂಧವು ನನಗೆ
ಉಂಟಾಗಿ ನೀನು ಹುಟ್ಟಿದವಳಾದ್ದರಿಂದ ನೀನು ಮನುಷ್ಯಳೇಹೊರತು
ದೇವತಾಸ್ತ್ರೀಯಲ್ಲವು. ಆದುದರಿಂದಲೇ ನಿನ್ನನ್ನು ಇಲ್ಲಿಯೇಬಿಟ್ಟು ನಾನು
ದೇವಲೋಕಕ್ಕೆ ಹೋದದ್ದು, ನಿನ್ನನ್ನು ದೇವತೆಗಳು ಮದುವೆಯಾಗುವು
ದಿಲ್ಲ. ಈತನು ಚತುಸ್ಸಮುದ್ರಾಧೀಶ್ವರನು, ದಿವ್ಯವಾದ ಕಿರೀಟವನ್ನೂ,
ಭುಜಕೀರ್ತಿಗಳನ್ನೂ ಧರಿಸಿ, ಚೆಂದ್ರಹಾರದಿಂದಲೂ, ನವರತ್ನಖಚಿತವಾದ
ಕರ್ಣಕುಂಡಲದಿಂದಲೂ, ಪ್ರಕಾಶಮಾನನಾಗಿರುವ ಈ ಮಹಾರಾಯನ
ನ್ನು ವರಿಸು, ನಿನ್ನಗಟವನ್ನು ಬಿಟ್ಟು ಭಾಸ್ಕರಮುನಿಯ ಅನುಗ್ರಹಕ್ಕೆ
ಪಾತ್ರಳಾಗೆಂದು ನುಡಿದಳು. ಆ ಕನ್ಯಕಾರತ್ನವಾದರೊ, ತಾಯಿಯನ್ನು
ಕುರಿತು, ಅಮ್ಮಾ, ನಿನ್ನಿಷ್ಟದಂತೆ ಮಾಡಬಹುದೆಂದು ನುಡಿದಳು. ಕೂಡ

ಮಾಡಿಸಿ, ನವರತ್ನ ಖಚಿತವಾದ ಒಡವೆಗಳನ್ನು ಇಟ್ಟು ಅಲಂಕಾರಮಾಡಿ, ದಿವ್ಯವಾದ ಪೀತಾಂಬರವನ್ನುಡಿಸಿ, ಆಬಳಿಕ ಆ ಶಶಿಬಿಂದುಮಹಾರಾಜನಿದ್ದೆಡೆಗೆ ಬಂದು, ರಾಜಪುತ್ರನೆ! ನವರತ್ನಗಳಿಂದ ದೇದೀಪ್ಯಮಾನವಾದ ನಿಮ್ಮ ಅರಮನೆಯನ್ನು ಬಿಟ್ಟು ಈ ಬೆಲಕ್ಕೆ ಕಷ್ಟಪಟ್ಟುಕೊಂಡು ಬಂದಿರಲ್ಲಾ! ಎಂದು ಮುರ್ಖಾದೆಯಿಂದ ಮಾತನಾಡಿಸಿ, ಆ ರಾಜಪುತ್ರನಿಗೆ ಮಂಗಳಸ್ನಾನವನ್ನು ಮಾಡಿಸಿದ ಬಳಿಕ ಇಬ್ಬರಿಗೂ ಗಂಧರ್ವವಿವಾಹವನ್ನು ನೆರವೇರಿಸಿ ಇಬ್ಬರಿಂದಲೂ ಪ್ರಮಾಣವಚನಗಳನ್ನಾಡಿಸಿ, ತನ್ನ ಕುವರಿಗೆ ಬುದ್ಧಿವಾದಗಳನ್ನು ಹೇಳಿ ತಾನು ದೇವಲೋಕಕ್ಕೆ ಹೊರಟುಹೋದಳು. ಅನಂತರ ಶಶಿಬಿಂದುವೂ ಸಂಪೂರ್ಣಚಂದ್ರಿಕೆಯೂ ಕೆಲವುಕಾಲ ಅಲ್ಲಿಯೇ ಸುಖವಾಗಿದ್ದರು. ಒಂದಾನೊಂದುದಿನ ರಾಜಪುತ್ರನಿಗೆ ಮಂತ್ರಿಕುಮಾರನ ಜ್ಞಾಪಕವು ಬಂದು ದುಃಖಿಸುತ್ತಿರಲು, ಚಂದ್ರಪ್ರಭೆಯು ಪತಿಯದುಃಖವನ್ನು ತಿಳಿದು, ಕೂಡಲೇ ಅಲ್ಲಿದ್ದ ಶುನಕ ಮಾನವಗಳನ್ನು ಮನುಷ್ಯರನ್ನಾಗಿ ಮಾಡಿದಳು. ರಾಜಪುತ್ರನು ತನ್ನ ಮಂತ್ರಿಯನ್ನು ಆಲಿಂಗನ ಮಾಡಿಕೊಂಡು, ಸಂತೋಷದಿಂದ ಇದ್ದನು, ಚಂದ್ರಪ್ರಭೆಯು ಮಿಕ್ಕಮನುಷ್ಯರನ್ನು ಹೊರಟುಹೋಗಬಹುದೆಂದು ಕಳುಹಿಸಿದಳು, ರಾಜಪುತ್ರನು ಆ ಸಂಪೂರ್ಣಚಂದ್ರಿಕೆಯನ್ನು ಕುರಿತು, ನಾನು ಊರನ್ನು ಬಿಟ್ಟು ಬಹುದಿನವಾಗಿದೆಯಾದ್ದರಿಂದ ನಮ್ಮಪಟ್ಟಣಕ್ಕೆ ಪ್ರಯಾಣ ಮಾಡಲು ಸಿದ್ಧಳಾಗೆಂದು ನುಡಿದನು. ಸಂಪೂರ್ಣಚಂದ್ರಿಕೆಯಾದರೋ ತನ್ನ ಮಂತ್ರಗಾರ್ತಿಯರ ಸಹಾಯದಿಂದ ರಾಜಪುತ್ರನ ಮತ್ತು ಮಂತ್ರಿಯ ಕುದುರೆಗಳನ್ನು ತರಿಸಿದಳು. ತನ್ನ ಮಾಯೆಗಾರ್ತಿಯರೇ ಕುದುರೆಯಾಗುವಂತೆ ಮಾಡಿ ಅಲ್ಲಿದ್ದ ನವರತ್ನಗಳೇ ಮೊದಲಾಗಿ ಸಕಲವಸ್ತುಗಳನ್ನೂ ಆ ಕುದುರೆಯಮೇಲಿರಿಸಿಕೊಂಡು ತಾನೂ ಅಶ್ವಾರೂಢಳಾದಳು, ರಾಜಪುತ್ರನೂ ಮಂತ್ರಿಯೂ ತಮ್ಮತಮ್ಮ ಕುದುರೆಗಳನ್ನೇರಿ ಒಟ್ಟಿಗೆ ಪ್ರಯಾಣಮಾಡಿದರು. ಈರೀತಿ ಪ್ರಯಾಣ ಮಾಡುತ್ತಿರುವಲ್ಲಿ ತಮ್ಮ ಪಟ್ಟಣದ ದಾರಿಯು ತಪ್ಪಿಹೋಗಿ ಬಹುದೂರ ಹೋದಮೇಲೆ ಒಂದಾನೊಂದು ಪಟ್ಟಣವು ಕಾಣಿಸಿತು. ಇವರೆಲ್ಲಾ ಆ ಪಟ್ಟಣಕ್ಕೆ ಹೋಗಿ ಅಲ್ಲಿ ಒಬ್ಬ ಅಡಗೂಲಜ್ಜಿಯ ಮನೆಗೆ ಹೋಗಿ ತಮ್ಮ ಭೋಜನಗಳನ್ನು ತೀರಿಸಿಕೊಂಡು, ಅಲ್ಲಿ ನಡೆಯುತ್ತಿದ್ದ ಮಂಗಳವಾದ್ಯಗಳನ್ನು ಕೇಳಿ, ಇದೇನು ಇರಬ

ಆ ಅಡಗೊಲಜ್ಜಿಯು ಆ ರಾಜಾತ್ಮಜನನ್ನು ಕುರಿತು, ಅಯ್ಯಾ! ಈ ದೇಶಕ್ಕೆ ಕಾಶ್ಮೀರದೇಶವೆಂದು ಹೆಸರು. ಇಲ್ಲಿ ನಮ್ಮ ರಾಜನಿಗೆ ಶಾರದಾವೇಣಿಯೆಂಬ ಮಗಳಿರುವಳು. ಈ ಶಾರದವೇಣಿಯ ಸ್ವಯಂವರವು ಹೋತ್ಸವವು ನಡೆಯುವುದು, ಇದೇ ನಿಮಿತ್ತವಾಗಿ ಅನೇಕ ಜನ ರಾಜರು ತಮ್ಮತಮ್ಮ ಸೇನಾಸಮೇತರಾಗಿ ಊರಾಚೆತ್ತಲೂ ಬಂದು ನಿಂತಿರುವರು. ರಾಜನು ಒಂದು ಮತ್ಸ್ಯಯಂತ್ರವನ್ನಿಟ್ಟಿರುವನು. ಈ ಮತ್ಸ್ಯಯಂತ್ರವನ್ನು ಭೇದಿಸಿದ ವೀರನಿಗೆ ಈದೇಶದ ರಾಜನು ತನ್ನ ಪುತ್ರಿಯನ್ನು ಕೊಟ್ಟು ಮದುವೆ ಮಾಡುವನೆಂದು ನುಡಿದಳು.

ಶಶಿಬಿಂದುಮಹಾರಾಯನು ಇದನ್ನು ಕೇಳಿ ತನ್ನ ಇಷ್ಟವನ್ನು ಸಂಪೂರ್ಣಚಂಪ್ರಕೆಯೊಂದಿಗೆ ಹೇಳಿ, ತನ್ನ ಮಂತ್ರಿಯನ್ನು ಜೊತೆಯಲ್ಲಿ ಕರೆದುಕೊಂಡು, ಆ ಮತ್ಸ್ಯಯಂತ್ರದ ಬಳಿಗೆ ಹೋದನು. ಆ ಪಟ್ಟಣದ ಬ್ರಾಹ್ಮಣನೊಬ್ಬನು ರಾಜಸಭೆಯಲ್ಲಿ ಎದ್ದುನಿಂತು, ಓ ರಾಜಾಧಿರಾಜರುಗಳಿರಾ! ಇಲ್ಲಿಟ್ಟಿರುವ ಮತ್ಸ್ಯಯಂತ್ರದಡಿಯಲ್ಲಿ ನೋಡುತ್ತಾ, ನಿಲುಗನ್ನಡಿಯಲ್ಲಿ ಕೆಳಗಡೆ ನೋಡಿಕೊಂಡು ಒಂದೇ ಬಾಣದಿಂದ ಯಾರು ಮೇಲ್ಗಡೆ ಇರುವ ಮತ್ಸ್ಯಯಂತ್ರವನ್ನು ಭೇದಿಸುವರೋ ಅಂತಹ ಶೂರನನ್ನು ನಮ್ಮ ರಾಜಕುಮಾರಿಯು ವರಿಸುವಳು, ಶೂರರು ಬಂದು ಪ್ರಯತ್ನಪಡಬಹುದೆಂದು ನುಡಿದನು. ಇದನ್ನು ಕೇಳಿದ ರಾಜರಲ್ಲಿ ಕೆಲವರು, ಇದು ಮನುಷ್ಯಶಕ್ತಿಗಳಿಗೂ ಅಸಾಧ್ಯವೆಂದೂ, ಹಲವರು ಈ ಯಂತ್ರವನ್ನು ತ್ರಿನೇತ್ರಧಾರಿಯಾದ ಪರಮೇಶ್ವರನೂ ಭೇದಿಸಲಾರನೆಂದೂ, ಮತ್ತೆ ಕೆಲವರು ಇದಕ್ಕೆ ಲಕ್ಷ್ಯವನ್ನು ಇಡುವುದು ಹೇಗೆಂದು ಚಿಂತಿಸುತ್ತಲೂ, ಈ ರೀತಿಯಾಗಿ ನಾನಾಬಗೆಯಾಗಿ ಮಾತನಾಡುತ್ತಿರುವಲ್ಲಿ, ಆ ಶಶಿಬಿಂದುಮಹಾರಾಯನು ತನ್ನ ಮನಸ್ಸಿನಲ್ಲಿ ಭಾಸ್ಕರಮಹರ್ಷಿಯನ್ನು ಧ್ಯಾನಿಸುತ್ತಾ, ಛಾಯಾಪುರುಷಲಕ್ಷಣವನ್ನು ಬಲ್ಲ ನನಿಗೆ ಈ ಬಿಲ್ಲು ಅಸಾಧ್ಯವೇ ಎನ್ನುತ್ತಾ, ಧೈರ್ಯವಾಗಿ ಆ ಯಂತ್ರದ ಹತ್ತಿರಕ್ಕೆ ಹೋಗಿ ಧನುಷ್ಟಂಕಾರವನ್ನು ಮಾಡಿದನು. ಈ ಧ್ವನಿಯನ್ನು ಕೇಳಿದ ಕೂಡಲೇ ಅಲ್ಲಿದ್ದ ರಾಜರು ಈ ಶಶಿಬಿಂದುವಿನ ಕಡೆಗೆ ತಿರುಗಿನೋಡುತ್ತಾ, ಆಹಾ! ಇವನೇನು! ಇವನು ಯಾವಲೋಕದಿಂದ ಬಂದ ಪುಣ್ಯಪುರುಷನೋ ಎಂದು ರೆಪ್ಪೆ ಬಡಿಯದೆ ನೋಡುತ್ತಿರುವಲ್ಲಿ, ಆ ಶಶಿಬಿಂದುವು ಬಾಣವನ್ನು ತಗುಲಿಸಿ, ಲಕ್ಷ್ಯವನ್ನು ನಿಲ್ಲಿಸಿಕೊಂಡು ಗುರುವಾದ ಮಹರ್ಷಿಯನ್ನು ಧ್ಯಾನಿಸುತ್ತಾ ಕೆಳಗಡೆಯ ನಿಲುಕನ್ನಡಿಯನ್ನು ನೋಡಿಕೊಂಡುಕೊಡೆದ ಕೂಡಲೇ, ಆ ಮತ್ಸ್ಯಯಂತ್ರವು ಮುರಿದು ಕೆಳಗೆ ಬಿತ್ತು. ಅಲ್ಲಿದ್ದ ರಾಜರೆಲ್ಲಾ ತಮ್ಮಷ್ಟಕ್ಕೆ ತಾವೇ, ಆಹಾ! ಈತನುಇಂದ್ರನೋ, ದೇವೇಂದ್ರನೋ, ಅಥವಾ ಲಕ್ಷ್ಮೀ

ರಮಣನೋ, ಯೋರೋ ಆಗಿರಬೇಕು. ಇಲ್ಲವಾದರೆ ಈ ಮಹಾಧನುಸ್ಸನ್ನು ಭೇದಿಸುವುದು ಸಾಧ್ಯವೇ! ಎನ್ನುತ್ತಾ, ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟುಕೊಂಡು ಕೈಚಪ್ಪಾಳೆ ಹೊಡೆದರು. ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದವು. ಪುಷ್ಪವೃಷ್ಟಿಯಾಯಿತು. ನೆರೆದಿದ್ದ ರಾಜರುಗಳೆಲ್ಲಾ ಗುಂಪುಗುಂಪಾಗಿ ಸೇರಿ ಮಾತನಾಡಿಕೊಳ್ಳುತ್ತಾ ಈಮಹಾರಾಜನನ್ನು ಕೀರ್ತಿಸುತ್ತಿದ್ದರು. ಕಾಶ್ಮೀರದೇಶದ ರಾಜನು ಮಂತ್ರಿಕುವರನಾದ ಈ ಶಶಿಬಿಂದುವಿನ ಸಮಾಚಾರವನ್ನೆಲ್ಲಾ ತಿಳಿದು ಸಂತೋಷದಿಂದ ಮಂಗಳವಾದ್ಯಗಳನ್ನು ಮಾಡಿಸಿದನು. ಕಾಶ್ಮೀರದೇಶದ ರಾಜಪುತ್ರಿಯಾದ ಕಾರದಾವೇಣಿಯು ಸಖಿಯರೊಂದಿಗೂ ಬಾರ್ಹಸ್ಪತ್ಯ ಕನ್ನಿಕೆಯರೊಂದಿಗೂ ಹೊರಟು, ತನ್ನ ಬಲಕೈಯಲ್ಲಿ ಪ್ರೇಮಾಲೆಯನ್ನು ಹಿಡಿದುಕೊಂಡು ಮಂದಗಮನದಿಂದ ರಾಜಸಭೆಯಲ್ಲಿ ಬರುತ್ತಿದ್ದನ್ನು ಅಲ್ಲಿ ನೆರೆದಿದ್ದ ರಾಜರುಗಳು ನೋಡಿದಕೂಡಲೆ ಮನ್ಮಥನ ಬಾಣದಿಂದ ಕೊಚ್ಚಿಯಲ್ಪಟ್ಟು, ತಮ್ಮ ತಮ್ಮ ದುರ್ಭೀವವನ್ನು ನಿಂದಿಸುತ್ತಾ, ಆಹಾ! ನಳದೇವಿಯು ಸೌಂದರ್ಯವನ್ನು ತಿರಸ್ಕರಿಸುತ್ತಿರುವ ಈಯುವತಿಯನ್ನು ವರಿಸುವ ಈ ರಾಜಪುತ್ರನ ಪುಣ್ಯವನ್ನು ಏನೆಂದು ಹೇಳೋಣ ' ನಮ್ಮ ದುರ್ಭೀವವನ್ನು ನೂಡಬೇಕು. ಹೀಗೆಂದುಕೊಳ್ಳುತ್ತಿರುವಲ್ಲಿ ಆ ಸುಂದರ ಸುಕುಮಾರಿಯು ತನ್ನ ಕಾಲನೂಪುರದ ಝಣಝಣತ್ಕಾರದಿಂದ ಹೊರಟು, ಆ ಶಶಿಬಿಂದುವಿನ ಬಳಿ ಬಂದು ನಿಂತು ತನ್ನ ಬಲಗೈಯಲ್ಲಿ ಹಿಡಿದಿದ್ದ ಪ್ರೇಮಾಲೆಯನ್ನು ರಾಜಪುತ್ರನ ಕೊರಳಿಗೆ ಹಾಕಿದಳು. ನೆರೆದಿದ್ದ ರಾಜರುಗಳೆಲ್ಲಾ ತಲೆಯನ್ನು ತಗ್ಗಿಸಿಕೊಂಡು, ತಮ್ಮ ತಮ್ಮ ದಾರಿಯನ್ನು ಹಿಡಿದರು. ಬಾರ್ಹಸ್ಪತ್ಯ ಮುತ್ತೈದೆಯರು ಸೋಬಾನೆಯನ್ನು ಹೇಳುತ್ತಿದ್ದರು. ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದವು. ಕೂಡಲೇ ಕಾಶ್ಮೀರದೇಶಾಧಿಪನು ತನ್ನ ಪಟ್ಟಣದಲ್ಲಿ ಅಳಿಯನನ್ನು ಕೂಡಿಸಿ ಮಂಗಳವಾದ್ಯಗಳೊಂದಿಗೆ ಪಟ್ಟಣದಲ್ಲೆಲ್ಲಾ ಮೆರವಣಿಗೆಯಂ ಮಾಡಿಸಿ, ರಾಜಪುತ್ರನನ್ನು ಅವನ ಬಿಡಾರದಲ್ಲಿ ಬಿಟ್ಟು, ಅಲ್ಲಿದ್ದ ಸಂಪೂರ್ಣಚಂದ್ರಿಕೆಗೆ ನಡೆದ ವರ್ತಮಾನವನ್ನೆಲ್ಲಾ ತಿಳಿಸಿ, ಆ ಕನ್ಯಾರತ್ನವನ್ನು ರತ್ನಖಚಿತವಾದ ವಿಮಾನದಲ್ಲಿ ಕೂಡಿಸಿಕೊಂಡು, ತನ್ನ ಕುವರಿಯೊಡನೆ ಕಾರದಾವೇಣಿಯು ಬಳಿಗೆ ಕರೆದುಕೊಂಡು ಹೋಗಿ ಬಿಟ್ಟರು. ಅನಂತರ ರಾಜನು ಆ ಕನ್ನಿಕೆಯರಿಗೂ ಅಳಿಯನಿಗೂ ಮಂಗಳಸ್ನಾನವನ್ನು ಮಾಡಿಸಿ, ಶುಭಲಗ್ನದಲ್ಲಿ ವಿವಾಹಮಹೋತ್ಸವವನ್ನು ಸಂಭ್ರಮದಿಂದ ಬಳೆಯಿಸಿದನು. ಆ ಶಶಿಬಿಂದುವು ತನ್ನ ಸತಿಯರೊಂದಿಗೆ ಕಾಶ್ಮೀರದೇಶದಲ್ಲಿ ಮೂರು ತಿಂಗಳವರೆಗೂ ಸುಖವಾಗಿದ್ದು, ಅನಂತರ ತನ್ನ ಪಟ್ಟಣಕ್ಕೆ ಹೊರಡಲುದ್ಯುಕ್ತನಾಗಿ, ಮಾವ

ನಿಂದ ಕೊಡಲ್ಪಟ್ಟ ವಸ್ತ್ರವಾದನಾವಿ ಚತುರಂಗಬಲವನ್ನೂ, ಅನೇಕ ದಿವ್ಯವಸ್ತ್ರಾಭರಣಗಳನ್ನೂ ಕೊಂಡು, ಮಂತ್ರಿಪುತ್ರನೊಂದಿಗೂ ಸತಿಯು ರಾದ ಸಂಪೂರ್ಣಚಂದ್ರಿಕಾ ಮತ್ತು ಕಾರದಾವೇಣಿಯೊಂದಿಗೂ ಹೊರಟು, ತನ್ನದೇಶವಾದ ವಾರಣಾವತಿಗೆ ಹೋಗುತ್ತಿದ್ದನು, ಸುಪುತ್ರನು ಬರುವವರ್ತಮಾನವು ರಾಜನಾವ ಸೂರ್ಯಬಂಧುವಿಗೆ ತಿಳಿಯಿತು, ಕೂಡಲೆ ರಾಜನು ಪಟ್ಟಣವನ್ನಲಂಕರಿಸಿ, ಚತುರಂಗಬಲಸಮೇತನಾಗಿ, ಸುಪುತ್ರನನ್ನು ಎದುರ್ಗೊಳ್ಳಲೋಸುಗ ಊರಹೊರಗೆ ಮಂಗಳವಾದ್ಯದೊಂದಿಗೆ ಬರುತ್ತಿದ್ದನು. ಆಗ ಕಪಿಬಂದುವು ಇದನ್ನು ನೋಡಿ, ಕೂಡಲೆಯಾಗಿ ತಂದೆಯುಬಳಿಗೆ ಬಂದು, ಜನನೀಜನಕರಿಗೆ ನಮಸ್ಕಾರಮಾಡಿದನು. ಅನಂತರ ಅವನ ಸತಿಯರೂ ನಮಸ್ಕಾರ ಮಾಡಿದರು. ಜನನೀಜನಕರು ಸುಪುತ್ರನನ್ನೂ, ಸೊಸೆಯರನ್ನೂ ಆಲಿಂಗಿಸಿ, ಮುದ್ದಿಟ್ಟುಕೊಂಡು, ಕುಮಾರನೆ; ನೀನೂ ಮಂತ್ರಿಸುತನೂ ಭೂಸಂಚಾರ ಕೌತುಕವರ್ತಮಾನವನ್ನೆಲ್ಲಾ ವಿಶದವಾಗಿ ಹೇಳಬೇಕೆಂದು ಕೇಳಿ, ಅವನಿಂದ ಸಕಲವರ್ತಮಾನವನ್ನೂ, ಸಂಪೂರ್ಣಚಂದ್ರಿಕಾ ಕಾರದಾವೇಣಿಯರ ವಿಷಯವನ್ನೂ, ಭಾಸ್ಕರಮಹರ್ಷಿಯ ಅನುಗ್ರಹವನ್ನೂ ತಿಳಿದು, ಆ ಭಾಸ್ಕರಮಹರ್ಷಿಯನ್ನು ನಾತಾವಿಷ್ಣನಾಗಿ ಕೊಂಡಾಡಿ, ಅನಂತರ ಸುತನನ್ನೂ ಸೊಸೆಯರನ್ನೂ ಪುರಪ್ರವೇಶ ಮಾಡಿಸಿ, ಶುಭಮುಹೂರ್ತದಲ್ಲಿ ಅವರಿಗೆ ವಿವಾಹ ಮಹೋತ್ಸವವನ್ನು ನೆರವೇರಿಸಿ, ರಾಜ್ಯಾಭಿಷೇಕವನ್ನು ಮಾಡಿ ಸಂತೋಷಪಟ್ಟನು. ಆ ಕಪಿಬಿಂದುಮಹಾರಾಯನು ತನ್ನ ಸತಿಯರೊಂದಿಗೆ ಸುಖವಾಗಿ ರಾಜ್ಯಭಾರವನ್ನು ಮಾಡುತ್ತಾ, ಧರ್ಮವನ್ನು ತನ್ನದೇಶದಲ್ಲಿ ನಾಲ್ಕುಪಾದಗಳಿಂದ ನಡೆಯಿಸುತ್ತಾ, ತನ್ನ ಭುಜಬಲದಿಂದ ನವಖಂಡಮಂಡಲಾಧಿಪತಿಯಾಗಿ, ಜನನೀಜನಕರನ್ನೂ, ಯೋಗಿಗಳನ್ನೂ, ಬ್ರಾಹ್ಮಣರನ್ನೂ ಪೂಜಿಸುತ್ತಾ, ಶ್ರೀಲೋಕವಿಖ್ಯಾತನಾಗಿ; ಸಾಮ್ರಾಜ್ಯಸುಖವನ್ನನುಭವಿಸಿ, ಅನಂತರ ಪುಣ್ಯಲೋಕವನ್ನು ಪಡೆದನೆಂದು ಅರ್ಜುನನಿಗೆ ಕೃಷ್ಣನು ಬೋಧಿಸಿದನು. ಆಗ ಅರ್ಜುನನು ಕೃಷ್ಣಸ್ವಾಮಿಯನ್ನು ಕುರಿತು, ಭಗವಂತನೆ; ನಾನು ಭುಂಗವಾಡಿದ ಮತ್ಸ್ಯಯಂತ್ರಕ್ಕಿಂತಲೂ ಈ ಮತ್ಸ್ಯಯಂತ್ರವು ದೊಡ್ಡದೆ? ಎಂದು ಪ್ರಶ್ನೆಮಾಡಿದ ಅರ್ಜುನನನ್ನು ಕುರಿತು ನೀನು ಭುಂಗಿಸಿದ ಎಂತ್ರದ ಮೂರರಷ್ಟು ದೊಡ್ಡದೆನ್ನಲು, ಅರ್ಜುನನು ಭ್ರಾಂತಚಿತ್ತನಾಗಿ ಖಿನ್ನನಾಗಿರುವಲ್ಲಿ ಕೃಷ್ಣನು, ಅರ್ಜುನನ್ನು ಮುಖಷಿಯ ಸಂದರ್ಶನವಿಂದಲೂ, ಆ ಮುನಿಯ ಪರಮಾನುಗ್ರಹದಿಂದಲೂ ಆ ಕಪಿಬಿಂದುವು ಜನಿಸಿದನಲ್ಲವೇ ಎಂದು ಅರ್ಜುನನನ್ನು ಸಮಾಧಾನಮಾಡಿದನು. ಅನಕ್ಕೆ ಅರ್ಜುನನು ಸಂತಸಗೊಂಡು ಕೃಷ್ಣ ಪರಮಾತ್ಮಾ! ಕಣು

ಗಳನ್ನು ನಿದ್ರೆಯು ಮುಚ್ಚುತ್ತಿರುವುದು, ಮಲಗಿ ನಿದ್ರೆಮಾಡೋಣವೆಂದು ನುಡಿಯಲು ಕೃಷ್ಣಾರ್ಜುನರಿಬ್ಬರೂ ಅಲ್ಲಿನ ಮರಳಿನ್ನೆಯ ಮೇಲೆ ಸುಖವಾಗಿ ನಿದ್ರಿಸಿದರೆಂಬಲ್ಲಿಗೆ, ಶ್ರೀ ಕೃಷ್ಣಾಮೋಧಾಮೃತಕಾವ್ಯದಲ್ಲಿ ಎರಡನೇ ಕಥೆಯು ಸಂಪೂರ್ಣಮಾದುದು.

ಮೂರನೆಯ ಕಥೆ.

ಮೂರನೆಯದಿನ ರಾತ್ರೆ ಕೃಷ್ಣಾರ್ಜುನರಿಬ್ಬರೂ ಭೋಜನವಾದನಂತರ ತಾಂಬೂಲವನ್ನು ಸೇವಿಸುತ್ತಾ, ಸುಗಂಧವನ್ನು ಲೇಪಿಸಿಕೊಂಡು, ದಿವ್ಯಕುಸುಮಂಗಳ ಅಂದಚಂದವನ್ನೂ, ಸುವಾಸನೆಯನ್ನೂ ಪಡೆದು ಆನಂದಿಸುತ್ತಾ, ಯಮುನಾನದಿಯ ಮರಳಿಬ್ಬಣ ಮೇಲೆ ಕುಳಿತುಕೊಂಡು, ಸುಖವಾಗಿರುವಾಗ, ಅರ್ಜುನನು ಕೃಷ್ಣಸ್ವಾಮಿಯನ್ನು ಕುರಿತು, ಎಲ್ಲಿ ಕೃಷ್ಣಭಗವಂತನೆ! ನಾವಾನಂದಪ್ರಭಾವವನ್ನು ಒಂದು ವಿಚಿತ್ರವಾದ ಕಥೆಯಮೂಲಕ ನನಿಗೆ ತಿಳಿಯುವಡಿಸಿ ಕೃತಾರ್ಥನನ್ನಾಗಿ ಮಾಡಬೇಕೆನ್ನಲು, ಶ್ರೀಕೃಷ್ಣನು ಕುಂತಿಯ ಕುವರನಾದ ಅರ್ಜುನನೆ; ದೇವರಹಸ್ಯವನ್ನು ನನ್ನಿಂದ ಕೇಳಿ ತಿಳಿದುಕೊಳ್ಳುತ್ತಿರುವ ನಿನ್ನ ಭಾಗ್ಯವೇ ಭಾಗ್ಯವು. ನಿನ್ನಂತಹ ಪುಣ್ಯಮೂರ್ತಿಯನ್ನು ಯಾರು ಇಗುವರು? ನಿರ್ಮಲಚಿತ್ತನಾಗಿ ಪವಿತ್ರನಾದ ಸೂರ್ಯಸೇನಮಹಾರಾಯನ ಚರಿತ್ರೆಯನ್ನು ಕೇಳೆಂದು ಉಪಕ್ರಮಿಸಿದನು.

ಕೇಳೈ ಅರ್ಜುನಾ! ಪೂರ್ವದಲ್ಲಿ ಅಂಧ್ರದೇಶವನ್ನು ಪರಿಪಾಲಿಸುತ್ತಿದ್ದ ಚಂದ್ರಸೇನನೆಂಬ ಮಹಾರಾಯನಿಗೆ ಸೂರ್ಯಕಾಂತಿಯನ್ನು ಅಲಿಗಳೆಯುತ್ತಲಿದ್ದ ಸುಂದರಾಕಾರನಾದ ಸುಪುತ್ರನೋರ್ವನು ಜನಿಸಿದನು, ರಾಜನು ಇವನ ತೇಜಸ್ಸನ್ನು ನೋಡಿ, ಮಗನಿಗೆ ಸೂರ್ಯಸೇನನೆಂದು ನಾಮಕರಣವಂ ಮಾಡಿದನು. ತಂದೆಯು ಈ ಮಗನಿಗೆ ಜಾತಕರ್ಮಾದಿ ಸಂಸ್ಕಾರಗಳನ್ನೆಲ್ಲಾ ಮಾಡಿಸಿ, ಸತ್ಪಾತ್ರರಿಗೆಲ್ಲಾ ಕೋಟಿಸತ್ಕಾರವಾಗಿ ದಾನಧರ್ಮಗಳನ್ನು ಮಾಡುತ್ತಾ ಸಂತೋಷದಿಂದ ಐದು ಸಂವತ್ಸರಗಳವರೆಗೂ ಕಾಪಾಡಿದನು, ಅನಂತರ ಕುವರನನ್ನು ವಿದ್ಯಾಭ್ಯಾಸಕ್ಕೆ ಬಿಟ್ಟು ಸಕಲವಿದ್ಯೆಗಳಲ್ಲಿಯೂ ಪರಿಣತನನ್ನಾಗಿ ಮಾಡಿದನು. ಸುಪುತ್ರನಾದರೊ, ಸಕಲವಿದ್ಯೆಗಳನ್ನೂ ಕಲಿತು ಧನುರ್ವಿದ್ಯೆಯಲ್ಲಿಯೂ, ಅಸ್ತ್ರಶಸ್ತ್ರಗಳಲ್ಲಿಯೂ ನಿಸ್ಸೀಮನೆನಿಸಿಕೊಂಡನು. ರಾಜಪುತ್ರನಾದ ಸೂರ್ಯಸೇನನು ಪ್ರತ್ಯಹವು ಯಸ್ಕನಾಗಿ ದಿನಂಪ್ರತಿಯೂ ಪಂಚಕಲ್ಯಾಣಿಯಾದ ಕುದುರೆಯನ್ನೇರಿ ಸಾಯಂಕಾಲದವೇಳೆ ಊರಹೊರಗೆ ಸುತ್ತುತ್ತಾ ಇರಲು, ಒಂದಾನೊಂದುದಿನ ಈ ಸೂರ್ಯದತ್ತನು ಸಾಯಂಕಾಲ ಕುದುರೆ ಸವಾರಿ ಮಾಡಿಕೊಂಡು ಹೊರಗುತಿರುವ ಕಾಲದಲ್ಲಿ ಬ್ಲೂ ವುರುಷನೊಬ್ಬನು. ಭಾಷೆಯಾಗದುಕೊಳ್ಳಲು

ತ್ತಾ, ಅಯಯ್ಯೋ! ವಿನಂಪ್ರತಿ ನನ್ನ ಜೀರಣಿಯನ್ನೆಲ್ಲಾ ಕುದುರೆಯಿಂದ ತುಳಿಸಿ ಪುಡಿಮಾಡುತ್ತಿರುವವನು ನೀನೇನೋ ಎಂದು ಅಗಚಿಕೊಳ್ಳುತ್ತಾ ಹಿಂಬಾಲಿಸಿ ಬರುತ್ತಿದ್ದಳು. ರಾಜಪುತ್ರನು ಈ ಗದ್ದಲವನ್ನು ಕೇಳಿ ಕೂಡಲೇ ಕುದುರೆಯನ್ನು ನಿಲ್ಲಿಸಿ, ಅಳುತಾ ತಾಹತ್ತಿರಕ್ಕೆ ಬರುತ್ತಿರುವ ಆ ಮುದುಕಿಯನ್ನು ಕುರಿತು ನೀನು ಅಳುತಾ ಬರುವುದು ನಿತಕ್ಕೆಂದು ಕೇಳಲು ಆ ಮುದುಕಿಯು ಹೇಳುತಾ ತಾಳೆ.

ಅಯ್ಯಾ! ನಾನು ಬಿಕ್ಕಿಲ್ಲದ ಮುದುಕಿಯು, ಸಗಣಿಯನ್ನು ಕೂಡಿಟ್ಟು ಈ ದಾರಿಯಲ್ಲಿ ಅದನ್ನು ತಟ್ಟಿ, ಬಣಗಿದ ಮೇಲೆ ಅದನ್ನು ಮಾರಿ ಜೀವನ ಮಾಡಿಕೊಂಡಿರುವಳು. ನಿನ್ನ ಕುದುರೆಯು ತುಳಿದು ತುಳಿದು. ನನ್ನ ಜೀರಣಿಯನ್ನೆಲ್ಲಾ ಹಾಳುಮಾಡಿ, ನನ್ನ ಜೀವನಕ್ಕೆ ಅಡ್ಡಿಮಾಡುತ್ತಿರುವುದು ನಿನ್ನ ಪೌರುಷವೂ ನಿನ್ನ ಕುದುರೆಯ ಪೌರುಷವೂ ಮುದುಕಿಯಾದ ನನ್ನ ಜೀರಣಿಯಮೇಲೆ ಬೀಳುವುದಕ್ಕಿಂತ ಆ ನಿಮ್ಮುಕನ ಕಾಮಣಿಯಮೇಲೆ ಬಿದ್ದರೆ ಏನಾದರೂ ಫಲವಾಗುತ್ತಿತ್ತು, ಹೀಗೆಂದು ನುಡಿದಳು. ರಾಜಕುವರನು ಆ ಮುದುಕಿಯನ್ನು ಕುರಿತು ನೀನು ಅಳಬೇಡ, ನಿನ್ನ ಜೀವನಕ್ಕೆ ಕೊರತೆಯಿಲ್ಲದಷ್ಟು ಧನವನ್ನು ಕೊಡುವೆನೆಂದು ಸಂತೈಸಿ, ಆ ನಿಮ್ಮುಕನ್ನಕೆಯ ವರ್ತಮಾನವೇನೆಂದು ಕೇಳಲು ಆ ಮುದುಕಿಯು ರಾಜಪುತ್ರನೇ ಕೇಳು, ನಾನು ಬಣಗಿದ ಸೌದೆಯನ್ನು ಆರಿಸಿಕೊಂಡು ಬರಲು ಕಾಡಿಗೆ ಹೋಗಿದ್ದೆನು. ಅಲ್ಲಿ ದೊಡ್ಡದಾಗಿ ಬೆಳಕು ಕಾಣಿಸದಕೂಡಲೇ ನಾನು ಒಂದು ಪೊದೆಯಲ್ಲಿ ಹೋಗಿ ಅಡಗಿಕೊಂಡೆನು, ಅಲ್ಲಿಗೆ ಇಪ್ಪತ್ತುಜನ ಸಿದ್ಧರು ಬಂದು ಕುಳಿತುಕೊಂಡು ಗುಡಗುಡಿ ಸೇದುತ್ತಿರುವಲ್ಲಿ, ಒಬ್ಬ ಸಿದ್ಧನು ಮತ್ತೊಬ್ಬನನ್ನು ನೋಡಿ, ಪ್ರಪಂಚದಲ್ಲಿ ಆ ನಿಮ್ಮುಕನ್ನಿಕೆಗಿಂತಲೂ ಸುಂದರಿಯು ಬೇರೊಬ್ಬರೂ ಇಲ್ಲವೆಂದನು. ಆ ಕನ್ನಿಕೆಯನ್ನು ನಾನುಕಂಡಿರುವೆನೆಂದೂ, ಆ ಕನ್ನಿಕೆಯು ಸೂರ್ಯನ ವರದಿಂದ ಆ ನಾಗರಾಜನ ಪುತ್ರಿಯಾಗಿ ಹುಟ್ಟಿ, ಪೂರ್ವಸಮುದ್ರದ ಆಚೆ ದಡದಲ್ಲಿರುವ ಒಂದಾನೊಂದು ಸರೋವರದಲ್ಲಿರುವ ನಿಮ್ಮುವ್ವಕ್ಷದ ಕೊರಿನಲ್ಲಿರುವಳೆನ್ನಲು, ಆ ಸಿದ್ಧನು ಹೌದು ಹೌದು ಎಂದು ನುಡಿದನು. ಅನಂತರ ಅವರಿಬ್ಬರೂ ಮಾಯವಾದರು. ಆ ಬಳಿಕ ನಾನು ಸೌದೆಯನ್ನು ಆರಿಸಿಕೊಂಡು ಮನೆಗೆ ಬಂದೆನು, ಇದೇ ಆ ಕನ್ನಿಕೆಯ ವೃತ್ತಾಂತವೆಂದು ನುಡಿದಳು. ರಾಜಪುತ್ರನು ಅತ್ಯಾಶ್ಚರ್ಯಪಟ್ಟು ಆ ಮುದುಕಿಗೆ ಒಂದು ನೂರ್ಸ್ವರಹಗಳನ್ನು ಕೊಟ್ಟು ಅನಂತರ ತನ್ನ ಬಿಡಾರಕ್ಕೆ ಕೊರಟುಹೋದನು. ರಾಜಪುತ್ರನ ಮನಸ್ಸಿನಲ್ಲಿ ಏನಾದರೂ ಮಾಡಿ ಆ ಸುಂದರಿಯನ್ನು ವರಿಸಬೇಕೆಂದು ಆಸೆಹತ್ತಿ, ತನ್ನ ಮನಸ್ಸಿನಲ್ಲಿಯೇ ಕಳವಳಪಡುತ್ತಿದ್ದನು. ಸೂರ್ಯಸೇನನು ಈ

ರೀತಿ ಖಿನ್ನನಾಗಿರುವುದನ್ನು ಇವನ ಸ್ನೇಹಿತನೊಬ್ಬನು ನೋಡಿ, ನಿನ್ನ ದುಃಖಕ್ಕೆ ಕಾರಣವೇನೆಂದು ಕೇಳಿದನು, ಆ ಸ್ನೇಹಿತನು ರಾಜಪುತ್ರನ ದುಃಖಕ್ಕೆ ಕಾರಣವನ್ನು ತಿಳಿದು, ರಾಜಪುತ್ರನೇ ! ನೀನು ದುಃಖಪಡಬೇಡ, ಆ ಸುಂದರಾಂಗಿಯು ಲಭ್ಯವಾಗುವಂತೆ ನಾನು ಉಪಾಯಮಾಡುವೆನೆಂದು ಆ ಸ್ನೇಹಿತನು ನುಡಿದನು. ಪೂರ್ವಸಮುದ್ರದ ಆಚೆದಡದಲ್ಲಿರುವ ಆ ಕನ್ನಿಕೆಯನ್ನು ತರುವುದು ಹೇಗೆಂದು ಚಿಂತಿಸುವ ರಾಜಪುತ್ರನನ್ನು ಆ ಸ್ನೇಹಿತನು ಸಮಾಧಾನ ಮಾಡಿ, ನಾನು ಇದಕ್ಕೆ ತಕ್ಕಯುಕ್ತಿಯನ್ನು ಹುಡುಕುವೆನೆಂದು ಹೇಳಿ, ಒಂದಾನೊಂದು ಕೀಲುಕುದುರೆಯನ್ನು ನಿರ್ಮಿಸಿ, ರಾಜಪುತ್ರನಿಗೆ ಇದರ ಸಮಾಚಾರವನ್ನೆಲ್ಲಾ ವಿಶದಪಡಿಸಿ, ಕಾರ್ಯಾನುಕೂಲ ಮಾಡಿಕೊಂಡು ಬರೋಣ ಹೊರಡೆನ್ನಲು, ಆ ಸೂರ್ಯಸೇನನು ಸಂತೋಷದಿಂದ ಅನೇಕ ಧನ ವಸ್ತ್ರಾಭರಣಗಳನ್ನು ತೆಗೆದುಕೊಂಡು, ಆಯುಧಸಮೇತನಾಗಿ, ತಾಯಿತಂದೆಗಳಿಗೆ ತಿಳಿಸದೆ ಅರ್ಧರಾತ್ರಿಯಲ್ಲಿ ಆ ಸ್ನೇಹಿತನನ್ನು ಕರೆದುಕೊಂಡು ಅಶ್ವಾರೂಢನಾಗಿ ಪೂರ್ವದಿಕ್ಕಿಗೆ ಪ್ರಯಾಣ ಮಾಡುತ್ತಿದ್ದನು. ಬೆಳಗ್ಗೆ ಎದ್ದಮೇಲೆ ತಾಯಿತಂದೆಗಳು ಪುತ್ರನನ್ನು ಕಾಣದೆ ದುಃಖಿಸುತ್ತಿದ್ದರು. ದಿಕ್ಕುದಿಕ್ಕುಗಳಿಗೆಲ್ಲಾ ಆ ಸೂರ್ಯಸೇನಮಹಾರಾಯನನ್ನು ಹುಡುಕಿಕೊಂಡು ಬರಲು ದೂತರನ್ನು ಅಟ್ಟಿದನು ಸೂರ್ಯಸೇನನೂ ಅವನ ಸ್ನೇಹಿತನೂ ಆ ಕೀಲುಕುದುರೆಯ ಮೇಲೆ ಕುಳಿತುಕೊಂಡು, ಬಹುದೂರ ಹೋಗುತ್ತಿರುವಲ್ಲಿ ಬೌದ್ಧಮುನಿಯು ಆಶ್ರಮವು ಸಿಕ್ಕಿತು. ಆ ಋಷಿಯ ಪ್ರಭಾವದಿಂದ ಆ ಕೀಲುಕುದುರೆಯ ಕೀಲುಗಳು ಮುರಿದು, ಕುದುರೆಯೂ ರಾಜಪುತ್ರನೂ ಮೂರ್ಛಾಕಾಂತರಾದರು. ಆ ಮುನಿಯ ಶಿಷ್ಯರು ಇದನ್ನು ಕಂಡು ಶೀಘ್ರದಲ್ಲಿ ಬಂದು ಶೈತ್ಯೋಪಚಾರಗಳನ್ನು ಮಾಡಿದ ಬಳಿಕ ರಾಜಪುತ್ರನು ಮೂರ್ಛೆಯಿಂದ ಎಚ್ಚೆತ್ತನು. ಆ ಬಳಿಕ ಆ ಮುನಿಯ ಶಿಷ್ಯರು, ಎಲೈ ರಾಜಪುತ್ರನೆ; ಇದು ಬೌದ್ಧಮುನಿಯೆ ಆಶ್ರಮವು. ದೇವದಾನವ ಯಕ್ಷಗಂಧರ್ವರೂ ಕೂಡ ಈ ಕಡೆ ತಿರುಗಲಸಾಧ್ಯವು. ಹೀಗಿರುವಲ್ಲಿ ನೀನು ಏತಕ್ಕೆ ಬಂದೆ? ಈ ಕೀಲುಕುದುರೆಯನ್ನು ಹತ್ತಿ ಬರಲಾದೀತೆ! ಎಂದು ಕೇಳಲು, ಸೂರ್ಯಸೇನಮಹಾರಾಯನು ಆ ಬೌದ್ಧಮಹರ್ಷಿಯ ಪ್ರಭಾವವನ್ನು ಕೇಳಿ, ಆಶ್ಚರ್ಯವನ್ನು ಹೊಂದಿ, ಆ ಕೀಲುಕುದುರೆಯನ್ನು ಅಲ್ಲಿಯೇಬಿಟ್ಟು, ತಾನು ಆ ಶಿಷ್ಯರಿಗೆ ನಮಸ್ಕಾರಮಾಡಿ. ಅನಂತರ ಆ ಬೌದ್ಧಮಹರ್ಷಿಯ ಸನ್ನಿಧಾನಕ್ಕೆ ಹೋಗಿ, ಆ ಮಹಾಮುನಿಯ ಪಾದಾರವಿಂದಗಳಿಗೆ ಅಡ್ಡಬಿದ್ದು, ಆ ಬೌದ್ಧಮಹಾಮುನಿಯನ್ನು ಕುರಿತು, ಮಹಾನುಭಾವನೆ ! ಆ ನಿಮ್ಮ ಕನ್ನೆಯು ನನಗೆ ಹೇಗೆ ಲಭಿಸಿಬಿಯಾಳೆಂದು, ತಾನು ಬಂದ ವರ್ತಮಾನವನ್ನೆಲ್ಲಾ ಅರಿಕೆಮಾಡಿ

ಕೊಂಡನು. ಆ ಮುನಿಯು ರಾಜಕುಮಾರನನ್ನು ಆದರಿಸಿ, ಎಲೈ ರಾಜಾ ತ್ಮಜಾ ! ಆ ನಮ್ಮ ಕನ್ಯೆಯು ನಿನಗೆ ಲಭಿಸುವಂತೆ ಮಾಡಲು ನನಿಗೆ ಅಸಾ ಧ್ಯವು. ನೀನು ಇಂತಹ ಅಲ್ಪಸುಖಕ್ಕೆ ಏತಕ್ಕೆ ಆಸೆಪಟ್ಟೆ ! ಸ್ತ್ರೀವಾ ಮೋಹಕ್ಕೊಳಗಾಗುವೆ? ಕೆಟ್ಟವರು ಅನೇಕರು ಇರುವರೆಂದು ನಿನಗೆ ಗೊ ತ್ತಿಲ್ಲವೋ ? ಅಯ್ಯಯ್ಯೋ ! ನೀನು ಈತೆರನಾದ ಅಲ್ಪಸುಖದಆಸೆಯೆನ್ನು ಬಿಟ್ಟುಬಿಡು. ನಿನಗೆ ಶಾಶ್ವತವಾದ ಸುಖವನ್ನು ಕೊಡುವ ಮತ್ತು ಪುಣ್ಯ ಪುರುಷರು ಅನುಸರಿಸತಕ್ಕ ಸುಖಾನಂದನಾದಾನಂದವೆಂಬ ವೇದರಹಸ್ಯ ವನ್ನು ನಿನಗೆ ಬೋಧಿಸುವೆನೆಂದನು. ಮುಪರ್ಜಿಯು ಈತೆರನಾದ ಬೋ ಧನೆಯಿಂದ ಆ ಸೂರ್ಯಸೇನಮಹಾರಾಯನಿಗೆ ಆ ನಿಮ್ಮ ಕನ್ಯೆಯುಮೇಲೂ, ರಾಜ್ಯದಮೇಲೂ, ಅತ್ಯಧಿಕವಾದ ಐಶ್ವರ್ಯದಮೇಲೂ ಮಮತೆಯು ತಪ್ಪಿ ಹೋಯಿತು. ರಾಜಪುತ್ರನು ಅಲ್ಲಿಯೇ ನಿಂತು ಋಷಿಸೇವೆಯನ್ನು ಮಾ ಡುತ್ತಾ, ಅತ್ಯಧಿಕವಾದ ವೈರಾಗ್ಯದಿಂದ ಇರುತ್ತಿರುವಲ್ಲಿ, ಒಂದಾನೊಂ ದುದಿನ ಬೌದ್ಧಮಹಾಮುನಿಯೆನ್ನು ಕುರಿತು, ಮಹಾನುಭಾವನೆ ! ಶಾಶ್ವ ತಸುಖಾನಂದವಾದ ಮುಕ್ತಿಮಾರ್ಗವನ್ನು ನನಿಗೆ ಬೋಧಿಸಿ, ಕೃತಾರ್ಥ ನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳಲು, ಆ ಮಹಾನುಭಾವನು ರಾಜ ಪುತ್ರನ ವೈರಾಗ್ಯಬುದ್ಧಿಯನ್ನು ನೋಡಿ ಇಂತೆಂದನು.

ಬೌದ್ಧಮುನಿಯು ಸೂರ್ಯಸೇನಮಹಾರಾಜನನ್ನು ಕುರಿತು ಬೋ ಧಿಸಿದ ನಾದಾನಂದಪ್ರಭಾವವು.

ರಾಜಪುತ್ರನೇ ಕೇಳು ! ಈಗ ನೀನು ಬಹಳ ವೈರಾಗ್ಯಪುರುಷನಾ ಗಿರುತ್ತೀ. ನ್ಯಸ್ಥಚಿತ್ತದಿಂದ ನಾನು ಈಗ ಬೋಧಿಸುವ ರಹಸ್ಯವನ್ನು ಕೇಳು. ಬುದ್ಧಿಶಾಲಿಗಳಾದ ದೇವತೆಗಳೂ, ಮನುಷ್ಯರೂ, ಸದಾ ನಂ ತೋಷಪಡಬಹುದಾದ ನಾದಾನಂದ ಪ್ರಭಾವವನ್ನು ಬುದ್ಧಿಹೀನರು ತಿಳಿ ಯದೆ, ಅಲ್ಪಸುಖವಾದ ಸ್ತ್ರೀಸುಖವೇ ಬಲು ದೊಡ್ಡದೆಂದು ಭಾವಿಸಿ, ಶರೀ ರಭಂಗವೇ ಮೊದಲಾದ ಸಕಲಸಂಕಟಗಳಿಗೆ ಒಳಗಾಗುತ್ತಾರೆ. ತ್ರಿಮೂ ರ್ತಿಗಳಿಂದಲೂ ಹೊಗಳಿಸಿಕೊಳ್ಳತಕ್ಕ ನಾದಾನಂದಪ್ರಭಾವವನ್ನು ದೇವ ತೆಗಳೂ, ಋಷಿಗಳೂ ತಿಳಿದು ಅತ್ಯಂತ ಸುಖವನ್ನು ಮುಕ್ತಿಯನ್ನೂ ಅನು ಭವಿಸುತ್ತಿರುವರು. ಇಂತಹ ನಿತ್ಯಾನಂದದಾಯಕವಾದ ನಾದಾನಂದ ಪ್ರಭಾವವನ್ನು ನಿನಗೆ ಬೋಧಿಸುವೆನೆಂದು ಹೇಳಿ ಆ ಸೂರ್ಯಸೇನಮಹಾ ರಾಜನನ್ನು ಹತ್ತಿರ ಕುಳ್ಳಿರಿಸಿಕೊಂಡು, ನಿರ್ಮಲಚಿತ್ತವನ್ನು ಪಡೆದಿರುವ ಸೂರ್ಯಸೇನನೆ ! ಓಂ, ಹ್ರೀಂ, ಶ್ರೀಂ, ಹರಿ, ಸಂ ಎಂಬ ಈ ಹಂಸಪಂ ಚಾಕ್ಷರಿ ಮಂತ್ರವನ್ನು ತಿಳಿದುಕೊಳ್ಳೆಂದು ತನ್ನ ಎರಡು ಬೆರಳುಗಳಿಂದ ಅವನ ಕಿವಿಗಳನ್ನು ಮುಚ್ಚಿ, ಜಲಧಿಘೋಷ, ಭ್ರಮರನಾದ, ಭೇರೀ

ನಾದ, ಮೃದಂಗನಾದ, ಕಿಂಕಿಣೀನಾದ, ತಾಳನಾದ, ಶಂಖನಾದ, ಕಹಳ ನಾದ, ಘಂಟಾನಾದ, ವೇಣುನಾದಗಳೆಂಬ ಈ ಹತ್ತುವಿಧನಾದ ನಾದ ಗಳೂ ನಿನ್ನಲ್ಲಿ ಅಡಗಿವೆ. ಅವು ಅಡಗಿರೋಣದರಿಂದ ನಿನಗೆ ಸುಖನಿಲ್ಲ ವಾಗಿದೆ. ಕೆಲವರು ಕಿವಿಯನ್ನು ಚೆರಳಿನಿಂದ ಮುಚ್ಚಿಕೊಂಡು ನಾದವು ಕೇಳದಂತೆ ಇರುತ್ತಾರೆ, ಅದರಿಂದಲೂ ಸುಖವಿಲ್ಲವು, ಇಡಾಪಿಂಗಳನಾಡಿ ಗಳಲ್ಲಿ ಸಂಚರಿಸುತ್ತಾ ಇರುವ ಹಂಸವನ್ನೂ, ಅದರ ಸಂಚಾರ ಮಾರ್ಗ ವನ್ನೂ ಅಡಗಿಸಿ, ಬೇರೆ ಮಾರ್ಗವನ್ನು ರೇಚಕಪೂರ್ವಕವಾಗಿ ಮಾಡಿ, ಕುಂಭವಾಗಿಯೂ, ಪೂರ್ವಕದಿಂದ, ತುಳಿಯುತ್ತಲಿರುವ ಸರ್ಪದಂತೆ ಅಲ್ಲಿ ಅಣಗಿಕೊಂಡಿರತಕ್ಕ ದಶವಿಧ ನಾದಗಳನ್ನೂ ಕವಿಯ ರಂಧ್ರಗಳಿಂದ ಹೊರಗಡೆಗೆ ಬಂದು, ಝೇಂಕರಿಸಿ ಕಬ್ಬವಾಗುವಂತೆ ತೋರುವುದು ಅಂ ತಹ ನಾದಬ್ರಹ್ಮದಲ್ಲಿಮನಸ್ಸನ್ನಿಟ್ಟು, ಕಣ್ಣುಗಳನ್ನು ಮುಚ್ಚಿಕೊಂಡು, ಹುಬ್ಬುಗಳ ಮಧ್ಯದಲ್ಲಿ ದೃಷ್ಟಿಯಾನ್ನು ನಿಲ್ಲಿಸಿಕೊಂಡು ನೋಡಿ, ಸಂತೋ ಷಪಟ್ಟು ಹೇಳೆಂದು ಬೋಧಿಸಿದನು. ರಾಜಪುತ್ರನು ಗುರುಬೋಧನೆ ಯಂತೆ ಪಂಸಪಂಚಾಕ್ಷರೀ ಮಂತ್ರವನ್ನು ಮನದಲ್ಲಿ ಧ್ಯಾನಿಸುತ್ತಾ, ಪೆ ಚ್ಚಾದ ವೈರಾಗ್ಯಬುದ್ಧಿಯಿಂದ ಕುಳಿತು, ಊರ್ಧ್ವಕುಂಡಲಿಯವರೆಗೂ ಪೂರಿಸಿ, ಚಿರ್ಜನೆರೇಚಿಸಿ, ಜಪಕುಂಡಲಿಯನ್ನು ಭೇದಿಸಿ, ಸರ್ಪದಂತೆ ಅಣ ಗುವಹಾಗೆ ಅಭ್ಯಾಸ ಮಾಡುತ್ತಾ, ನಾದಬ್ರಹ್ಮದಂತೆ ಝೇಂಕರಿಸುತ್ತ ಕಬ್ಬವಾಗುವುದನ್ನು ಕೇಳಿ, ಆನಂದವನ್ನು ತಡೆಯಲಾರದೆ, ದಿಗ್ಭ್ರಮೆಯಿಂ ದ ಕೂಡಿ, ಆ ಮುನೀಂದ್ರನ ಪಾದಗಳಿಗೆ ನಮಸ್ಕಾರ ಮಾಡಿ, ಎಲ್ಲೆ ಮ ಹಾನುಭಾವನೇ, ನಾದಾನಂದಸುಖವನ್ನು ವರ್ಣಿಸಲು ಸಾಧ್ಯವಲ್ಲವು. ಧ್ಯಾ ನದಲ್ಲಿಯೂ, ಕುಳಿತಿರುವಾಗಲೂ, ನಿಂತಿರುವಾಗಲೂ, ಗಮನಿಸುತ್ತಿರುವ ಕಾಲದೊಳಗೂ, ಯಾವಾಗಲೂ, ಸರ್ವಾವಸ್ಥೆಗಳಲ್ಲಿಯೂ ನಾದಾನಂದ ಸುಖದಿಂದ ಮಗ್ನನಾಗಿರುತ್ತೇನೆ. ಅಂತಹ ವಾದ್ಯವಿಶೇಷಗಳನ್ನು ನಾನು ಯಾವಾಗಲೂ ಕಂಡೂ ಇಲ್ಲ, ಕೇಳಿಯೂ ನೋಡಿಯೂ ಇಲ್ಲವು ನನ್ನ ಭಾಗ್ಯವಶದಿಂದ ದೇವ ವಾದ್ಯಗಳನ್ನೆಲ್ಲಾ ಕೇಳುವಂತೆ ಆಯಿತು ಹೀಗೆಂ ದು ಕೇಳುತ್ತಾ ಋಷಿವರ್ಯನ ಪಾದಗಳಿಗೆ ಅಡ್ಡಬಿದ್ದು, ಅಲ್ಲಿಯೇ ಶಿಕ್ಷಾ ಷೆಯನ್ನು ಮಾಡುತ್ತಿದ್ದನೆಂದು ಹೇಳುವ ಶ್ರೀ ಕೃಷ್ಣಸ್ವಾಮಿಯೆ ಮಾತು ಗಳನ್ನು ಕೇಳುತ್ತಿರುವ ಅರ್ಜುನನು, ಮಹಾನುಭಾವನೆ! ದೇವಾದಿವಂದಿ ತನೆ! ನೀನು ಕನಿಕರವಿಟ್ಟು ನನಿಗೆ ಈ ನಾದಾನಂದಪ್ರಭಾವವನ್ನು ಬೋ ಧಿಸಿದ್ದರಿಂದ ಕೃತಾರ್ಥನಾದೆನು. ಅದರ ಮರ್ಮಗಳನ್ನೆಲ್ಲಾನನಿಗೆ ಬೋ ಧಿಸಿ ದಶವಿಧನಾದಗಳೂ ನನ್ನಲ್ಲಿಯೇ ಇರುವುದೆಂದು ನಾನು ಕೇಳಿಯೇ ಇರಲಿಲ್ಲ. ನಿನ್ನದಯೆಯಿಂದ ಇಂದು ತಿಳಿದುಕೊಂಡೆನು. ಮಹಾನು

ಭಾವನೆ ! ಆ ಸೂರ್ಯದತ್ತಮಹಾರಾಯನ ಮುಂದಿನಕಥೆಯನ್ನು ವಿಸ್ತರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಜೀಕಂದು ಕೇಳಿಕೊಳ್ಳುತ್ತಿರುವ ಅರ್ಜುನನನ್ನು ಕುರಿತು ಶ್ರೀಕೃಷ್ಣನಿಂತೆಂದನು.

ಕೇಳೈ ಅರ್ಜುನಾ! ಆ ಬಾಂದ್ಧಮಹರ್ಷಿಯು ಸೂರ್ಯಸೇನನನ್ನು ಕುರಿತು, ರಾಜಪುತ್ರನೇ ! ನೀನು ಅತ್ಯಂತವೈರಾಗ್ಯದಿಂದ ನಾದಬ್ರಹ್ಮವನ್ನು ಹೊರಗೆ ತೆಗೆಯುತ್ತಿರುವೆಯಾಗಿ ನಿನಗೆ ದೇವದರ್ಶನವಾಗುತ್ತಲ್ಲದೆ ನಿನ್ನ ಸಕಲ ಇಷ್ಟಾರ್ಥಗಳೂ ಈಡೇರುವವು. ನಿನಗೆ ಈರೀತಿ ಕರುಣಿಸಿರುವೆನೆಂದು ಹೇಳಿದ ಮುನಿಯ ವಚನವನ್ನು ಕೇಳಿ, ಸಂತೋಷಭರಿತನಾಗಿ, ಆ ಮುನೀಂದ್ರನಿಗೆ ನಮಸ್ಕಾರಮಾಡಿ, ವಿಧವಿಧವಾದ ಶಿಕ್ಷೆಗಳನ್ನು ಮಾಡುತ್ತಾ, ಫಲಕಾಷ್ಠಾದಿಗಳನ್ನು ದಿನಂಪ್ರತಿಯಲ್ಲಿಯೂ ತಂದ ಕೊಡುತ್ತಿದ್ದನು. ಹೀಗಿರುವಲ್ಲಿ ಒಂದಾನೊಂದು ದಿನ ಬಾಯಾರಿ ಹೊರಟುಹೋದನು. ಅಲ್ಲಿ ಒಂದು ದೊಡ್ಡತಲದಮರವಿತ್ತು, ಆಹಾ ! ಇದನ್ನು ನೋಡಿದರೆ ದೇವವೃಕ್ಷದಂತೆ ಕಾಣುವುದು. ಸ್ವಲ್ಪಹೊತ್ತು ಇದರ ಬುಡದಲ್ಲಿ ಕುಳಿತು ವಿಶ್ರಮಿಸಿಕೊಳ್ಳುತೀಕೆಂದು ಆ ಮರದಡಿಯಲ್ಲಿ ಹೋಗಿ ವಿಶ್ರಮಿಸಿಕೊಂಡನು. ಸ್ವಲ್ಪಹೊತ್ತಾದಬಳಿಕ ಆ ಮರದ ಮೇಲ್ಗಡೆ ಬಹು ದೊಡ್ಡದಾಗಿ ಪಕ್ಷಿಗಳ ರೋದನವು ಕೇಳಿಬಿತು. ರಾಜಪುತ್ರನು ಥಗ್ಗನೆ ಮೇಲಕ್ಕೆದ್ದು ಕುಳಿತುಕೊಂಡು ನಾಲ್ಕುಕಡೆಯೂ ನೋಡಿದನು. ಏನೂ ಕಾಣಲಿಲ್ಲ. ಮರದಮೇಲ್ಗಡೆ ನೋಡಲು ಅಲ್ಲಿ ಒಂದು ದೊಡ್ಡಸರ್ಪವು ಬೇಗಬೇಗನೆ ಹೋಗುತ್ತಿದ್ದುದನ್ನು ನೋಡಿದನು. ರಾಜಪುತ್ರನಿಗೆ ಬಹಳ ಭಯವಾಯಿತು, ಪುನಃ ರಾಜಪುತ್ರನು ಧೈರ್ಯವನ್ನು ತಂದುಕೊಂಡು, ಓಹೋ ! ನಾನು ಕ್ಷತ್ರಿಯನಾಗಿ ಹೀಗೆ ಭಯಪಡಬಹುದೆ ? ಈ ಘೋರಸರ್ಪವು ಮರದ ಮೇಲಕ್ಕೆ ಹೋಗಿ ಅಲ್ಲಿರುವ ಪಕ್ಷಿಯ ಮರಿಗಳನ್ನು ನುಂಗುವಂತೆ ತೋರುವುದು. ಇದರಿಂದಲೇ ಆ ಪಕ್ಷಿಯ ಮರಿಗಳ ರೋದನ ಧ್ವನಿಯು ಕೇಳಿಬರುತ್ತಿರುವುದು, ನಾನು ಈಗ ಈ ಸರ್ಪವನ್ನು ಕೊಂದು ಪಕ್ಷಿಯ ಮರಿಗಳನ್ನು ಬದುಕಿಸುವುದು ಧರ್ಮವೆಂದು ಯೋಚಿಸಿದವನಾಗಿ, ತನ್ನ ಬಳಿಯಿದ್ದ ಚಂದ್ರಾಯುಧದಿಂದ ಆ ಘೋರಸರ್ಪವನ್ನು ಹೊಡೆದನು. ಆ ಚಂದ್ರಾಯುಧದ ಏಟು ಆ ಸರ್ಪದ ಕತ್ತಿಗೆ ಬಿದ್ದಕೂಡಲೇ ಕಂಠವು ಛೇದಿಸಿಹೋಯಿತು. ಒಳಗಡೆಯಿಂದ ಹೊರಟುಬರುತ್ತಿರುವ ವಿಷಸಂಬಂಧವಾದ ರಕ್ತಧಾರೆಗಳು ದಿಕ್ಕುದಿಕ್ಕುಗಳಿಗೂ ವ್ಯಾಪಿಸಿದವು. ರಾಜಪುತ್ರನ ಮೈಮೇಲೆಲ್ಲ ರಕ್ತದ ಬಟ್ಟೆಗಳು ಬಿದ್ದವು. ರಾಜಪುತ್ರನಾದರೋ, ಪತ್ತಿರದಲ್ಲಿದ್ದ ಒಂದುನೀರಿನಕುಂಟಿಗೆ ಹೋಗಿ, ಅಲ್ಲಿ ಸ್ನಾನಮಾಡಿ, ದಾಹವನ್ನು [illegible]

ಯಲ್ಲಿಯೂ ಬಿದ್ದಿದ್ದವು. ರಾಜಪುತ್ರನ ಶರೀರದೊಳಕ್ಕೆ ವ್ಯಾಪಿಸಿದವು. ಕೂಡಲೇ ರಾಜಪುತ್ರನು ಮೂರ್ಛಾಕಾಂತನಾಗಿ ದಡದಲ್ಲಿ ಬಿದ್ದು ಪ್ರಾಣಬಿಟ್ಟನು. ಇದನ್ನೆಲ್ಲಾ ಆಲದಮರದ ಮೇಲಿದ್ದ ಪಕ್ಷಿಯಮರಿಗಳು ನೋಡುತ್ತಿದ್ದವು, ರಾಜಪುತ್ರನ ದುರವಸ್ಥೆಯನ್ನು ನೋಡಿ, ಅಯ್ಯಯ್ಯೋ ನಮ್ಮನ್ನು ಕೊಲ್ಲುತ್ತಿದ್ದ ಈ ಘೋರಸರ್ಪವನ್ನು ನಾಶಮಾಡಿದ ಈ ರಾಜಪುತ್ರನಿಗೆ ಹಾವಿನವಿಷವು ನಾಟಿ ಸತ್ತಿರುವನಲ್ಲಾ! ನಮ್ಮ ನಿಮಿತ್ತವಾಗಿ ಇವನಿಗೆ ಮರಣ ಸಂಭವಿಸಿರುವುದಲ್ಲಾ! ನಾವು ಏನು ಮಾಡೋಣ. ರೆಕ್ಕೆಗಳಾದರೂ ಇದ್ದರೆ ಕೂಡಲೆ ಹಾರಿಹೋಗಿ ಸಂಜೀವಿನೀಪರ್ವತಕ್ಕೆ ಈ ರಾಜಪುತ್ರನನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಅದೂ ಇಲ್ಲವಲ್ಲಾ! ಏನುಮಾಡೋಣವೆಂದು ದುಃಖಿಸುತ್ತ, ತಮ್ಮ ತಾಯಿತಂದೆಗಳು ಆಹಾರಾರ್ಥವಾಗಿ ಹೋಗಿರುವುದರಿಂದ ಅವುಬಂದಮೇಲೆ ಅವುಗಳಿಗೆ ಹೇಳಿ ಈ ರಾಜಪುತ್ರನನ್ನು ಕಾಪಾಡಬೇಕೆಂದು, ದೃಢಮಾಡಿಕೊಂಡು ನಿಶ್ಚಬ್ದವಾಗಿ ಕುಳಿತುಕೊಂಡಿದ್ದವು.

ಅತ್ತ ಆಹಾರಾರ್ಥವಾಗಿ ಹೋಗಿದ್ದ ಗಂಡಹೇರುಂಡ ದಂಪತಿಗಳು, ಆಹಾರಸಮೇತ ಹಿಂದಿರುಗಿ ಬರುತ್ತಾ, ತಮ್ಮ ಮರಿಗಳ ಧ್ವನಿಯೇ ಕೇಳಿ ಸದಿರುವುದನ್ನು ನೋಡಿ, ತುಂಬಾ ಕಳವಳದಿಂದ ಕೂಡಿದ್ದವು. ಆಗ ಹೆಣ್ಣುಪಕ್ಷಿಯು ಗಂಡುಪಕ್ಷಿಯನ್ನು ಕುರಿತು, ಅಯ್ಯೋ! ಇದುವರೆಗೆ ಇಪ್ಪತ್ತು ಮರಿಗಳನ್ನು ಮಾಡಿದೆನು, ಎಲ್ಲವನ್ನೂ ಆಘೋರಸರ್ಪವು ನುಂಗಿತು. ಈಗಲಾದರೂ ಈಮರಿಗಳು ಸುಖವಾಗಿರುವುವೆಂದರೆ ಈಗ ಅವುಗಳಕಬ್ಬ ನೇಕೇಳುವದಿಲ್ಲವಲ್ಲಾ! ಏನುಮಾಡಲಿ, ಈಮರವನ್ನು ಬಿಟ್ಟು ಬೇರೊಂದೆಡೆಗೆ ಹೋಗೋಣವೆಂದರೆ ನೀನು ಕೇಳುವವಲ್ಲನೆಂದು ಗಂಡುಪಕ್ಷಿಯನ್ನು ನಿಂದಿಸುತ್ತಾ, ಆಲದಮರವನ್ನು ಸೇರಿದವು. ಅಲ್ಲಿಯೂದರೋ, ಮರಿಪಕ್ಷಿಗಳು ಸುಖವಾಗಿ ನಿಶ್ಚಬ್ದದಿಂದ ಕೂಡಿದ್ದವು. ಇದನ್ನು ನೋಡಿದಕೂಡಲೇ ಆ ಪಕ್ಷಿದಂಪತಿಗಳಿಗೆ ಅತ್ಯಾನಂದವಾಯಿತು. ಅನಂತರ ಅವು ತಮ್ಮಮರಿಗಳಿಂದ ಘೋರಸರ್ಪವು ರಾಜಪುತ್ರನಿಂದ ಹತವಾದದ್ದನ್ನೂ, ಆರಾಜಪುತ್ರನು ವಿಷವೇರಿ ಕುಂಟಿಯುದಡದಲ್ಲಿ ಸತ್ತುಬಿದ್ದಿರುವದನ್ನೂ, ನಮ್ಮ ಪ್ರಾಣವನ್ನು ರಕ್ಷಿಸಿದ ಆ ರಾಜಕುಮಾರನನ್ನು ನೀವು ಬದುಕಿಸಿ ಅವನ ಇಷ್ಟಾರ್ಥವನ್ನು ನೆರವೇರಿಸಿದಲ್ಲದೆ ನಾವು ಅನ್ನಾಹಾರಗಳನ್ನು ತೆಗೆದುಕೊಳ್ಳುವದಿಲ್ಲವೆಂದು ಹೇಳಿದವು. ಪಕ್ಷಿಗಳಾದರೋ ತಮ್ಮ ಮರಿಗಳ ಕೃತಜ್ಞತಾಬುದ್ಧಿಗೆ ಸಂತಸಗೊಂಡು, ಮುತ್ತಿಟ್ಟು, ಕೂಡಲೇ ರಾಜಪುತ್ರನನ್ನು ಅಲ್ಲಿಗೆ ತೆಗೆದುಕೊಂಡುಬಂದು, ಮರಿಗಳನ್ನು ಕುರಿತು, ಈ ರಾಜಪುತ್ರನು ದೀರ್ಘನಿದ್ರೆಮಾಡುತ್ತಿರುವಂತೆ ಕಾಣುವನು, ಈಗ ಕತ್ತಲಾಯಿತು. ಬೆ

ಳಗಾದಕೂಡಲೆ ರಾಜಪುತ್ರನನ್ನು ನಮ್ಮ ಗರಿಗಳಮೇಲೆ ಕೂಡಿಸಿ ಎತ್ತಿ ಕೊಂಡು, ನಂಜೀವಿನೀ ಪರ್ವತಕ್ಕೆ ಹೋಗಿ ಅಲ್ಲಿಯ ಮೂಲಿಕೆಗಳಿಂದ ರಾಜಪುತ್ರನ ಪ್ರಾಣವನ್ನು ಉಳಿಸುವೆವು. ನೀವು ಆಹಾರವನ್ನು ತೆಗೆದುಕೊಂಡು ಸುಖವಾಗಿ ನಿದ್ರಿಸಿರೆಂದು ನುಡಿಯಲು, ಮರಿಗಳಾದರೊ, ತಾಯಿತಂದೆಪಕ್ಷಿಗಳನ್ನು ಕುರಿತು ನಮ್ಮ ಪ್ರಾಣವನ್ನು ಉಳಿಸಿರುವ ಈ ರಾಜಪುತ್ರನು ಎಚ್ಚೆತ್ತು ಸುಖವಾಗಿರುವವರೆಗೂ ನಾವು ಖಂಡಿತ ಆಹಾರಾನಿದ್ರೆಗಳನ್ನು ಬಿಟ್ಟಿರುವೆವೆಂದು ಹಟಮಾಡಿ ಹಾಗೆಯೇ ಬಿಳಗಾಗುವವರೆಗೂ ದುಃಖಿಸುತ್ತಿದ್ದರು. ಅರುಣೋದಯವಾದಕೂಡಲೇ ಗಂಡುಪಕ್ಷಿಯು ರಾಜಪುತ್ರನನ್ನು ನಂಜೀವಿನೀಪರ್ವತಕ್ಕೆ ತೆಗೆದುಕೊಂಡುಹೋಗಿ ಅನೇಕ ಮೂಲಿಕೆಗಳನ್ನು ಪ್ರಯೋಗಿಸಿ ಆ ರಾಜಪುತ್ರನನ್ನು ಬದುಕಿಸಿತು. ರಾಜಪುತ್ರನ ವರ್ತಮಾನವನ್ನೆಲ್ಲಾ ಕೇಳಿ ಅನಂತರ ತನ್ನ ಸಮಾಚಾರವನ್ನೂ ತಿಳಿಸಿತು, ರಾಜಪುತ್ರನಿಗೆ ಪರಮಾನಂದವಾಯಿತು. ಅನಂತರ ಗಂಡುಪಕ್ಷಿಯು ರಾಜಪುತ್ರನನ್ನು ಆಲದಮರದಡಿಗೆ ತಂದುಬಿಟ್ಟು, ತನ್ನ ಮರಿಗಳಿಗೆ ತೋರಿಸಿದ್ದಲ್ಲದೆ ಅನೇಕಫಲಗಳನ್ನು ತಿನ್ನುವುದಕ್ಕೆ ಕೊಟ್ಟಿತು. ರಾಜಪುತ್ರನು ಆ ದಿವ್ಯಫಲಗಳನ್ನು ತಿಂದು ತೃಪ್ತನಾದನು. ಅಬಳಿಕ ಗಂಡುಪಕ್ಷಿಯು ತಾನು ತಂದಿದ್ದ ವಿಷಮೂಲಿಕೆಯನ್ನು ಅಲ್ಲಿದ್ದ ಕುಂಟಿಯನೀರಿಗೆ ಪ್ರಯೋಗಿಸಿ ನೀರನ್ನು ಶುದ್ಧಮಾಡಿತು. ರಾಜಪುತ್ರನು ಆನೀರನ್ನು ಸ್ವೇಚ್ಛೆಯಾಗಿ ಕುಡಿದು ಪ್ರಾಣವಾರಿಸಿಕೊಂಡನು. ಆಗ ಪಕ್ಷಿಗಳೆರಡೂ ತಮ್ಮ ಮರಿಗಳ ಪ್ರತಿಜ್ಞೆಯನ್ನು ರಾಜಪುತ್ರನಿಗೆ ತಿಳಿಸಲು, ರಾಜಪುತ್ರನು ಆ ಮರಿಗಳ ಕೃತಜ್ಞತೆಗೆ ಸಂತೋಷಪಟ್ಟು ನೀವೂ ಆಹಾರವನ್ನು ತೆಗೆದುಕೊಳ್ಳಿರೆಂದು ನುಡಿದನು. ಪಕ್ಷಿಯ ಮರಿಗಳು ಆಹಾರವನ್ನು ತಿಂದು ತೃಪ್ತವಾದವು. ಆ ಮರಿಗಳು ರಾಜಪುತ್ರನನ್ನು ಕುರಿತು, ನೀನು ಇಲ್ಲಿಗೆ ಬರಲು ಕಾರಣವೇನು? ನಿನಗೆ ಏನು ಆಗಬೇಕೆಂದು ಕೇಳಿದವು. ರಾಜಪುತ್ರನಾದರೋ, ಮರಿಗಳಿರಾ! ನಾನು ಪೂರ್ವಜನ್ಮದ ಆಚರಣೆಯಲ್ಲಿರುವ ನಿಮ್ಮ ಕನ್ಯೆಯನ್ನು ವರಿಸಲಿಚ್ಛಿಸಿ ಬರುತ್ತಿರುವಲ್ಲಿ ಬಂದ್ಧಮಹಾಮುನಿಯ ಶಾಪವನ್ನು ಮಟಮೆಯಿಂದ ಮೂರ್ಛಿತನಾಗಿ ಅಲ್ಲಿಯೇ ಬಿದ್ದೆನು, ಅನೇಕವಿನಾಳು ಋಷಿಯ ಶುಶ್ರೂಷೆಯನ್ನು ಮಾಡಿದೆನು. ಋಷಿಯ ಅನುಗ್ರಹದಿಂದ ನನಗೆ ನಾದಾನಂದಪ್ರಭಾವವು ಲಭಿಸಿತು. ನಾನು ಹೀಗೆಯೇ ಬರುತ್ತಿರುವಲ್ಲಿ ಆಯಾಸಪರಿಹಾರಾರ್ಥವಾಗಿ ಈ ಮರದಡಿ ಮಲಗಿರಲು ನಿಮ್ಮ ರೋದನಧ್ವನಿಯು ಕೇಳಿಸಿತು. ಸರ್ಪವೇ ಇದಕ್ಕೆ ಕಾರಣವೆಂದು ನಾನು ಅದನ್ನು ಸಂಹರಿಸಿದೆನು. ಕೊಳೆದಡಿ ವಿಷಸರ್ಪದಿಂದ ಸತ್ತು ಬಿದ್ದು ನಿಮ್ಮ ದಯೆಯಿಂದ ಪುನಃ ಬದುಕಿದೆನು. ಈ ನಿಮ್ಮ [illegible]

ಇಷ್ಟವನ್ನು ನೆರವೇರಿಸಬೇಕೆಂದು ಕೇಳಿಕೊಂಡನು. ಆಗ ಪಕ್ಷಿಯಮರಿಗಳೂ, ಪಕ್ಷಿಗಳೂ ಸಹ ರಾಜಪುತ್ರನ ವರ್ತಮಾನವನ್ನೆಲ್ಲಾ ಕೇಳಿಸಬಳಿಕ ಆ ರಾಜನಂದನನನ್ನು ಕುರಿತು, ನಾವ್ಗೂಕೂಡ ಬಹಳ ಮಹಾಮುನಿಯ ಆಶ್ರಮದ ಕಡೆ ಸಂಚರಿಸಲು ಸಾಧ್ಯವಿಲ್ಲ. ಹೀಗಿರುವಲ್ಲಿ ನೀನು ಆ ಮಹಾಮುನಿಯ ಅನುಗ್ರಹವನ್ನು ಪಡೆದಿರುವೆಯಾದ್ದರಿಂದ ನೀನು ಪುಣ್ಯಮೂರ್ತಿಯೇನಿರಿ, ನೀನು ಆ ನಿಮ್ಮ ಕಾರ್ಯವನ್ನು ಸಾಧಿಸಿಕೊಂಡು ಬರುವುದು ಬಹುಕಷ್ಟವು. ಸೂರ್ಯೋದಯವಾದ ಮೇಲೆ ಒಂದು ಪುಷ್ಪದೊಂದಿಗೆ ಆ ನಿಂಬೆಯಿಗಿಡವು ಕೊಳವಿನ ಹೊರಕೊರಟು, ಹಾಗೆ ಮಾಗಳಿಗೆಯವರೆವಿಗೂ ಪ್ರಕಾಶಿಸುತ್ತಾ, ಸೂರ್ಯನಿಗೆ ಸವಿಹವಾಗಿ ಹೋಗಿ, ಅನಂತರ ಕ್ರಮಸ್ಪ್ರಕಾರವಾಗಿ ತನ್ನುವುದು. ಸೂರ್ಯನು ಮುಳುಗುವಾಗ ತಾನೂ ನೀರಿನೊಳಕ್ಕೆ ಮುಳುಗಿಬಿಡುವುದು, ಅಕ್ಕನಿಕೆಯು ಆ ಪುಷ್ಪದಲ್ಲಿರುವಳು, ಆ ಕೊಳದ ಸುತ್ತಲೂ ಪತ್ತು ಸಾವಿರ ಘೋರರಾಕ್ಷಸರು ಕಾವಲುಮಾಡುತ್ತಿರುವರು. ಆದ್ದರಿಂದ ಭೂಮಿಯ ಮೇಲಿನಿಂದ ಹೋಗಿ ತರಲು ಸಾಧ್ಯವೇಯಿಲ್ಲವು, ಸೂರ್ಯನ ವರದಿಂದ ನಾಗರಾಜನಿಗೆ ಹುಟ್ಟಿದ ಕುವರಿಯಾದ್ದರಿಂದ ಅಂತರಿಕ್ಷಮಾರ್ಗದಲ್ಲಿ ತರಲು ಸೂರ್ಯನು ಕೆಲವಾಗಿದ್ದಾನೆ. ಯಾವ ಮಾರ್ಗದಿಂದ ನೀನು ಆ ಕನ್ನಿಕೆಯನ್ನು ತೆಗೆದುಕೊಂಡು ಹೋಗಲು ಇಚ್ಛಿಸಿ ಬಂದೆಯೋ ನಾವ್ರು ಕಾಣೆನೆಂದು ನುಡಿದವು. ಆ ರಾಜಪುತ್ರನು ಏನು ಉತ್ತರವ್ಗೂಕೊಡಲು ತೋಚದೆ ಸುಮ್ಮನಿದ್ದನು, ಆಗ ಪಕ್ಷಿಪಕ್ಷಿಗಳು ದೊಡ್ಡಪಕ್ಷಿಗಳನ್ನು ನೋಡಿ, ತಾಯಿತಂದೆಗಳಿರಾ! ಈ ಪುಣ್ಯಮೂರ್ತಿಯಾದ ರಾಜಪುತ್ರನಿಗೆ ಇದು ಅಸಾಧ್ಯವಾದರೂ ನಿಮಗೆ ಸಾಧ್ಯವೇ ಅಲ್ಲವೆ? ನೀವಾದ್ರೂ ಸಂಪ್ರಕಾರವಿಂದಲೂ ಈ ರಾಜಪುತ್ರನ ಕಾರ್ಯವನ್ನು ನೆರವೇರಿಸಬೇಕೆಂದವು. ದೊಡ್ಡಪಕ್ಷಿಗಳಾದರೋ ಕೂಡಲೇ ರಾಜಪುತ್ರನನ್ನು ಕುರಿತು, ರಾಜಾತ್ಮಜಾ! ನೀನು ಹೆದರಬೇಡ, ನೀನು ಧೈರ್ಯದಿಂದ ಆ ಪುಷ್ಪವನ್ನು ಕೊಯ್ದು ನಿನ್ನಿಗೆ ಭದ್ರವಾಗಿ ಕಟ್ಟಿಕೋ, ನಾವ್ರು ನಿನ್ನನ್ನು ತೆಗೆದುಕೊಂಡು ಹೋಗುವೆವ್ರು. ಹೀಗೆಂದು ಹೇಳಿ, ತನ್ನ ಚಿನ್ನಿಮರಿಗಳನ್ನು ತಲೆಯಮೇಲೆ ಕುಳ್ಳಿರಿಸಿಕೊಂಡು, ಹೆಣ್ಣುಪಕ್ಷಿಯು ಸೂರ್ಯನಿಗೆ ಅಡ್ಡವಾಗಿ ಹೋಗುತ್ತಿರುವಂತೆ ಗೊತ್ತುಮಾಡಿ, ವಾಯುವೇಗದಿಂದ ಆ ನಿಂಬೆಯಿಗಿಡದ ಬಳಿ ರಾಜಪುತ್ರನನ್ನು ಇಳಿಸಲು, ಆ ರಾಜಸೂನುವು ಧೈರ್ಯದಿಂದ ಆ ಪುಷ್ಪವನ್ನು ಕೊಯ್ದು ತನ್ನ ಬೆನ್ನಿಗೆ ಕಟ್ಟಿಕೊಂಡನು. ಅನಂತರ ಪಕ್ಷಿಗಳು ರಾಜಪುತ್ರನನ್ನು ಹೊತ್ತುಕೊಂಡು ಹೋಗುತ್ತಿರುವುದುಅಲ್ಲಿಯ ಕಾವಲುಗಾರರ ದೃಷ್ಟಿಗೆ ಬಿತ್ತು, ಆಗ ರಕ್ಷಸವೀರರೆಲ್ಲಾ ಒಟ್ಟಾಗಿ ಸೇರಿ ಆಹಾ! ಪಕ್ಷಿಗಳು ಒಬ್ಬ ಮನುಷ್ಯನನ್ನು ಹೊತ್ತು ಕೊಂಡುಕೊಂಡುಹೋಗುವುದ

ನ್ನು ನೋಡಿದರೆ ಆ ಪುಷ್ಪವನ್ನು ಅಪಹರಿಸಿಕೊಂಡು ಹೋಗುತ್ತಿರುವಂತೆ ಕಾಣುವುದು, ಕೂಡಲೇ ಹಿಡಿದು, ಬಡಿದು, ಕಡಿದು ಹಾಕಿರೆಂದು ಕೂಗುತ್ತಾ, ಮುಸಲ, ಮುದ್ಗರ ಖಂಡಿವಾಲಾವಿ ಸಕಲ ಆಯುಧಗಳನ್ನೂ ಸಜ್ಜುಮಾಡಿಕೊಂಡು ಪ್ರಯೋಗಿಸುತ್ತಿರುವಲ್ಲಿ, ಆ ಪಕ್ಷಿಗಳು ಅವುಗಳನ್ನೆಲ್ಲಾ ತಮ್ಮ ರೆಕ್ಕೆಗಳಿಂದಲೇ ಬಡಿದು ರಾಜಪುತ್ರನನ್ನು ಕಾಪಾಡುತ್ತಿದ್ದವು. ಕೆಲವು ರಾಕ್ಷಸರ ಕೈಕಾಲುಗಳು ಮುರಿದವು, ಕೆಲವರ ಕತ್ತುಗಳು ಕತ್ತರಿಸಲ್ಪಟ್ಟು ಹೋದವು. ಕೆಲವರ ದೇಹದಿಂದ ರಕ್ತವು ಪ್ರವಾಹರೂಪವಾಗಿ ಹರಿಯುತ್ತಿತ್ತು. ಆಗ ಆ ರಕ್ಕಸರು ಪಕ್ಷಿಗಳ ಶೌರ್ಯವನ್ನು ಕೊಂಡಾಡುತ್ತ, ತಮ್ಮ ಮಾಯೆಯಿಂದ ಅವುಗಳಿಗೆ ಕಣ್ಣು ಕಾಣದಂತೆ ಮಾಡಿದರು. ಆ ಪಕ್ಷಿಗಳಿಗೆ ಕಣ್ಣು ಕಾಣದಂತೆ ತಡವರಿಸುತ್ತಿರುವ ರಕ್ಕಸರ ಮಾಯೆಯನ್ನು ಆ ಸೂರ್ಯನೇನು ತಿಳಿದು, ಓಹೋ ಪಕ್ಷಿಗಳೆ! ಇದು ರಾಕ್ಷಸಮಾಯೆಯು, ಇದು ನಿಮಿಷಮಾತ್ರದಲ್ಲಿ ನಾಶವಾಗುವಂತೆ ಮಾಡಿ ನಿಮ್ಮ ಕಣ್ಣುಗಳಿಗೆ ಬೆಳಕು ಕೊಡುವಂತೆ ನಿರ್ಧರಿಸುವೆನೆಂದು ತ್ರೇತಾಗ್ನಿನಾಮಕವಾದ ದಿವ್ಯಾಸ್ತ್ರವನ್ನು ಪ್ರಯೋಗಿಸಿದೊಡನೆಯೇ ರಾಕ್ಷಸರ ಮಾಯಾಶಕ್ತಿಯಿಂದುಂಟಾದ ಕತ್ತಲು ಮಾಯವಾಯಿತು. ಪಕ್ಷಿಗಳಾದ ತೋ ತಮ್ಮ ಗೆಲಗಳಿಂದ ರಾಕ್ಷಸರನ್ನು ಧ್ವಂಸಮಾಡುತ್ತಿರಲು ಇವರೆಲ್ಲಾ ಬಿದ್ದು ಓಡಿ ಚದರಿದರು, ಆಗ ಪಕ್ಷಿಗಳು ರಾಜಪುತ್ರನನ್ನು ನಿರ್ಭಯವಾಗಿ ಎತ್ತಿಕೊಂಡುಬಂದು ಆಲದಮರದಡಿಯಲ್ಲಿಳಿಸಿದವು, ಅನೇಕ ಮಾಧುರ್ಯವಾದ ಫಲಗಳನ್ನು ತಂದು ರಾಜಪುತ್ರನಿಗೆ ಒಪ್ಪಿಸಿದವು. ರಾಜಪುತ್ರನೂ ಕೂಡ ಅವುಗಳನ್ನು ಯಥೇಷ್ಟವಾಗಿ ತಿಂದು ದಾಹವಾರಿಸಿಕೊಂಡನು. ಅನಂತರ ಆ ಪಕ್ಷಿಗಳು, ಓ ಕನ್ಯಕಾರತ್ನವೇ! ದೇವೇಂದ್ರನಿಗೆ ಸದೃಶವಾಗಿ ದೇದೀಪ್ಯಮಾನವಾಗಿರುವ ಈ ರಾಜಪುತ್ರನನ್ನು ನೀನು ಹೊರಕ್ಕೆ ಬಂದು ನೋಡಿ ಇವನನ್ನು ಕೂಡಲೇ ವರಿಸೆಂದೂ, ಈತನು ಪುಣ್ಯಮೂರ್ತಿಯೆಂದೂ, ನಾವು ಗಂಡಭೇರುಂಡ ಪಕ್ಷಿಗಳೆಂದೂ ನಾನಾಪ್ರಕಾರವಾಗಿ ಪಾರ್ಥಿಸಿದ ಬಳಿಕ ಆ ಕನ್ಯಕಾರತ್ನವು ಪುಷ್ಪದಿಂದ ಹೊರಕ್ಕೆ ಬಂದು ಕೂಡಲೇ, ಕನ್ಯಾರತ್ನದ ಕಾಂತಿಯಿಂದ ಅವನು ಮೂರ್ಛಿತನಾದನು. ಪಕ್ಷಿಗಳ ಇಷ್ಟಪ್ರಕಾರ ಆ ಕನ್ಯಕಾಮಣಿಯು ರಾಜಪುತ್ರನನ್ನು ಮೂರ್ಛೆಯಿಂದೇಳುವಂತೆ ಮಾಡಿ, ಆತನ ವರ್ತಮಾನವನ್ನೆಲ್ಲಾ ವಿಚಾರಿಸುತ್ತಾ ರಾಜಪುತ್ರನೊಂದಿಗೆ ಪ್ರಿಯವಚನಗಳನ್ನು ನುಡಿಯುತ್ತಾ ಕಾಲಕಳೆಯುತ್ತಿದ್ದಳು. ಹೀಗಿರುವಲ್ಲಿ ಆ ಪಕ್ಷಿಯಮರಿಗಳು, ತಾಯಿತಂದೆಗಳೇ! ನೀವು ಇಷ್ಟಕ್ಕೇ ತೃಪ್ತರಾದರೆ ಮುಂದೆ ನಾಗರಾಜನಿಂದುಂಟಾಗುವ ಕಷ್ಟಪರಂಪರೆಗಳು ಹೇಗೆನೀಗಿಯೊವು? ಕೂಡಲೇ ಇದಕ್ಕೆ ತಕ್ಕಯೋಚನೆಯನು

ಮಾಡಬೇಕೆಂದು ನುಡಿಯಲು, ಆ ಪಕ್ಷಿಗಳು, ಮರಿಗಳಿರಾ! ನಾವು ನಮ್ಮ ರಾಜನಾದ ಗರುತ್ಮಂತನ ಬಳಿಗೆ ಜಾಗ್ರತೆಯಾಗಿ ಹೋಗಿ, ಅವನ ಸಹಾಯವನ್ನು ಹೊಂದಿ ಬರಬೇಕೆಂದಿರುವೆವೆಂದು ನುಡಿದವು.

ಹೀಗಿರುವಲ್ಲಿ ಸತ್ತುಳಿದ ರಾಕ್ಷಸರು ಕೂಡಲೇ ನಾಗರಾಜನ ಬಳಿಗೆ ಹೋಗಿ, ನಡೆದ ವರ್ತಮಾನವನ್ನು ರಕ್ಕಸರಿಂದ ಕೇಳಿದ ಕೂಡಲೇ ಮೂರ್ಛಾಕಾಂತನಾಗಿ ನೆಲಕ್ಕೆ ಬಿದ್ದನು. ಪುನಃ ಎಚ್ಚತ್ತಬಳಿಕ, ತನಿಗೆ ಏನೂ ತೋಚದೆ ದೇವೇಂದ್ರನಬಳಿಗೆ ಹೋಗಿ, ನಡೆದ ವರ್ತಮಾನವನ್ನೆಲ್ಲಾ ಹೇಳುತ್ತಾ ದುಃಖಿಸುತ್ತಿದ್ದನು, ದೇವೇಂದ್ರನು ನಾಗರಾಜನನ್ನು ಅನೇಕವಿಧವಾಗಿ ಸಂತೈಸಿ, ನಾಗರಾಜನೆ! ಇದು ಆಶ್ಚರ್ಯಕರವಾದ ಸಂಗತಿಯು, ಗಂಡಭೇರುಂಡಗಳು ಈ ಮನುಷ್ಯನನ್ನು ಕೊತ್ತು ತರುವುದೆಂದರೇನು! ಈತನನ್ನು ನೀನು ಸಾಧಾರಣನಾದ ಮನುಷ್ಯನೆಂದು ಯೋಚಿಸಬೇಡ, ಪಕ್ಷಿಗಳೂ ಸಾಧಾರಣವಲ್ಲವು, ಪಕ್ಷಿರಾಜನ ಮಂತ್ರಿಗಳಾಗಿವೆ, ಪಕ್ಷಿರಾಜನೂ ಕೂಡ ತಮ್ಮಜಾತಿಯ ಪಕ್ಷಿಗಳಿಗೆ ಸಹಾಯಕನಾದಾನೇ ಹೊರತು ಒಳ್ಳೆಯ ಮಾತುಗಳನ್ನಾಡುತ್ತಿರುವಮಾತ್ರಕ್ಕೇ ನಿಮಗೆಂದಿಗೂ ಸಹಾಯಕನಾಗಲಾರನು. ನೀವು ಇವನೊಂದಿಗೆ ಯುದ್ಧಪ್ರಮೇಯವನ್ನು ಮಾಡಕೂಡದು, ಕೇಸರಾಸವೋತವಾಗಿ ಹೊರಟು ಯುದ್ಧವನ್ನೂ, ಅಬಳಿಕ ವಿವಾಹವನ್ನೂ ಮಾಡಲು ನಿಶ್ಚಪಡಿಸಿಕೊಂಡು ಹೊರಡಬೇಕೆಂದು ಬೋಧಿಸಿದ ದೇನೆಂದ್ರನ ಮಾತಿನಂತೆ ಆ ನಾಗರಾಜನು ಒಪ್ಪಿಕೊಂಡು, ಕೂಡಲೇ ತನ್ನ ಪಟ್ಟಣಕ್ಕೆ ಹೋಗಿ ನಾಲ್ಕುಸಹಸ್ರ ವಿಷಸರ್ಪಸಮೇತನಾಗಿ ಹೊರಟು ಬರುತ್ತಿದ್ದನು. ಅತ್ತಲಾಗೆ ಗಂಡಭೇರುಂಡ ಪಕ್ಷಿಗಳಾದ ರೋ, ರಾಜಪುತ್ರನೇ! ನಾವು ನಮ್ಮರಾಜನಾದ ಗರುತ್ಮಂತನ ಸಹಾಯವನ್ನು ಪಡೆದು ಕೂಡಲೇ ಬರುವೆವು. ಅದುವರೆಗೆ ನೀವು ಜೋಪಾನವಿರೆಂದು ಹೇಳಿ, ಕ್ಷೀರಸಮುದ್ರವನ್ನು ಸೂರ್ಯೋದಯದೊಳಗಾಗಿ ಹೋಗಿಸೇರಿ, ಅಲ್ಲಿದ್ದ ಗರುತ್ಮಂತನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ತಾವು ಬಂದಕಾರ್ಯವನ್ನು ವಿಜ್ಞಾಪಿಸಿಕೊಂಡವು. ನೀವು ಸ್ಮರಿಸಿಕೊಂಡಾಗ ನಾನು ಬಂದು ಸಹಾಯವನ್ನು ಮಾಡುವೆನೆಂದು ಗರುತ್ಮಂತನ ಅಭಯವನ್ನು ಹೊಂದಿ ಮನೋವೇಗದಿಂದ ಆ ವಟವೃಕ್ಷದ ಬಳಿಗೆ ಬರುತ್ತಿದ್ದವು.

ಇಷ್ಟರೊಳಗಾಗಿಯೇ ನಾಗರಾಜನಿಂದ ಆಜ್ಞಾಪ್ತರೆಳಾದ ಆ ವಿಷಸರ್ಪಗಳು ವಟವೃಕ್ಷದ ಬಳಿಗೆ ಬರುತಾ, ಓಹೋ! ನರಮಾತ್ರನಾದ ಇವನು ವಿಷವನ್ನು ಕಾರುತ್ತಿರುವ ನಮಗೆ ಅಸಾಧ್ಯನೆ! ಕೂಡಲೇ ವಿಷಜ್ವಾಲೆಯಿಂದ ಆ ನರನನ್ನೂ ಆ ಪಕ್ಷಿಗಳನ್ನೂ ಕೊಂದು, ಆ ಕನ್ನೆಯನು ಹಿಂದಕೆ, ತಂದು ನಮ್ಮ ರಾಜನಿಗೆ ಒಪ್ಪಿಸಿದೆ ಬಿಡುವೆವೇ? ಎಂದು

ನಾನಾಪ್ರಕಾರವಾಗಿ ಆರ್ಭಟಿಸುತ್ತಾ, ವಿಷವನ್ನುಕಾರಿ ಭಗಭಗನೆ ಉರಿಯು ಹೆಚ್ಚುವಂತೆ ಮಾಡುತ್ತಾ, ತನ್ನ ಎದುರಿಗೆ ಬರುತ್ತಿರುವ ಸರ್ಪಗಳಸಮೂಹವನ್ನು ಆ ಸೂರ್ಯಸೇನಮಹಾರಾಯನು ನೋಡಿದ ಕೂಡಲೇ, ಕೋಪಾವೇಶದಿಂದ ಬಿಲ್ಲನ್ನು ಸರಿಮಾಡಿಕೊಂಡು, ಧನುಷ್ಟಂಕಾರವಂ ಮಾಡಿ, ವಾರುಣಾಸ್ತ್ರವನ್ನು ಪ್ರಯೋಗಿಸಲೊಡನೆಯೇ ಆ ಸರ್ಪಸಮೂಹವೆಲ್ಲಾ ನೀರಿನ ಪ್ರವಾಹದಿಂದ ಹೊಡೆದುಕೊಂಡು ಹೋಗುತ್ತಿರುವಲ್ಲಿ, ಘೋರಸರ್ಪವು ತನ್ನ ಹೆಡೆಗಳನ್ನೆಲ್ಲಾ ತೆರೆದುಕೊಂಡು ಕೋಪಾವೇಶದಿಂದ ಬರುತ್ತಿರುವುದನ್ನು ರಾಜಪುತ್ರನು ಕಂಡು, ದಿವ್ಯಾಸ್ತ್ರಗಳ ಪ್ರಯೋಗದಿಂದ ಅದರ ಹೆಡೆಯನ್ನು ಛಿತ್ರಛಿದ್ರವಾಗಿ ಮಾಡುತ್ತಿರುವ ಕಾಲಕ್ಕೆ ಸರಿಯಾಗಿ, ವಾಯುವೇಗದಿಂದ ಆ ಗಂಡಭೇರುಂಡಗಳು ಹಾರಬರುತ್ತಾ, ರಾಜಪುತ್ರನ ಶೌರ್ಯವನ್ನುಕೊಂಡಾಡಿ, ಬಹಳವಾಗಿ ಬಳಲಿರುವನೆಂದು ತಿಳಿದುಕೊಂಡು, ಕೂಡಲೇ ವೈನತೇಯನನ್ನು ಸ್ಮರಿಸಿದಮಾತ್ರಕ್ಕೆ ಆ ಗರುತ್ಮಂತನು ಪ್ರತ್ಯಕ್ಷನಾದನು. ಗರುತ್ಮಂತನು ಬರುತ್ತಿರುವ ಗಾಳಿಯು ಸೋಕಿದೊಡನೆಯೇ ಸರ್ಪಗಳೆಲ್ಲಾ ತಮ್ಮ ಹೆಡೆಗಳನ್ನು ನೆಲಕ್ಕೆ ಬಡಿಯುತ್ತಾ ನತ್ತುಬಿದ್ದವು. ಅಷ್ಟರಹೊತ್ತಿಗೆ ಸರಿಯಾಗಿ ಇಂದ್ರಲೋಕದಿಂದ ದೇವೇಂದ್ರನು ಬಂದು ಆ ವೈನತೇಯನನ್ನು ಆಲಿಂಗಿಸಿಕೊಂಡು, ವಿನತಾತನಯನೆ ! ನಿನ್ನ ಸ್ನೇಹಿತನಾದ ನಾಗರಾಜನನ್ನು ನೋಡೆನ್ನಲು, ಗರುತ್ಮಂತನು ಆ ನಾಗರಾಜನನ್ನು ಬಹಳವಾಗಿ ಆದರಿಸಿದನು. ಆಬಳಿಕ ಗರುತ್ಮಂತನು ನಾಗರಾಜನನ್ನು ಕುರಿತು ಈತನು ರಾಜಪುತ್ರನು. ಬೌದ್ಧಮಹರ್ಷಿಯ ಅನುಗ್ರಹದಿಂದ ನಾವಾನಂದಪ್ರಭಾವವನ್ನು ಗ್ರಹಿಸಿರುವ ಪುಣ್ಯಮೂರ್ತಿ. ಧೈರ್ಯಶೌರ್ಯಾದಿ ಗುಣಸಂಪನ್ನನು, ಸಕಲಕಲಾಕೋವಿದನು, ದಿವ್ಯಾಸ್ತ್ರಗಳಲ್ಲಿ ಚತುರನು, ಸುಂದರಾಕಾರನಾದ ಸುಕುಮಾರನು. ಈತನಿಗೆ ನಿನ್ನ ಕುವರಿಯನ್ನು ಕೊಟ್ಟು ಮದುವೆ ಮಾಡಬೇಕೆನ್ನಲು, ನಾಗರಾಜನೂ ದೇವೇಂದ್ರನೂ ಸಂತೋಷದಿಂದ ಒಪ್ಪಿಕೊಂಡು, ಆ ವಟವೃಕ್ಷದ ಕೆಳಗೇ ಇಬ್ಬರಿಗೂ ವಿವಾಹವನ್ನು ಜರಗಿಸಿದ ಬಳಿಕ ರಾಜಪುತ್ರನಿಗೆ ಅನೇಕ ದಿವ್ಯಾಭರಣಗಳನ್ನು ಕೊಟ್ಟು ಎಲ್ಲರೂ ತಮ್ಮತಮ್ಮ ಲೋಕಗಳಿಗೆ ತೆರಳಿದರು.

ಆಬಳಿಕ ಗಂಡಭೇರುಂಡಪಕ್ಷಿಗಳು ರಾಜಪುತ್ರನನ್ನು ನೋಡಿ, ಎಲ್ಲಿ ಪುಣ್ಯಮೂರ್ತೀ ! ನಿನ್ನಭಾಗ್ಯಕ್ಕೆ ಎಣೆಯೇ ಇಲ್ಲವು. ನಿನ್ನ ಪುಣ್ಯದಿಂದ ನಮಗೆ ದೇವೇಂದ್ರನೂ, ನಾಗರಾಜನೂ, ಪಕ್ಷಿರಾಜನೂ ದರ್ಶನವನ್ನಿತ್ತರು ನೀನೇ ಮಹಾನುಭಾವನೆಂದು ಕೊಂಡಾಡಿದರು. ಆಗ ರಾಜಪುತ್ರನು ಎಲ್ಲಿ ಪಕ್ಷಿಗಳೆ ! ನಿಮ್ಮಸಹಾಯದಿಂದ ನನಿಗೆ ದೇವತೆಗಳ ದರ್ಶನವೂ, ಈನಿಮ್ಮ ಕನ್ಯಾಮಣಿಯೂ ಲಭಿಸಿದ್ದೇಹೊರತು ಬೇರೆ ಇಲ್ಲವು. ನಾನು

ಬೌದ್ಧಮಹಾಮುನಿಯ ದರ್ಶನವನ್ನು ಮಾಡಿಕೊಂಡು ನಮ್ಮ ಪಟ್ಟಣಕ್ಕೆ ಹೋಗಬೇಕೆಂದಿರುವೆನು, ಅದುವರೆಗೂ ನಿಮ್ಮ ಸಹಾಯವು ಬೇಕೆನ್ನಲು ಪಕ್ಷಿಗಳಿರಡೂ ರಾಜಪುತ್ರನನ್ನೂ, ಆ ನಿಮ್ಮುಕನ್ನೆಯನ್ನೂ ಹೆಗಲಮೇಲೆ ಕೂಡಿಸಿಕೊಂಡು, ಮನೋವೇಗದಿಂದ ಆ ಬೌದ್ಧಮಹಾಮುನಿಯ ಆಶ್ರಮದ ಬಳಿ ಇಳಿಸಿದವು, ದಂಪತಿಗಳಿಬ್ಬರೂ ಅತ್ಯಂತಭಯಭಕ್ತಿಯಿಂದ ಋಷಿಗೆ ಅಡ್ಡಬಿದ್ದು ನಡೆದ ವರ್ತಮಾನವನ್ನೆಲ್ಲಾ ವಿವರಿಸಿ, ಮಹಾನುಭಾವರಾದ ನಿಮ್ಮ ಮಹಿಮೆಯಿಂದ ನಾವಾನಂದಪ್ರಭಾವವು ದೊರಕಿ ದೇವತೆಗಳ ದರ್ಶನವೂ, ಈ ಕನ್ಯಕಾಮಣಿಯಲಾಭವೂ ಉಂಟಾದವು, ನಿಮ್ಮ ದಯೆಯಿಂದ ನಾನು ಕೃತಕೃತ್ಯತೆಯನ್ನೂ, ಶಾಶ್ವತವಾದ ಮುಕ್ತಿಯನ್ನೂ ಪಡೆದವನೂ ಆದೆನು. ಹೀಗೆಂದು ನಾನಾಪ್ರಕಾರವಾಗಿ ಕೊಂಡಾಡುತ್ತಿರುವ ಆ ದಂಪತಿಗಳನ್ನು ನೋಡಿ, ಮುನಿಯು ಪರಮಸಂತೋಷದಿಂದ ಅವರೀರ್ವರಿಗೂ ಆಶೀರ್ವಾದವಮಾಡಿ ಪಟ್ಟಣಕ್ಕೆ ಹೊರಡಲು ಅನುಜ್ಞೆಯನ್ನು ಕೊಟ್ಟನು. ಆಬಳಿಕ ದಂಪತಿಗಳಿಬ್ಬರೂ ಬೌದ್ಧಮಹಾಮುನಿಯ ಆಶೀರ್ವಾದವಂ ಕೈಕೊಂಡು, ಗಂಡಭೇರುಂಡ ಪಕ್ಷಿಗಳನ್ನೇರಿ ಜಾಗ್ರತೆಯಾಗಿ ಮಪ್ರದೇಶದ ಕಡೆ ಹೊರಟು ಕೂಡಲೇ ಪಟ್ಟಣದಬಳಿ ಬಂದಿಳಿದರು. ಅನಂತರ ಆ ಗಂಡಭೇರುಂಡಗಳು ರಾಜಪುತ್ರನ ಅಪ್ಪಣೆಯನ್ನು ಪಡೆದು ತಮ್ಮನೆಲೆಯಾದ ಪಟವೃಕ್ಷವನ್ನು ಹೋಗಿ ಸೇರಿದವು. ರಾಜಕುವರನು ಬರುತ್ತಿರುವ ಸುದ್ದಿಯು ಮದ್ರದೇಶಾಧಿಪನಿಗೆ ತಿಳಿಯಿತು, ರಾಜನು ಅತ್ಯಂತ ಸಂತೋಷದಿಂದ ಪಟ್ಟಣವನ್ನಲಂಕರಿಸಿ, ಚತುರಂಗಬಲ ಸಹಿತನಾಗಿ ಪಟ್ಟಣದ ಹೊರಗೆ ಬಂದು ತನ್ನ ಕುವರನನ್ನು ಮತ್ತು ಆ ನಿಮ್ಮುಕನ್ಯಕಾಮಣಿಯನ್ನೂ ಆನಂದದಿಂದ ಬಾಚಿ ತಬ್ಬಿಕೊಂಡು, ರಾಜಪುತ್ರನ ವರ್ತಮಾನವನ್ನೂ ಆ ನಿಮ್ಮುಕನ್ನೆಯ ವರ್ತಮಾನವನ್ನೂ ಕೇಳಿ ಸಂತೋಷಪಟ್ಟು ಪುರಪ್ರವೇಶವನ್ನು ಮಾಡಿದನು. ಅನಂತರ ರಾಜನು ತನ್ನ ಕುವರನಿಗೂ ಆ ನಿಮ್ಮುಕನ್ನೆಗೂ ವಿವಾಹಮುಹೂರ್ತವನ್ನು ನಡೆಯಿಸಿ ಅನೇಕ ದಾನಧರ್ಮಗಳಿಂದ ಸಕಲರನ್ನೂ ಸತ್ಕರಿಸಿದನು. ಕೆಲವು ದಿನಗಳಿಗೆ ಇವರೀರ್ವರಿಗೂ ಸಂಭ್ರಮದಿಂದ ರಾಜ್ಯಾಭಿಷೇಕವಂ ಮಾಡಿದನು, ಆಬಳಿಕ ಆ ದಂಪತಿಗಳು ಬಹುಕಾಲ ಸಾಮ್ರಾಜ್ಯಸುಖವನ್ನು ಅನುಭವಿಸುತ್ತ, ಜನನೀ ಜನಕರನ್ನೂ, ಪ್ರಜೆಗಳನ್ನೂ, ಬ್ರಾಹ್ಮಣರನ್ನೂ ಭಕ್ತಿಯಿಂದ ಸತ್ಕರಿಸುತ್ತಾ ತ್ರಿಲೋಕವಿಖ್ಯಾತವಾದ ಕೀರ್ತಿಯನ್ನು ಪಡೆದು ಸುಖದಿಂದ ಇರುತ್ತಿದ್ದರು. ರಾಜಪುತ್ರನು ತನ್ನ ಭುಜಬಲದಿಂದ ಸಕಲ ದೇಶಗಳನ್ನೂ ಗೆದ್ದು ಭೂಮಂಡಲಾಧಿಪತಿಯಾಗಿ, ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ರಾಜ್ಯವನ್ನಾಳುತ್ತಿದ್ದನು, ಅನೇಕಾನೇಕ ವರುಷಗಳು

ರಾಜ್ಯಭಾರ ಸುಖವನ್ನನುಭವಿಸಿ, ಅನಂತರ ಈಲೋಕವನ್ನು ಬಿಟ್ಟು, ಶಾಶ್ವತವಾದ ಮುಕ್ತಿಯನ್ನು ಪಡೆದನು. ನಾದಾನಂದಪ್ರಭಾವದಿಂದಲೇ ಆ ಸೂರ್ಯಸೇನನೂ ಈರೀತಿಯಾದ ಶಾಶ್ವತಸುಖವನ್ನು ಪಡೆದನೆಂದು ನುಡಿಯುತ್ತಿರುವ ಶ್ರೀಕೃಷ್ಣಸ್ವಾಮಿಯ ಸದ್ಬೋಧೆಯನ್ನು ಕೇಳುತ್ತಿರುವ ಅರ್ಜುನನು, ಮಹಾನುಭಾವನೆ! ಪರಮಾಶ್ಚರ್ಯಕರವಾದ ಈ ಸೂರ್ಯಸೇನ ಮಹಾರಾಯನ ಕಥೆಯನ್ನೂ, ನಾದಾನಂದಪ್ರಭಾವವನ್ನೂ ನನಿಗೆ ಬೋಧಿಸಿ ಕೃತಾರ್ಥನನ್ನಾಗಿ ಮಾಡಿರುವಿ, ನಿನ್ನ ದಯೆಯಿಂದ ಅನೇಕ ಧರ್ಮ ಸೂಕ್ಷ್ಮಗಳು ನನಿಗೆ ತಿಳಿಯಬಂದವು, ನಾನೇಧನ್ಯನೆಂದು ಶ್ರೀ ಕೃಷ್ಣನಿಗೆ ನಮಸ್ಕಾರಮಾಡಿ, ನಿದ್ರೆಯು ಕಣ್ಣುಗಳನ್ನು ಮುಚ್ಚುತ್ತಿರುವುದರಿಂದ ಮಲಗಿಕೊಳ್ಳೋಣವೆಂದು ಹೇಳಿ ಇಬ್ಬರೂ ಆ ಮಗಳ ಮೆಬ್ಬಡನೇಲೆ ಮಲಗಿ ನಿದ್ರೆಯನ್ನು ಮಾಡಿದರೆಂಬಲ್ಲಿಗೆ ಶ್ರೀಕೃಷ್ಣಬೋಧಾಮೃತಸಾರದಲ್ಲಿ

ಮೂರನೆಯ ಕಥೆಯು ಸಮಾಪ್ತವು.

ನಾಲ್ಕನೆಯ ಕಥೆ.

ಶ್ಲೋ॥ ಶ್ರೀವಲ್ಲಭೇತಿವರದೇತಿದಯಾಪರೇತಿ | ಭಕ್ತಪ್ರಿಯೇತಿಭವಲುಣ್ಠನಕೋವಿದೇತಿ ॥ ನಾಥೇತಿನಾಗಶಯನೇತಿಜಗನ್ನಿವಾಸೇ | ತ್ಯಾಲಾಪನಃ ಪ್ರತಿಪದಂ ಕುರುಪೆಮುಕುಂದ ॥

ನಾಲ್ಕನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾನದೀ ಪಾರ್ಶ್ವದಲ್ಲಿರುವ ಮಗಳವಿಣ್ಣೆಯ ಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತ, ಗಂಧಪುಷ್ಪಗಳ ಸುವಾಸನೆಯಿಂದ ಆತ್ಯಾನಂದಪಡುತ್ತಾ, ಮಂದವಾಗುತಕ್ಕ ವೈಯ್ಯಾರ್ಡಿ, ಆನಂದದಿಂದ ಕಾಲವಂ ಕಳೆಯುತ್ತಿರುವಲ್ಲಿ, ಅರ್ಜುನನು ಶ್ರೀಕೃಷ್ಣಸ್ವಾಮಿಯನ್ನು ಕುರಿತು, ಮಹಾನುಭಾವನೆ! ಪಂಚಮುದ್ರೆಯು ಲಕ್ಷಣಗಳನ್ನು ನನ್ನ ಮನಸ್ಸಿಗೆ ಹಿಡಿಯುವಹಾಗೆ ವಿಚಿತ್ರವಾದೊಂದು ಪುಣ್ಯಕಥೆಯ ಮೂಲಕವಾಗಿ ಬೋಧಿಸಿ, ನನ್ನನ್ನು ಕೃತಾರ್ಥನನ್ನಾಗಿಯೂ, ಮುಕ್ತಿಯನ್ನು ಹೊಂದುವಂತೆಯೂ ಮಾಡಬೇಕೆಂದು ಕೇಳಿಕೊಂಡನು, ಆಗ ಶ್ರೀ ಕೃಷ್ಣಮೂರ್ತಿಯು ಅರ್ಜುನನ ಮೇಲಿನ ಕರುಣೆಯಿಂದ ಅರ್ಜುನಾ! ಕೃದ್ಧಾಭಕ್ತಿಯಿಂದ ಈಗ ನಾನು ಹೇಳಲು ಜ್ಞಾಗಿಸುವ ಅಗ್ನಿದತ್ತಮಹಾರಾಯನ ಚರಿತ್ರೆಯನ್ನು ಕೇಳು, ಇದು ಪುಣ್ಯಪ್ರದವಾದ ಚರಿತ್ರೆ ಎಂದು ಅರ್ಜುನನಿಗೆ ಬೋಧಿಸಲಾರಂಭಿಸಿದನು.

ಅಗ್ನಿದತ್ತಮಹಾರಾಯನ ಕಥೆ.

ಅರ್ಜುನಾ! ಪೂರ್ವದಲ್ಲಿ ಆಂಧ್ರದೇಶವನ್ನು ಜಿತಕೀರ್ತಿ ಎಂಬ ಮಹಾರಾಯನು ಪಾಲಿಸುತ್ತಿದ್ದನು. ಅನೇಕ ದಿವಸಗಳವರೆಗೂ ಇವನಿಗೆ

ಮಕ್ಕಳಾಗಲಿಲ್ಲ. ರಾಜನೂ ರಾಜಪತ್ನಿಯೂ ಸಂತಾನವಿಲ್ಲದೆ ದುಃಖಿಸು ತ್ತಾ, ಅನೇಕ ವ್ರತಗಳನ್ನು ಮಾಡಿ ದೇವರ ಪೂಜೆಯನ್ನು ಮಾಡುತ್ತಿದ್ದರು. ರಾಜ್ಯದಮೇಲೂ, ಕೋಶದಮೇಲೂ, ಧನಧಾನ್ಯಾದಿಗಳಮೇಲೂ ಮಮತೆ ಯನ್ನು ಬಿಟ್ಟು ಅರವತ್ತು ದಿನಗಳವರೆಗೂ ಅಗ್ನಿಪುರುಷನನ್ನು ಕುರಿತು ಯಾಗವನ್ನು ಮಾಡಿದರು. ಇದರಿಂದ ಅಗ್ನಿಪುರುಷನು ತೃಪ್ತನಾಗಿ, ಆ ದಂಪತಿಗಳೆದುರಿಗೆ ಪ್ರತ್ಯಕ್ಷನಾಗಿ ಬಂದು, ಸತ್ಪುತ್ರನು ಹುಟ್ಟುವಂತೆ ವರವನ್ನು ಕೊಟ್ಟು ಅಂತರ್ಧಾನವನ್ನೈದಿದನು. ಕೆಲವು ದಿನಗಳಬಳಿಕ ಆ ರಾಜಪತ್ನಿಯು ಗರ್ಭವನ್ನು ಧರಿಸಿದಳು. ಗರ್ಭಕಳೆಯಾದರೋ ಶುಕ್ಲ ಪಕ್ಷದ ಚಂದ್ರನ ಕಳೆಯನ್ನು ಅಲಿಗಳೆಯುತ್ತಾ ದಿನೇದಿನೇ ಹೆಚ್ಚುತ್ತಲಿ ತ್ತು, ನವಮಾಸವು ತುಂಬಿದಕೂಡಲೇ ಆ ಮುಖಾರಾಜ್ಞಿಯು ಸುಕುಮಾ ರನೂ, ಸುಂದರನೂ ಆದ ಒಳ್ಳೆ ಕುವರನನ್ನು ಹೆತ್ತಳು. ರಾಜನು ತನಗೆ ಸುಪುತ್ರರತ್ನವು ಲಭಿಸಿದ್ದನ್ನು ಕೇಳಿಬೊಡನೇ, ಅನೇಕ ಬ್ರಾಹ್ಮಣರಿಗೆ ಕೋಟಿಪ್ರಕಾರವಾಗಿ ಧನವನ್ನೂ, ಅನೇಕ ಅಗ್ರಹಾರಗಳನ್ನೂ, ಮಾನ್ಯ ಗಳನ್ನೂ, ದಾನವಂಮಾಡಿ, ಜಾತಕರ್ಮಾದಿ ಸಕಲಕಾರ್ಯಗಳನ್ನೂ ಸಾಂ ಗವಾಗಿ ನೆರವೇರಿಸಿದ ಬಳಿಕ, ಅಗ್ನಿಪುರುಷನಿಂದ ಲಭಿಸಿದ ಆಕುಮಾ ರನಿಗೆ ಅಗ್ನಿದತ್ತನೆಂಬುದಾಗಿಯೇ ನಾಮಕರಣವಂ ಮಾಡಿಸಿದನು. ಐದನೆಯ ಸಂವತ್ಸರದವರೆಗೂ ಬಹಳ ಅಕ್ಕರೆಯಿಂದ ಸಾಕಿ ಅನಂತರ ಐದನೆಯ ಸಂವತ್ಸರವು ಆರಂಭವಾದ ಕೂಡಲೇ ಅಕ್ಷರಾಭ್ಯಾಸವನ್ನು ಮಾಡಿಸಿ ಸದ್ಗು ರುಗಳ ಮೂಲಕ ಸಕಲ ವಿದ್ಯೆಗಳಲ್ಲಿಯೂ ಪರಿಣತನಾಗಲೆಂದು ಏರ್ಪಡಿಸಿ ದನು. ಅಗ್ನಿದತ್ತನೂ ಕೂಡ ಕೆಲವು ಕಾಲದಲ್ಲಿಯೇ, ಧರ್ಮಶಾಸ್ತ್ರವಿನ ಕಲಶಾಸ್ತ್ರಗಳಲ್ಲಿಯೂ, ಧನುರ್ವಿದ್ಯೆಯಲ್ಲಿಯೂ, ವಿವಾಸ್ತ್ರಗಳಪ್ರಯೋ ಗ ಉಪಸಂಹಾರಗಳಲ್ಲಿಯೂ ಪೂರ್ಣವಾದ ಪಾಂಡಿತ್ಯವನ್ನು ಪಡೆದನು. ಯುದ್ಧಗಳಲ್ಲಿ ವ್ಯೂಹರಚನೆಯನ್ನೂ, ಅವುಗಳ ಭೇದಗಳನ್ನೂ ಕಲಿತನು. ಈರೀತಿಯಲ್ಲಿ ಅಗ್ನಿದತ್ತಮಹಾರಾಯನು ಸಕಲಕಲೆಗಳಲ್ಲಿಯೂ ಸಂಪೂರ್ಣವಾದ ಪಾಂಡಿತ್ಯವನ್ನು ಪಡೆದು, ತಂದೆಯ ಸಭೆಯಲ್ಲಿ ವಿದ್ವಾಂಸರೊಂದಿಗೆ ಸೇರಿ ನ್ಯಾಯಾನ್ಯಾಯಗಳನ್ನು ವಿಚಾರ ಮಾಡುತ್ತಿದ್ದನು.

ಹೀಗಿರುವಲ್ಲಿ ಒಂದಾನೊಂದು ದಿನ ಆ ಜಿತಕೀರ್ತಿಮಹಾರಾಯನ ಸಭೆಗೆ ಕೆಲವು ದೂತರು ಬಂದು ರಾಜನನ್ನು ಕುರಿತು ಮಹಾಪ್ರಭೂ! ಕಾಶೀದೇಶವನ್ನು ಪಾಲಿಸುತ್ತಿರುವ ಶಶಾಂಕಮಹಾರಾಯನಿಗೆ ಶರತ್ಕಾಲ ಚಂದ್ರಿಕಾಮಣಿಯೆಂಬ ಕನ್ಯಾರತ್ನವಿರುವುದು. ಆ ರಾಜನು ತನ್ನ ಕುವ ರಿಯ ಸ್ವಯಂವರ ಮಹೋತ್ಸವವನ್ನು ಸಕಲದೇಶಗಳಲ್ಲಿಯೂ ಪ್ರಕಟಿಸಿ ದ್ದುವನ್ನು. ಅನೇಕ ರಾಜ್ಯಾಧಿಪತಿಗಳಾದ ರಾಜರುಗಳು ಕಾಶೀದೇಶಕ್ಕೆ ಹೋಗುತ್ತಲಿರುವರು.

ಮಹಾಸ್ವಾಮಿಯವರೂ ಕೂಡ ಪುತ್ರಸಮೇತರಾಗಿ ದಯಮಾಡಿಸಬೇಕೆಂದು ಸಾರಿ ಮುಂದಕ್ಕೆ ಹೊರಟುಹೋದರು. ಅಗ್ನಿದತ್ತಮಹಾರಾಯನು ಈ ಸುದ್ದಿಯನ್ನು ಕೇಳಿದನು, ಕೂಡಲೇ ತಂದೆಯಾದ ಜಿತಕೀರ್ತಿಮಹಾರಾಯನನ್ನು ಕುರಿತು, ಜನಕಾ! ನಾನು ಕಾಶೀಪಟ್ಟಣಕ್ಕೆ ಹೋಗಿ ಆ ಕರತ್ಕಾಲಚಂದ್ರಿಕಾಮಣಿಯನ್ನು ಮದುವೆ ಮಾಡಿಕೊಳ್ಳಬೇಕೆಂದು ನುಡಿಯಲು, ರಾಜನು ಕುವರನನ್ನು ಕುರಿತು, ಮಗೂ! ದೂತರಮಾತಿಗೆ ಬೆರಗಾಗಿ ನೀನು ಆ ಕನ್ಯೆಯನ್ನು ಮದುವೆ ಮಾಡಿಕೊಳ್ಳಬೇಕೆಂದು ಇಚ್ಛಿಸಿರುವಿ, ಮುನ್ನೂರಡಿಗಳ ಎತ್ತರವಿರುವ ಒಂದು ಸ್ತಂಭವನ್ನೂ, ಅದರ ಮೇಲೆ ಒಂದು ಶುಕಯಂತ್ರವನ್ನೂ ಇಟ್ಟಿರುವುದೆಂದೂ, ಆ ಸ್ತಂಭದ ಬುಡದಲ್ಲಿ ಒಂದು ದೊಡ್ಡಕನ್ನಡಿಯನ್ನಿಟ್ಟಿರುವುದಾಗಿಯೂ, ಆ ಕನ್ನಡಿಯಲ್ಲಿ ಕೆಳಗಡೆ ನೋಡುತ್ತಾ ಒಂದೇಬಾಣದ ಪೆಟ್ಟಿನಿಂದ ಮೇಲ್ಗಡೆಯಿರುವ ಆ ಶುಕಯಂತ್ರವನ್ನು ಭೇದಿಸಿದವರನ್ನು ಆರಾಜಕುವರಿಯು ವರಿಸುವಂತೆಯೂ ಕಾಶೀರಾಯನು ಪ್ರಕಟಿಸಿರುವನಂಗತಿಯು ನನಿಗೆ ತಿಳಿದುಬಂದಿದೆ. ನೀನು ಹುಡುಗಾಟವಾಗಿ ಆ ಕುವರಿಯನ್ನು ಮದುವೆ ಮಾಡಿಕೊಳ್ಳಲಿಚ್ಛಿಸಿದೆ. ಈ ಯಂತ್ರವು ದೇವತೆಗಳಿಗೆಸಾಧ್ಯವೇಹೊರತು ಮನುಷ್ಯರಿಗೆ ಲಭಿಸುವುದಿಲ್ಲ. ಅಲ್ಲಿಗೆ ನಾವು ಹೋಗಿ ಅವಮಾನ ಪಡುವುದು ಸರಿಯಲ್ಲ, ನಿನಗೆ ಆ ರಾಜಪುತ್ರಿಯು ಬೇಡ, ಇವಳಿಗಿಂತಲೂ ಸುಂದರಿಯರಾದ ಅನೇಕ ಕನ್ನಿಕೆಯರನ್ನು ತಂದು ನಿನಗೆ ಮದುವೆ ಮಾಡುವೆನೆಂದು ನುಡಿದನು. ಅಗ್ನಿದತ್ತನು ತಂದೆಯನ್ನು ಕುರಿತು, ತಂದೆಯೇ ನೀನು ಹೀಗೆ ಮಾತನಾಡಬಹುದೇ! ಅನೇಕ ಶಸ್ತ್ರಾಸ್ತ್ರಗಳನ್ನು, ಧನುರ್ವಿದ್ಯೆಯನ್ನೂ ನಾನು ಕಲಿತಿರುವೆ? ಅಂತಹ ದೊಡ್ಡ ಸಭೆಯಲ್ಲಿತಾನೇ ಹೆಸರುವಾಸಿಯನ್ನು ಪಡೆಯಬೇಕು? ಸೂರ್ಯವಂಶದ ರಾಜರು ಇಂತಹ ಧನುಸ್ಸಿಗೆ ಹೆದರಬೇಕೆ? ಸರ್ವವನ್ನೂ ಆಪೋಶನವಾಗಿ ತೆಗೆದುಕೊಳ್ಳುವ ಯಜ್ಞಪುರುಷನ ವರದಿಂದ ಜನಿಸಿರತಕ್ಕ ನನಿಗೆ ಈ ಬಿಲ್ಲು ಒಂದು ಅಸಾಧ್ಯವೇ? ತಂದೆಯೇ! ಯಾವಯೋಚನೆಯನ್ನೂ ಮಾಡದೆ ನಾನು ಆ ಕಾಶೀಪಟ್ಟಣಕ್ಕೆ ಹೋಗಲು ಅಪ್ಪಣೆ ಕೊಡಬೇಕೆಂಬ ಅಗ್ನಿದತ್ತಮಹಾರಾಯನ ಮಾತುಗಳನ್ನು ಕೇಳಿದ ಕೂಡಲೇ ಆ ಜಿತಕೀರ್ತಿಮಹಾರಾಯನ ಗುಂಡಿಗೆಯು ಧಸ್ಸಾರೆಂದು ಒಡೆದು, ಯೇನೂ ತೋರದೆ, ಸ್ವಲ್ಪಹೊತ್ತಿಗೆ ಚೇತರಿಸಿಕೊಂಡು, ಕುವರನೆ! ನೀನು ಹೀಗೆ ಯೋಚಿಸಬಹುದೆ? ನಾನು ಇದುವರೆಗೆ ಅನೇಕ ಯಂತ್ರಗಳನ್ನು ನೋಡಿರುವೆನು. ಈ ಶುಕಯಂತ್ರವಾದರೋ ಅತ್ಯಲ್ಪಶಕ್ತವಾದದ್ದು, ಇಂದಾತ್ರ ದಿದೇವತೆಗಳಿಗೂ ಸಾಧ್ಯವಲ್ಲವೆಂದು ನಾನಾಪ್ರಕಾರವಾಗಿ ಹಿತವಚನಗಳನ್ನು ನುಡಿದರೂ ಆ ಅವಿವೇಕಿಯು

ಕನೆ! ನಾನು ಈಗಲೇ ಕಾಶೀಪಟ್ಟಣಕ್ಕೆ ಹೊರಟು ಹೋಗುವೆನು. ಶಕ್ತಿಮಾಂ ಕಮಹಾರಾಯನು ಇಟ್ಟಿರತಕ್ಕ ಆ ಶುಕಯಂತ್ರವನ್ನು ಭೇದಿಸಿ ಆ ಶರತ್ಕಾಲಚಂದ್ರಿಕಾಮಣಿಯನ್ನು ಮುದುವೆ ಮಾಡಿಕೊಂಡು ಪಟ್ಟಣಕ್ಕೆ ಬರುವೆನು. ಹಾಗೆ ಆಗದಿದ್ದರೆ ಪುನಃ ಈ ಊರಿಗೆ ಬರುವುದಿಲ್ಲವೆಂದು ಥಟ್ಟನೆ ಸಭೆಯಿಂದೆದ್ದ ಕೂಡಲೇ ರಾಜನು ಅತ್ಯಂತ ಮುಖವಿಂದಲೂ, ಪುತ್ರವಾತ್ಸಲ್ಯವಿಂದಲೂ ನಿನ್ನೂ ಮಾಡಲಾರದೆ ತನ್ನ ಪತ್ನಿಯೊಡನೆ ಆಲೋಚಿಸಿ, ಪುತ್ರನನ್ನು ಚತುರಂಗಬಲಸಹಿತವಾಗಿ ಕಳುಹಿಸಿ, ಪುತ್ರನೆ, ನಿನಗೆ ಆ ಶುಕಯಂತ್ರವು ಸಾಧ್ಯವಾಗದಿದ್ದರೆ ಪಟ್ಟಣಕ್ಕೆ ಹಿಂದಿರುಗಿ ಬಂದುಬಿಡೆಂದು ಹೇಳಿ ಕಳುಹಿಸಿದನು. ಆ ಅಗ್ನಿದತ್ತನು ಸೇನಾಸಮೇತನಾಗಿ ಹೊರಟು ಕೆಲವು ದಿನಗಳೊಳಗೆ ಕಾಶೀ ಪಟ್ಟಣವನ್ನು ಹೋಗಿ ಸೇರಿದನು.

ಆಬಳಿಕ ಕಾಶಿ ರಾಜನ ಸಭಾಮಂಟಪಕ್ಕೆ ಹೋದನು. ಆ ಹೊತ್ತಿಗೆ ಅನೇಕರಾಜರೂ ಸೇರಿದ್ದರು. ರಾಜಪುರೋಹಿತನು ಸಭಾಸ್ಥಾನಕ್ಕೆ ಬಂದು, ರಾಜಾಧಿರಾಜರುಗಳಿರಾ! ಇಲ್ಲಿರುವ ಈಶುಕಯಂತ್ರವನ್ನು ಕೆಳಗೆಡೆ ಇಟ್ಟಿರುವ ಕನ್ನಡಿಯಲ್ಲಿ ನೋಡಿಕೊಂಡು ಒಂದೇಬಾಣದಿಂದ ಯಾರು ಹೊಡೆಯುವರೋ ಅಂತಹ ರಾಜನ ಕೊರಳಿಗೆ ನಮ್ಮ ರಾಜಪುತ್ರಿಯು ಪುಷ್ಪಮಾಲೆಯನ್ನು ಹಾಕುವಳೆಂದು ನುಡಿದಕೂಡಲೇ ಅಲ್ಲಿ ನೆರೆದಿದ್ದ ರಾಜರೆಲ್ಲಾ ಕ್ರಮಪ್ರಕಾರವಾಗಿ ಬಂದು ಆ ಶುಕಯಂತ್ರಕ್ಕೆ ಲಕ್ಷ್ಯವನ್ನಿಡಲಾರದೆ ವಿಫಲಮನಸ್ಕರಾಗಿ ತಮ್ಮ ತಮ್ಮ ಬಿಡಾರಕ್ಕೆ ಹಿಂದಿರುಗಿದರು. ಅಗ್ನಿದತ್ತಮಹಾರಾಯನೂ ಕೂಡ ಆ ಜನಸಂಘದಲ್ಲಿ ದಾರಿ ಮಾಡಿಕೊಂಡು, ಆ ಯಂತ್ರದಬಳಿ ಬಂದು ನೋಡಿ ಶುಕಯಂತ್ರವನ್ನು ಭೇದಿಸಲಾರದೆ ಹಿಂದಿರುಗಿ ತನ್ನ ಬಿಡಾರಕ್ಕೆ ಹಿಂದಿರುಗಿದನು, ಅಲ್ಲಿ ಅಗ್ನಿದತ್ತಮಹಾರಾಯನು ಶುಕಯಂತ್ರವನ್ನು ಭೇದಿಸಲಿಲ್ಲವಕಾರಣ ತನ್ನ ಮನಸ್ಸಲ್ಲಿ ಬಹುವಾಗಿ ಚಿಂತಿಸಿ, ಅಯ್ಯೋ! ದೇವರೆ! ನಾನು ಪುಡುಗತನದಿಂದ ತಂದೆಯ ನೀತಿವಾಕ್ಯವನ್ನುಲ್ಲಂಘಿಸಿ ಇಲ್ಲಿಗೆ ಬಂದು ಭಗ್ನಮನಸ್ಕನಾದೆನಲ್ಲಾ! ಇನ್ನು ಏನುಮಾಡಲಿ, ಅಯ್ಯೋ! ನಾನು ಇನ್ನು ಆ ಶರತ್ಕಾಲಚಂದ್ರಿಕಾಮಣಿಯನ್ನು ಮುದುವೆ ಮಾಡಿಕೊಳ್ಳಲಿಪ್ಪವೇಲೆ ಊರಿಗೆ ಹೋಗಿ ಅವಮಾನಪಡುವುದಕ್ಕಿಂತ ಎಲ್ಲಿಯಾದರೂ ಹೋಗಿ ಪ್ರಾಣವನ್ನು ಬಿಡುವುದೇಯುಕ್ತವು, ಅಯ್ಯೋ! ನಾನು ಹಾಗೆಮಾಡಿದರೆ ಆತ್ಮಹತ್ಯಾದೋಷಕ್ಕೆ ಪಾತ್ರನಾಗುವೆನು. ಇದರಿಂದ ನರಕದ ಬಾಗಿಲನ್ನು ಹೋಗಬೇಕಾದೀತು, ಸರ್ವಥಾ ಈ ಮಾರ್ಗವು ನ್ಯಾಯವಲ್ಲ. ಇನ್ನೇನೂ ತೋಚುವುದಿಲ್ಲಾ! ಎಂದು ನಾನಾಪ್ರಕಾರವಾಗಿ ಚಿಂತಿಸಿ, ಕಡೆಗೆ ತಪೋವೃತ್ತಿಯನ್ನವಲಂ

ಕೊಂಡು, ತಾನು ಉಟ್ಟಿದ್ದ ದಿವ್ಯವಸ್ತ್ರಾಭರಣಗಳನ್ನೂ, ಧರಿಸಿದ್ದ ರತ್ನಾಭರಣಗಳನ್ನೂ ತೆಗೆದುಕೊಂಡು ಒಂದು ಗಂಟುಕಟ್ಟಿ, ಸೈನಿಕರಬಳಿ ಇಟ್ಟು ತಾನು ನಾರುವಸ್ತ್ರಗಳನ್ನು ಧರಿಸಿ, ಅರ್ಧರಾತ್ರಿಯಲ್ಲಿ ಸೈನಿಕರು ಕಾಣದಂತೆ ಅರಣ್ಯಮಾರ್ಗವನ್ನು ಹಿಡಿದನು. ಬಳಿಗಾದಮೇಲೆ ಸೈನಿಕರೆಲ್ಲಾ ರಾಜಪುತ್ರನನ್ನು ಎಲ್ಲೆಲ್ಲಿಯೂ ಹುಡುಕಿದರು, ರಾಜಪುತ್ರನ ಉಡಿಗೆತೊಡಿಗೆಗಳೂ, ದಿವ್ಯರತ್ನಾಭರಣಗಳೂ ಕಾಣಿಸಿದವಲ್ಲದೆ ರಾಜಪುತ್ರನ ಹೆಸರೇ ಇಲ್ಲದಿರಲು ಬಹಳ ದುಃಖದಿಂದ ಆ ಉಡಿಗೆತೊಡಿಗೆಗಳನ್ನು ತೆಗೆದುಕೊಂಡು ತಮ್ಮದೇಶಕ್ಕೆ ಹಿಂದಿರುಗಿಹೋಗುತ್ತಿದ್ದರು.

ಆ ಅಗ್ನಿದತ್ತನಾದರೋ ದಟ್ಟವಾದ ಅಡವಿಗಳಲ್ಲಿ ನುಗ್ಗಿಬರುತ್ತಿರುವಾಗ ಕಾಲಿಗೆ ಮುಳ್ಳುಗಳು ಚುಚ್ಚಿಕೊಂಡು ವ್ಯಥೆಯನ್ನು ಅನುಭವಿಸುತ್ತಲೂ, ಸೂರ್ಯನ ಕಿರಣಗಳ ಜ್ವಾಲೆಯಿಂದ ಎಂದು ದುಃಖಿಸುತ್ತಲೂ, ಕಗ್ಗಾಡಿನಲ್ಲಿ ನಡೆಯಲಾರದೆ, ಕಂಬಿ, ಕುಂಬಿ, ಬಳಲಿ, ಬೀಸತ್ತು ನುರಿದ ನೆರಳಲ್ಲಿ ಅಲ್ಲಲ್ಲಿಯೇ ನಿಂತು ನಿಂತು, ಕಟ್ಟಕಡೆಗೆ ಜಟಿಲಮಹಾಮುನಿಯ ಆಶ್ರಮದ ಬಳಿ ಬಂದು, ಆ ಮಹಾಮುನಿಯ ಪಾದಾರವಿಂದಗಳಿಗೆ ಅಡ್ಡಬಿದ್ದು, ಋಷಿಶ್ರೇಷ್ಠನೆ! ನಾನು ಒಬ್ಬ ದಿಕ್ಕಿಲ್ಲದ ರಾಜಪುತ್ರನು, ಮೋಕ್ಷಾಪೇಕ್ಷೆಯುಳ್ಳವನಾಗಿ ನಿನ್ನ ಶಾಸ್ತ್ರಿಷ್ಯಕ್ಕೆ ಬಂದಿರುವನು. ನಿನ್ನ ಶಿಷ್ಯಮಂಡಲಿಗೆ ನನ್ನನ್ನೂ ಸೇರಿಸಿಕೊಂಡು ನನ್ನನ್ನು ಕಾಪಾಡಬೇಕೆಂದು ಕೇಳಿಕೊಂಡನು ಜಟಿಲಮುನಿಯಾದರೋ, ರಾಜಾತ್ಮಜಾ! ತಪೋವೃತ್ತಿಯು ಕಾಡಿನಲ್ಲಿ ಕಷ್ಟಪಟ್ಟು ಅಭ್ಯಾಸವಾಗಿರುವವನಿಗೆ ಸಹಿಸಲಸದಳವಾಗಿರುವಲ್ಲಿ ಕೋಮಲಾಂಗನಾಗಿ ಅರಮನೆಯ ಉಪ್ಪರಿಗೆಯಮೇಲೆ ಪವಡಿಸಿ ಸುಖನಿದ್ರೆಯುಂಗ್ಯೆಯುವ ಬಾಲನಾದ ನಿನಗೆ ಅರಣ್ಯವಾಸವು ಸಾಧವಲ್ಲವು. ಹುಡುಗಾಟದಿಂದ ನೀನು ನಿನ್ನ ತಾಯಿತಂದೆಗಳ ಮಾತನ್ನುಲ್ಲಂಘಿಸಿ ಬಂದಿರುವಂತೆ ಕಾಣುವುದು. ನಿನ್ನ ಬಂದದಾರಿಯನ್ನು ಹಿಡಿದು ಹೊರಟುಹೋಗುವೆಂದು ನುಡಿಯಲು, ಅಗ್ನಿದತ್ತನು ಜಟಿಲಮಹಾಮುನಿಯ ಈವಾಕ್ಯವನ್ನು ಕೇಳಿದಕೂಡಲೆ ನೀರಿನಿಂದ ತುಂಬಲ್ಪಟ್ಟ ಕಣ್ಣುಗಳುಳ್ಳವನಾಗಿ, ಮಹಾನುಭಾವನೆ! ನಾನು ಮೋಕ್ಷಾಪೇಕ್ಷೆಯಿಂದ ದಟ್ಟವಾದ ಈ ಕಾಡಿನಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿಕೊಂಡು ಬಂದೆನಾದರೂ ನಿನ್ನ ಈತೆರನಾದ ಅನಾದರದಿಂದ ನಾನು ಪ್ರಾಣಗಳನ್ನು ಕಳೆದುಕೊಳ್ಳುವೆನೇ ಹೊರತು ಎಂದೆಂದಿಗೂ ಊರನ್ನು ಸೇರಲಾರೆನೆಂದು ಮುನಿಯವರಿಗೆ ಅಡ್ಡಬಿದ್ದನು, ಜಟಿಲಮಹಾಮುನಿಯು ಕನಿಕರದಿಂದ ಆ ರಾಜನಂದನನನ್ನು ಹತ್ತಿರದಲ್ಲಿ ಕುಳ್ಳಿರಿಸಿಕೊಂಡು, ರಾಜಾತ್ಮಜಾ! ನೀನು ನಿನ್ನ ದುಃಖವನ್ನು ಬಿಟ್ಟುಬಿಡು, ನಿನ್ನ ಕಷ್ಟಗಳೆಲ್ಲಾ ಪರಿಹಾರವಾಗಿ, ನಿನ್ನಿಷ್ಟಸಿದ್ಧಿಯಾಗುವಂತೆಯೂ, ಈಶ್ವರದರ್ಶನವು ನಿನಗೆ ಲಭಿಸಿ ಮೋ

ಕ್ಷವನ್ನು ಕೊಡುವಂತೆಯೂ ನಾನು ವರವನ್ನು ಕೊಟ್ಟು ಪಂಚಮುದ್ರಿಕೆಯನ್ನು ಉಪದೇಶಮಾಡುವೆನು. ಇದೇ ನಿನಗೆ ಮೋಕ್ಷಕ್ಕೂ ಇಷ್ಟಸಿದ್ಧಿಗೂ ಕಾರಣವೆಂದು ಇಂತೆಂದನು.

ಪಂಚಮುದ್ರಿಕೆಯ ಪ್ರಭಾವದ ವಿವರವು.

ಪುಣ್ಯಶಾಲಿಯಾದ ಅಗ್ನಿದತ್ತನೆ! ಭಕ್ತಿಶ್ರದ್ಧೆಯುಳ್ಳವನಾಗಿ ದೇವರಹಸ್ಯವನ್ನು ಕೇಳು. ಅನೇಕಾನೇಕ ಮುನೀಯರು ಗುರುಮುಖದಿಂದ "ಓಂ ನಮಶ್ಶಿವಾಯ" ಎಂಬ ಐದು ಬೀಜಾಕ್ಷರಗಳಿಂದ ಕೂಡಿದ ಪಂಚಮುದ್ರಿಕೆಯನ್ನು ಉಪದೇಶಮಾಡಿಸಿಕೊಂಡು, ಶಿವಸಾನ್ನಿಧ್ಯವನ್ನು ಪಡೆದು ಮುಕ್ತರಾದರು. ನೀನೂಕೂಡ ಅವನ್ನು ಗ್ರಹಿಸಿ, ಪಂಚಾಕ್ಷರಿಗಳುಳ್ಳ ಸ್ಥಾನವನ್ನು ತೋರಿಸಿ, ಓಂಕಾರವನ್ನು ನಿಲ್ಲಿಸಿ, ಆಪ್ರಣವಸ್ವರೂಪನನ್ನು ವರ್ಣಿಸಿ ಹೇಳು; ಅಗ್ನಿದತ್ತನೆ, ನೀನು ಪದ್ಮಾಸನದಲ್ಲಿ ಕುಳಿತು, ಸ್ಥಿರಚಿತ್ತದಿಂದ ಮುಖವನ್ನು ಕಣ್ಣುಗಳಲ್ಲಿ ನಿಲ್ಲಿಸಿಕೊಂಡು, ಕಣ್ಣುಗಳನ್ನು ತೆರೆದು ದೃಷ್ಟಿಯನ್ನು ಮೂಗಿನ ಕೊನೆಯಮೇಲೆ ಬೀಳುವಂತೆ ಮಾಡಿಕೊಂಡು, ಚನ್ನಾಗಿ ನೋಡಿ ಕಾಣುವುದನ್ನು ನನಿಗೆ ಹೇಳು. ಇದೇ ಭೂಚಾರವು, ಇದಕ್ಕೆ ಭೂಮಿಯು ಅಧಿದೇವತೆಯು.

ಮಹಾನುಭಾವನೆ! ನೀನು ಪದ್ಮಾಸನದಲ್ಲಿ ಕುಳಿತು, ಸ್ಥಿರಚಿತ್ತನಾಗಿ, ಮುಖವನ್ನು ಮೇಲಕ್ಕೆತ್ತಿ, ಕಣ್ಣುಗಳನ್ನು ಮುಚ್ಚಿಕೊಂಡು, ತ್ರಿಕೂಟಸ್ಥಾನದಲ್ಲಿ ದೃಷ್ಟಿಯನ್ನಿಟ್ಟರೆ, ಅದು ಅಂತರ್ದೇಚರಿ ಎಂದೆನ್ನು, ನೇತ್ರಗಳನ್ನು ತೆರೆದು ನೋಡಿದರೆ ಅದು ಬಹಿರ್ದೇಚರಿ ಎಂದೆನ್ನು, ನೀನು ಈ ಎರಡು ವಿಧಗಳನ್ನೂ ನೋಡಿ ಹೇಳು. ಇದು ಖೇಚರೀಮುದ್ರೆಯನ್ನುಸಿಕೊಳ್ಳುವುದು. ಇದಕ್ಕೆ ಆಕಾಶವು ಅಧಿದೇವತೆಯು, ರಾಜನಂದನಾ! ಪದ್ಮಾಸನದಲ್ಲಿ ಕುಳಿತು, ನಡುವನ್ನು ಬಗ್ಗಿಸಿ, ಮುಖವನ್ನು ಸಮವಾಗಿ ನಿಲ್ಲಿಸಿಕೊಂಡು, ಕಣ್ಣುರೆಪ್ಪೆಗಳಿಂದ ಕುರುಡನಹಾಗೆ ಬಗ್ಗಿಸಿ, ಅಲ್ಲಿ ನಿಲ್ಲುವ ಜ್ಯೋತಿಯನ್ನು ಸೇರಿಸಿಕೊಂಡು, ಒಳಗಡೆ ನೋಡು. ಇದು ಅಂತರ್ಲಕ್ಷ್ಯಮುದ್ರೆಯು, ಇದಕ್ಕೆ ಸೂರ್ಯಚಂದ್ರರು ಅಧಿದೇವತೆಗಳು. ಪುಣ್ಯಶೀಲನೆ! ಪದ್ಮಾಸನದಲ್ಲಿ ಕುಳಿತು, ನಡುವನ್ನು ಬಗ್ಗಿಸಿ, ಆರು ಜಿರಳುಗಳಿಂದ ಕಣ್ಣು, ಕಿವಿ, ಮೂಗುಗಳ ರಂಧ್ರಗಳನ್ನು ಮುಚ್ಚಿಕೊಂಡು, ಪ್ರಾಣಾಪಾನಗಳನ್ನು ಒಂದಾಗಿ ಸೇರಿಸಿ, ತ್ರಿವೇಣಿ ಸಂಗಮವಾದ ದೃಷ್ಟಿಯಲ್ಲಿ ಹಂಸವನ್ನು ಸೇರಿಸಿನೋಡು, ಇದು ಷಣ್ಮುಖಮುದ್ರೆಯು, ಇದಕ್ಕೆ ಗುರುವು ಅಧಿದೇವತೆಯು, ಅಗ್ನಿದತ್ತನೆ! ಎಡಗಾಲುಮಂಡಿಯನ್ನು ಏರ್ಪಯ ಕೆಳಗೆ ಮಾಡಿ, ಮತ್ತೊಂದು ಕಾಲಿನ ಮಂಡಿಯನ್ನು ತುಳಿದುಕೊಂಡು, ಸಂದಿನಲ್ಲಿ ತಲೆಯನ್ನು ಸೇರಿಸಿ, ತೊಡೆಗಳ ಮೇಲೆ

ಹಂಸವನ್ನು ನಿಲ್ಲಿಸಿ, ನಡುವನ್ನು ಚನ್ನಾಗಿ ನೀಡಿ, ಪ್ರಾಣಾಪಾನಗಳನ್ನು ಒಂದಾಗಿ ಮಾಡಿಕೊಂಡು, ಹಂಸವನ್ನು ತ್ರಿವೇಣಿಸಂಗಮದಲ್ಲಿಟ್ಟು ನೋಡು, ಇದಕ್ಕೆ ಶಾಂಭವೀಮುದ್ರೆಯೆಂದು ಹೆಸರು. ಇದಕ್ಕೆ ಶಿವನು ಅಧಿದೇವತೆಯು. ಈ ಐದು ಮುದ್ರೆಗಳ ಸ್ಥಿತಿಯನ್ನು ನಿನಿಗೆ ಬೋಧಿಸಿರುವೆನು, ಈ ಪಂಚಮುದ್ರೆಗಳನ್ನೂ ಪರೀಕ್ಷಿಸಿ ನೋಡೆನ್ನಲು, ಆಧೀರನಾದ ಅಗ್ನಿದತ್ತನು ಹೆಚ್ಚಾದ ಧೈರಾಗ್ಯವನ್ನು ತಾಳಿ, ಸಮಾಧಿಯಲ್ಲಿ ನಿಂತು, ಒಂದೊಂದು ಮುದ್ರೆಯನ್ನೂ ಪರೀಕ್ಷಿಸಿ, ಅದರಲ್ಲಿ ಕಂಡ ಅಂಶವನ್ನು ಪರೀಕ್ಷಿಸುತಾ, ಈ ಐದು ಮುದ್ರೆಗಳನ್ನೂ ಪರೀಕ್ಷಿಸುತಾ, ಅತ್ಯಾನಂದವನ್ನು ಹೊಂದಿ, ಮುನಿನಾಥನ ಪಾದಗಳಿಗೆ ಅಡ್ಡಬಿದ್ದು, ಮಹಾತ್ಮಾ! ಭೂಚರಿ ಮುದ್ರೆಯಿಂದ ವಿಶೇಷವಾಗಿ ಸೂರ್ಯಚಂದ್ರಬಿಂಬಗಳನ್ನು ಹೋಗೊಡಿಸಿ, ಕ್ಷಣವಾತ್ರವೂ ನಿಲ್ಲದೆ, ಅಲ್ಲಲ್ಲಿಗೇ ಲಯಿಸುತ್ತಿರುವುದೇ ಹೊರತು ನಿಲುಕಡೆಯಿಲ್ಲವು, ಭೂಚರ ಮುದ್ರೆಯಿಂದಷ್ಟೇನೂ ಪ್ರಯೋಜನವು ಕಾಣಲಿಲ್ಲ. ಖೇಚರಿ ಮುದ್ರೆಯು ಹೆಚ್ಚಾದಕಷ್ಟವೇ ಆದಾಗ್ಯೂ ಕೂಡ, ವಿಧವಿಧವಾದ ತಳುಕುಗಳೂ, ಮಂಡಲತ್ರಯವೂ, ಚಿತ್ರವಿಚಿತ್ರವಾದ ವರ್ಣಗಳೂ ಕಾಣಬರುವವು. ಅಂತರ್ಲಕ್ಷ್ಯಮುದ್ರೆಯು ಹೆಚ್ಚಾದ ಆಶ್ಚರ್ಯವನ್ನೂ, ಷಡಾಧಾರಗಳನ್ನೂ, ವಿಧವಿಧವಾದ ತಳಿಕುಗಳನ್ನೂ, ಹೆಚ್ಚಾದ ಪ್ರಕಾಶವನ್ನೂ ತೋರ್ಪಡಿಸುವುದು, ಷಣ್ಮುಖಮುದ್ರೆಯು ಬಹುಕಷ್ಟತರವಾದದ್ದು. ವಿಧವಿಧವಾಗಿ ದಶವಿಧನಾದಗಳನ್ನು ಕೇಳುತಾ, ವಿಧವಿಧವಾದ ತಳಕುಗಳನ್ನೂ, ಕಳಗಳನ್ನೂ ದಾಟಿ, ಷಟ್ಚಕ್ರಗಳನ್ನು ಮೀರಿ, ಜ್ಯೋತಿಸ್ಪ್ರಕಾಶವೊಳು ನಿಂತು ನೋಡಿದೆನು. ಶಾಂಭವೀ ಮುದ್ರೆಯನ್ನು ಪಡೆಯುವುದು ಇವೆಲ್ಲಕ್ಕಿಂತಲೂ ಕಷ್ಟವೇ ಆದಾಗ್ಯೂ ಮಿಕ್ಕವೆಲ್ಲಕ್ಕಿಂತಲೂ ಶ್ರೇಷ್ಠವೆಂದು ನನಿಗೆ ತೋರುವುದು. ಹೆಚ್ಚಾದ ಆನಂದವನ್ನೀಯುವುದು, ಸೂರ್ಯಚಂದ್ರನ ಕಾಂತಿಗೆ ಮಿಂಚಿದ ತಿಳಕುಗಳಲ್ಲಿ ಬಯಲಿಗೆ ಬಂದಹಾಗೆ ಆಯಿತೆಂದು ಅಗ್ನಿದತ್ತನು ನುಡಿಯಲು, ಅಗ್ನಿದತ್ತನ ಈ ಮಾತುಗಳನ್ನು ಕೇಳಿಪೊಡನೆಯೇ ಜಟಿಲಮುನಿಗೆ ಪರಮಾನಂದ ಉಂಟಾಗಿ ರಾಜಪುತ್ರನನ್ನು ಮುತ್ತಿಟ್ಟು ಹತ್ತಿರ ಕುಳ್ಳಿರಿಸಿಕೊಂಡನು. ರಾಜಪುತ್ರನೂ ಕೂಡ ಎಡೆಬಿಡದೆ ಜಟಿಲಮುನಿಯ ಶುಶ್ರೂಷೆಯನ್ನು ಮಾಡುತಾ ಕಾಲವಂ ಕಳೆಯುತ್ತಲಿದ್ದನು. ಅತ್ತ ಇವನ ಜೊತೆಯುಲ್ಲಿದ್ದ ಸೈನಿಕರಾದರೋ ಅಗ್ನಿದತ್ತನನ್ನು ಕಾಣದೆ ದುಃಖಿಸುತಾ, ಊರನ್ನು ಸೇರಿ, ರಾಜನಾದ ಜಿತಕೀರ್ತಿಯೊಂಬಿಗೆ ಹೇಳಿದರು. ರಾಜನೂ ರಾಜಪತ್ನಿಯೂ ಪುತ್ರನಿಯೋಗದಿಂದ ಚಿನ್ನರಾಗಿ ದುಃಖಿಸುತ್ತಿದ್ದರು. ಬಹುಕಾಲವಾದರೂ ಪುತ್ರನ ವರ್ತಮಾನವೇ ಗೊತಾಗದಿರಲು,

ದತ್ತನು ಆರಾಜಪುಗಳೆಲ್ಲಾ ಚದರಿಹೋಗುವಂತೆಯೂ, ಹೆದರಿಬಿದರುವಂತೆಯೂ, ಧನುಷ್ಟಂಕಾರವಂ ಮಾಡಿ, ಬಾಣವನ್ನು ಬಿಲ್ಲಿಗೆ ತಗಲಿಸಿ, ಕೆಳಗಿರುವ ಕನ್ನಡಿಯೆಲ್ಲಿ ಆ ಶುಕಯಂತ್ರವನ್ನು ಲಕ್ಷಿಸಿ, ಜಟಿಲಮುನಿಯನ್ನು ಮನದಲ್ಲಿ ಧ್ಯಾನಮಾಡುತ್ತಾ, ಹೊಡೆದಕೂಡಲೆ. ಆ ಬಾಣವು ಚಟಪಟವೆಂದು ಧ್ವನಿಮಾಡಿ ಅಗ್ನಿಕಣಗಳನ್ನು ಹಾರಿಸುತ್ತಾ, ಮೇಲಕ್ಕೆ ಹೋಗಿ ಆ ಶುಕಯಂತ್ರವನ್ನು ಭೇದಿಸಿ ಕೆಳಕ್ಕೆ ಕಡವಿತು. ಆಗ ಶಶಾಂಕಮಹಾರಾಯನು ಮೂರ್ಛಿನಮೇಲೆ ಚೇರಳಿಬ್ಬುಕೊಂಡು, ಅಯ್ಯೊ! ಮುಂದೇನುಗತಿ! ರಾಜಾಧಿರಾಜರುಗಳು ಯಾರೂ ಈ ಯಂತ್ರವನ್ನು ಭೇದಿಸಲಾರದಿರುವಲ್ಲಿ ಈ ಮುನಿಪುತ್ರನು ಇದನ್ನು ಭಂಗಿಸಿದನಲ್ಲಾ! ಏನುಮಾಡಲಿ! ನನ್ನ ಸುಂದರ ಸುಕುಮಾರಿಯಾದ ಮಗಳನ್ನು ಹೇಗೆ ಕಾಡಪಾಲುಮಾಡಲಿ! ದೇವರೇ! ನಾನೇಕೆ ಈಶುಕಯಂತ್ರದ ಪ್ರತಿಜ್ಞೆಯನ್ನಿಟ್ಟೆನೊ! ಅಯ್ಯೊ! ಎಂದು ದುಃಖಿಸುತ್ತಾ ಮೂರ್ಛೆಯಂ ಪಡೆದನು. ಶರತ್ಕಾಲಚಂದ್ರಿಕಾವಾಣಿಯು ತಂದೆಯ ದುಃಖವನ್ನು ತಿಳಿದು, ಪತ್ತಿಗಕ್ಕೆ ಬಂದು, ಶೈತ್ಯೋಪಚಾರಗಳಿಂದ ಎಚ್ಚರಗೊಳಿಸಿ, ತಂದೆಯನ್ನು ಕುರಿತು, ಜನಕಾ! ಈತನು ನೋಡುವುದಕ್ಕೆ ಮುನಿಪುತ್ರನಂತೆ ಕಾಣುವನಾದರೂ ಇವನು ಮುನಿಪುತ್ರನಲ್ಲ. ಇಂದ್ರನೊ, ಚಂದ್ರನೊ, ಉಪೇಂದ್ರನೊ ಯಾರೋ ಒಬ್ಬರು ಈ ವೇಷವನ್ನು ಧರಿಸಿ ಬಂದಿರಬಹುದು. ಇವನ ಮುಖದಲ್ಲಿ ರಾಜ್ಯಲಕ್ಷ್ಮಿಯು ತಾಂಡವಾಡುತ್ತಿರುವಳು. ಶರೀರ ಮಾತ್ರ ಕುಷ್ಕದಂತೆ ಆಗಿರುವುದು. ನೀನು ಯಾವ ಯೋಚನೆಯೂ ಮಾಡಕೂಡದು. ಅವನ ವರ್ತಮಾನವನ್ನು ಶಾಂತವಾಗಿ ತಿಳಿದುಕೊಳ್ಳೋಣ್ಣಲು, ಶಶಾಂಕಮಹಾರಾಯನು ಅಗ್ನಿದತ್ತನ ಚತುರಂಗಬಲವನ್ನು ಕರೆದು, ಈರಾಜಪುತ್ರನವರ್ತಮಾನವನ್ನು ಕೇಳಿಲು, ಅವರು ಶಶಾಂಕನನ್ನು ಕುರಿತು, ಮಹಾರಾಯನೆ! ಈತನು ಆಂಧ್ರದೇಶಾಧೀಶನಾದ ಜಿತಕೀರ್ತಿಮಹಾರಾಯನ ಮಗನು, ಅಗ್ನಿಪುರುಷನ ವರದಿಂದ ಸುಟ್ಟಿ ಅಗ್ನಿದತ್ತನೆಂಬ ನಾಮಧೇಯವುಳ್ಳವನು ಈ ಶರತ್ಕಾಲಚಂದ್ರಿಕಾವಾಣಿಯನ್ನು ಮದುವೆ ಮಾಡಿಕೊಳ್ಳಲು ಈಗ ಎರಡು ವರ್ಷಗಳಿಂದಲೂ ಮುನಿಯು ವೃತ್ತಿಯನ್ನವಲಂಬಿಸಿ, ಋಷಿಶಿಕ್ಷೆಯೆನ್ನು ಮಾಡಿ, ಈ ಶುಕಯಂತ್ರವನ್ನು ಭೇದಿಸಲು ಸಾಧ್ಯವಾಗುವಂತೆ ಪಂಚಮುದ್ರಿಕೆಗಳನ್ನು ಅಭ್ಯಾಸಮಾಡಿ, ಸಾಂಬಮೂರ್ತಿಯ ಮತ್ತು ಸೂರ್ಯಚಂದ್ರರ ಕೃಪೆಗೆ ಪಾತ್ರನಾಗಿ, ಈ ಶುಕಯಂತ್ರವನ್ನು ಭೇದಿಸಿದ ಪುಣ್ಯಮೂರುತಿಯೆಂದು ನುಡಿದರು. ಶಶಾಂಕಮಹಾರಾಯನು ಇದನ್ನು ಕೇಳಿದ ಕೂಡಲೇ ಸಂತೋಷಸಮುದ್ರದಲ್ಲಿ ಮುಳುಗಿ, ಆ ಸುಕುಮಾರನನ್ನು ಬಾಚಿ ತಬ್ಬಿಕೊಂಡು, ಮಹಾನುಭಾವನೇ! ನೀನು ನನ್ನ ವಂಶವನು

ಉದ್ಧಾರವಾಗಬೇಕೆಂದು ಜನಿಸಿದ ಅವತಾರಪುರುಷನು. ನಿನ್ನಿಂದ ನಾ
ನೂ ನನ್ನ ಕುಲವೂ ಪವಿತ್ರವಾದವೆಂದು ಸಂತೋಷಿಸುತ್ತಿರುವಲ್ಲಿ, ಆ ಕರ
ತ್ಕಾಲಚಂದ್ರಿಕಾಮಣಿಯು ಪೂರ್ಣಚಂದ್ರನ ಕಳೆಗಳಂತೆ ಹೊಳೆಯುತಾ
ಸಖಿಯರೊಂದಿಗೆ ಕೈಯಲ್ಲಿ ಪೂಮಾಲೆಯನ್ನು ಹಿಡಿದುಕೊಂಡುಬಂದು
ರಾಜಪುತ್ರನ ಕೊರಳಿಗೆ ಹಾಕಿದಳು. ಸಭಿಕರೆಲ್ಲಾ ಕೈಚಪ್ಪಾಳೆ ಹೊಡೆ
ದರು. ನೆರೆದಿದ್ದ ರಾಜಕುಮಾರಿಲ್ಲಾ ತಲೆಯನ್ನು ಬಗ್ಗಿಸಿಕೊಂಡು ತಮ್ಮ
ತಮ್ಮ ದೇಶಕ್ಕೆ ಹಿಂದಿರುಗಿದರು. ಅನಂತರ ಶಶಾಂಕಮಹಾರಾಯನು
ಅಳಿಯನನ್ನು ಪಟ್ಟದಾನೆಯಮೇಲೆ ಕೂಡಿಸಿ ನೆರವಣಿಗೆ ಮಾಡಿಸಿ, ಮನೆ
ಗೆ ಕರೆದುಕೊಂಡುಬಂದು ತೈಲಾಭ್ಯಂಜನವಂ ಮಾಡಿಸಿ, ದಿವ್ಯವಸ್ತ್ರಾಭ
ರಣಗಳಿಂದಲಂಕರಿಸಿ, ಶುಭಮುಹೂರ್ತದಲ್ಲಿ ಕರತ್ಕಾಲಚಂದ್ರಿಕಾಮಣಿಗೂ
ಅಗ್ನಿದತ್ತಮಹಾರಾಯನಿಗೂ ವಿವಾಹಮಹೋತ್ಸವವನ್ನು ನೆರವೇರಿಸಿದ
ನು. ಅಗ್ನಿದತ್ತನಾದರೋ, ಸುಖಸಂತೋಷದಿಂದ ಮಾವನಮನೆಯಲ್ಲಿ
ಯೇ ಮೂರುತಿಂಗಳವರೆಗೂ ಕರತ್ಕಾಲಚಂದ್ರಿಕೆಯೊಂದಿಗೆ ಸುಖಸಂತೋ
ಷಗಳನ್ನನುಭವಿಸುತ್ತಲಿದ್ದು, ತನ್ನ ಪಟ್ಟಣಕ್ಕೆ ಹೊರಡಬೇಕೆಂದಾತೋಚಿ
ಸಿ, ಮಾವನು ಬಳಿವಳಿಯಾಗಿಕೊಟ್ಟ ಚತುರಂಗಬಲವನ್ನೂ, ದಿವ್ಯವಸ್ತ್ರಾ
ಭರಣಗಳನ್ನೂ ತೆಗೆದುಕೊಂಡು, ಕರತ್ಕಾಲಚಂದ್ರಿಕಾಮಣಿಯನ್ನು ಜೊ
ತೆಯಲ್ಲಿ ಕರೆದುಕೊಂಡು, ತನ್ನ ಸೇನಾಸಮೇತನಾಗಿ ಪಟ್ಟಣಕ್ಕೆ ಹಿಂದಿ
ರುಗಿದನು. ಅಂಭ್ರದೇಶವನ್ನು ಬಹುಕಾಲ ತೆರಿಗೆ ಕೀಳು, ಜನರೀಜನ
ಕರ ಪಾದಾರವಿಂದಗಳಿಗೆ ನಮಸ್ಕಾರವಂ ಮಾಡಿದನು. ಕರತ್ಕಾಲಚಂ
ದ್ರಿಕಾಮಣಿಯೊಕೂಡ ಅತ್ತೆಮಾವಂದಿರಪಾದಗಳಿಗೆ ಅಡ್ಡಬಿದ್ದಳು. ಕಾ
ಶೀರಾಜನಾದ ಶಶಾಂಕಮಹಾರಾಯನೂ, ರಾಜಪತ್ನಿಯೂ ಅವರೀರ್ವರ
ನ್ನೂ ಆಶೀರ್ವದಿಸಿ ಆಲಿಂಗನವಂ ಮಾಡಿಕೊಂಡು, ಅಗ್ನಿದತ್ತನವರ್ತಮಾ
ನವನ್ನೆಲ್ಲಾ ಕೇಳಿ ಸಂತೋಷಪಟ್ಟು ಶುಭಮುಹೂರ್ತದಲ್ಲಿ ಅವರೀರ್ವರಿಗೂ
ವಿವಾಹವನ್ನು ಸಂಭ್ರಮದಿಂದ ನಡೆಯಿಸಿ ನೇತ್ರಾನಂದವನ್ನು ಪಡೆದರು.
ಕೆಲವುದಿನಗಳಾದಮೇಲೆ ಅಗ್ನಿದತ್ತನಿಗೇ ರಾಜ್ಯಾಭಿಷೇಕವನ್ನು ಮಾಡಿಸಿ
ದನು. ಪಟ್ಟಾಭಿಷಿಕ್ತನಾದ ಅಗ್ನಿದತ್ತನಾದರೋ, ಗುರುವಾದ ಜಟಿಲ
ಮಹರ್ಷಿಯನ್ನು ಸದಾಧ್ಯಾನಿಸುತ್ತಾ, ತನ್ನ ಸಾಹಸದಿಂದ ಸಕಲರಾಜ
ರನ್ನೂ ಗೆದ್ದು, ಏಕಾಧಿಪತ್ಯವನ್ನು ಕೊಂಡಿ, ಮುನಿಗಳನ್ನೂ ದೇವಬ್ರಾ
ಹ್ಮಣರನ್ನೂ ಪೂಜಿಸುತಾ, ಯಜ್ಞಯಾಗಾದಿಗಳಿಂದ ದೇವತೆಗಳನ್ನು ತೃ
ಪ್ತಿಪಡಿಸುತಾ, ಕರತ್ಕಾಲಚಂದ್ರಿಕಾಮಣಿಯೊಂದಿಗೆ ಸುಖದಿಂದ ಏಕಪತ್ನೀ
ವ್ರತಸ್ಥನಾಗಿ ಇದ್ದು, ಅನಂತರ ದೇಹತ್ಯಾಗವನ್ನು ಮಾಡಿ, ಶಿವಸಾಯು
ಜ್ಯವನ್ನು ಪಡೆದನೆಂದು ಶಿವಶರ್ಮಮುನಿಯು ಬಾಲಚಂದ್ರನಿಗೆ [illegible]

ಅರ್ಜುನನು ಅತ್ಯದ್ಭುತವಾದ ಈ ಅಗ್ನಿದತ್ತನ ಕಥೆಯನ್ನು ಕೇಳಿ ಪರಮಾ
ಶ್ಚರ್ಯವನ್ನು ಹೊಂದಿ,ಮಹಾನುಭಾವನಾದ ಕೃಷ್ಣಸ್ವಾಮಿಯೆ! ನಿನ್ನ ದಯೆ
ಯಿಂದ ನಾನು ಧನ್ಯನಾದೆನು. ಪಂಚಮುದ್ರಿಕೆಗಳ ಪ್ರಭಾವವನ್ನು ಚ
ನ್ನಾಗಿ ತಿಳಿದೆನು. ನಿದ್ರೆಯು ಕಣ್ಣುಗಳನ್ನು ಮುಚ್ಚುತ್ತಲಿರುವುದು,
ಮಲಗಿಕೊಳ್ಳೋಣವೆನ್ನಲು, ಶ್ರೀಕೃಷ್ಣನು ಹಾಗೆಯೇಆಗಲೆಂದು ವಿಶ್ರ
ಮಿಸಿಕೊಳ್ಳುತ್ತಿದ್ದರೆಂಬಲ್ಲಿಗೆ ಶ್ರೀಕೃಷ್ಣ ಬೋಧಾಮೃತಸಾರದೊಳು ನಾಲ್ಕ
ನೆಯ ಅಧ್ಯಾಯ ಸಂಪೂರ್ಣವು.

ಐದನೆಯ ಕಥಾರಂಭವು.

ಐವನೆಯೆವಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ, ಆ ಯಮುನಾನದಿ
ಯ ಮರಳ ದಿಬ್ಬದಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತಾ ಸು
ಗಂಧವನ್ನು ಲೇಪಿಸಿಕೊಂಡು, ದಿವ್ಯಪರಿಮಳಯುಕ್ತವಾದ ಕುಸುಮಂಗ
ಳನ್ನು ಆಘ್ರಾಣಿಸುತ್ತಾ, ಮಂದಮಾರುತನ ತಂಗಾಳಿಗೆ ಅತ್ಯಾನಂದವ
ನ್ನು ಹೊಂದಿ, ಸಂತೋಷದಿಂದಿರುವಲ್ಲಿ, ಅರ್ಜುನನು ನಾರಾಯಣನನ್ನು
ಕುರಿತು, ದೇವದೇವೋತ್ತಮ! ದುರಿತನಿವಾರಕಾ! ಮಹಾನುಭಾವನೆ!
ತಾರಕಯಂತ್ರವನ್ನು ಹೃದ್ಗೋಚರವಾಗುವಂತೆ ಒಂದು ಸುಚರಿತ್ರೆಯ
ಮೂಲಕ ನನಿಗೆ ಬೋಧಿಸಬೇಕೆಂದು ಬೇಡಿಕೊಳ್ಳಲು, ಶ್ರೀಕೃಷ್ಣನು,
ಕೇಳೈ ಪಾರ್ಥ, ತಾರಕಮಂತ್ರಪ್ರಭಾವವು ಅತಿನಿಚಿತ್ರವಾದದ್ದು. ವಿಚಿತ್ರ
ವಾಹನನೆಂಬ ಮಹಾರಾಯನ ಕಥೆಯಿಂದ ಈ ತಾರಕಮಂತ್ರಪ್ರಭಾವ
ವನ್ನು ನಿನಗೆ ತಿಳಿಯಪಡಿಸುವೆನೆಂದು ಇಂತೆಂದನು.

ವಿಚಿತ್ರವಾಹನ ಮಹಾರಾಯನ ಕಥೆ.

ಕೇಳೈ ಅರ್ಜುನಾ! ಪೂರ್ವದಲ್ಲಿ ಪಾಂಚಾಲದೇಶವನ್ನು ಚಿತ್ರಾಶ್ವ
ನೆಂಬ ಮಹಾರಾಜನು ಪಾಲಿಸುತ್ತಿದ್ದನು. ಆ ಅರಸನಿಗೆ ಚಿತ್ರ, ಚಿತ್ರಕ,
ಚಿತ್ರವಾಹನ, ವಿಚಿತ್ರವಾಹನರೆಂಬ ನಾಲ್ವರುಮಕ್ಕಳಿದ್ದರು. ಆ ರಾಜ
ನು ತನ್ನ ಮೊದಲನೆಯ ಮೂವರು ಮಕ್ಕಳಿಗೂ ಕ್ರಮಪ್ರಕಾರವಾಗಿ ಮ
ಗಧ, ಮಾಳವ, ಮತ್ಸ್ಯದೇಶಗಳ ರಾಜಪುತ್ರಿಯರನ್ನು ವಿವಾಹಮಾಡಿದ್ದ
ನು. ಕಿರಿಯವನಾದ ವಿಚಿತ್ರವಾಹನನಿಗೂ ವಿವಾಹವಂ ಮಾಡಲೋಸುಗ
ದೇಶದೇಶಗಳ ರಾಜಪುತ್ರಿಯರ ಚಿತ್ರಪಟಗಳನ್ನು ತಂದು ತೋರಿಸಿದರೂಕೂ
ಡ ಆ ವಿಚಿತ್ರವಾಹನನು ಬೇಡವೆಂದು ತಲೆಯನ್ನಲ್ಲಾಡಿಸಿ, ತಂದೆಗೆ ನಮ
ಸ್ಕಾರಮಾಡಿ, ತಂದೆಯೆ! ಈ ಪಟಗಳಲ್ಲಿರುವ ರಾಜಪುತ್ರಿಯರಾರೂ ನನಗೆ
ಇಷ್ಟ ನನಗೆ ಮದುವೆಯೂ ಬೇಡವೆಂದ ಕಿರಿಯಮಗನ ಮಾತುಗಳನ್ನು

ಕೇಳಿ ತಾಯಿತಂದೆಗಳು ಮಗನನ್ನು ಮುತ್ತಿಟ್ಟುಕೊಂಡು, ಮಗುವೆ! ನಿನ್ನ ವಿವಾಹಮಹೋತ್ಸವವನ್ನು ನಾವು ನೋಡಬೇಕೆಂದಿರುವೆವು. ನಮ್ಮ ಇಷ್ಟವನ್ನು ನೀನು ನೆರವೇರಿಸಬೇಕೆಂದೂ, ತನ್ನನ್ನು ನೋಡಿದವರೆಲ್ಲಾ ಮದುವೆಮಾಡಿಕೊಳ್ಳಿಂದೂ, ನಾನಾಪ್ರಕಾರವಾಗಿ ನುಡಿಯುತ್ತಿರುವುದನ್ನೂ ವಿಚಿತ್ರವಾಹನನು ಕೇಳಿ, ಅಯ್ಯಯ್ಯೋ! ನನ್ನನ್ನು ನೋಡಿದವರೆಲ್ಲಾ ಚಿಕ್ಕವರೂ ದೊಡ್ಡವರೂ ಕೂಡ ಮದುವೆಯಾಗೆನ್ನುವರು. ತಾಯಿತಂದೆಗಳೂ, ಸಹೋದರರೂ ನಾನು ಮದುವೆಯಾಗಲಿಲ್ಲವೆಂದು ನನ್ನೊಂದಿಗೆ ಮಾತನ್ನೇ ಆಡುವುದಿಲ್ಲ. ಒಳ್ಳೇದು, ನಮ್ಮ ಅತ್ತಿಗೆಯರ ಅಭಿಪ್ರಾಯವು ಹೇಗಿರಬಹುದೋ ತಿಳಿಯಬೇಕೆಂದು ಯೋಚಿಸಿ, ತನ್ನ ದೊಡ್ಡತ್ತಿಗೆಯಿರುವ ಶೃಂಗಾರಚಾವಡಿಯಲ್ಲಿ ಯಾರೂ ಕಾಣದಂತೆ ಅಡಗಿಕೊಂಡಿದ್ದನು. ಅಲ್ಲಿಗೆ ಸ್ವಲ್ಪಹೊತ್ತಾದಮೇಲೆ ಮೂವರು ಅತ್ತಿಗೆಯರೂ ಬಂದರು. ಅಲ್ಲಿ ಅವರು ಅಲಂಕಾರವಂ ಮಾಡಿಕೊಳ್ಳುತ್ತಾ ಯಿರುವಲ್ಲಿ, ದೊಡ್ಡ ಅತ್ತಿಗೆಯಾದ ಮಗಧದೇಶದ ರಾಜಪುತ್ರಿಯು ನಿಕ್ಕವರನ್ನು ನೋಡಿ, ತಂಗಿಯರೆ! ನಮ್ಮ ಮೈದುನನಿಗೂ ಮದುವೆಯಾದಮೇಲೆ ನಾವು ನಾಲ್ವರು ಅಕ್ಕತಂಗಿಯರಾಗುತ್ತೇವೆ. ತಂಪೆತಾಯಿಗಳು ಹೇಳಿದರೂ ನಮ್ಮ ಮೈದುನನು ಮದುವೆಯೇ ಆಗಲೊಲ್ಲನೆಂದಳು. ಎರಡನೆಯ ಅತ್ತಿಗೆಯಾದ ಮಾಳವಿಯು ಅವನಿಗೆ ಸರಿಯಾದ ಕನ್ನೆಯು ಈ ಲೋಕದಲ್ಲೇ ಇಲ್ಲವೆಂತೆ ಎಂದಳು. ಮೂರನೆಯವಳಾದ ಮಾಂಡವಿಯು, ಅಕ್ಕಂದಿರಾ! ನಮ್ಮ ಮೈದುನನು ಬಾಳ ಸುಂದರ ಸುಕುಮಾರನು, ಧೈರ್ಯ, ಸಾಹಸ, ಯುಕ್ತಿಯುಳ್ಳ ಧೀರನು, ಅತನಿಗೆ ಸರಿಯಾದ ಕನ್ನೆಯರೇ ಇಲ್ಲವೆಂಬುದು ನಿಜವೆ. ಪಾಂಡ್ಯರಾಜಪುತ್ರಿಯಾದ ತ್ರಿಲೋಕಸುಂದರೀಮಣಿಯು ನಮ್ಮ ಮೈದುನನಿಗೆ ಸರಿಯಾದ ಕನ್ನೆಯು, ಆರಾಜಪುತ್ರಿಯ ಹೆಸರು ತ್ರಿಲೋಕಸುಂದರೀವಾಣಿಯು. ಆ ಸುಂದರಿಯನ್ನು ಒಬ್ಬ ರಾಕ್ಷಸಿಯು ಎತ್ತಿಕೊಂಡು ಹೋಗಿ ದಕ್ಷಿಣಸಮುದ್ರದ ಆಚೆನದಡದಲ್ಲಿಟ್ಟುಕೊಂಡಿರುವಳಂತೆ. ಆ ತ್ರಿಲೋಕಸುಂದರೀಮಣಿಯು ನಮ್ಮ ಚಿಕ್ಕತಂಪೆಯ ಮಗಳಾದ್ದರಿಂದ ನಾನು ಅವಳನ್ನು ನೋಡಿರುವೆ ನೆಂದಳು. ಅವರೆಲ್ಲಾ ಆಶ್ಚರ್ಯಪಟ್ಟು ತಂಗಿಯೇ! ಆ ತ್ರಿಲೋಕಸುಂದರೀಮಣಿಯ ರೂಪಲಾವಣ್ಯ ಸದ್ಗುಣಗಳನ್ನೂ, ಆ ಸುಂದರಿಯನ್ನೂ ರಾಕ್ಷಸಿಯು ಕರೆದುಕೊಂಡುಹೋದ ಕಾರಣವನ್ನೂ, ಆ ರಾಕ್ಷಸಿಯವೃತ್ತಾಂತವನ್ನೂ ನಮಗೆ ಮರೆವಾಚವೆ ಹೇಳಬೇಕೆನ್ನಲು ಆ ಮಾಂಡವಿಯು ಇಂತೆಂದಳು.

ಅಕ್ಕಂದಿರಾ! ಕೇಳಿ, ತ್ರಿಲೋಕಸುಂದರೀಮಣಿಯ ಸೌಂದರ್ಯವನ್ನು ವರ್ಣಿಸಲು ನನಿಗೆ ಸಾಧ್ಯವೆ? ಆದಿಶೇಷನು ಒಂದೇನಾಲಿಗೆಯಿಂದ ಆ

ಸುಂದರಿಯನ್ನು ವರ್ಣಿಸಲಾರದೆ ಸಹಸ್ರನಾಲಿಗೆಯುಳ್ಳವನಾಗಿರುವನಂತೆ. ಆ ಪೂರ್ಣಚಂದ್ರವದನೆಯನ್ನು ಸೃಷ್ಟಿಸುವುದಕ್ಕಾಗಿಯೇ ಬ್ರಹ್ಮನು ನಾಲ್ಕು ತಲೆಗಳನ್ನುಳ್ಳವನಾಗಿರುವನಂತೆ. ಆ ಸುವರ್ಣಛಾಯೆಯುಳ್ಳ ಸುಕುಮಾರಿಯನ್ನು ನೋಡಲು ಕಣ್ಣುಸಾಲದೆ ದೇವೇಂದ್ರನು ಸಹಸ್ರನೇತ್ರಂಗಳುಳ್ಳವನಾಗಿರುವನಂತಲ್ಲಾ! ಚಕೋರಪಕ್ಷಿಗಳು ಆ ಚಂದ್ರವದನೆಯ ಮುಖವನ್ನು ಚಂದ್ರಬಿಂಬವೆಂದು ಭ್ರಮಿಸಿದ್ದನ್ನು ನೋಡಿ, ಆ ಇಂದುವು ಗುರ್ತುತಿಳಿಯಲೆಂದು ತನ್ನ ಬಿಂಬದಲ್ಲಿ ಕಳಂಕವನ್ನು ಇಟ್ಟುಕೊಂಡನಂತೆ. ರಂಭೆ, ಊರ್ವಶಿ, ತಿಲೋತ್ತಮೆಯೇ ಮೊದಲಾದ ಅಪ್ಸರಸ್ತ್ರೀಯರೂ, ದೇವಕನ್ನೆಯರೂ ಆ ಚಂದ್ರಮುಖಿಯ ಸೌಂದರ್ಯವನ್ನೂ ವಯೋಲಾವಣ್ಯವನ್ನು ನೋಡಿ, ನಾಚಿ, ದಕ್ಷಿಣದಿಕ್ಕಿನ ಸಂಚಾರವನ್ನೇ ಬಿಟ್ಟುಬಿಟ್ಟಿರುವರಲ್ಲಾ! ಆ ಸುಕುಮಾರಿಯನ್ನು ವರ್ಣಿಸಲು ನಾನು ಎಷ್ಟುಮಾತ್ರದವಳು. ಒಬ್ಬಿನೊಬ್ಬ ಘೋರರಕ್ಕಸಿಯು ತಪಸ್ಸನ್ನುಮಾಡಿ ತನ್ನ ತಪೋಮಹಿಮೆಯಿಂದ ಇಂದ್ರಾದಿ ಸಕಲದೇವತೆಗಳಿನ್ನೂ ಜಯಿಸಿ, ತ್ರಿಲೋಕಕಂಟಕ ಎಂಬ ಅನ್ವರ್ಥನಾಮವನ್ನು ಪಡೆದು, ಮಕ್ಕಳಮೇಲಿನ ಪ್ರೀತಿಯಿಂದ ಲೋಕದಲ್ಲೆಲ್ಲಾ ಸಂಚಾರಮಾಡುತ್ತಾ, ಲೋಕಸುಂದರಿಯೆಂಬಿಗಿದ್ದ ನಮ್ಮ ಚಿಕ್ಕತಂದೆಯ ಮಗಳಾದ ತ್ರಿಲೋಕಸುಂದರೀರಮಣಿಯನ್ನು ಹೊತ್ತುಕೊಂಡುಹೋಗಿ ಕಾಪಾಡುತ್ತಿರುವಳು. ಈ ಸುದ್ದಿಯು ನಮ್ಮ ಚಿಕ್ಕತಂದೆಗೆ ತಿಳಿದು ಅನೇಕ ಶೂರರನ್ನು ಕಳುಹಿಸಿದರೂ ಕೂಡ ಅವರಿಗೆ ಆ ರಕ್ಕಸಿಯು ಸಾಧ್ಯವಾಗಲಿಲ್ಲ. ಅನಂತರ ಅನೇಕಾನೇಕ ಮಂತ್ರವಾದಿಗಳನ್ನು ಕಳುಹಿಸಿದನು. ಅವರ ಮಂತ್ರತಂತ್ರಗಳೂ ನಿಷ್ಫಲವಾದವು. ಆಬಳಿಕ ನಮ್ಮ ಚಿಕ್ಕತಂದೆಯು ಇದು ನ್ಯಾಯೋಜನವಿಲ್ಲವೆಂದು ತಿಳಿದು, ಯಾರು ರಕ್ಕಸಿಯನ್ನು ಕೊಂದು ತ್ರಿಲೋಕಸುಂದರೀರಮಣಿಯನ್ನು ತರುವರೋ ಅಂತಹ ಶೂರರಿಗೇ ನಾನು ತ್ರಿಲೋಕಸುಂದರೀರಮಣಿಯನ್ನೇ ಕೊಟ್ಟು ಮದುವೆಮಾಡುವೆನಲ್ಲದೆ ನನ್ನ ಸರ್ವಸ್ವವನ್ನೂ ರಾಜ್ಯೈಶ್ವರ್ಯಗಳನ್ನೂ ಧಾರೆಯೆರೆಯುವೆನೆಂದು ದಂಡೋರೆ ಹೊಡೆಯಿಸಿರುವನು. ನಮ್ಮ ಮೈದುನನಿಗೆ ಆ ಸುಂದರಿಯು ದೊರೆತರೆ ಬಹಳ ಚೆನ್ನಾಗಿರುವುದಲ್ಲದೆ ಲೋಕನಾಯಕನೂ ಆಗುವನೆಂದಳು. ಮಾಂಡವಿಯು ಈ ಮಾತನ್ನು ಕೇಳಿದ ಕೂಡಲೆ ಮಿಕ್ಕ ಇಬ್ಬರು ಅತ್ತಿಗೆ ನಾದನಿಯರೂ ಪರಮಾಶ್ಚರ್ಯವನ್ನುಹೊಂದಿ ತಮ್ಮ ಅಲಂಕಾರಗಳೆಲ್ಲಾ ಆದಮೇಲೆ ಅವರವರ ಬಿಡಾರಕ್ಕೆ ಹೊರಟುಹೋದರು. ವಿಚಿತ್ರವಾಹನನಾದರೋ ಕತ್ತಲಾಗುವವರೆಗೂ ಅಲ್ಲಿಯೇ ಇದ್ದು, ಅನಂತರ ಹೊರಟುಬಂದವನಾಗಿ, ತನ್ನ ಬಿಡಾರವನ್ನು ಹೋಗಿ ಸೇರಿ, ರಾತ್ರಿಯೆಲ್ಲಾ ಆ ತ್ರಿಲೋಕಸುಂದರೀರಮಣಿಯನ್ನು ನ್ನು

ರಿಸುತ್ತಾ, ಕಾಮವಿಕಾರದಿಂದ ಭ್ರಾಂತನಾಗಿದ್ದನು. ಸ್ವಲ್ಪಹೊತ್ತಾದ ಬಳಿಕ ಅಯ್ಯೋ! ದೇವರೆ! ಆ ಸುಂದರಾಂಗಿಯು ನನಿಗೆ ಲಭಿಸುವುದುಂಟೆ? ಏನುಮಾಡಲೆಂದು ನಾನಾಪ್ರಕಾರವಾಗಿ ಚಿಂತಿಸುತ್ತಾ, ಏನೂತೋರದೆ, ಕಟ್ಟಕಡೆಗೆ ಒಳ್ಳೇದು, ಈಜನ್ಮದಲ್ಲಿಯೆಂತೂ ನನಿಗೆ ಆ ತ್ರಿಲೋಕಸುಂದರೀಮಣಿಯು ಲಭಿಸವಿದ್ದರೆ ಮುಂದಿನ ಜನ್ಮದಲ್ಲಿಯಾದರೂ ಲಭಿಸುವಂತೆ ನಾನು ತಪಸ್ಸನ್ನು ಮಾಡುವುದು ಉತ್ತಮವೆಂದು ತನ್ನ ಮನಸ್ಸನ್ನು ದೃಢಮಾಡಿಕೊಂಡು, ವೈರಾಗ್ಯಾತಿಶಯದಿಂದ ರಾಜ್ಯಕೋಶಗಳ ಮಮತೆಯನ್ನು ತೊರೆದುಬಿಟ್ಟನು. ಬೆಳಗಾದಕೂಡಲೆ ತಂದೆಯಬಳಿಗೆ ಹೋಗಿ, ನಮಸ್ಕಾರವಂ ಮಾಡಿ, ತಂದೆಯೇ! ನಾನು ಭೂಸಂಚಾರಾರ್ಥವಾಗಿ ಹೊರಟು, ನನಿಗೆ ಬೇಕಾದ ಕನ್ಯಕಾಮಣಿಯನ್ನು ವಿವಾಹಮಾಡಿಕೊಂಡು ಬರುವೆನೆಂದು ಅನುಜ್ಞೆಯಂ ಪಡೆದು, ಧನವಸ್ತ್ರಾಭರಣಂಗಳನ್ನು ತೆಗೆದುಕೊಂಡು, ಅಶ್ವಾರೂಢನಾಗಿ, ದಕ್ಷಿಣದಿಕ್ಕಿಗೆ ಪ್ರಯಾಣಮಾಡುತ್ತಾ, ದಟ್ಟವಾದ ಕಾಡುಗಳನ್ನು ಹೊಕ್ಕು, ಅಲ್ಲಲ್ಲಿ ದೊರೆಯುವ ಮಾಧುರ್ಯ ಫಲಗಳನ್ನು ಭಕ್ಷಿಸಿ, ತಿಳಿನೀರನ್ನು ಕುಡಿದು, ಮರದ ನೆರಳಲ್ಲಿ ಬಸಲಿನದಗೆಯ ತಾಪವನ್ನು ಹೋಗಲಾಡಿಸಿಕೊಂಡು, ಮುಂದಮುಂದಕ್ಕೆ ಪ್ರಯಾಣಮಾಡುತ್ತಾ ಇರುವಲ್ಲಿ ಭುಜಂಡಮುಹರ್ಷಿಯ ಆಶ್ರಮವು ಸಿಕ್ಕಿತು. ವಿಚಿತ್ರವಾಹನನು ಆ ಆಶ್ರಮವನ್ನು ಹೊಕ್ಕು, ಅಲ್ಲಿದ್ದ ಭುಜಂಡಮುಹರ್ಷಿಗೆ ಸಾಷ್ಟಾಂಗದಂಡಪ್ರಣಾಮವನ್ನು ಮಾಡಿದನು. ಋಷಿವರ್ಯನಾದರೊ ಆ ರಾಜಪುತ್ರನನ್ನು ಸಂತೈಸಿ, ರಾಜನಂದನಾ! ನೀನು ಯಾರು? ನಿನ್ನ ದೇಶವು ಯಾವುದು? ರಾಜ್ಯಕೋಶಗಳನ್ನೆಲ್ಲಾ ಬಿಟ್ಟು ಈ ಘೋರಾರಣ್ಯಕ್ಕೆ ಬರಲು ಕಾರಣವೇನೆಂದು ಕೇಳಲು, ಮಹಾನುಭಾವನೆ! ನಾನು ಪಾಂಚಾಲದೇಶದ ರಾಜಪುತ್ರನು. ನನಿಗಿಂತಲೂ ದೊಡ್ಡವರು ಮೂವರು ಮಕ್ಕಳು ನನ್ನ್ಯತಂದೆಗೆ ಇರುವರು. ಅವರು ರಾಜ್ಯಪಟ್ಟಾಭಿಷೇಕಕ್ಕೆ ಅರ್ಹರಾಗಿರುವುದರಿಂದ ನಾನು ವೈರಾಗ್ಯಬುದ್ಧಿಯುಳ್ಳವನಾಗಿ ತಪಸ್ಸನ್ನು ಮಾಡಬೇಕೆಂದು, ದಕ್ಷಿಣದಿಕ್ಕಿಗೆ ಪ್ರಯಾಣಮಾಡುತ್ತಾ ಬರುತ್ತಿರುವಲ್ಲಿ, ಮಹಾನುಭಾವರಾದ ತಮ್ಮ ಆಶ್ರಮವೂ ತಮ್ಮ ದರ್ಶನವೂ ನನಗೆ ಲಭಿಸಿದವು, ಇಂದಿಗೆ ನಾನು ಧನ್ಯನಾದೆನು. ವೈರಾಗ್ಯವನ್ನು ಹೊಂದಿರುವ ನನಗೆ, ಪುಣ್ಯಪ್ರದವೂ ಮುಕ್ತಿದಾಯಕವೂ ಆಗಿರುವ ತಾರಕಮಹಾಮಂತ್ರವನ್ನು ಬೋಧಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಂಡನು. ಭುಜಂಡಮುನಿಯು ರಾಜಪುತ್ರನಾದ ವಿಚಿತ್ರವಾಹನನ ಈಮಾತುಗಳನ್ನು ಕೇಳಿ, ರಾಜಪುತ್ರಾ! ನೀನು ತಪಸ್ಸುಮಾಡುವುದು ಬಹಳ ಸುಲಭವೆಂದು ಇಲ್ಲಿಗೆ ಬಂದಿರುವೆಯಾ? ಕಾಡಿನಲ್ಲಿ ವಾಸ

ಮಾಡಿಕೊಂಡು ಅನೇಕ ವರ್ಷಗಳಿಂದ ಇರುವ ನಮಿಗೇ ದುಸ್ತರವಾಗಿರುವಲ್ಲಿ, ರಾಜಪುತ್ರನೂ, ಸುಕುಮಾರನೂ, ಸುಂದರಾಂಗನೂ, ಅರಮನೆಯುಲ್ಲಿ ಆನಂದವನ್ನು ಅನುಭವಿಸುತ್ತಿರುವನೂ ಆದ ನಿನಗೆ ಸಾಧ್ಯವೆ? ಹುಡುಗಾಟದಿಂದ ನೀನು ಹಾಗೆ ಯೋಚಿಸಿ ಬಂದಿರುವಿ. ಇದು ನಿನಗೆ ಸಾಧ್ಯವೇ ಅಲ್ಲವು. ನಮ್ಮ ವನದಲ್ಲಿರುವ ಹಣ್ಣು ಹಂಪಲನ್ನು ಯಥೇಚ್ಛವಾಗಿ ತಿಂದು, ತಿಳಿನೀರನ್ನು ಕುಡಿದು, ನಿಮ್ಮ ರಾಜ್ಯಕ್ಕೆ ಹಿಂದಿರುಗಿ ಹೋಗಿಬಿಡಿ ಎಂದನು. ಭುಜಂಡಮುನಿಯ ಈ ನುಡಿಯನ್ನು ಕೇಳಿದ ಕೂಡಲೆ ರಾಜಪುತ್ರನು ಮುನಿಯಪಾದಾರವಿಂದಗಳನ್ನು ತನ್ನ ಕಣ್ಣೀರಿನಿಂದ ತೊಳೆದು, ಮಹಾನುಭಾವನೆ! ರಾಜ್ಯವೂ, ಕೋಶವೂ, ದೇಶವೂ, ಅರಮನೆಯೂ ನನಗೆ ಬೇಡ, ನಿನ್ನ ಪಾದಾರವಿಂದಗಳ ಪರಿಚರ್ಯದಿಂದ ನಾನು ಇಲ್ಲಿಯೇ ಕಾಲಹರಣವನ್ನು ಮಾಡುವೆನೆಂದು ಬೇಡಿ, ಅನೇಕ ವರ್ಷಗಳವರೆಗೂ ಆ ಮುನಿನಾಥನ ಸೇವೆಯನ್ನು ಮಾಡುತ್ತಿದ್ದನು. ರಾಜಪುತ್ರನಮೇಲೆ ಭುಜಂಡಮುನಿಗೆ ಹೆಚ್ಚಾದ ಕನಿಕರವುಂಟಾಯಿತು. ಅದರಿಂದ ಒಂದಾನೊಂದು ದಿವಸ ಆಮುನಿಶ್ರೇಷ್ಠನು ರಾಜಪುತ್ರನನ್ನು ನೋಡಿ, ರಾಜನಂದನಾ! ನೀನು ಹೆಚ್ಚಾದ ಪುಣ್ಯಾತ್ಮನು, ಅತ್ಯಂತರಹಸ್ಯವೂ, ದೇವತಾಯೋಗ್ಯವೂ ಆದ ತಾರಕಮಂತ್ರವನ್ನು ನಿನಗೆ ಉಪದೇಶಮಾಡುವೆನು. ನಿರ್ಮಲ ಚಿತ್ತನಾಗಿ ಸಾವಧಾನದಿಂದ ಕೇಳೆಂದು ಇಂತೆಂದನು.

ಭುಜಂಡಮಹಾಮುನಿಯು ವಿಚಿತ್ರವಾಹನನಿಗೆ ಬೋಧಿಸಿದ ತಾರಕಮಹಾಮಂತ್ರದ ಮಹಾತ್ಮ್ಯವು.

ರಾಜಕುವರಾ! ಪೂರ್ವದಲ್ಲಿ ದೇವೇಂದ್ರನು ತನ್ನ ಸಕಲ ಭೋಗಗಳನ್ನೂ ಕಳೆದುಕೊಂಡಾಗ, ತಾರಕಮಹಾಮಂತ್ರವನ್ನು ಧ್ಯಾನಿಸಿ ಪುನಃ ತನ್ನ ಪದವಿಯನ್ನು ಪಡೆದನು. ತ್ರಿಮೂರ್ತಿಗಳಿಗೂ ಪ್ರಣವವೇ ಮೂಲಮಂತ್ರವಾಗಿದೆ ಪಾರ್ವತೀದೇವಿಗೆ ಪರಮೇಶ್ವರನು ಉಪದೇಶಮಾಡಿದ್ದೇ ತಾರಕಮಂತ್ರವೆಂದು ತಿಳಿ. ಅನೇಕ ಮಹನೀಯರು ತಾರಕಮಂತ್ರಧ್ಯಾನದಿಂದ ಮೋಕ್ಷವನ್ನು ಪಡೆದರು, ತಾರಕವೆಂದರೆ ಪ್ರಣವವು. ಪ್ರಣವನಾದವಾದ ಓಂಕಾರದಲ್ಲಿ ಅಕಾರ, ಉಕಾರ, ಮಕಾರಗಳು ಹುಟ್ಟಿ ತ್ರಿಮೂರ್ತಿಗಳಾಗಿರುವರಲ್ಲವೆ, ಅಕಾರ, ಉಕಾರ, ಮಕಾರಗಳೇ ಪ್ರಣವಮಂತ್ರಗಳಾಗಿಯೂ, ಬ್ರಹ್ಮಜ್ಞಾನ ಚೈತನ್ಯವೇ ಬ್ರಹ್ಮವೆಂದೂ ಹೇಳುವ ಮಹಾವಾಕ್ಯಗಳಿಗನುಸಾರವಾಗಿ, ಚೈತನ್ಯಾತ್ಮಕವಾದ ಆತ್ಮರಾಮಬ್ರಹ್ಮವು ಸರ್ವಶರೀರದಲ್ಲಿಯೂ ವಾಯುವಿನ ವಿಧವಾಗಿ ಪ್ರವೇಶಮಾಡಿ, ಆತ್ಮನಲ್ಲಿ ಸೇರಿ, ಅಂತರ್ಬಹಿರ್ವ್ಯಾಪಕತ್ವನುಂಟಾಗಿ, ತ್ರಿಮೂರ್ತಿಗಳೇ ಮೊದಲಾದ ಅಂಗುಷ್ಠಶರೀರಪರ್ಯಂತವಾಗಿರುವ ಕಣ್ಣು ಗಳಿಗೆ ಭಂಗವಾಗದಂತೆ ಅಧಾ

ರವಾಗಿದ್ದು, ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಆರೋಹಣಾವರೋಹಣ ಗಳುಂಟಾಗಿ, ಷಡಾಧಾರಗಳಿಗೂ ಅತಿರೂಪನಾಗಿ ಸೂರ್ಯಚಂದ್ರ ನಾಡಿಗ ಳಲ್ಲಿ ದಿನಕ್ಕೆ ಇಪ್ಪತ್ತಾರಂತೆ ಸಾವಿರಾರು ನೂರು ನಡೆಯುತ್ತಮೆ. ಇದನ್ನೇ ಗಾಯತ್ರಿಯೆಂದೂ, ಜೀವೈಶ್ವರ್ಯೈಕ್ಯವಾದ ಬ್ರಹ್ಮವೆಂದೂ, ಮೌನಸ ಮಾಧಿಯೆಂದೂ, ತಾರಕಮಹಾಮಂತ್ರವೆಂದೂ ಹೇಳುವರು. ರೇಚಕಪೂರ ಕಾದಿಗಳಲ್ಲಿ ಸಕಾರ ಓಂಕಾರಗಳನ್ನು ಬಿಂದುಯುಕ್ತವಾದ ಅಕಾರವನ್ನು ಸೇರಿಸಿ,ಜಪಿಸುತ್ತಾ,ಸರ್ವಕಾಲಸರ್ವಾವಸ್ಥೆಗಳಲ್ಲಿಯೂಅವುಗಳನ್ನು ಬಂಧಿಸಿ, ಜ್ಞಾನೇಂದ್ರಿಯವಾದ ಜಿಹ್ವೇಂದ್ರಿಯವನ್ನು ಮಾರುತನಲ್ಲಿ ಸೇರಿಸಿ ಜಪಿಸುವುದರಿಂದ, ನಿಜವಾದ ತಾರಕಮಂತ್ರವನ್ನು ಅಭ್ಯಾಸಪರ ರಾದ ಕೆಲವರು ಹಂಸಾಕ್ಷರಧ್ವಯವನ್ನು ಸೇರಿಸಿ, ಜಪಿಸುವರು. ಹೇಳಿ ದಮಾತ್ರದಿಂದಲೇ ಗ್ರಹಿಸಿ ತಾರಕಮಂತ್ರ ಫಲವನ್ನು ಅನುಭವಿಸುವರು. ಶಿವಕೇಶವನಾಮಗಳೂ, ಪಂಚಾಕ್ಷರೀ, ಅಷ್ಟಾಕ್ಷರೀ, ಗಾಯತ್ರೀ ಮಹಾ ಮಂತ್ರಗಳೂ ಪ್ರಣವಮಾತ್ರಕ್ಕೆ ಸಮನಲ್ಲ. ಸಪ್ತಕೋಟಿಮಹಾಮಂತ್ರ ಗಳಿಗೆ ಪ್ರಣವವೇ ತಾಯಿಯು, ಅಂತಹ ಪ್ರಣವವನ್ನು ಬ್ರಹ್ಮದೇವನು ಸನಕ ಸನಂದನ ಸನತ್ಕುಮಾರ ನಾರದಾದಿಗಳಿಗೆ ಉಪದೇಶವಿತ್ತನು. ಅ ವರುಗಳೆಲ್ಲಾ ಆ ತಾರಕಮಂತ್ರಪ್ರಭಾವದಿಂದಲೇ ತ್ರಿಲೋಕಗಳಲ್ಲಿಯೂ ಪೂಜ್ಯರಾಗಿರುವರು. ನನಗೆ ನಾರದಮಹರ್ಷಿಯು ಉಪದೇಶಮಾಡಿದನು. ಇಂದು ನಾನು ನಿನಗೆ ಉಪದೇಶವಿತ್ತಿರುವೆನು. ಪುಣ್ಯಶೀಲನೆ! ಈ ಪರ ಮಮಂಗಲಪ್ರಭಾವವು ನಿನ್ನ ಪುಣ್ಯೋದಯದಿಂದ ನಿನಗೆ ಲಭಿಸಿರುವುದು. ನರಗಳನ್ನು ಬಂಧಿಸಿ, ವಾಯುವನ್ನು ನಿಯಮಿಸಿಕೊಂಡು, ಇಡಾಪಿಂಗಳ ನಾಡಿಗಳಲ್ಲಿ ಸಂಚರಿಸುವ ವಾಯುವಿನಿಂದ ಆ ಅಕ್ಷರದ್ವಯವನ್ನೂ ಸೇರಿಸಿ ಕೊಂಡು ನಾಲಗೆಯನ್ನು ಬಂಧಿಸಿ, ಜಪಿಸುತ್ತಾ ಇದ್ದರೆ ಆತ್ಮಾರಾಮಬ್ರ ಹ್ಮವು ನಿನ್ನ ಇಷ್ಟವನ್ನು ನೆರವೇರಿಸುವುದು, ಮೋಕ್ಷವೂ ಲಭಿಸುತ್ತದೆಂ ದು ಉಪದೇಶಮಾಡಿದನು. ರಾಜಪುತ್ರನಾದ ನಿಚಿತ್ರವಾಹನನಾದನೋ ಭಿಜಂಡಮಹರ್ಷಿಗೆ ಅತ್ಯಾನಂದದಿಂದ ನಮಸ್ಕಾರವಂ ಮಾಡಿ, ಮೌನವ ನ್ನು ಕೈಕೊಂಡು, ಪ್ರಣವಮಂತ್ರವನ್ನು ಜಪಿಸುತ್ತಿದ್ದನೆಂದು ಶ್ರೀಕೃಷ್ಣ ಮೂರುತಿಯು ಅರ್ಜುನನಿಗೆ ಹೇಳಲು, ಆ ಪಾರ್ಥನು ಪರಮಾಶ್ಚರ್ಯದಿಂದ ದೇವದೇವೋತ್ತಮನಾದ ಕೃಷ್ಣಸ್ವಾಮಿಯೆ! ತಾರಕಮಂತ್ರಪ್ರಭಾವ ದಿಂದ ನಾನು ಧನ್ಯನಾದೆನು. ಅದರ ಮರ್ಮವನ್ನೆಲ್ಲಾ ಬೋಧಿಸೆಂದು ಕೃಷ್ಣಸ್ವಾಮಿಯಿಂದ ತಿಳಿದುಕೊಂಡು, ಮಹಾನುಭಾವನೆ! ಅನಿಚಿತ್ರವಾ ಹನಮಹಾರಾಜನ ಮುಂದಿನ ಕಥೆಯನ್ನು ಸಾಂಗವಾಗಿ ತಿಳಿಸೆನ್ನಲು, ಶ್ರೀಕೃಷ್ಣನು ಇಂತೆಂದನು. ಅರ್ಜುನಾ! ಕೇಳು; ಆವಿಚಿತ್ರವಾಹನನು

ಪ್ರಣವವನ್ನೇ ಭಕ್ತಿಯಿಂದ ಧ್ಯಾನಮಾಡುತ್ತಿರಲಾಗಿ ದೇವೇಂದ್ರನು ಇವನ ಭಕ್ತಿಗೆ ಮೆಚ್ಚಿ, ಅವನ ಇಷ್ಟಾರ್ಥವು ಸಿದ್ಧಿಸಲೆಂದು ಒಂದಾನೊಂದು ದೇವತಾಶ್ವವನ್ನು ಕಳುಹಿಸಿದನು ಭುಜಂಡಮಹಾಮುನಿಯು ಈ ಅಶ್ವವನ್ನು ನೋಡಿ, ಆಶ್ಚರ್ಯಪಟ್ಟು, ದಿವ್ಯಜ್ಞಾನದಿಂದ ಇದರ ಕಾರಣವನ್ನು ತಿಳಿದವನಾಗಿ, ಅನಂತರ ವಿಚಿತ್ರವಾಹನನ್ನು ಕುರಿತು, ರಾಜಪುತ್ರನೆ! ನೀನುಇಲ್ಲಿಗೆ ಬಂದಕಾರಣವನ್ನು ತಿಳಿಸೆಂದು ಕೇಳಿದನು. ವಿಚಿತ್ರವಾಹನನಾದರೋ ಭಯಭಕ್ತಿಗಳಿಂದ ಕೂಡಿ, ಮುಕುಳಿತಹಸ್ತನಾಗಿ, ಮಹಾನುಭಾವನೇ! ನಾನು ತ್ರಿಲೋಕಸುಂದರೀಮಣಿಯೆನ್ನು ಮದುವೆಯಾಗಬೇಕೆಂಬ ಇಚ್ಛೆಯಿಂದ ನನ್ನ ರಾಜ್ಯವನ್ನು ಬಿಟ್ಟು ಇಲ್ಲಿಗೆ ಬಂದೆನೆಂದು ನುಡಿದು, ಆ ಮುನಿಯ ಪಾದಾರವಿಂದಗಳಿಗೆ ಅಡ್ಡಬಿದ್ದನು. ವತ್ಸನೆ! ನೀನು ಪರಮಹಂಸಸ್ವಭಾವವನ್ನು ತಿಳಿದೆಯಾದ್ದರಿಂದ ನಿನ್ನ ಮಹಿಮೆಯನ್ನು ದೇವತೆಗಳು ಕೊಂಡಾಡಿ, ನಿನ್ನ ಇಷ್ಟವು ಸಿದ್ಧಿಸಲೆಂದು ನಿನಗಾಗಿ ಈ ದೇವತಾಶ್ವವನ್ನು ಕಳುಹಿಸಿರುವರು. ನೀನು ಈ ಕುದುರೆಯನ್ನೇರಿ ಹೋಗಿ ನಿನ್ನ ಕಾರ್ಯವನ್ನು ನೆರವೇರಿಸಿಕೊಂಡು ಬಾರೆಂದು ಅಪ್ಪಣೆಯನ್ನಿತ್ತನು. ವಿಚಿತ್ರವಾಹನನಿಗೆ ಪರಮಾನಂದವಾಯಿತು, ಋಷಿವರ್ಯನ ಪಾದಗಳಿಗೆ ಅಡ್ಡಬಿದ್ದು ಆ ಮುನೀಯೆನ ಆಶೀರ್ವಾದವನ್ನು ಪಡೆದು, ದಿವ್ಯಾಶ್ವವನ್ನು ಏರಿದವನಾಗಿ ಸಂತೋಷದಿಂದ ಪ್ರಯಾಣವಂ ಮಾಡುತ್ತಿರಲು, ಆ ಅಶ್ವವು ವಾಯುವೇಗದಿಂದ ದಕ್ಷಿಣಸಮುದ್ರವನ್ನು ದಾಟಿ, ತ್ರಿಲೋಕಸುಂದರೀ ಇರುವ ಪ್ರದೇಶವನ್ನು ಸೇರಿದನು. ಆ ಸುಂದರೀಮಣಿಯಿರುವ ಪ್ರದೇಶವಾದರೋ ಮಧ್ಯಾಹ್ನಕಾಲದ ಸೂರ್ಯನ ಪ್ರಕಾಶದಂತೆ ಹೊಳೆಯುತ್ತಲಿತ್ತು. ಆಪ್ರದೇಶವನ್ನು ಹೊಕ್ಕು, ಅತ್ಯಾಶ್ಚರ್ಯವುಳ್ಳವನಾಗಿ ಸ್ವಲ್ಪಹೊತ್ತು ಮುಂದೆ ಹೋಗುತ್ತಿರಲು, ದಿವ್ಯರತ್ನಗಳ ಕಾಂತಿಯನ್ನೂ ಅಲೆಗಳೆಯುತ್ತಿರುವ ಒಂದಾನೊಂದು ಪ್ರದೇಶವು ಕಾಣಿಸಿತು, ರಾಜಪುತ್ರನು ಮುಂದಮುಂದಕ್ಕೆ ಹೋಗುತ್ತಿರುವಲ್ಲಿ ದೊಡ್ಡದಾದ ಒಂದುಬಂಡೆಯು ಕಾಣಿಸಿತು. ಅದರಮೇಲೆ ಒಬ್ಬ ದೊಡ್ಡರಾಕ್ಷಸಿಯು ನಿದ್ರಿಸುತ್ತಿದ್ದಳು. ಈರಾಕ್ಷಸಿಯ ಆಕಾರವನ್ನು ನೋಡಿದ ಕೂಡಲೇ ರಾಜಪುತ್ರನ ಎದೆಯು ಒಡೆದುಹೋಯಿತು. ಬಹಳವಾಗಿ ಗಾಬರಿಬಿದ್ದನು. ಓಹೋ! ದೇವತೆಗಳ ಸಹಾಯದಿಂದ ಈ ದಿವ್ಯಾಶ್ವವು ನನಗೆ ಲಭಿಸಿ ಕ್ಷಣಮಾತ್ರದಲ್ಲಿ ಇಲ್ಲಿಗೆ ಬಂದು ಸೇರಿದೆನು. ಇಂದಾದಿದೇವತೆಗಳಿಗೂ ಕೂಡ ಸಾಧ್ಯವಲ್ಲದ ಈ ಘೋರರಾಕ್ಷಸಿಯು ನನ್ನಿಂದ ಹತವಾಗುವುದೆಂದರೇನು! ಮುನೀಂದ್ರನಮಾತುಗಳು ವ್ಯರ್ಥವಾದಾವೆ? ಹೀಗೆಂದು ಅಂದುಕೊಳ್ಳುತ್ತಾ .. ದಿವ್ಯಾಶ್ವದಿಂದಲೂ, ನಿವಿದ ವನುಗಳಿಂದ

ಲೂ ಕೂಡಿ ಎಪುರಿಗೆ ಕಂಗೊಳಿಸುತ್ತಿರುವ ದ್ವಾರದಲ್ಲಿ ಪ್ರವೇಶಮಾಡಲು ದಿವ್ಯತೇಜಸ್ಸಿನಂತೆ ಹೊಳೆಯುವ ಆ ಶ್ರೀಲೋಕಸುಂದರೀಮಣಿಯನ್ನು ನೋಡಿದನು. ಆಕನ್ಯಕಾರತ್ನದ ಕಾಂತಿಯಿಂದ ವಿಚಿತ್ರವಾಹನನ ಕಣ್ಣುಗಳೇ ಮುಚ್ಚಿ ಹೋಗಿ ಭ್ರಾಂತನಾಗಿ ಮೂರ್ಛಿಬಿದ್ದನು. ಮೂರ್ಛಾಕ್ರಾಂತನಾಗಿ ಬಿದ್ದಿರುವ ಈ ವಿಚಿತ್ರವಾಹನನ್ನು ಅಲ್ಲಿದ್ದ ಒಂದು ಗಿಳಿಯು ಕಂಡು, ಕೂಡಲೆ ತನ್ನೊಡತಿಯಾದ ಆ ಶ್ರೀಲೋಕಸುಂದರೀಮಣಿಯ ಬಳಿಗೆ ಹೋಗಿ, ಅಮ್ಮ! ಇಲ್ಲಿಗೆ ಇದುವರೆಗೆ ಯಾರೂ ಬಂದದ್ದನ್ನು ಕಾಣೆನು. ಈವಿನವಾತ್ರ ಒಬ್ಬ ಮನುಷ್ಯನು ಇಲ್ಲಿಗೆ ಬಂದಿರುವನು. ನಿನ್ನ ಕಾಂತಿಯನ್ನು ನೋಡಿ ಬರಗಾಗಿ ಮೂರ್ಛಿಹೊಂದಿ ಬಿದ್ದಿದ್ದಾನೆ. ನೀನು ಕೂಡಲೇ ಹೋಗಿ ಮೂರ್ಛಾಕ್ರಾಂತನಾಗಿರುವ ಆ ಸುಂದರನನ್ನು ಎಚ್ಚರಗೊಳಿಸಿ ಕರೆದುಕೊಂಡು ಬಾರೆನ್ನಲು, ಆ ಮೋಹನಾಂಗಿಯು ಕೂಡಲೇ ಹೋಗಿ ಆಸುಂದರನಮೇಲೆ ಪನ್ನೀರನ್ನು ಚೆಲ್ಲಿ, ಮೂರ್ಛೆಯಿಂದೆಬ್ಬಿಸಿ, ಅವನನ್ನು ತನ್ನ ಬಿಡಾರಕ್ಕೆ ಕರೆದುಕೊಂಡುಬಂದಳು. ಅಲ್ಲಿದ್ದ ಗಿಳಿಯು ಆರಾಜಪುತ್ರನನ್ನು ನೋಡಿ, ರಾಜೋತ್ತಮಾ! ನೀನುಯಾರು? ನಿನ್ನ ದೇಶವು ಯಾವುದು? ನಿನ್ನ ತಾಯಿತಂದೆಗಳು ಯಾರು? ನೀನು ಬಂದ ಕಾರ್ಯವೇನು? ಈಮಹಾಸಾಗರವನ್ನು ನೀನು ದಾಟಿದಬಗೆಹೇಗೆ? ನಿನ್ನ ವೃತ್ತಾಂತವೆಲ್ಲವ ನಮಗೆಮಾತ್ರದೆ ನನಗೆ ಹೇಳೆನ್ನಲು, ಆ ರಾಜಪುತ್ರನಿಂತೆಂದನು.

ಶುಕವೇ ಕೇಳು, ನಾನು ಪಾಂಚಾಲದೇಶದ ರಾಜಪುತ್ರನು, ಶ್ರೀಲೋಕಸುಂದರೀಮಣಿಯನ್ನು ಮದುವೆಮಾಡಿಕೊಳ್ಳಬೇಕೆಂಬಚ್ಛೆಯಿಂದ, ದೇಶಕೋಶಗಳನ್ನೆಲ್ಲಾ ಬಿಟ್ಟು, ಕಾಡುಮೇಡುಗಳಲ್ಲೆಲ್ಲಾ ಅಲೆದು, ಭುಜಂಡಮಹಾಮುನಿಯು ಅನುಗ್ರಹದಿಂದ ತಾರಕಮಂತ್ರವನ್ನು ಉಪದೇಶಮಾಡಿಸಿಕೊಂಡು, ದೇವತಾನುಗ್ರಹದಿಂದ ವೈಶ್ಯಾಶ್ವವನ್ನೇರಿ ಈಮಹಾಸಾಗರವನ್ನು ದಾಟಿ ಇಲ್ಲಿಗೆ ಬಂದಿರುವೆನೆಂದು ನುಡಿದನು. ಆ ಶುಕವು ಅಮ್ಮಾ! ಈರಾಜಪುತ್ರನು ನಿನಗೆ ಸನಿಹಬಂಧುವು. ಇವರ ಅಣ್ಣನಿಗೆ ನಿಮ್ಮಚೊಚ್ಚಲತಂದೆಯು ಮಗಳಾದ ಮಾಂಡವಿಯೆನ್ನು ವಿವಾಹಮಾಡಿಕೊಟ್ಟಿರುವಾತ, ಆ ಮಾಂಡವಿಯಿಂದಲೇ ಈ ರಾಜಪುತ್ರನು ನಿನ್ನವರ್ತಮಾನವನ್ನು ತಿಳಿದು, ನಿನ್ನಲ್ಲಿ ಮೋಹವುಳ್ಳವನಾಗಿ, ಅನೇಕ ಕಷ್ಟಗಳನ್ನನುಭವಿಸಿ, ಭುಜಂಡಮಹಾಮುನಿಯ ವರಮಾನುಗ್ರಹದಿಂದ ತಾರಕಮಂತ್ರೋಪದೇಶವಂ ಕೈಗೊಂಡು, ದೇವತೆಗಳ ಅನುಗ್ರಹದಿಂದ ವಿವಾಶ್ವವನ್ನೇರಿ, ಈ ಮಹಾಸಾಗರವನ್ನು ದಾಟಿ ಇಲ್ಲಿಗೆ ಬಂದಿರುವನು. ಪುಣ್ಯಪುರುಷನಾಗಿರುವನು, ಸುಂದರಾಂಗನಾದ ಈಸುಕುಮಾರನನ್ನು ನೀನು ಸೇರಿ ಸುಖಿ

ನೆನ್ನಲು ಆತ್ರಿಲೋಕಸುಂದರಿಯು ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ಕೊಂಡಳು. ಆ ಬಳಿಕ ಕಣ್ಣೀರುಬಿಡುತ್ತಾ ಆ ಶುಕವನ್ನು ನೋಡಿ, ಮುದ್ದುರಾಮೂ! ಘೋರರಕ್ಕಸಿಯಕೈಗೆ ಸಿಕ್ಕಿರುವ ನನಗೆ ಸುಖವೆಲ್ಲಿಯ ದೆಂದು ನುಡಿಯಲು, ಸುಂದರಾಂಗಿಯೇ, ನೀನು ಇದಕ್ಕೆ ಯೋಚಿಸಬೇಡ, ಈ ರಕ್ಕಸಿಯನ್ನು ಕೊಲ್ಲಲು ನಾನೊಂದು ಉಪಾಯವನ್ನು ಹುಡುಕುವೆನು. ರಾಕ್ಷಸಿಯು ನಿನ್ನಯಿಂದೆಚ್ಚತ್ತಾಗಲೂ, ಇಲ್ಲಿಗೆ ಬಂದಾಗಲೂ ನೀನು ಇವನನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳಿಂದು ನುಡಿಯಿತು. ಆಗ ಆ ಸುಂದರೀಮಣಿಯು ರಾಕ್ಷಸಿಯು ಎಚ್ಚೆತ್ತು ಬರುವ ಹೊತ್ತಾಯಿತೆಂದು ತಿಳಿದು ರಾಜಪುತ್ರನನ್ನು ತನ್ನ ಅಂತಃಪುರದಲ್ಲಿ ಬಚ್ಚಿಟ್ಟು ತಾನು ಹೊರಗೆ ಬಂದು, ಆ ರಕ್ಕಸಿಯು ಬರಲು, ಅವಳಿಗೆ ಮುದ್ದಿಟ್ಟು ಕಪಟಪ್ರೀತಿಯಿಂದ ಮೆಚ್ಚಿಸಿ, ಆ ರಾಕ್ಷಸಿಯು ಹೊರಟುಹೋದ ಬಳಿಕ ಆ ರಾಜಪುತ್ರನಿಗೆ ಪನ್ನೀರಿನಿಂದ ಸ್ನಾನವಂ ಮಾಡಿಸಿ, ತಾನೂ ಸ್ನಾನವಂ ಮಾಡಿ, ದಿವ್ಯವಾದ ಭಕ್ಷ್ಯಭೋಜ್ಯಾದಿಗಳನ್ನೂ, ಮಧುವನ್ನೂ ಫಲಗಳನ್ನೂ ಇಬ್ಬರೂ ಭುಂಜಿಸಿ, ಅನಂತರ ದಿವ್ಯಪರಿಮಳಯುಕ್ತವಾದ ಗಂಧವನ್ನು ಬಳಿದುಕೊಂಡು, ಸುವಾಸನೆಯಾದ ಪುಷ್ಪಗಳನ್ನು ಮುಡಿದು, ಸ್ವೇಚ್ಛೆಯಿಂದ ಸುರತಕ್ರೀಡೆಯನ್ನು ಆಡಿ, ಸಂತೋಷದಿಂದಿರುತ್ತಿದ್ದರು. ಹೀಗೆ ಕೆಲವು ದಿನಗಳು ಕಳೆದ ಬಳಿಕ ಆ ರಾಜಪುತ್ರನು, ಪ್ರಾಣಪ್ರಿಯಕವೆ! ಈ ರಾಕ್ಷಸಿಯ ಹೆದರಿಕೆಯಿಂದ ನನಗೆ ರಾತ್ರಿಯುವೇಳೆ ನಿನ್ನಯೀ ಬರುವುದಿಲ್ಲ. ಎದೆಯು ಗಡಗಡನೆ ನಡುಗುತ್ತಿರುವುದು, ನಾವು ಈನಿರ್ಬಂಧವನ್ನು ತಪ್ಪಿಸಿಕೊಂಡು ನಮ್ಮ ರಾಜ್ಯಕ್ಕೆ ಹೋಗುವುದು ಯಾವಾಗಲೆಂದು ನುಡಿಯಲು, ಆಸುಂದರೀಮಣಿಯು ಕಣ್ಣೀರನ್ನು ಸುರಿಸುತ್ತಾ ಆ ಶುಕದ ಬಳಿಗೆ ಹೋಗಿ ನಡೆದವರ್ತಮಾನವನ್ನೆಲ್ಲಾ ತಿಳಿಸಿದಳು. ಅದಕ್ಕೆ ಆ ಶುಕವು ತ್ರಿಲೋಕಸುಂದರೀಮಣಿಯೇ ಕೇಳು, ಈ ಘೋರರಕ್ಕಸಿಯ ಕೈಯಿಂದ ಜೀವನೆ ತಪ್ಪಿಸಿಕೊಂಡು ಹೋಗುವುದು ಹೇಗೆ ಸಾಧ್ಯವು? ಈ ರಕ್ಕಸಿಯ ಮರ್ಮವನ್ನೆಲ್ಲಾ ತಿಳಿದಹೊರತು ನಿನುತಾನೆ ಮಾಡಲಾಪೀತು? ಆ ತುರಪಟ್ಟರೆ ಕೆಲಸವೇ ಕೆಟ್ಟೀತು. ಶಾಂತವಾಗಿದ್ದು ನಿಧಾನವಾಗಿ ಈ ರಕ್ಕಸಿಯ ಮರ್ಮವನ್ನೆಲ್ಲಾ ಚೆನ್ನಾಗಿ ತಿಳಿದ ಬಳಿಕ ಅನುಕೂಲಪ್ರತಿಕೂಲಗಳನ್ನು ನೋಡೋಣವೆಂದು ನುಡಿಯಿತು. ತ್ರಿಲೋಕಸುಂದರಿಯು ಹಾಗೆಯೇಆಗಲೆಂದು ನುಡಿದಳು. ಅಷ್ಟುಹೊತ್ತಿಗೆ ಆಘೋರರಕ್ಕಸಿಯು ಬಂದಳು. ಈ ಸುಂದರೀಮಣಿಯನ್ನು ಮುದ್ದಾಡಿದಳು. ಈಸುಕುಮಾರಿಯೂ ಕಪಟಪ್ರೀತಿಯಿಂದ ಆರಕ್ಕಸಿಯನ್ನು ಮೆಚ್ಚಿಸಿದಳು. ರಕ್ಕಸಿಯು ಈರೀತಿಯಲ್ಲಿ ಮುದ್ದಾಡುತಿರುವಾಗ ಆಸುಂದರಾಂಗಿಯು ಕಣ್ಣೀರೆ

ರನ್ನು ಸುರಿಸಿದಳು. ರಕ್ಕಸಿಯು ಇದನ್ನು ಕಂಡು, ಅಮ್ಮಾ! ನೀನು ಅಳುವುದು ಏತಕ್ಕೆ? ತ್ರಿಲೋಕಗಳಲ್ಲಿಯೂ ಶ್ರೇಷ್ಠವೆನಿಸಿದ ದಿವ್ಯವಸ್ತ್ರಾಭರಣಗಳನ್ನೆಲ್ಲಾ ನಿನಗೆ ತಂದುಕೊಟ್ಟಿರುವೆನು, ನಿನಗೆ ಯಾವುದಕ್ಕೂ ಏನೂ ಕೊರತೆಯಿಲ್ಲವಲ್ಲಾ! ನಿನಗೆ ಮತ್ತೇನು ಕೋರಿಕೆಯಿದ್ದರೂ ಮುರೆಮಾಚದೆ ನನಗೆ ಹೇಳು. ಕ್ಷಣಮಾತ್ರದಲ್ಲಿಯೇ ತಂದೊಪ್ಪಿಸುವೆನೆನ್ನಲು, ಅಮ್ಮಾ! ನಿನ್ನ ದಯೆಯಿಂದ ನನಗೆ ಯಾವುದಕ್ಕೂ ಕಡಿಮೆಯಿಲ್ಲವು. ನನಗೆ ಯಾವುದೊಂದುಯೋಚನೆಯೂ ಇಲ್ಲ. ಪ್ರಾಣರಕ್ಷಕಳಾದ ನೀನು ಹೊರಗೆ ಸಂಚಾರಾರ್ಥವಾಗಿ ಹೋದಾಗ, ನಿನಗೇನಾದರೂ ಅಪಾಯಸಂಭವಿಸಿದರೆ ನನ್ನ ಗತಿಯೇನೆಂದೂ, ಅನಂತರ ನನಗೆ ದಿಕ್ಕ್ಯಾರೆಂದೂ ಅಳುವೆನೆಂದು ಹೇಳಿದಳು ಆ ರಕ್ಕಸಿಯು ಆ ಸುಕುಮಾರಿಯ ಮಾತುಗಳಿಗೆ ಆನಂದಪಡುತ್ತಾ, ಪ್ರೀತಿಯಿಂದ ಮುಚ್ಚಿಟ್ಟುಕೊಂಡು, ಮಗೂ! ನೀನು ಸ್ವಲ್ಪವೂ ಭಯಪಡಬೇಡ, ನನ್ನನ್ನು ಕೊಲ್ಲಲು ಯಾರಿಗೂ ಸಾಮರ್ಥ್ಯವಿಲ್ಲ. ನನ್ನ ತಪ್ಪೋಮಹಿಮೆಯಿಂದ ನನ್ನ ಪಂಚಪ್ರಾಣಗಳನ್ನೂ ಐದು ಮೆಪಳುಗಳಲ್ಲಾಗಿಮಾಡಿ, ಅವುಗಳನ್ನು ಒಂದು ಭರಣಿಯಲ್ಲಿಟ್ಟು, ಸಾವನ್ನೂ, ವೃದ್ಧಾಪ್ಯವನ್ನೂ, ಕ್ಷುಪ್ತಿಪಾಸಂಗಳನ್ನೂ ಹೊಂದದ ಒಂದಾನೊಂದು ಶುಕವನ್ನು ನಿರ್ಮಿಸಿ, ಆ ಭರಣಿಯನ್ನು ಕೊಟ್ಟು, ಇಲ್ಲಿಗೆ ಸ್ವಲ್ಪದೂರದಲ್ಲಿ ಇರುವ ತಾಳೆಯಮರದಮೇಲೆ ಇಟ್ಟಿರುವೆನು. ಇಂದ್ರಾದಿದೇವತೆಗಳಿಗೂ ಕೂಡ ಅಗಿಳಿಯು ವಶವಾಗಲಾರದು. ಆದ್ದರಿಂದ ದೇವತೆಗಳೂ ಕೂಡ ತಮ್ಮತಮ್ಮ ವಾಸಸ್ಥಳಗಳನ್ನು ಬಿಟ್ಟು ಬಿಟ್ಟ ಗುಡ್ಡಗಳಲ್ಲಿಯೂ, ಗುಹೆಗಳಲ್ಲಿಯೂ ವಾಸಮಾಡುತ್ತಿರುವರು. ನನಗೆ ಮರಣವುಂಟಾಗುತ್ತೆಂದು ನೀನು ಸ್ವಪ್ನದಲ್ಲಿಯೂ ತಿಳಿಯಬೇಡ. ನಿನ್ನಲ್ಲಿರುವ ಪ್ರೀತಿಯಿಂದ ನಾನು ನಿನಗೆ ಈರಹಸ್ಯವನ್ನು ಹೇಳಿರುವೆನು. ನೀನು ಈ ಮರ್ಮವನ್ನು ಯಾರಿಗೂ ಹೇಳಬೇಡ. ನಿನ್ನ ಮನಸ್ಸಿನಲ್ಲಿಯೇ ಇರಲಿ, ಹೆದರಬೇಡವೆಂದು ನುಡಿದು, ತಾನು ತಂದಿದ್ದ ಹಣ್ಣುಹಂಪಲನ್ನೂ ಮಧುವನ್ನೂ ತಿಂದು, ಆ ಬಂಡೆಯಮೇಲೆ ಉರಳಿಕೊಂಡು ನಿದ್ರೆಮಾಡಿದಳು. ಅಬಳಿಕ ಅತ್ರಿಲೋಕಸುಂದರೀಮಣಿಯು ಅಗಿಳಿಯಬಳಿಗೆ ಹೋಗಿ, ಆ ರಾಕ್ಷಸಿಯ ಪ್ರಾಣಮನ್ಮಗಳನ್ನು ತಿಳಿಯಿಸಿದಳು. ಅದಕ್ಕೆ ಅಗಿಳಿಯು, ಅಮ್ಮಾ! ನೀನು ಯೋಚಿಸಬೇಡ, ನಾನು ಅದಕ್ಕೆ ತಕ್ಕ ಉಪಾಯವನ್ನು ಹುಡುಕುವೆನು ನಮ್ಮ ಕಾರ್ಯವು ಕೈಗೂಡುವುದೆಂದು ಹೇಳಿ, ತಾನು ಒಂದು ಭರಣಿಯನ್ನು ಬಾಯಿಯಲ್ಲಿ ಕಚ್ಚಿಕೊಳ್ಳುವಂತೆ ಅಭ್ಯಾಸಮಾಡಿಕೊಂಡು, ಒಂದಾನೊಂದುದಿನ ಅತ್ರಿಲೋಕಸುಂದರೀಮಣಿಯನ್ನು ನೋಡಿ, ಅಕ್ಕಾ! ನೀನು ಮನಸ್ಸಿನಲ್ಲಿ ಸಂಶಯಪಡದೆ ಪ್ರಾತಃ

ಕಾಲ ನನ್ನನ್ನು ಹೊರಗೆ ಬಿಟ್ಟುಬಿಡು, ನಾನು ಈ ಭರಣಿಯನ್ನು ಕೊಕ್ಕಿನಿಂದ ಕಚ್ಚಿಕೊಂಡು, ಆ ರಾಕ್ಷಸಿಗಿಳಿಯಬಳಿಗೆ ಹಾರಿಹೋಗಿ, ಅದನ್ನು ಬಿರಗುಮಾಡಿ, ಆರಾಕ್ಷಸಿಯು ಇಟ್ಟಿರುವ ಭರಣಿಯನ್ನು ಕಚ್ಚಿಕೊಂಡು ಹಿಂದಿರುಗಿ ಬರುವೆನು. ಈನಮ್ಮ ರಾಜಕುಮಾರನು ಆ ಭರಣಿಯಲ್ಲಿರುವ ಪ್ರಾಣಗಳನ್ನು ಕೊಂದುಹಾಕಲಿ, ಕೂಡಲೇ ರಾಕ್ಷಸಿಯೂ, ಆಗಿಳಿಯೂ ಸತ್ತುಹೋಗುವವು. ಆನಂತರ ನಮಗೆ ಸುಖವೂ ಆನಂದವೂ ಉಂಟಾಗುವವು. ನೀನು ಈ ಕಾರ್ಯಕ್ಕೆ ಸಮ್ಮತಿಸು, ಇದರಿಂದ ಸುಖ ಉಂಟಾಗುವುದೆನ್ನಲು, ಆ ತ್ರಿಲೋಕಸುಂದರೀಮಣಿಯು ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ, ಅಯ್ಯೋ! ನನ್ನ ಮುದ್ದುಗಿಳಿಯೆ! ನಿನ್ನನ್ನು ಅಗಲಿ ನಾನು ಹೇಗೆ ಬದುಕಲಿ? ನಿನ್ನನ್ನು ನೋಡದೆ ಒಂದುನಿಮಿಷವಿದ್ದರೆ ಅದೇ ನನಗೆ ಒಂದುಯುಗವಾಗುವುದಲ್ಲಾ! ನಿನ್ನಿಂದಲೇಅಲ್ಲವೆ ನನ್ನ ಪ್ರಾಣಗಳು ನಿಂತಿರುವವು. ನಿನ್ನನ್ನು ಬಿಟ್ಟುಮೇಲೆ ನನಗೆ ಗತಿಯೆಂತು? ಹೀಗೆಂದು ದುಃಖಿಸುತ್ತಾ ಇರಲು, ಆಶುಕವು ಅನೇಕಕಾಂತವಚನಗಳಿಂದ ಆ ತ್ರಿಲೋಕಸುಂದರೀಮಣಿಯನ್ನು ಸಮಾಧಾನಪಡಿಸಿತು. ವಿಚಿತ್ರವಾಹನನೂ ಅನೇಕ ಸಮಾಧಾನೋಕ್ತಿಗಳನ್ನಾಡಿದನು. ಅನಂತರ ಆಗಿಳಿಯು ತ್ರಿಲೋಕಸುಂದರೀಮಣಿಯಿಂದ ಬೀಳ್ಕೊಡೆಯನ್ನು ಹೊಂದಿ, ಆಕೆಯು ಕೊಟ್ಟ ಆಹಾರವನ್ನು ತಿಂದು, ರಾಕ್ಷಸಿಯು ನಿದ್ರೆಯಿಂದೆಚ್ಚರಗೊಳ್ಳುವುದರೊಳಗಾಗಿ ನೀನು ಆಭರಣಿಯ ಸಹಿತ ಬಾರದಿದ್ದರೆ ನನ್ನ ಪ್ರಾಣಗಳೇ ನಿಲ್ಲಲಾರವೆನ್ನಲು, ಹಾಗೆಯೇಆಗಲೆಂದು ಒಪ್ಪಿಕೊಂಡು, ಭರಣಿಯನ್ನು ತನ್ನ ಕೊಕ್ಕಿನಿಂದ ಕಚ್ಚಿಕೊಂಡು, ಜಾಗ್ರತೆಯಾಗಿ ಹೊರಟು, ಸತ್ತುಗಾವುದದ ಆಚೆಯಿರುವ ಆರಾಕ್ಷಸಿಗಿಳಿಯಿದ್ದ ಮರದಬುಡದಲ್ಲಿಳಿದು, ಆರಾಕ್ಷಸಿಗಿಳಿಗೆ ಆನಂದವುಂಟಾಗುವಂತೆ ಧ್ವನಿಮಾಡಿತು. ಮರದಮೇಲಿದ್ದ ಆರಾಕ್ಷಸಿಗಿಳಿಯಾದರೋ ಬಹುಕಾಲಕ್ಕೆ ತನ್ನಜಾತಿಯ ಪಕ್ಷಿಯನ್ನು ಕಂಡೆನೆಂದು ಸಂತಸಗೊಂಡು, ತನ್ನ ಬಾಯಲ್ಲಿದ್ದ ಆ ಭರಣಿಯನ್ನು ಮರದಮೇಲೆಯಿಟ್ಟು, ಬುಡದಲ್ಲಿದ್ದ ತನ್ನಜಾತಿಯ ಗಿಳಿಯನ್ನು ಮರದಮೇಲಕ್ಕೆ ಬಾರೆಂದು ಕರೆಯಿತು. ಗಿಳಿಯು ರಾಕ್ಷಸಿಗಿಳಿಯ ಮಾತಿನಪ್ರಕಾರ ಮರದಮೇಲಕ್ಕೆ ಹಾರಿಹೋಗಿ, ತನ್ನ ಬಾಯಲ್ಲಿದ್ದ ಭರಣಿಯನ್ನು ಆಭರಣಿಯ ಬಳಿಯಿಟ್ಟು, ರಾಕ್ಷಸಿಗಿಳಿಗೆ ನಮಸ್ಕಾರಮಾಡಿತು. ರಾಕ್ಷಸಿಗಿಳಿಯಾದರೋ, ಮಾವಯ್ಯಾ! ನನ್ನ ಭಾಗ್ಯವಶದಿಂದ ನಿನ್ನದರ್ಶನವಾಯಿತು. ಪವಿತ್ರನಾದೆನು. ನಾನು ನಿನ್ನ ಸಹೋದರಿಯ ಮಗಳು. ನನ್ನ ತಾಯಿಯು ನನ್ನನ್ನು ನೋಡಿ, ಕುಮಾರನೆ, ನೀನು ನಿಮ್ಮ ಮಾವನಹಾಗೆ ಒಂದುಭರಣಿಯನ್ನು ಮೂಗಿನಲಿ ಕಚ್ಚಿಕೊಂಡುಹೋಗಿ, ನಿಮ್ಮ ಮಾವನವ

ರಿಗೆ ತೋರಿಸಿ, ಆತನ ಕ್ಷೇಮಲಾಭವನ್ನು ತಿಳಿದುಕೊಂಡು ಬಾರೆಂದು ನ
ನ್ನನ್ನು ಕಳುಹಿಸಿದಳು. ನನ್ನಲ್ಲಿ ದಯೆಯಿಟ್ಟು ನಿನ್ನ ಕ್ಷೇಮಸಮಾಚಾ
ರವನ್ನು ಜಾಗ್ರತೆ ತಿಳಿಸೆಂದು ಕಳಿಸಲು, ಆರಾಕ್ಷಸಿಗಿಳಿಯು ನಿಜವೆಂದೇ
ಭಾವಿಸಿ, ಅಳಿಯನೆ! ನಾನು ಯಾರನ್ನೂ ಕಾಣೆನು, ನನ್ನ ಸಹೋದರಿ
ಯನ್ನೂ ಕೂಡ ನಾನು ಕಾಣೆನು, ರಾಕ್ಷಸಿಯು ಅಪ್ಪಣೆ ಮೀರೆಗೆ ಈ ಭರ
ಣಿಯನ್ನು ಬಾಯಲ್ಲಿ ಕಚ್ಚಿಕೊಂಡು, ನಿದ್ರಾಹಾರಗಳಿಲ್ಲದೆ, ಬಾಯಾರಿಕೆ
ಯೂ ಕೂಡ ಇಲ್ಲದೆ, ಸದಾ ಈ ತಾಳೆಯೆಮರದಮೇಲಿರುವೆನು. ರಾಕ್ಷ
ಸಿಯು ಪ್ರತಿನಿತ್ಯವೂ ನನ್ನನ್ನು ಅಣೋರಣಿಯಕಾಲಕ್ಕೆ ಬಂದು ವಿಚಾ
ರಿಸಿಕೊಂಡು ಹೋಗುತ್ತಿರುವಳು. ಇಲ್ಲಿಯಾದರೋ ದೇವಗಂಧರ್ವಯಕ್ಷ
ರಾಕ್ಷಸರಿಗೂ, ಸಿದ್ಧಸಾಧ್ಯವಿದ್ಯಾಧರರಿಗೂ, ಕ್ರಿಮಿಕೀಟಗಳಿಗೂ, ಮೃ
ಗಪಕ್ಷಿಗಳಿಗೂ ಯಾರಿಗೂ ಪ್ರವೇಶಕ್ಕೆ ಸಾಧ್ಯವಿಲ್ಲವು. ಈಗ ಮಾತ್ರ
ನಮ್ಮ ಜಾತಿಸಹಾಯವಾದ ನಿನ್ನನ್ನು ನೋಡಿ ನನಗೆ ಪರಮಾನಂದವುಂಟಾ
ಯಿತು. ನೀನೂ ನಿಮ್ಮತಾಯಿಯೂ ಎಲ್ಲಿರುವಿರೆಂದು ಕೇಳಲು, ಶಿವಲೋ
ಕದಲ್ಲಿರುವೆವೆಂದು ಆಗಿಳಿಯು ನುಡಿಯಿತು. ಆರಾಕ್ಷಸಿಗಿಳಿಯಾದರೋ,
ಅಳಿಯನೆ! ನೀನು ಬಹಳ ಆಯಾಸದಿಂದ ಸಮುದ್ರವನ್ನು ದಾಟಿಬಂದಿರು
ವಿಯೆಂದು ಮುತ್ತಿಟ್ಟುಕೊಳ್ಳಲು, ಆಗಿಳಿಯು, ಮಾವಯ್ಯಾ! ಇನ್ನು ಮೇಲೆ
ನಾನು ತಿಂಗಳಿಗೊಂದಾವರ್ತಿ ಬಂದು ನಿನ್ನನ್ನು ನೋಡಿಕೊಂಡು ಹೋ
ಗುವೆನು. ನನ್ನನ್ನು ಜಾಗ್ರತೆಯಾಗಿ ನಮ್ಮ ತಾಯಿಯಬಳಿಗೆ ಸೇರಲು
ಪ್ರಯಾಣಮಾಡಿಸು. ನಾನು ಅಲ್ಲಿಗೆ ಸುಖವಾಗಿ ಸೇರುವವರೆಗೂ ದೇವರ
ನ್ನು ಪ್ರಾರ್ಥಿಸುತ್ತಿರೆಂದು ಅಡಿದ ಮರುನುಡಿಮಾತುಗಳನ್ನು ನಿಜವೆಂದು ಭಾ
ವಿಸಿ ಆರಾಕ್ಷಸಿಗಿಳಿಯು ಅವನ್ನು ಮುತ್ತಿಟ್ಟುಕೊಂಡಿತು. ಅಬಳಿಕ ಅಳಿ
ಯನೆ! ನೀನು ಹೋಗಿಬಾರೆನ್ನಲು, ಮಾವಯ್ಯಾ! ಸ್ವಲ್ಪದೂರದವರೆಗೂ
ನೀನು ನನ್ನ ಕಡೆಯೇ ನೋಡುತ್ತಿರಬೇಕೆಂದು ಕೇಳಿ, ತನ್ನ ಬಾಯಲ್ಲಿದ್ದ
ಭರಣಿಯನ್ನು ಅಲ್ಲಿಯೇ ಬಿಟ್ಟು, ರಾಕ್ಷಸಿಗಿಳಿಯಬಳಿಯಿದ್ದ ಭರಣಿಯನ್ನು ಅ
ದಕ್ಕೆ ತಿಳಿಯದಹಾಗೆ ಕಚ್ಚಿಕೊಂಡು, ಜಾಗ್ರತೆಯಾಗಿಹಾರಿಹೋಗುತ್ತಿತ್ತು.
ಆರಾಕ್ಷಸಿಗಿಳಿಯಾದರೋ ನಮ್ಮಳಿಯನು ಹೇಗೆ ಸಾಗರವನ್ನು ದಾಟುವು
ದೋ ಎಂದು ನೋಡುತ್ತಾ ವ್ಯಸನಪಡುತ್ತಿರುವಲ್ಲಿ, ಆಕಡೆ ತ್ರಿಲೋಕ
ಸುಂದರೀವರ್ಣಯು ರಾಕ್ಷಸಿಯು ಏಳುವಹೊತ್ತಾದರೂ ಗಿಳಿಯು ಹಿಂದ
ಕ್ಕೇ ಬರಲಿಲ್ಲವಲ್ಲಾ! ಎಂದು ಕಳವಳಗೊಂಡಿರುವಾಗ, ಆ ಗಿಳಿಯು ಅಲ್ಲಿಗೆ
ಬಂದಿಳಿಯಿತು. ಅಮ್ಮಾ! ತ್ರಿಲೋಕಸುಂದರೀವರ್ಣಿ! ಇವತ್ತಿಗೆ ನಮ್ಮ
ಇಷ್ಟಾರ್ಥವು ನೆರವೇರಿತೆಂದು ನಡೆದ ಸುದ್ದಿಯನ್ನೆಲ್ಲಾ ವಿವರಿಸಿದ ಬಳಿಕ
ಆಭರಣಿಯನು ಅಲ್ಲಿಟ್ಟು.. ನಿಶ್ಚಿತವಾಗಿನನ್ನನ್ನು ಕರೆದು ನೀನು ಮಾನಸ

ಣಿಯೆಲ್ಲಿರುವ ರಾಕ್ಷಸಿಯ ಮೆದುಳನ್ನು ಚನ್ನಾಗಿ ನಲಚಿ ಈಗಲೆ ಕೊಲ್ಲಿ
ನಲು, ವಿಚಿತ್ರವಾಹನನು ಕಡುಧೈರ್ಯವಂ ತಾಳಿ, ಆಭರಣಿಯನ್ನು ತೆಗೆ
ದು, ಆಮೆದಲನ್ನು ಚನ್ನಾಗಿ ನಲಚಿ ಕೊಂಡನು. ಬಂಡೆಯುಮೇಲೆ ಬಿ
ದ್ದಿದ್ದ ಆರಕ್ಕಸಿಯಾದರೋ, ಅಯ್ಯೋ! ಮೋಸಹೋದೆನೆಂದು ಗರ್ಜಿ
ಸುತ್ತಾ, ಆತಾಳೀವೃಕ್ಷದವರೆಗೂ ಏರಿ, ಭೋರೆಂದು ಗರ್ಜಿಸುತ್ತಾ,
ಪರ್ವತಾಕಾರವಾಗಿ ನೆಲದವೆಲೆ ಬಿದ್ದು, ಪ್ರಾಣವನ್ನು ಬಿಟ್ಟಳು. ಆರಾ
ಕ್ಷಸಿಗಿಳಿಯೂಕೂಡ, ಆಹಾ! ನಾನೂ ಮೋಸಹೋದೆನೆಂದು ದುಃಖಿಸು
ತ್ತಾ, ಅಲ್ಲಿಯೇ ಸತ್ತುಬಿದ್ದಿತು. ಲೋಕಕಂಟಕಿಯಾಗಿದ್ದ ಆರಾಕ್ಷಸಿ
ಯು ಮೃತಳಾದ ಸಂಗತಿಯನ್ನು ಇಂದ್ರಾದಿದೇವತೆಗಳಿಗೆ ತಿಳಿದು, ದೇವ
ವಾದ್ಯಗಳಿಂದ ಇಂದ್ರಾದಿಗಳೆಲ್ಲರೂ ವಿಚಿತ್ರವಾಹನನಬಳಿಗೆ ಬರುತ್ತಿದ್ದರು
ಆಗ ವಿಚಿತ್ರವಾಹನನೂ, ತ್ರಿಲೋಕಸುಂದರೀಮಣಿಯೂ ಸಹ ಇಂದ್ರನಿ
ಗೆ ನಮಸ್ಕಾರಮಾಡಿದರು. ಆಗ ದೇವೇಂದ್ರನಾದರೋ, ಅವರಿಬ್ಬರ
ನ್ನೂ ಸಂತೈಸಿ, ವಿಚಿತ್ರವಾಹನನೆ! ಗಿಳಿಯಿತಂತ್ರದಿಂದ ಲೋಕಕಂಟಕಿ
ಯನ್ನು ನೀನು ಕೊಂದೆಯಾಗಿ ನಿನ್ನ ಸಾಹಸವನ್ನೂ, ಲೋಕೋದ್ಧಾರ
ವನ್ನೂ ಸಕಲ ದೇವತೆಗಳೂ ಕೊಂಡಾಡುತ್ತಿರುವರು. ನೀನು ಇಲ್ಲಿ ಬಹು
ಳಕಾಲಸಿರಬಾರದು, ಈ ತ್ರಿಲೋಕಸುಂದರೀಮಣಿಯನ್ನು ಕರೆದುಕೊಂ
ಡು, ಹೋಗಿ ಸುಖವಾಗಿರೆಂದು ಆಶೀರ್ವದಿಸಿ ಪುಷ್ಪಕವಿಮಾನವನ್ನಿತ್ತನು.
ವಿಚಿತ್ರವಾಹನನಾದರೋ ತ್ರಿಲೋಕಸುಂದರೀಮಣಿಯನ್ನೂ, ಆ ಶುಕವ
ನ್ನೂ ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು, ಧನಕನಕವಸ್ತುವಾಹನ
ಗಳಿಂದಕೂಡಿ, ಭುಜಂಡಮುನಿಯ ಆಶ್ರಮಕ್ಕೆ ತಡಮಾಡದೆ ಬಂದು ಸೇ
ರಿದನು. ಆಮುನಿಯು ನಡೆದ ವರ್ತಮಾನವನ್ನೆಲ್ಲಾ ವಿಚಿತ್ರವಾಹನನಿಂ
ದ ತಿಳಿದು, ಸಂತೋಷದಿಂದ ಕೂಡಿ, ಆಗಿಳಿಯನ್ನು ವರ್ಣಿಸಿ, ಪ್ರಣವ
ಮಹಾತ್ಮೆಯಿಂದ ನಿನ್ನ ಕೋರಿಕೆಗಳೆಲ್ಲಾ ನೆರವೇರಿದವು, ಇಂದ್ರಾದಿದೇ
ವತೆಗಳೆಲ್ಲಾ ಬಂದು ನಿನಗೆ ದರ್ಶನವನ್ನು ಕೊಟ್ಟಿರುವರು. ಹೀಗೆಂದು
ನುಡಿಯುತ್ತಾ ಅವಧೂತರಿಗೆ ಆಶೀರ್ವಾದವಂ ಮಾಡಿ, ನಿಧವಿಧವಾದ
ಧರ್ಮಗಳನ್ನು ಬೋಧಿಸುತ್ತಿದ್ದನು. ಹೀಗಿರುವಲ್ಲಿ ಒಂದಾನೊಂದುದಿನ
ತ್ರಿಲೋಕಸಂಚಾರಿಯಾದ ನಾರದನು ಪಾಂಡ್ಯರಾಜ್ಯಕ್ಕೆ ಹೋಗಿರಲು,
ಆರಾಜನಿಗೆ ತ್ರಿಲೋಕಸುಂದರೀಮಣಿಯೂ ವಿಚಿತ್ರವಾಹನನೂ ಭುಜಂಡ
ಮುನಿಯ ಆಶ್ರಮದಲ್ಲಿರುವರೆನ್ನಲು, ಪಾಂಡ್ಯಭೂಪಾಲನಾದರೋ, ಚತು
ರಂಗಬಲಸಮೇತನಾಗಿ ಭುಜಂಡಮುನಿಯ ಆಶ್ರಮಕ್ಕೆ ಬಂದು, ತಾನು
ಬಂದಿರುವ ಸಮಾಚಾರವನ್ನು ತಿಳಿಸಿ, ಆ ದಂಪತಿಗಳನ್ನು ಅನುಗ್ರಹಿಸಿ ಪ
ಟ್ಟಣಕ್ಕೆ ಕಳುಹಿಸಬೇಕೆಂದು ಬೇಡಿಕೊಂಡನು. ಭುಜಂಡಮಹಾಮುನಿ
ಯು ಈಲೀತನಲ್ಲಿ [illegible]

ಯಾವರೋ ಸಂತೋಷದಿಂದ ಅವರೀರ್ವರನ್ನೂ ಕುರಿತು, ನೀವು ಸಂ
ತೋಷದಿಂದ ಪುರಪ್ರವೇಶಣಮಾಡಬಹುದೆಂದು ಅನುಜ್ಞೆಯನ್ನು ಕೊಟ್ಟ
ನು. ಅಷ್ಟರೊಳಗಾಗಿ ಆಪಾಂಡ್ಯಭೂಪಾಲನು ವಿಚಿತ್ರವಾಹನನನ್ನು ನಾ
ನಾಪ್ರಕಾರವಾಗಿ ವರ್ಣಿಸಿ, ಆಶುಕವನ್ನು ಕೀರ್ತಿಸಿ, ತನ್ನ ಕುವರಿಯಾದ
ತ್ರಿಲೋಕಸುಂದರೀಮಣಿಯನ್ನು ಸಂತೋಷದಿಂದ ಮುತ್ತಿಟ್ಟುಕೊಂಡು
ಆನಂದಸಾಗರದಲ್ಲಿ ಮುಳುಗಿದ್ದನು. ಅನಂತರ ಆಪಂಚತ್ರಿಗಳನ್ನು ಪಾಂ
ಡ್ಯಭೂಪಾಲನು ಪುರಪ್ರವೇಶವಂ ಮಾಡಿಸಿದನು. ಶುಭಮುಹೂರ್ತದಲ್ಲಿ
ಇವರೀರ್ವರಿಗೂ ವಿವಾಹಮಾಡಬೇಕೆಂದುಜ್ಜುಗಿಸಿ, ಪುರವನ್ನಲಂಕರಿಸಿ
ದನು. ಮತ್ಸ್ಯಭೂಪಾಲನಾದ ತನ್ನ ಅಣ್ಣನಿಗೂ, ಪಾಂಚಾಲದೇಶದರಸ
ನಾದ ವಿಚಿತ್ರವಾಹನನ ತಂದೆಗೂ ಶುಭಲೇಖೆಗಳನ್ನು ಬರೆಯಿಸಿದನು.
ಎಲ್ಲೆಲ್ಲಿಯೂ ಮಂಗಳವಾದ್ಯಗಳು ಭೋರ್ಗರೆಯುತ್ತಿದ್ದವು. ಅನೇಕ
ದೇಶದ ಜನರೂ ಬಂದುಸೇರಿದರು. ಅಷ್ಟುಹೊತ್ತಿಗೆ ಪಾಂಚಾಲಪತಿಯೂ
ಮತ್ಸ್ಯಭೂಪಾಲನೂ ಬಂದುಸೇರಿದರು. ಎಲ್ಲರೂ ವಿಚಿತ್ರವಾಹನನ ಮತ್ತು
ತ್ರಿಲೋಕಸುಂದರೀಮಣಿಯ ವೃತ್ತಾಂತಗಳನ್ನು ಕೇಳಿ, ಆಶ್ಚರ್ಯಾನಂದ
ಭರಿತರಾದರು. ಅನಂತರ ಪಾಂಡ್ಯದೇಶಾಧೀಶನು ಶುಭಮುಹೂರ್ತದಲ್ಲಿ
ವಿಚಿತ್ರವಾಹನನಿಗೂ ತ್ರಿಲೋಕಸುಂದರೀಮಣಿಗೂ ವಿವಾಹಮಹೋತ್ಸ
ವವನ್ನು ಸಂಭ್ರಮದಿಂದ ನಡೆಯಿಸಿದನು. ಪಾಂಚಾಲದೇಶಾಧೀಶನಾದ
ರೋ, ತನ್ನ ಪುತ್ರನ ವಿಜಯಕ್ಕೂ, ಸಾಹಸಕ್ಕೂ ಸಂತೋಷಪಡುತ್ತಿದ್ದ
ನು. ಆಗ ವಿಚಿತ್ರವಾಹನನು ತಂದೆಗೆ ಅಡ್ಡಬಿದ್ದು, ತಂದೆಯೇ! ನಮ್ಮ
ಚಿಕ್ಕ ಅತ್ತಿಗೆಯಾದ ಮಾಂಡವಿಯಿಂದ ನನಗೆ ದೇವತೆಗಳ ದರ್ಶನವೂ,
ಮಹರ್ಷಿಯ ಅನುಗ್ರಹವೂ, ಈ ತ್ರಿಲೋಕಸುಂದರೀಮಣಿಯ ಲಾಭ
ವೂ, ಪಾಂಡ್ಯದೇಶಾಧಿಪತ್ಯವೂ ಲಭಿಸಿದವೆಂದು ಕೊಂಡಾಡಿದನು. ಜನ
ನೀಜನಕರನ್ನೂ ತನ್ನ ಮೂವರು ಅಣ್ಣಂದಿರನ್ನೂ, ಅತ್ತಿಗೆಯಂದಿರನ್ನೂ
ಸಂತೋಷಗೊಳಿಸಿದನು. ಹೀಗೆ ಕೆಲವು ದಿನಗಳ ಬಳಿಕ ಪಾಂಚಾಲಪ
ತಿಯು, ತನ್ನ ಮೂವರು ಕುಮಾರರನ್ನೂ, ಸೊಸೆಯರನ್ನೂ ಸಂಗಡಕರೆ
ದುಕೊಂಡು ಹೊರಟನು. ಪಾಂಡ್ಯಭೂಪತಿಯಾದರೋ ವಿಚಿತ್ರವಾಹ
ನನನ್ನೂ, ತ್ರಿಲೋಕಸುಂದರೀಮಣಿಯನ್ನೂ ತನ್ನ ರಾಜ್ಯದಲ್ಲಿಯೇ ಇರಿ
ಸಿಕೊಂಡು, ಅವರೀರ್ವರಿಗೂ ಪಟ್ಟವನ್ನು ಕಟ್ಟಿದನು. ವಿಚಿತ್ರವಾಹನ
ನಾದರೋ ತ್ರಿಲೋಕಸುಂದರಿಯೊಂದಿಗೆ ಪಾಂಡ್ಯರಾಜ್ಯದಲ್ಲಿ ಸುಖವಾಗಿ
ರುತ್ತಿದ್ದನು. ಭುಜಂಡಮಹರ್ಷಿಯು ಅನುಗ್ರಹಿಸಿದ ತಾರಕಮಂತ್ರವ
ನ್ನು ಸದಾ ಜಪಿಸುತ್ತಾ, ದೇವಬ್ರಾಹ್ಮಣರನ್ನೂ, ಗುರುಹಿರಿಯೆರನ್ನೂ
ಭಕ್ತಿಯಿಂದ ಪೂಜಿಸುತ್ತಾ , ತನ ಬಾಹುಬಲದಿಂದ ಸಕಲ ಶತ್ರುಗಳನ್ನು

ಗೆದ್ದು, ಲೋಕನಾಯಕನೆನಿಸಿಕೊಂಡು, ಧರ್ಮವನ್ನು ನಾಲ್ಕುಪಾದಗಳಿಂದ ನಡೆಯಿಸುತ್ತಾ, ರಾಜ್ಯಭಾರವಂ ಮಾಡುತ್ತಿದ್ದನು. ಬಹುಕಾಲ ಶ್ರೀಲೋಕಸುಂದರೀಮಣಿಯೊಂದಿಗೆ ಸುಖಸಂತೋಷಗಳನ್ನನುಭವಿಸಿ, ರಾಜ್ಯಭಾರವಂ ಮಾಡಿದ ಬಳಿಕ, ದೇಹವನ್ನು ತ್ಯಜಿಸಿ, ಸತ್ಯಲೋಕವನ್ನು ಸೇರಿದನೆಂದು ಶ್ರೀಕೃಷ್ಣಪರಮಾತ್ಮನು ಅರ್ಜುನನಿಗೆ ಬೋಧಿಸಿದನು. ಆಗ ಅರ್ಜುನನು ಮಹಾನುಭಾವನೇ ! ನಿನ್ನ ಮಹಿಮೆಯಿಂದ ನನಗೆ ತಾರಕಮಂತ್ರಪ್ರಭಾವವು ಗೊತ್ತಾಯಿತಲ್ಲದೆ ಸತ್ಯಲೋಕವು ಸಿದ್ಧಿಸುವುದು. ಬಹಳ ಶ್ರೇಷ್ಠನಾದ ವಿಚಿತ್ರವಾಹನನ ಕಥೆಯನ್ನು ಕೇಳಿ ಧನ್ಯನಾದೆನೆಂದು ಆವಿಚಿತ್ರವಾಹನನ್ನು ಕೊಂಡಾಡಿ, ಮಹಾನುಭಾವನೇ ! ಬೆಳಗಾಗುತ್ತಬಂದಿದೆ, ನಿದ್ರೆಯು ಕಣ್ಣುಗಳನ್ನು ಮುಚ್ಚುತ್ತಿರುವುದು, ನಿದ್ರೆಹೋಗೋಣ ಬಾರೆನ್ನಲು, ಶ್ರೀಕೃಷ್ಣಸ್ವಾಮಿಯೂ ಸಮ್ಮತಿಸಿದನು. ಇಬ್ಬರೂ ಸುಖವಾಗಿ ನಿದ್ರಿಸಿದರೆಂಬಲ್ಲಿಗೆ ಶ್ರೀಕೃಷ್ಣಬೋಧಾಮೃತಸಾರದೊಳು ಐದನೆಯಕಥೆಯು ಸಂಪೂರ್ಣವಾದುದು.

ಆರನೆಯ ಕಥಾಪ್ರಾರಂಭವು.

ಆರನೆಯದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾನದೀಪ್ರಾಂತದಲ್ಲಿದ್ದ ಮರಳದಿನ್ನೆಯಮೇಲೆ ಕುಳಿತು, ತಾಂಬೂಲವನ್ನು ಹಾಕಿಕೊಳ್ಳುತ್ತಾ, ನದಿಯ ಅಲೆಯಕಡೆಯಿಂದ ಬೀಸುವ ತಂಗಾಳಿಗೆ ಆನಂದಪಡುತ್ತಾ, ಸಂತೋಷದಿಂದಿರುವಲ್ಲಿ, ಅರ್ಜುನನು ಶ್ರೀಕೃಷ್ಣಮೂರುತಿಯನ್ನು ಕುರಿತು, ಮಹಾನುಭಾವನಾದ ನಿನ್ನ ದಯೆಯಿಂದ ಅಪವರ್ಗಮಾರ್ಗವಾದ ವೇದಾಂತರಹಸ್ಯದ ಕೆಲವು ಭಾಗಗಳನ್ನು ತಿಳಿದು ಧನ್ಯನಾದೆನು. ಸಚ್ಚಿದಾನಂದ ಲಕ್ಷಣವನ್ನು ನನಿಗೆ ಬೋಧಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳಲು, ಆ ಭಗವಂತನು ಶ್ರುತಕೀರ್ತಿಮಹಾರಾಜನ ಚರಿತ್ರೆಯನ್ನು ಹೇಳತೊಡಗುವನು.

ಶ್ರುತಕೀರ್ತಿಮಹಾರಾಜನ ಚರಿತ್ರೆಯು.

ಪಾರ್ಥನೇ ಕೇಳು:—ಪೂರ್ವದಲ್ಲಿ ವಿಶ್ರುತನೆಂಬ ಮಹಾರಾಜನು ಮಾಳವದೇಶದಲ್ಲಿ ಆಳುತ್ತಿದ್ದನು. ಅವನಿಗೆ ಸುಮತಿ, ಸುನಂದೆ ಎಂಬ ಇಬ್ಬರು ಹೆಂಡಿರಿದ್ದರು. ಅವರಲ್ಲಿ ಕಿರಿಯವಳಾದ ಸುನಂದೆಗೆ ಶ್ರುತಿಸೇನನೆಂಬ ಕುವರನೂ, ವಿಶ್ರುತಾ ಎಂಬ ಕುವರಿಯೂ ಹುಟ್ಟಿದರು. ಪಟ್ಟದರಸಿಯಾದ ಸುಮತಿಗೆ ಬಹುಕಾಲ ಮಕ್ಕಳೇಳಗಲಿಲ್ಲ. ಆಕೆಯು ಸವತಿಯ ಮಕ್ಕಳನ್ನೇ ತನ್ನ ಮಕ್ಕಳಿಗಿಂತಲೂ ಹೆಚ್ಚಾಗಿ ಭಾವಿಸಿ, ಸಾಕು

ತ್ತಿದ್ದಳು. ಕೆಲವು ದಿನಗಳ ಬಳಿಕ ತಾನೂ ಗರ್ಭಿಣಿಯಾಗಿ ತ್ರಿಲೋಕ ಸುಂದರನಾದ ಪುತ್ರರತ್ನವನ್ನು ಪಡೆದಳು. ರಾಜೇಂದ್ರನು ಆ ಶಿಶುವಿಗೆ ಜಾತಕರ್ಮಾದಿ ಸಕಲ ಸಂಸ್ಕಾರಗಳನ್ನೂ ಮಾಡಿಸಿ, ಬ್ರಾಹ್ಮಣರಿಗೆ ಅನೇಕ ಪ್ರಕಾರವಾದ ದಾನಧರ್ಮಗಳನ್ನು ಮಾಡಿ, ಅತ್ಯಂತಸಂತೋಷದಿಂದಿರುತ್ತಿದ್ದನು. ಆ ಮಗುವಿಗೆ ಐದನೆಸಂವತ್ಸರವು ಆರಂಭಿಸಿತು. ಗುರು ಮುಖದಿಂದ ಆ ಬಾಲಕನಿಗೆ ಸಕಲ ವಿದ್ಯೆಗಳನ್ನೂ ಕಲಿಸಿದನು. ಆ ಶಿಶುವಾದರೋ, ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ವೃದ್ಧಿಯನ್ನೆದುತ್ತಿದ್ದನು. ಸಕಲ ವಿದ್ಯೆಗಳಲ್ಲಿಯೂ ಪೂರ್ಣವಾದ ಪಾಂಡಿತ್ಯವನ್ನು ಪಡೆದನು. ಇದನ್ನು ಇವನ ಚಿಕ್ಕತಾಯಿಯಾದ ಸುನಂದೆಯುಕೇಳಿ ಅತ್ಯಂತ ಚಿಂತಾಕ್ರಾಂತಳಾದಳು. ಒಂದಾನೊಂದುದಿನ ತನ್ನ ಸಖಿಯಾದನ್ನು ಕುರಿತು, ಅಮ್ಮಾ! ನನ್ನ ಮನೋದುಃಖವನ್ನು ಏನೆಂದು ಹೇಳಲಿ? ಯಾರಲ್ಲಿ ಹೇಳಿಕೊಳ್ಳಲಿ? ಏನುಮಾಡಲೆಂದು ದುಃಖಿಸುತ್ತಿರಲು, ಕಪಟಗಾತಿಯಾದ ಅವಳ ಸಖಿಯು ಒಂದುವಾಯೆವನ್ನು ಹುಡಕಿ ಹೇಳಲುಜ್ಜುಗಿಸಿದಳು. ಅನೇಕ ಮಂತ್ರತಂತ್ರಾದಿ ಔಷಧಿಗಳಿಂದ ನಿನ್ನ ಪತಿಯನ್ನು ವಶಮಾಡಿಕೊಳ್ಳೆಂದು ಬೋಧಿಸಿದಳು. ಆ ಬಳಿಕ ಆ ಸುನಂದೆಯು ವಿಶ್ರುತನೆಂಬ ತನ್ನ ಪತಿಯಲ್ಲಿ ಪರಮಪ್ರೇಮವನ್ನು ತೋರಿಸುತ್ತಾ, ತನ್ನ ಪುತ್ರೀಪುತ್ರರನ್ನು ಯಾವಾಗಲೂ ರಾಜನಬಳಿಯಲ್ಲಿಯೇ ಇರುವಂತೆಯೂ, ಸವತಿಯ ಮಗನಾದ ನಿಚಿತ್ರವಾಹನನನ್ನೂ, ಸವತಿಯಾದ ಸುಮತಿಯನ್ನೂ ರಾಜನ ಬಳಿಗೆ ಬರಲೀಯದೆಯೂ, ರಾಜನು ಅವರಲ್ಲಿ ಪ್ರೀತಿಯಿಡದೆಯೂ ಇರುವಂತೆ ಕಪಟೋಪಾಯಗಳನ್ನು ಮಾಡಿಬಿಟ್ಟಳು. ಹೀಗಿಯೇ ಅನೇಕ ದಿನಗಳು ಕಳೆದವು. ಒಂದಾನೊಂದುದಿನ ಸುನಂದೆಯು ರಾಜನನ್ನು ಕುರಿತು, ಪತಿಯೇ! ನನಗೆ ಬಹಳ ತಲೆನೋವು ಉಂಟಾಗಿದೆ. ಇದನ್ನು ನಾನು ತಡೆಯಲಾರೆನು. ಹಿಂದೆ ನನಿಗೆ ಹೀಗೆಯೇ ಆಗಿರಲು ನಮ್ಮ ತಂದೆಯು ನಮ್ಮದೇಶದ ಕಾಡಿನಲ್ಲಿರುವ ಹುಲಿಯ ಹಾಲನ್ನು ತರಿಸಿ, ಈರೋಗವನ್ನು ನಾಸಿಮಾಡಿದನು. ಈಗಲೂ ನೀನು ಹುಲಿಯ ಹಾಲನ್ನು ತರಿಸಿ ನನ್ನ ಪ್ರಾಣಗಳನ್ನು ಉಳಿಸಬೇಕೆಂದು ಗೋಳಿಟ್ಟಳು. ರಾಜನಾದರೊ, ಹೆಂಡತಿಯಮೇಲಿನ ಪ್ರೇಮದಿಂದ ಮಂದಬುದ್ಧಿಯುಳ್ಳವನಾಗಿ, ಹಾಗೆಯೇ ಆಗಲೆಂದು ಒಪ್ಪಿಕೊಂಡು, ಕೂಡಲೇ ಸನ್ನೆಗೆಬಂದು, ಯಾರು ಅಡವಿಗಳಲ್ಲಿ ಲ್ಲಾತಿರುಗಿ ಹುಲಿಯ ಹಾಲನ್ನು ತರುವಿರೋ ಅವರಿಗೆ ಒಂದು ಲಕ್ಷವರಹದ ಬಹುಮಾನವನ್ನು ಕೊಡುವೆನೆಂದು ಪ್ರಕಟಿಸಿದನು. ಇದು ಅಸಾಧ್ಯವೆಂದು ಕೆಲವರು ಸುಮ್ಮನಾದರು. ಅಲ್ಲಿದ್ದ ಮಂತ್ರಿಗಾರರೂ, ಮಾಯಗಾರರೂ ಇದು ಅಪಾಯವೆಂದು ತಿಳಿದು ಆದೇಶವನ್ನೆ [illegible]

ಹಣದಆಸೆಗೆ ಕೆಲವರು ದಿಕ್ಕುದಿಕ್ಕಿಗೂ ಸೋಗಿ ಹುಲಿಯಹಾಲನ್ನು ತರ ಲಾರದೆ ಹಿಂದಕ್ಕೆ ಬಂದುಬಿಟ್ಟರು ಈರೀತಿ ನಿಷ್ಫಲವಾದದ್ದನ್ನು ನೋ ಡಿ ರಾಜನು ದುಃಖಾಕ್ರಾಂತನಾಗಿ ಹೆಂಡತಿಯಾದ ಸುನಂದೆಗೆ ತಿಳಿಸಿದನು. ಆಗ ಆ ಕಪಟೋಪಾಯವುಳ್ಳವಳಾದ ಸುನಂದೆಯಾದರೋ, ರಾಜನೆ! ನಿನ್ನ ಇಬ್ಬರು ಮಕ್ಕಳನ್ನೂ ಕರೆದು ಹುಲಿಯ ಹಾಲನ್ನು ತಂದವರಿಗ ರಾಜ್ಯಭಾರವನ್ನು ಕೊಡುತ್ತೇನೆಂದು ಹೇಳು, ಇಬ್ಬರೂ ಪ್ರಯತ್ನಮಾ ಡಿ ತರುವರೆಂದು ತೋರಿಸಿದಳು. ಮಂದಬುದ್ಧಿಯುಳ್ಳವನಾದ ರಾಜನು ಸುನಂದೆಯುಮಾತು ನಿಜವೆಂದೇ ಭ್ರಮಿಸಿ, ತನ್ನ ಪುತ್ರೀರತ್ನವರನ್ನೂ ಕರೆ ಯಿಸಿ, ತನ್ನ ಇಷ್ಟವನ್ನು ತಿಳಿಸಿ ಕಳುಹಿಸಿದನು. ಶ್ರುತಸೋಮನೆಂಬ ಕಿರಿಯ ಪಟ್ಟಿಯು ಮಗನು ತಾಯಿಯಬಳಿಗೆ ಬಂದು, ನಡೆದವರ್ತಮಾನ ವನ್ನೂ, ತಂದೆಯು ಇಷ್ಟಾರ್ಥಕ್ಕಾಗಿ ತಾನು ಹೊರಡುವೆನೆಂದೂ ಹೇಳಲು, ಆಗ ಸುನಂದೆಯು, ಪುತ್ರನೆ! ನಿನಗೆ ರಾಜ್ಯಲಾಭವಾಗಲೆಂದೂ, ನಿಮ್ಮ ಬಲತಾಯಿಯು ಮಗನಾದ ಶ್ರುತಕೀರ್ತಿಯು ಹುಲಿಯ ಪಾಲಾಗಲೆಂದೂ, ನಾನು ಈ ಉಪಾಯವನ್ನು ಮಾಡಿರುವೆನು. ನೀನು ಎಲ್ಲಿಯಾದರೂ ಎಂ ಟು-ಹತ್ತು ದಿನಗಳು ಪರಸ್ಥಳ ತಿರುಗಾಡಿಕೊಂಡು ಬಂದು ಹುಲಿಯಹಾ ಲು ಸಿಕ್ಕಲಿಲ್ಲವೆಂದು ರಾಜನಿಗೆ ಹೇಳಿಬಿಡು. ಶ್ರುತಕೀರ್ತಿಯು ಕಾಡು ನೋಡುಗಳಲ್ಲೆಲ್ಲಾ ತಿರುಗಿ ಹುಲಿಯಪಾಲಾಗಲೆನ್ನಲು, ಶ್ರುತಸೋಮನು ಹಾಗೆಯೇ ಆಗಲೆಂದು ಹೊರಟನು. ಅತ್ತ ಶ್ರುತಕೀರ್ತಿಮಹಾರಾಯನಾದರೋ, ತಂದೆಯ ಅಭೀಷ್ಟವನ್ನು ಕೂಡಲೆ ಕೋಗಿ ತಾಯಿಯಾದ ಸುಮತಿಗೆ ತಿಳಿಸಿ, ಹುಲಿಯಹಾಲನ್ನು ತರಲು ಅಪ್ಪಣೆಕೊಡು, ಜಾಗ್ರ ತೆಯಾಗಿ ಹುಲಿಯಹಾಲನ್ನು ತಂದು, ತಂದೆಯನ್ನು ಮೆಚ್ಚಿಸಿ, ಸಿಂಹಾ ಸನವನ್ನು ಪಡೆಯುವೆನೆಂದನು. ಆ ಸುಮತಿಯು ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ, ಮಗನನ್ನು ಮುತ್ತಿಟ್ಟುಕೊಂಡು, ಪುತ್ರನೇ! ಇದು ಮಾಯಲಾಡಿಯಾದ ನಿಮ್ಮ ಚಿಕ್ಕತಾಯಿ ಸುನಂದೆಯ ಕಪಟೋಪಾ ಯವೇ ಹೊರತು ರಾಜನು ಸ್ವಂತಬುದ್ಧಿಯಿಂದ ಹೇಳಲಿಲ್ಲ. ನಿಮ್ಮ ತಂದೆಯಾದ ವಿಶ್ರುತನು ಈಚಿಗೆ ನಿನ್ನನ್ನೂ ನನ್ನನ್ನೂ ಕರೆಸುವುದೂ ಇಲ್ಲಿ. ನಾವಿರುವಕಡೆಗೆ ಬರುವುದೂ ಇಲ್ಲ. ರಾಜನು ನಮ್ಮಮೇಲೆ ಈ ರೀತಿಯಾದ ದ್ವೇಷವನ್ನು ಸಾಧಿಸುತ್ತಿರುವಲ್ಲಿ ಈರಾಜ್ಯದ ಆಸೆಯು ನಿನ ಗೆ ಏತಕ್ಕೆ ? ನಿನ್ನ ಸೋದರಮಾವನಾದ ಕಾಂಭೋಜಪತಿಗೆ ಇದರ ಹತ್ತರ ಷ್ಟು ರಾಜ್ಯವಿರುವುದು, ನಿನಗೇನೂ ಕೊರತೆಯಿಲ್ಲ. ನಾವಿಬ್ಬರೂ ಕಾಂ

[illegible] ಬಾರೆನ್ನಲು, ಶ್ರುತಕೀರ್ತಿಯು

ತಾಯಿಗೆ ನಮಸ್ಕಾರಮಾಡಿ, ತಾಯಿಯೇ! ನಾವು ಈಗ ರಾಜ್ಯವನ್ನು ಬಿಟ್ಟು ಹೊರಡುವುದು ಯುಕ್ತವಲ್ಲ. ಅಲ್ಲಿ ನನಗೆ ಸ್ವಾತಂತ್ರ್ಯವೂ ಶಕ್ತಿಯೂ ಉಂಟಾಗಲಾರದು, ನಾನು ಸಕಲ ಧನುರ್ವಿದ್ಯೆಗಳಲ್ಲಿಯೂ ನಿಪುಣನಾಗಿದ್ದೇನೆ, ನನ್ನ ಬಾಹುಬಲವನ್ನು ನಿನಗೆ ತೋರಿಸುವೆನು. ವಿವ್ಯಾಸ್ತ್ರ ಪ್ರಯೋಗಗಳನ್ನೂ ಯುದ್ಧಕ್ರಮವನ್ನೂ ನಾನು ಬಲ್ಲೆನು. ಈಗ ನನಗೆ ಹದಿನೆಂಟನೆಯ ವಯಸ್ಸಾಗಿದೆ. ತಂದೆಯು ಸಿಂಹಾಸನವನ್ನೇರಲು ಈಗ ಸಕಾಲವಾಗಿರುವುದು, ನಾನು ಕೂಡಲೇ ಅರಣ್ಯವನ್ನು ಹೊಕ್ಕು ಅಲ್ಲಿನುವ ವ್ಯಾಘ್ರಸಿಂಹಮೊದಲಾದ ವನಮೃಗಗಳನ್ನು ಧನುಶ್ಶಕ್ತಿಯಿಂದ ಅಪಗಿ, ಹುಲಿಯಹಾಲನ್ನು ತಂದು, ತಂದೆಯು ಪ್ರೀತಿಗೆ ಪಾತ್ರನಾಗಿ ರಾಜ್ಯವನ್ನು ಪಡೆಯುವೆನೆಂದೂ, ನೀನು ದುಃಖವನ್ನು ಬಿಟ್ಟು ಸಂತೋಷದಿಂದ ನನಗೆ ಅಪ್ಪಣೆಯೆನ್ನು ಕೊಡಬೇಕೆಂದೂ ಕೇಳಿಕೊಂಡನು. ತಾಯಿಯಾದ ಸುಮತಿಯು, ಪುತ್ರನ ಧೈರ್ಯಸ್ಥೈರ್ಯಗಾಂಭೀರ್ಯಯುಕ್ತವಾದ ಈ ವೀರವಚನಗಳನ್ನು ಕೇಳಿ ಬದಲುಕೇಳಲಾದೆ, ಕುವರಾ! ನಿನ್ನಲ್ಲಿಯೇ ನನ್ನ ಪಂಚಪ್ರಾಣಗಳನ್ನು ಇಟ್ಟುಕೊಂಡಿರುವೆನು. ನಿನ್ನನ್ನಗಲಿ ನಾನು ಜೀವಿಸಲಾರೆನು. ಐದುರಾತ್ರಿಗಳೊಳಗಾಗಿ ಜಯಶೀಲನಾಗಿ ನನ್ನಬಳಿಗೆ ಬಂದುಸೇರೆಂದು ಆಜ್ಞೆಯನ್ನಿತ್ತು ಇಬ್ಬರು ಬಿಲ್ಲಾಳರನ್ನು ಜೊತೆಮಾಡಿ ಕಳುಹಿಸಿದಳು. ಶ್ರುತಕೀರ್ತಿಮಹಾರಾಯನಾದರೋ ತಾಯಿಯ ಅಪ್ಪಣೆಯನ್ನು ಪಡೆದು, ತಂದೆಯಾದ ನಿಶ್ಚಿತನ ಬಳಿಗೂ, ಚಿಕ್ಕತಾಯಿಯಾದ ಸುನಂದೆಯಬಳಿಗೂ ಹೋಗಿ ಅವರ ಆಜ್ಞೆಯನ್ನು ಪಡೆದು, ಆ ಇಬ್ಬರು ಬಿಲ್ಲಾಳರನ್ನೂ ಹಿಂದಿಟ್ಟುಕೊಂಡು, ಉತ್ತರದಿಕ್ಕಿಗೆ ಪ್ರಯಾಣಮಾಡಿ, ಬಹುದೂರ ಅರಣ್ಯದಲ್ಲಿ ನುಗ್ಗಿ, ಧನುಷ್ಟಂಕಾರವನ್ನು ಮಾಡಿದನು. ಅಲ್ಲಿದ್ದ ಕಾಡುಮೃಗಗಳೆಲ್ಲಾ ಬೆದರಿ, ಚದರಿ, ಇವನಮೇಲೆ ಬೀಳಲು, ಶ್ರುತಕೀರ್ತಿಯು ಎಲ್ಲವನ್ನೂ ನೆಲಕ್ಕೆ ಉರುಳಿಸಿದನು. ಅನೇಕ ಕಾಡುಮೃಗಗಳು ನೆತ್ತರುಬಿದ್ದವು. ಅನೇಕ ಹುಲಿಗಳು ಪ್ರಾಣವನ್ನು ಕಳೆದುಕೊಂಡವು. ಎಲ್ಲೆಲ್ಲಿಯೂ ಅಲ್ಲೋಲಕಲ್ಲೋಲವಾಯಿತು. ಪೊದರುಗಳಲ್ಲಿದ್ದ ಹುಲಿಗಳೆಲ್ಲಾ ಈ ಶ್ರುತಕೀರ್ತಿಯು ಬಾಣಪೇಟನ್ನು ತಡೆಯಲಾರದೆ ಅಲ್ಲಿಯೇ ನೆತ್ತುಬಿದ್ದವು. ಶ್ರುತಕೀರ್ತಿಯು ಈ ರೀತಿಯಾಗಿ ಕಾಡುಮೃಗಗಳ ಬೇಟೆಯನ್ನಾಡುತ್ತಾ, ದೊಪ್ಪದೊಪ್ಪಗುಹೆಗಳಿಗೆ ನುಗ್ಗಿ, ಅಲ್ಲಿದ್ದ ಕಾಡುಮೃಗಗಳನ್ನು ಕೊಲ್ಲುತ್ತಾ, ಅರಣ್ಯವೆಲ್ಲಾ ತಿರುಗುತ್ತಾ, ಹಿಂದಿರುಗಿ ನೋಡುವಲ್ಲಿ ತನ್ನ ಜೊತೆಯಲ್ಲಿದ್ದ ಬೇಟೆಗಾರರು ಕಾಣದಿರಲು, ದುಃಖಾಕ್ರಾಂತನಾಗಿ, ಧೈರ್ಯವನ್ನು ಹೊಂದಿ ಮುಂದಮುಂದಕ್ಕೆ ಹೊರಟು, ಅಲ್ಲಲ್ಲಿ ಸಿಕ್ಕುವ ಮಾಧುರ್ಯ ಫಲಗಳನ್ನು ಭಕ್ಷಿಸುತ್ತಾ, ತಿಳಿನೀರನು

ಕುಡಿದು ದಾಹವನ್ನು ಅಡಗಿಸಿಕೊಳ್ಳುತ್ತಾ, ತಿರುತಿರುಗಿ, ಅಲ್ಲಿರುವ ಶುಕ ಶಾರಿಕಾದಿಗಳ ಮೃದುಮಧುರವಾದ ನುಡಿಗಳನ್ನು ಕೇಳಿ ಆನಂದಿಸುತ್ತಾ, ಸಮೀಪದಲ್ಲಿದ್ದ ಪುನ್ನಾಗವೃಕ್ಷದ ಕಳಗಡೆ ಕುಳಿತುಕೊಂಡು, ಪುನಃ ಎದ್ದು ಮುಂದಮುಂದಕ್ಕೆ ಹೋಗುತ್ತಿದ್ದನು. ಇಷ್ಟರಲ್ಲಿ ಈಕಡೆ ಚಿಕ್ಕಹೆಂಡತಿಯ ಮಗನಾದ ಶ್ರುತಸೋಮನು ಅಲ್ಲಲ್ಲಿ ತಿರುಗುತ್ತಾ ಊರಿಗೆಬಂದು ಹುಲಿಯ ಹಾಲನ್ನು ತರಲು ಸಾಧ್ಯವಾಗಲಿಲ್ಲವೆಂದು ಹೇಳಿ ನಿಂತುಬಿಟ್ಟನು. ಶ್ರುತಕೀರ್ತಿಮಹಾರಾಯನೊಂದಿಗೆ ಅರಣ್ಯಕ್ಕೆ ಹೋಗಿದ್ದ ಚೇಟಿಗಾರರಾದರೂ ಶ್ರುತಕೀರ್ತಿಯನ್ನು ಕಾಣದೆ ತಮ್ಮ ಪ್ರಾಣಗಳನ್ನುಳಿಸಿಕೊಂಡು ಪಟ್ಟಣಕ್ಕೆಬಂದು ಸುಮತೀದೇವಿಗೆ ನಮಸ್ಕಾರಮಾಡಿ, ನಡೆದ ವರ್ತಮಾನವನ್ನೆಲ್ಲಾ ತಿಳಿಸಲು, ಸುಮತಿಯು ನಿಶ್ಚೇಷ್ಟಿತಳಾಗಿ ಮೂರ್ಛೆಬಿದ್ದಳು. ಸುಮತೀದೇವಿಯು ಗೋಳಾಟಕ್ಕೆ ಪಾರವೇ ಇಲ್ಲವು. ಪಟ್ಟಣದಲ್ಲೆಲ್ಲಾ ರೋದನಕಬ್ಬವು ಹೆಚ್ಚಿತು. ಸ್ವಲ್ಪಹೊತ್ತಿನಮೇಲೆ ಸುಮತೀದೇವಿಯು ಎಚ್ಚೆತ್ತು, ನಡೆದ ವರ್ತಮಾನವನ್ನೆಲ್ಲಾ ತನ್ನ ಅಣ್ಣನಾದ ಕಾಂಭೋಜಿಪತಿಗೆ ಬರೆಸಿದಳು. ಈ ಸುದ್ದಿಯನ್ನು ಕಾಂಭೋಜಾಧಿಪನು ಕೇಳಿ ಅತ್ಯಂತ ದುಃಖದಿಂದ, ತನ್ನ ಕುವರಿಯಾದ ಪುಷ್ಪವೇಣಿಯನ್ನು ಕರೆದು, ಅಮ್ಮಾ! ಪುಷ್ಪವೇಣೀ! ನಿಮ್ಮ ಸೋದರತ್ತೆಯ ಮಗನಾದ ಶ್ರುತಕೀರ್ತಿಯು ಹುಲಿಯಹಾಲನ್ನು ತರಲು ಅಡವಿಗೆ ಹೋಗಿ ಅಡವಿಯಪಾಲಾದನಂತೆ. ಈತೆರನಾದ ವರ್ತಮಾನವನ್ನು ಕೇಳಿ ನಾನು ಹೇಗೆಬದುಕಲಿ? ಅಯ್ಯೋ! ದೇವರೆ! ನಿನ್ನ ರೂಪಲೇಖಾಲಾವಣ್ಯಗಳಿಗೆ ಸರಿಯಾದವನು ಶ್ರುತಕೀರ್ತಿಯಲ್ಲದೆ ಬೇರೆ ಯಾರಿರುವರು. ನಾನು ಇನ್ನು ವರನನ್ನು ಎಲ್ಲಿ ಹುಡುಕಲಿ; ಏನುಮಾಡಲೆಂದು ದುಃಖಿಸಿದನು. ಆತನ ಧೈರ್ಯಶೌರ್ಯಸಾಹಸ ಗುಣಗಾಂಭೀರ್ಯಾದಿಗಳಿಗೆ ಸರಿಯಾದವರು ಲೋಕದಲ್ಲಿ ಎಲ್ಲಿರುವರೋ ಕಾಣೆನು. ಇದನ್ನು ತಿಳಿಯಲು ನಾನೊಂದುಪಾಯವನ್ನು ಮಾಡುವೆನು. ಮನುಷ್ಯರಿಗೆ ಸಾಧ್ಯವಾಗದ ಒಂದಾನೊಂದು ಕೋತಿಲಯಂತ್ರವನ್ನು ನಿರ್ಮಿಸಿ, ನಿನ್ನ ಸ್ವಯಂವರ ವರ್ತಮಾನವನ್ನು ಪ್ರಕಟಿಸುವೆನೆಂದು ಹೇಳಿ, ದೇಶದೇಶಗಳಿಗೂ ತಿಳಿಸಿದನು, ಎಲ್ಲೆಲ್ಲಿಯೂ ಚಾರರು ಹೊರಟುಹೋದರು. ಅತ್ತ ಶ್ರುತಕೀರ್ತಿಯಾದರೋ ಮೂರುತಿಂಗಳಹೊತ್ತಿಗೆ ವಿಂಧ್ಯಪರ್ವತದ ಗುಹೆಯ ಪ್ರಾಂತವನ್ನು ಸೇರಿ, ಅಲ್ಲಿ ಒಂದು ದೇವಾಲಯವನ್ನೂ ಅದರ ಸುತ್ತಲೂ ನಾನಾವಿಧವಾದ ಫಲವೃಕ್ಷಗಳನ್ನೂ, ಸುವಾಸನೆಯುಳ್ಳ ಪುಷ್ಪಗಳನ್ನೂ ನೋಡಿ, ಸಂತೋಷಪಟ್ಟು, ಅಲ್ಲಿ ತನಗೆ ಬೇಕಾದಷ್ಟು ಹಣ್ಣುಹಂಪಲುಗಳನ್ನು ತಿಂದು, ನೀರನ್ನು ಕುಡಿದು, ಒಂದು ಮರದಡಿಮಲಗಿ, ತನ್ನ ತಾಯಿಯನ್ನು ಜ್ಞಾಪಿಸಿಕೊಂಡು ದುಃಖಿಸುತ್ತಿದ್ದನು.

ಆ ಸುಮತೀದೇವಿಯು ನಿರ್ಮಲಚಿತ್ತಕ್ಕೆ ಧರ್ಮದೇವತೆಯು ಸಂತುಷ್ಟಳಾಗಿ, ಧೀರನಾದ ಕೃತಕೀರ್ತಿಮಹಾರಾಯನಿಗೆ ಪ್ರತ್ಯಕ್ಷಳಾಗಿ, ರಾಜನಂದನಾ! ಈದೇನಾಲಯದ ಪೂರ್ವದಿಕ್ಕಿನಲ್ಲಿ ತಪಸ್ವಿಯಾದ ಒಬ್ಬ ಸನ್ಯಾಸಿ ಇರುವನು. ನೀನು ಕಾಪಟ್ಯದಿಂದ ಆ ಸನ್ಯಾಸಿಯನ್ನು ಸೇವಿಸಿ, ನಂಬಿಕೆಯನ್ನು ಹುಟ್ಟಿಸಿ, ಆ ದುಷ್ಟನನ್ನು ಬಲಿಕೊಡದರೆ ನಿನ್ನ ಇಷ್ಟವು ಸಿದ್ಧಿಸುವುದು. ಅವನು ಇದುವರೆಗೆ ಹನ್ನೊಂದುಜನ ರಾಜಪುತ್ರರನ್ನು ಕಾಳಿಕಾದೇವಿಗೆ ಬಲಿಕೊಟ್ಟಿರುವನು. ಇನ್ನೊಬ್ಬ ರಾಜಪುತ್ರನನ್ನು ಕಾಳಿಕಾದೇವಿಗೆ ಆಹುತಿ ಮಾಡಿದರೆ ಅವನ ಇಷ್ಟವು ಸಿದ್ಧಿಸುವುದು. ನೀನು ಇದಕ್ಕೆ ಅವಕಾಶಕೊಡದೆ ಅವನನ್ನು ನಂಬಿಸಿ ಅವನನ್ನು ಕೊಲ್ಲು. ಇದರಿಂದ ನಿನಗೆ ಕಾಳಿಕಾದೇವಿಯು ಪ್ರತ್ಯಕ್ಷಳಾಗುವಳು. ನಿನ್ನಿಷ್ಟವೂ ಸಿದ್ಧಿಸುವುದು. ಹುಲಿಯಹಾಲನ್ನು ತೆಗೆದುಕೊಂಡು ಪಟ್ಟಣಕ್ಕೆ ಹೋಗುವಿ, ನಾನು ಧರ್ಮದೇವತೆಯು, ನಿನ್ನ ತಾಯಿಯ ನಿರ್ಮಲಚಿತ್ತಕ್ಕೆ ಮೆಚ್ಚಿ ನಾನು ಬಂದೆನೆಂದುಹೇಳಿ ಮಾಯವಾದಳು.

ಅಷ್ಟರಹೊತ್ತಿಗೆ ಆ ಕೃತಕೀರ್ತಿಮಹಾರಾಯನು ತನ್ನ ತಾಯಿಯನ್ನೂ, ಧರ್ಮದೇವತೆಯನ್ನೂ ಮನದಲ್ಲಿ ಧ್ಯಾನಿಸುತ್ತಾ, ತನಗೆ ಮರಣಭಯವು ಇನ್ನು ತಪ್ಪಿತೆಂದೂ, ದೈವಸಹಾಯವು ಉಂಟಾಯಿತೆಂದೂ ಸಂತುಷ್ಟಾಂತರಂಗನಾಗಿ, ಧೈರ್ಯದಿಂದ ಆ ಮುನಿಸನ ಆಶ್ರಮಬಳಿಗೆ ಹೋಗಿ ಆ ಜಟಾಧಾರಿಗೆ ಸಾಷ್ಟಾಂಗದಂಡಪ್ರಣಾಮವನ್ನು ಮಾಡಿ, ಮಹಾನುಭಾವನೆ! ನಾನು ಹುಲಿಯಹಾಲನ್ನು ತರಲೋಸುಗ ಇಲ್ಲಿಗೆ ಬಂದಿರುವೆನು. ಸಿಕ್ಕುವಬಗೆ ಹೇಗೆನ್ನಲು, ಕಪಟಸನ್ಯಾಸಿಯು ಇಂತೆಂದನು. ರಾಜಪುತ್ರನೆ! ನಾನು ನಿನ್ನ ಇಷ್ಟಾರ್ಥಗಳನ್ನೆಲ್ಲಾ ನೆರವೇರಿಸುವೆನು. ಹುಲಿಯಹಾಲನ್ನು ತರಿಸಿ ಕೊಡಿಸುವೆನು. ಕೆಲವು ದಿನಗಳು ನೀನು ಇಲ್ಲಿಯೇ ಇದ್ದು ನಮ್ಮ ಆಶ್ರಮದಲ್ಲಿ ವಿವಿಧವಾದ ಧರ್ಮಗಳನ್ನು ತಿಳಿದುಕೊ; ನಿನ್ನ ಇಷ್ಟವನ್ನು ನರವೇರಿಸುವೆನೆಂದನು. ರಾಜಪುತ್ರನು ಹಾಗೆಯೇಆಗಲೆಂದು ಒಪ್ಪಿಕೊಂಡು, ಋಷಿಯ ಶಿಕ್ಷಾಷೆಯನ್ನು ಮಾಡುತ್ತಾ, ಅವನಿಂದ ಅನೇಕ ಧರ್ಮಾಧರ್ಮಗಳನ್ನು ತಿಳಿದುಕೊಳ್ಳುತ್ತಿದ್ದನು. ಹೀಗಿರುವಲ್ಲಿ ಒಂದಾನೊಂದುದಿನ ರಾಜಪುತ್ರನು, ಅಯ್ಯೋದೇವರೆ! ಸರ್ವಾದಿನಿಷ್ಠುರಿಷ್ಠನಾಗಿರುವ ಈ ಮುನಿನಾಥನನ್ನು ನಾನು ಹೇಗೆ ಕೊಲ್ಲಲಿ, ಮಹಾಪಾತಕಗಳು ನನ್ನನ್ನು ಬಿಟ್ಟುಹೋದಾವೆ? ಏನುಮಾಡಲಿ! ಧರ್ಮದೇವತೆಯ ಮಾತನ್ನು ನೆರವೇರಿಸದಿದ್ದರೆ ಮುಂದೇನು ಅಪಾಯಗಳು ಒದಗಿಯಾವೋ! ಹೇಗಾದರೂಆಗಲಿ, ನಾನು ಖಂಡಿತವಾಗಿಯೂ ಈ ಮುನಿಯನ್ನು ಧರ್ಮದೇವತೆಯ ಮಾತಿನಂತೆ ಕೊಲ್ಲುವುದೇಸರಿ! ಅನಂತರ ಧರ್ಮದೇವತೆಮತ್ತು

ಕಾಳಿಕಾದೇವಿಯೆ ಅನುಗ್ರಹದಿಂದಲೇ ಈ ಪಾಪವು ಪರಿಹರವಾಗುವುದೆಂ ದು ಧೈರ್ಯಮಾಡಿಕೊಂಡನು. ಒಂದಾನೊಂದುದಿನ ಮುನಿಯು ರಾಜಪು ತ್ರನನ್ನು ನೋಡಿ, ರಾಜನಂದನಾ! ಇವತ್ತು ಹುಣ್ಣಿಮೆಯು, ಈ ಶಕ್ತಿ ಗೆ ಈವಿನ ಪೂಜೆನಡೆಯುವೀಕೆಂದು ದೇವಸ್ಥಾನಕ್ಕೆ ಕರೆದುಕೊಂಡು ಹೋ ದನು. ಗುಡಿಯಜಾಗಿಲನ್ನು ತೆರೆದು ಇಬ್ಬರೂ ಸ್ನಾನವನ್ನು ಮಾಡಿಕೊಂ ಡು ಒಳಗೆ ಹೋಗಿ ನೆಲವನ್ನೆಲ್ಲಾ ಚನ್ನಾಗಿ ಶುದ್ಧಿಮಾಡಿದರು. ವಿವಿಧ ವಾದ ಫಲಕುಸುಮಗಳಿಂದಲೂ, ಕದಳೀಪತ್ರಗಳಿಂದಲೂ, ಧೂಪದೀಪನೈ ವೇದ್ಯಗಳಿಂದಲೂ ಆದೇವಿಯನ್ನು ತೃಪ್ತಿಪಡಿಸಿದರು. ಅನಂತರ ಆಸನ್ಯಾ ಸಿಯು, ರಾಜಕುಮಾರಾ! ನಿನ್ನ ಇಷ್ಟಾರ್ಥಗಳೆಲ್ಲಾ ನೆರವೇರಲೆಂದು ಮ ನಸ್ಸಿನಲ್ಲಿ ಯೋಚಿಸಿಕೊಂಡು ಈ ದೇವಿಗೆ ಸಾಷ್ಟಾಂಗನಮಸ್ಕಾರವಮಾ ಡೆನ್ನಲು, ರಾಜಪುತ್ರನು, ಮುನಿಪನೆ! ನಾನು ಹೇಗೆ ನಮಸ್ಕಾರಮಾಡ ಬೇಕೋ ದಯಮಾಡಿ ತೋರಿಸೆನ್ನಲು, ಆ ಮುನಿಪನು ಹಾಗೆಯೇ ಆಗ ಲೆಂದು ಸಾಷ್ಟಾಂಗದಂಡಪ್ರಣಾಮವನ್ನು ಮಾಡುತ್ತಿದ್ದನು. ಸನ್ಯಾಸಿ ಯ ಪಕ್ಕದಲ್ಲಿರುವ ಪಬ್ಬಾಕತ್ತಿಯನ್ನು ರಾಜಪುತ್ರನು ನೋಡಿ, ಕಪಟಸ ನ್ಯಾಸಿಯು ಇನ್ನೊಂದಾವರ್ತಿ ನಮಸ್ಕಾರಮಾಡುವುದನ್ನೇ ನಿರೀಕ್ಷಿಸಿ ಕೊಂಡಿದ್ದು ಕಡುಧೈರ್ಯವನ್ನು ತಾಳಿ ಖಕತ್ತಿಯಿಂದಲೇ ಮುನಿಯ ಕತ್ತನ್ನು ಕತ್ತರಿಸಿದನು. ಆಗ ತಾಳಿಕಾದೇವಿಯು ಪಕಟಕನೆ ನಗುತ್ತಾ ನಿಜರೂಪವನ್ನು ತಾಳಿ ರಾಜಪುತ್ರನಬಳಿಗೆ ಬಂದು, ರಾಜಾತ್ಮಜಾ! ನೀನು ಬಹು ಧೈರ್ಯಶಾಲಿಯೆ, ಋಷಿಯನ್ನು ಕೊಂದು ನನ್ನನ್ನು ಸಂತೋಷಪ ಡಿಸಿದೆ. ನಿನಗೆ ಬೇಕಾದ ವರಗಳನ್ನು ಕೇಳು, ಕೊಡುವೆನೆನ್ನಲು, ರಾಜ ಪುತ್ರನು, ಅಮ್ಮಾ! ಆದಿಶಕ್ತೀ! ನಾನು ಕೋರಿದಾಗ ನನಿಗೆ ಪ್ರತ್ಯಕ್ಷವಾ ಗಿ ನನ್ನಿಷ್ಟವನ್ನು ನೆರವೇರಿಸುವೀಕೆಂದನು. ಈ ಮುನಿಯು ಇಂತಹ ಕ್ರೂರಕೃತ್ಯಗಳನ್ನು ಮಾಡುತ್ತಿರಲು ಕಾರಣವೇನೆಂದು ಆದಿಶಕ್ತಿಯನ್ನು ಕೇಳಲು, ಅದಕ್ಕೆ ಶಕ್ತಿಯು ಇಂತೆಂದಳು. ರಾಜಾತ್ಮಜಾ! ಕೇಳು! ನನ್ನ ಆಕಾರವನ್ನು ಕೆತ್ತಿ ಇಲ್ಲಿ ಸ್ಥಾಪನೆಮಾಡಿದ ಶಿಲ್ಪಿಯು ಹನ್ನೆರಡು ರಾಜಪುತ್ರರನ್ನು ಈ ದೇವಿಗೆ ಬಲಿಕೊಟ್ಟವರಿಗೂ ಅಥವಾ ಒಬ್ಬ ಸ ನ್ಯಾಸಿಯನ್ನು ಬಲಿಕೊಟ್ಟವರಿಗೂ ಈದೇವಿಯು ಪ್ರಸನ್ನಳಾಗುವಳೆಂ ದು ಶಾಸನವನ್ನು ಬರೆದಿಟ್ಟಿರುವನು. ಈಸುಳುವನ್ನು ಈಮುನಿಯು ತಿ ಳಿದುಕೊಂಡು ಈ ಅರಣ್ಯಮಾರ್ಗವಾಗಿ ಭೂಸಂಚಾರಕ್ಕೆ ಬರುವ ರಾಜಪು ತ್ರರನ್ನೆಲ್ಲಾ ನಂಬಿಸಿ ಇದುವರೆಗೆ ಹನ್ನೊಂದುಜನರನ್ನು ನನಿಗೆ ಬಲಿಕೊ ಟ್ಟನು, ನೀನು ಹನ್ನೆರಡನೆಯವನು. ನಿನ್ನನ್ನೂ ಕೊಂದಿದ್ದರೆ ನಾನು ಈ ಮುನಿಗೆ ಪ್ರತ್ಯಕ್ಷಳಾಗಬೇಕಾಗಿತ್ತು. ನೀನು ಈಮುನಿಯನ್ನೆ ನ

ನಗೆ ಬಲಿಕೊಟ್ಟಿಯಾದ್ದರಿಂದ ನಾನು ನಿನಗೆ ಪ್ರತ್ಯಕ್ಷಳಾದೆನು. ಈಮು ನಿಯಾದರೊ ತಾನು ಕೊಂದ ರಾಜಪುತ್ರರ ವಸಾತ್ರಿಭರಣಗಳನ್ನೂ ಆಕಾ ಸನವನ್ನೂ ಗುಡಿಯ ಹಿಂಭಾಗದಲ್ಲಿಬ್ಬ ಬೇಗವನ್ನು ಹಾಕಿಕೊಂಡು ಹೋ ಗುತ್ತಿದ್ದನು. ನೀನು ಬೇಕಾದರೆ ನೋಡಿಕೊಂಡು ಬಾರೆನ್ನಲು, ರಾಜ ಪುತ್ರನು ಕಾಳಿಕಾದೇವಿಯ ಮಾತಿನಪ್ರಕಾರ ಎಲ್ಲವನ್ನೂ ನೋಡಿಕೊಂಡು ಬಂದನು. ಅನಂತರ ರಾಜಪುತ್ರನು ಅದಿಕಕ್ಕಿಯೆ! ನನಿಗೆ ಈಮುನಿಯು ನ್ನು ಕೊಂದ ಬ್ರಹ್ಮಹತ್ಯಾದೋಷವು ಪರಿಹಾರವಾಗಿ ಮುಕ್ತಿಯುಂಟಾ ಗುವಂತೆ ಅಪವರ್ಗಮಾರ್ಗವಾದ ಸಚ್ಚಿದಾನಂದಪ್ರಭಾವವನ್ನು ಬೋಧಿ ಸೆನ್ನಲು, ಕಾಳಿಕಾದೇವಿಯು ಹಾಗೆಯೇ ಆಗಲೆಂದು ಅಷ್ಟಾಕ್ಷರೀಮಂತ್ರ ವನ್ನು ಶ್ರುತಕೀರ್ತಿಮಹಾರಾಯನಿಗೆ ಉಪದೇಶವಾಡಲು ಉದ್ಯುಕ್ತ ಳಾದಳು.

ಕಾಳಿಕಾದೇವಿಯು ಶ್ರುತಕೀರ್ತಿಮಹಾರಾಯನಿಗೆ ಬೋಧಿಸಿದ
ಸಚ್ಚಿದಾನಂದ ಪ್ರಭಾವವು.

ರಾಜಪುತ್ರಾ! ಸಚ್ಚಿದಾನಂದವೆಂದರೆ ಸತ್ತು, ಚಿತ್ತು, ಆನಂದವು. ಆತ್ಮನಿಗೆ ಸೂಕ್ಷ್ಮ, ಚಿತ್ಸೂಕ್ಷ್ಮ, ಆನಂದಸೂಕ್ಷ್ಮವೆಂಬ ಮೂರು ರೂಪಗಳುಂಟು. ಸೂಕ್ಷ್ಮರೂಪವನ್ನು ತ್ವಂಪದವೆಂದೂ, ನಾದವೆಂದೂ, ಅಕಾರವೆಂದೂ, ಸೂ ಕ್ಷ್ಮನೆಂದೂ ಕರೆಯುವರು. ಚಿತ್ಸೂಕ್ಷ್ಮರೂಪವನ್ನು ತತ್ವವೆಂದೂ, ಬಿಂದುರೂಪ ವೆಂದೂ, ಉಕಾರವೆಂದೂ, ಮಂಗಳನೆಂದೂ, ಮಕಾರವೆಂದೂ, ಮಹಾ ಕಾರಣನೆಂದೂ ಹೇಳುವರು. ಸ್ಥೂಲಶರೀರವಾದರೊ ಪಂಚವಿಂಶತಿತತ್ವ ಗಳಿಂದ ಕೂಡಿರುವುದು. ಸ್ಥೂಲಪುರುಷನು ನಶ್ವರನೆಂದು ಹೇಳುವರು. ಪಾಜ್ಞೇಂದ್ರಿಯಗಳೂ ಜ್ಞಾನೇಂದ್ರಿಯಗಳೂ, ಪಂಚತನ್ಮಾತ್ರಗಳಿಂಬ ಹ ದಿನೈದರಲ್ಲಿ ಮನೋಬುದ್ಧಿಗಳೆರಡೂ ಕೂಡಿ, ಸೂಕ್ಷ್ಮಪುರುಷನ ತೇಜಸ್ಸೆಂ ದು ಹೇಳಲ್ಪಟ್ಟಿದೆ. ಚಿತ್ತವೆಂಬುದು ಜ್ಞಾನವಿಂದ ಕೂಡಿದಕಾರಣ ಶರೀ ರವೆಂದರಿಯಬೇಕು. ಕಾರಣಪುರುಷನಿಂದ ಪಾಜ್ಞವೆಂದು ಹೇಳಲ್ಪಡು ವುದು. ಆತ್ಮಾರಾಮಬ್ರಹ್ಮವಾದ ಹಂಸವು ಶಿಂಗಕಲೀಧಕ್ಕೆ ಆಧಾರವಾ ಗಿ ಅಂತರ್ಬಹಿರ್ವ್ಯಾಪಕತ್ವ ಉಂಟಾಗಿ ಪಂಚಾಗ್ನಿಗಳಿಂದ ಸುಡಪೆ, ಸಪ್ತ ಸಮುದ್ರಗಳಲ್ಲಿ ಮುಳುಗದೆ, ಜಾಗೃತ್ಸ್ವಪ್ನ ಸುಷುಪ್ತ್ಯವಸ್ಥೆಗಳಿಲ್ಲದೆ, ತಂ ತ್ರೀರೂಪಕವಾಗಿ, ಷಡಾಧಾರಗಳುಂಟಾಗಿ, ದಿವಾರಾತ್ರಿಗಳಿಂದ ಕೂಡಿದ ದಿನಕ್ಕೆ ಇಪ್ಪತ್ತುಸಾವಿರದ ಆರನೂರು ಪ್ರಣವಗಳನ್ನು ಮಾಡತಕ್ಕದ್ದೆಂದು ಹೇಳುತ್ತಿರುವುದು.

ಮೂದಸ್ಥಾನದ ಚತುರ್ದಳದಲ್ಲಿ ವ, ಶ, ಷ, ಸ ಈ ನಾಲ್ಕು ವರ್ಣಗಳುಂ ಟಾಗಿ, ಓಂ ಎಂಬ ಬೀಜಾಕ್ಷರದಿಂದ ಕೂಡಿದ ಆಧಾರಕಮಲದಲ್ಲಿ ನಿಶ್ಚೀ

ಶ್ವರನಿಗೆ ಆರುನೂರು ಪ್ರಣವಂಗಳು.

ಲಿಂಗಸ್ಥಾನದ ಷಡ್ದಳದಲ್ಲಿ ಬ, ಭ, ಮ, ಯ, ರ, ಲ ಎಂಬೀ ಆರುವರ್ಣಗಳನ್ನುಂಟಾಗಿ, ನ ಎಂಬಬೀಜಾಕ್ಷರದಿಂದ ಕೂಡಿದ ಸ್ವಾಧಿಷ್ಠಕಮಲದಲ್ಲಿ ಪ್ರಜಾಪತಿಗೆ ಆರುಸಾವಿರ ಪ್ರಣವಂಗಳು.

ನಾಭೀಸ್ಥಾನದ ದಶದಳದಲ್ಲಿ ಡ, ಢ, ಣ, ತ, ಥ, ದ, ಧ, ನ, ಪ ಎಂಬೀ ಹತ್ತುವರ್ಣಗಳಿಂದಲೂ ಕೂಡಿ, ಮ ಎಂಬ ಬೀಜಾಕ್ಷರವಾಗಿ, ಮಣಿಪೂರಕಮಲದಲ್ಲಿ ವಿಷ್ಣುದೇವರಿಗೆ ಆರುಸಾವಿರ ಪ್ರಣವಂಗಳು.

ಹೃದಯಸ್ಥಾನದ ದ್ವಾದಶದಳದಲ್ಲಿ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ ಠ ಎಂಬೀ ಹನ್ನೆರಡು ವರ್ಣಗಳಿಂದ ಕೂಡಿ, ಸಿ ಎಂಬ ಬೀಜಾಕ್ಷರವಿಂದ ಕೂಡಿದ ಅನಾಹತಕಮಲದಲ್ಲಿ ಶಿವದೇವನಿಗೆ ಆರುಸಾವಿರ ಪ್ರಣವಂಗಳು.

ಕಂಠಸ್ಥಾನದ ಷೋಡಶದಳದಲ್ಲಿ ಅ ಆ ಇ ಈ ಉ ಊ ಋ ೠ ಲು ಲೂ ಎ ಏ ಐ ಒ ಓ ಔ ಅಂ ಆಃ ಈ ಪದಿನಾರುವರ್ಣಗಳಿಂದ ಕೂಡಿ, ನ ಎಂಬ ಬೀಜಾಕ್ಷರವುಳ್ಳ ವಿಶುದ್ಧಕಮಲದಲ್ಲಿ ಜೀವನಿಗೆ ಒಂದುಸಾವಿರ ಪ್ರಣವಂಗಳು.

ತ್ರಿಕೂಟಸ್ಥಾನದ ದ್ವಿದಳದಲ್ಲಿ ಹಂ, ಕ್ಷಂ ಎಂಬೀ ಎರಡು ವರ್ಣಗಳಿಂದ ಕೂಡಿ, ಯ ಎಂಬ ಬೀಜಾಕ್ಷರವುಳ್ಳ ಆಗ್ನೇಯಕಮಲದಲ್ಲಿ ಆತ್ಮನಿಗೆ ಒಂದುಸಾವಿರ ಪ್ರಣವಂಗಳು.

ಹಣೆಯ ಪ್ರದೇಶದಲ್ಲಿನ ದ್ವಿದಳದಲ್ಲಿ ರಾಂ ಎಂಬ ಬೀಜದಿಂದ ಕೂಡಿದ ಸಹಸಾರಕಮಲದಲ್ಲಿ ಸರ್ವಜ್ಞಾತ್ಮನಿಗೆ ಒಂದು ಸಾವಿರ ಪ್ರಣವಂಗಳು.

ಈರೀತಿಯಾಗಿ ಪ್ರಣವಂಗಳನ್ನು ಭಾಗಿಸಿ ಯೋಜಿಸಿ ಗಾಯತ್ರೀ ಎಂದು ಹೇಳಲ್ಪಟ್ಟಿರುವ ಇಡಾ ಪಿಂಗಳನಾಡಿಗಳಲ್ಲಿಆ ಪ್ರಣವಾಕ್ಷರಗಳನ್ನು ಪಠಿಸುತ್ತಿದ್ದರೆ ಥಂ ಎಂಬ ಬೀಜಾಕ್ಷರವು ಕರ್ಣರಂಧ್ರದಲ್ಲಿರುವುದು. ಅದಕ್ಕೆ ಆವಿಶೆ ಷನು ಅಧಿದೇವತೆಯು, ಈ ಅಷ್ಟಾಕ್ಷರೀ ಮಂತ್ರವನ್ನು ಪಠಿಸುತ್ತಾ, ಹಂಸವನ್ನು ಪ್ರಾಣಾಯಾಮದಿಂದ ವಿಹಾರಪುರಿಗೆ ತೆಗೆದುಒಯ್ಯುತ್ತಾ, ರೇಚಿಸಿ, ಸರ್ವಕ್ಕೆ ದೃಷ್ಟಿಯಿಡುತ್ತಾ, ರಾಂ ಎಂಬ ಬೀಜಾಕ್ಷರದಲ್ಲಿ ದೃಕ್ಕನ್ನು ನಿಲ್ಲಿಸಿ, ದಶವಿಧನಾದಗಳಿಂದ ಕೂಡಿದ ಜ್ಞಾನಾಗ್ನಿಯು ಪ್ರಜ್ವಲಿಸಿ, ಈಪಾಪಗಳೆಂಬ ಸಮಿಧೆಗಳನ್ನು ಭಸ್ಮಮಾಡುವೆಂದು, ಸರ್ವವನ್ನೂ ಚೋಧಿಸಿ, ಸಮಾಧಿನಿಷ್ಠನನ್ನಾಗಿ ಮಾಡಿದಳೆಂದು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದನು. ಅರ್ಜುನನಾದರೋ ಆರಹಸ್ಯಗಳನ್ನೆಲ್ಲಾ ತಿಳಿದುಕೊಂಡು, ಮಹಾನುಭಾವನೆ ! ಸಚ್ಚಿದಾನಂದಮಾರ್ಗವು ಬಹಳ

ಶ್ಲಾಘ್ಯವಾದದ್ದು. ಪ್ರಜ್ಞಾನ ಚೈತನ್ಯದಲ್ಲಿ ಬ್ರಹ್ಮವೆಂದು ಶ್ರುತಿಗಳು ಸಾರುತ್ತಿರಲು, ಕೆಲವರು ಆತ್ಮನು ಬ್ರಹ್ಮವಲ್ಲವೆನ್ನುವರು. ಈಭೇದವನ್ನು ನನಗೆ ತಿಳಿಯೆಪಡಿಸಬೇಕೆಂದು ಪ್ರಾರ್ಥಿಸಿದ ಅರ್ಜುನನನ್ನು ಕುರಿತು, ಇಂದ್ರನಂದನಾ! ಗುಣಿಯುನಿರ್ಗುಣಿಯೊಡನೆಯೂ, ಸಾಕಾರವು ನಿರಾಕಾರದೊಂದಿಗೂ, ಯುವತಿಯು ನಪುಂಸಕನೊಡನೆಯೂ ಹೇಗೆ ಸೇರುವುದಿಲ್ಲವೋ ಹಾಗೆಯೇ ಆಬ್ರಹ್ಮನಿಗೆ ಭೇದರಾಹಿತ್ಯವು ಎಂದೆಂದಿಗೂ ಉಂಟಾಗಲಾರದು. ಹೀಗೆಂದು ಹೇಳಿದ ಶ್ರೀಕೃಷ್ಣನ ನುಡಿಗಳನ್ನು ಕೇಳಿ ಅರ್ಜುನನು ತನ್ನ ಮನಸ್ಸಿನ ಸಂದೇಹವನ್ನು ಕಳೆದುಕೊಂಡು, ಮಹಾನುಭಾವನೆ! ಆ ಶ್ರುತಕೀರ್ತಿಮಹಾರಾಯನ ಮುಂದಿನ ಕಥೆಯನ್ನು ಸಾಂಗವಾಗಿ ತಿಳುಹಿಸಬೇಕೆಂದು ಕೇಳಿದ ಅರ್ಜುನನನ್ನು ಕುರಿತು ಶ್ರೀಕೃಷ್ಣಮೂರ್ತಿಯು ಇಂತೆಂದನು.

ಕೇಳು, ಅರ್ಜುನ! ಆ ಶ್ರುತಕೀರ್ತಿಯು ಹೆಚ್ಚಾದ ವೈರಾಗ್ಯವನ್ನು ಅಭ್ಯಾಸಮಾಡುತ್ತಾ, ನಾದಬ್ರಹ್ಮವನ್ನು ಹೊರಗೆತಗೆದು ಸಂತೋಷಪಡುತ್ತಾ, ಫಲಮೂಲಗಳನ್ನು ತಂದು ತಿಳಿನೀರನ್ನು ಕುಡಿಯುತ್ತಾ, ಆರು ತಿಂಗಳು ಕಳೆದಬಳಿಕ ಆವಾರ್ಗದಲ್ಲಿ ಪ್ರಯಾಣಮಾಡುತ್ತಿದ್ದ ಕೆಲವರು ಸಭಿಕರನ್ನು ಕಂಡು, ನೀವು ಯಾರು? ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುವಿರಿ? ಎಂದುಕೇಳಲು, ಆ ಭಟರು ಈ ರಾಜಪುತ್ರನನ್ನು ಮುನಿಪುತ್ರನೆಂದು ಭಾವಿಸಿ, ಮುನಿಕುವರನೆ! ನಾವು ಕಾಂಭೋಜದೇಶದ ರಾಜದೂತರು. ನಮ್ಮ ರಾಜನು ತನ್ನ ಕುವರಿಯಾದ ಪುಷ್ಪವೇಣಿಯನ್ನು ತನ್ನ ತಂಗಿ ಸುಮತೀದೇವಿಯ ಕುವರನಾದ ಶ್ರುತಕೀರ್ತಿಮಹಾರಾಯನಿಗೆ ಕೊಟ್ಟು ವಿವಾಹಮಹೋತ್ಸವವನ್ನು ಜರಿಗಿಸಬೇಕೆಂದಿದ್ದನು, ಹೀಗಿರುವಲ್ಲಿ ಒಂದಾನೊಂದುದಿನ ಶ್ರುತಕೀರ್ತಿಯಾದರೋ ಮೃಗಯಾಹಾಲನ್ನು ತರುವೆನೆಂದು ಕಾಡಿಗೆ ಹೊರಟುಹೋದನು. ಎಷ್ಟು ದಿನಗಳಾದರೂ ಹಿಂತಿರುಗದಿರಲು ಈಸುದ್ದಿಯನ್ನು ನಮ್ಮ ರಾಜನು ಕೇಳಿ, ದುಃಖಾತಿಶಯದಿಂದ ತನ್ನ ಕುವರಿಯನ್ನು ಅನುರೂಪನಾದ ವೀರೊಬ್ಬ ವರನಿಗೆ ಕೊಟ್ಟು ಸ್ವಯಂವರವನ್ನು ಮಾಡಬೇಕೆಂದು ನಿಶ್ಚಯಿಸಿದನು. ದೇಶದೇಶಗಳಿಗೂ ಪುಷ್ಪವೇಣಿಯ ಸ್ವಯಂವರದ ಸುದ್ದಿಯನ್ನೂ, ಕೋಕಿಲ ಯಂತ್ರವನ್ನು ಭೇದಿಸುವ ವೀರರಿಗೆ ಪುಷ್ಪವೇಣಿಯನ್ನು ಕೊಡುವುದೆಂತಲೂ, ಪ್ರಕಟಿಸಿ ಬರಲು, ನಮ್ಮನ್ನು ಕಳುಹಿಸಿರುವನು ನಾವು ಈಮಾರ್ಗವಾಗಿ ಹೊರಟು ಮುಂದಿನ ದೇಶಗಳಿಗೆ ಈಸುದ್ದಿಯನ್ನು ಪ್ರಕಟಿಸಲು ಹೋಗುತ್ತಿರುವೆವೆಂದು ತಿಳಿಸಿ ಆರಾಜದೂತರು ಮುಂದಕ್ಕೆ ಪ್ರಯಾಣಮಾಡಿದರು. ಆ ಬಳಿಕ ಶ್ರುತಕೀರ್ತಿಯು ಈವರ್ತಮಾನವನ್ನು ಕಾಳಿಕಾದೇವಿಗೆ ತಿಳುಹಿ

ಸಿ, ಮಹಾತಾಯಿಯೇ! ಈಕನ್ನಿಕೆಯ ಗುಣರೂಪಲಾವಣ್ಯಾದಿಗಳನ್ನು ನನಿಗೆ ತಿಳುಹಿಸಬೇಕೆಂದು ಕೇಳಲು, ಕಾಳಿಕಾದೇವಿಯು, ಮಗುವೇ ಕೇಳು, ಆಸುಕುಮಾರಿಯು ಪದ್ಮಿನೀಜಾತಿಯ ಹೆಂಗಸು, ಸೌಂದರ್ಯಾತಿಶಯ ಸಂಪನ್ನೆಯು, ಶ್ರೇಷ್ಠವಾದ ಗುಣಶಾಲಿನಿ. ಸದಾ ನಿನ್ನನ್ನೇ ಧ್ಯಾನಿಸು ತ್ತಾ ನೀನೇ ಪತಿಯಾಗಬೇಕೆಂದು ಧರ್ಮದೇವತೆಯನ್ನು ಪೂಜಿಸುತ್ತಿರುವಳು. ಆಕೋಕಿಲಯಂತ್ರವಾದರೋ ನೀನಲ್ಲದೆ ಬೇರೊಬ್ಬರಿಗೆ ವಶವಾಗಲಾರದು. ನೀನು ಹೋಗು. ನಿನಗೆ ಜಯವಾಗುವುದೆನ್ನಲು, ಶ್ರುತಕೀರ್ತಿಯು ತಾಯಿಯೇ! ನಾನು ಈರೂಪದಿಂದ ಅಲ್ಲಿಗೆ ಹೋಗುವುದಿಲ್ಲ. ಆತುರಬಿದ್ದು ನ್ಯಯಂವರಕ್ಕೆ ಅಕಾಮಾಡಿಕೊಂಡಿರತಕ್ಕ ಆ ಕಾಂಭೋಜಪತಿಗೆ ಕಡುದುಃಖವುಂಟಾಗುವಂತೆ ನನ್ನ ರೂಪವನ್ನು ವಿಕಾರಮಾಡಿಕೊಂಡು ಹೊರಡುವೆನೆಂದೂ, ಇದರಿಂದ ಆಕನ್ನಿಕೆಯ ಮನೋದಾರ್ಢ್ಯವನ್ನು ಪರೀಕ್ಷಿಸುವೆನೆಂದೂ ನಿಶ್ಚಯಿಸಿಕೊಂಡು, ತನ್ನ ಇಷ್ಟಪ್ರಕಾರವಾಗಿ ಮುದಿಯೊಡ ಶರೀರವನ್ನೂ, ಬಳುಪಾದ ಕೂದಲುಗಳನ್ನೂ, ಗುಜ್ಜುದೇಹವನ್ನೂ, ವಕ್ರವಾಗಿರುವ ಹಲ್ಲುಗಳನ್ನೂ, ವಿಕಾರವಾದ ರೂಪವನ್ನೂ ಹೊಂದಿ, ಕಿರೀಟ ಭುಜಕೀರ್ತಿಗಳಿಂದಲಂಕರಿಸಿಕೊಂಡು, ಆಯುಧಗಳನ್ನು ಧರಿಸಿದವನಾಗಿ, ತನ್ನ ಕುದುರೆಯನ್ನೇರಿ ಹೊಗುತ್ತಾ, ಕೆಲವುದಿನಗಳಲ್ಲಿಯೇ ಆಕಾಂಭೋಜದೇಶವನ್ನು ಸೇರಿದನು. ಅಲ್ಲಿ ಅನೇಕಾನೇಕವಾದ ವಾದ್ಯ ಘೋಷಣಗಳನ್ನು ಕೇಳುತಾ, ರಾಜಾಧಿಗೆ ನುಗ್ಗಿ, ಕಾಂಭೋಜಾಧಿಪನನ್ನು ಕುರಿತು, ರಾಜಶ್ರೇಷ್ಠನೆ! ನಾನು ನಿರ್ಧ್ಯಪರ್ವತದ ಗುಹೆಗಳಲ್ಲಿ ವಾಸಮಾಡುವ ಅಡವಿಯ ಬೇರೆ. ನಿನ್ನ ಕುವರಿಗೆ ಸ್ವಯಂವರವೆಂದೂ, ಕೋಕಿಲಯಂತ್ರವನ್ನು ಭೇದಿಸಿದವರಿಗೇ ನಿನ್ನ ಕುವರಿಯನ್ನು ಕೊಡುವಿಯೆಂದೂ ಕೇಳಿದೆನು. ನಾನು ಕೋಕಿಲಯಂತ್ರವನ್ನು ಒಂದೇ ಬಾಣದಿಂದ ಭೇದಿಸಿ, ನಿನ್ನ ಮಗಳನ್ನು ಮದುವೆಮಾಡಿಕೊಳ್ಳಲಿಚ್ಛಿಸಿ ಬಂದಿರುವೆನು. ನಾನು ಕೋಕಿಲಯಂತ್ರವನ್ನು ಭೇದಿಸಬಲ್ಲಿಕ ನೀವು ಮಾತಿಗೆ ತಪ್ಪಕೂಡದೆನ್ನಲು, ಇವನ ಮಾತುಗಳನ್ನು ಕೇಳಿದ ಕಾಂಭೋಜಾಧಿಪನು, ಅಲ್ಲಿದ್ದ ಸಭಿಕರೂ ಕೇಳಿ ಗಹಗಹಿಸಿ ನಕ್ಕುಬಿಟ್ಟರು. ಅದಕ್ಕೆ ಆತನು ಮಾನನೇಂದಾ! ನೀವು ನನ್ನ ಬಿಲ್ಲಾರಿಕೆಯ ವಿದ್ಯೆಯನ್ನು ತಿಳಿಯದೆ ನನ್ನ ವಿಕಾರರೂಪವನ್ನು ನೋಡಿ ನಕ್ಕುಬಿಟ್ಟಿರುವಿರಿ. ಕೋಕಿಲಯಂತ್ರವು ಎಲ್ಲಿರುವುದೋ ನನಿಗೆ ತೋರಿಸಿ, ಅನಂತರ ನಿಮಿಗೇ ಗೊತ್ತಾಗುವುದೆಂದನು. ಅದಕ್ಕೆ ರಾಜನು, ಅಯ್ಯಾ! ನೀನು ಹಣ್ಣು ಹಣ್ಣು ಮುದುಕನು, ಭ್ರಾಂತಿಯಿಂದ ನೀನು ಇಲ್ಲಿಗೆ ಬಂದಿರುವಂತೆಕಾಣುವುದು. ಆಕೋಕಿಲಯಂತ್ರವಾವರೋ ದೇವತೆಗಳಿಗೂ ಕೂಡ ವಶವಾಗತಕ್ಕದಲ್ಲ. ನೇಪಾ

ಳ, ಘೂರ್ಜರ, ಯವನ, ಪಾರಸೀಕ, ಬರ್ಬರ ದೇಶಾಧೀಶರೆಲ್ಲಾ ಆಯೆಂ
ತ್ರವನ್ನು ನೋಡಿದಮಾತ್ರದಿಂದಲೇ ಹೇಳದೇ ಕೇಳದೇ ಹೊರಟುಹೋ
ದರು ಅಂಗ, ವಂಗ, ಕಳಿಂಗ, ಮಧ್ರ, ಸೌರಾಷ್ಟ್ರಾಧೀಶರೆಲ್ಲಾ ಬಂದಿ
ರುವಗು, ನೀನೂ ಹೋಗಿ ನೋಡಬಹುದೆಂದನು. ಆತನು ಹಾಗೆಯೇ
ಆಗಲೆಂದು ಆಯಂತ್ರದಬಳಿಗೆ ಹೋಗಿ ಅಲ್ಲಿನ್ನ ರಾಜರನ್ನು ನೋಡಿ. ಓ
ಬಾಲರಾಜರೇ! ನಿಮಗೆ ಈ ಯಂತ್ರವು ವಶವಾಗಲಿಲ್ಲವೆ? ನಾನು ಇದ
ನ್ನು ಭೇದಿಸುವೆನು, ನೋಡಿರೆಂದು ಹೇಳಿ, ಆಜನರ ಗುಂಪಿನಲ್ಲಿ ನುಗ್ಗಿ ಧ
ನುಸ್ಸಿನಬಳಿಗೆ ಹೋಗಿ, ಧನುಷ್ಟಂಕಾರವಂಮಾಡಿ, ಅದಕ್ಕೆ ಬಾಣವನ್ನು
ತಗಲಿಸಿ, ಕಾಳಿಕಾದೇವಿಯನ್ನು ತನ್ನ ಮನಸ್ಸಿನಲ್ಲಿ ಧ್ಯಾನಮಾಡುತಾ್ತ,
ಕೆಳಗಿಟ್ಟಿರುವ ಕನ್ನಡಿಯನ್ನು ನೋಡುತ್ತ ಗುರಿಯಿಟ್ಟವನಾಗಿ ಪ್ರಯೋಗಿ
ಸಲು,ಆಗ ಆ ಬಾಣವು ತ್ರೇತಾಗ್ನಿಗಳೊಂದಿಗೆವಾಯುಪ್ರೇರಿತಾಯುವಾಗಿ,
ಅಗ್ನಿಕಣಗಳನ್ನು ಗುಳುತಾ್ತ ಹೋಗಿಆಕೋಕಿಲಯಂತ್ರವನ್ನು ನೆಲದಮೇ
ಲಕ್ಕೆಕಡವಿಬಿಟ್ಟಿತು. ಇದನ್ನು ಅಲ್ಲಿದ್ದರಾಜರೆಲ್ಲಾ ನೋಡಿ ಮೂಗಿನಮೇಲೆ
ಬೆರಳಿಟ್ಟುಕೊಂಡು, ಅನೇಕಪ್ರಕಾರವಾಗಿ ಆವೃದ್ಧನನ್ನು ಕೊಂಡಾಡುತ್ತಿ
ದ್ದರು. ಅಂತರಿಕ್ಷದಲ್ಲಿ ದೇವತೆಗಳುದೇವವಾದ್ಯವನ್ನು ಮಾಡುತಾ್ತ ಪುಷ್ಪವೃ
ಷ್ಟಿಯೆನ್ನು ಸುರಿಸಿದರು. ತುಂಬುರುನಾರದರು ವೀಣಾಗಾನವನ್ನು ಮಾಡು
ತ್ತಿದ್ದರು ರಾಂಭೋರ್ವಶಿಪಂಚಮಿಯೂ ಆತನ ಸುತರಿಯೂ ಗೋಷ್ಠಾಡುತಾ್ತ
ಮೂರ್ಛಾಕಾರ್ತರಾಗಿ ಭೂಮಿಯ ಮೇಲೆಬಿದ್ದರು. ಮಂತ್ರಿಪ್ರಧಾನಿಗಳು
ರಾಜನನ್ನೂ ರಾಜಕುಮಾರಿಯನ್ನೂ ಮೂರ್ಛೆಯಿಂದೆಚ್ಚರಗೊಳಿಸಿ, ಕೂ
ರಿಸಿದರು. ಆನಂತರ ಮಂತ್ರಿಪ್ರಧಾನಿಗಳು, ಅಹಾ! ದೈವವೆ! ನಿನ್ನ ನಿಯೋ
ಮವನ್ನು ತಪ್ಪಿಸಲು ಯಾರಿಗೆತಾನೇ ಸಾಧ್ಯವಾದೀತು! ರಾಜನೆ! ನೀವುಮಾ
ಡಿದ ಪ್ರತಿಜ್ಞೆಯನ್ನು ತಪ್ಪಲಾಗುವುದಿಲ್ಲ. ಅಕಟಕಟಿಗೆ ಕಾರಣವಾದೀ
ತು, ಎಂದು ನುಡಿದರು. ಪುಷ್ಪವೃಷ್ಟಿಯಾದರೋ, ಅಂತರಿಕ್ಷದಲ್ಲಿ ಆಗುತ್ತಿ
ರುವ ಮಂಗಳವಾದ್ಯಗಳನ್ನು ಕೇಳಿ, ಆಶ್ಚರ್ಯಯುಕ್ತಳಾಗಿ. ಅಯ್ಯೋ! ಈ
ಮುದುಕನ ನಿಮಿತ್ತವಾಗಿ ದೇವತೆಗಳೆಲ್ಲಾ ಸಂತೋಷಪಡಲು ಕಾರಣ
ವೇನು! ಧರ್ಮದೇವತೆಯೇ ನನ್ನ ಪ್ರಯತ್ನಕ್ಕೆ ಭಂಗವನ್ನು ತಂದಿರಬೇ
ಕು, ವಿಕಾರವಾದ ಈ ಮುದುಕನಿಗೆ ಅಂತಹಸಾಮರ್ಥ್ಯತಾನೇ ಹೇಗೆಬರ
ಬೇಕು! ಆಹಾ! ಇದು ಬಹಳ ಆಶ್ಚರ್ಯವಾಗಿದೆ! ನಿಧಾನಿಸಿದರೆ ಎಲ್ಲವೂ
ಗೊತಾ್ತಗಬಹುದೆಂದು ಯೋಚಿಸಿ, ತಂದೆಯೇ! ನನ್ನ ದೌರ್ಭಾಗ್ಯದಿಂದ
ನನಿಗೆ ಆ ಶ್ರುತಕೀರ್ತಿಮಹಾರಾಯನು ಲಭಿಸಲಿಲ್ಲ. ನಾನು ಈ ವೃದ್ಧ
ನನ್ನು ಕೂಡಿ ಇವನೊಂದಿಗೆ ಸಹಗಮನವಮಾಡಿ ಪುಣ್ಯಲೋಕವನ್ನು ಪಡೆ
ಯುವೆನೆಂದು ನಿಶ್ಚಯಿಸಿರುವೆನು. ನೀವು ನಡೆಯಿಸಬೇಕಾದ ಕಾರ್ಯ

ಗಳನ್ನು ನಡೆಯಿಸಬಹುದು, ಏನೂ ವ್ಯಸನಪಡಬೇಕಾಗಿಲ್ಲವೆಂದು ಹೇಳಿ ತಲೆಯನ್ನು ತಗ್ಗಿಸಿಕೊಂಡು, ಕಣ್ಣೀರನ್ನು ಸುರಿಸುತ್ತಾ ಹೋಗಿ ಆ ವೃದ್ಧನ ಕೊರಳಿಗೆ ಪ್ರಾಮಾಲೆಯನ್ನು ಹಾಕಿದ್ದನ್ನು ಅಲ್ಲಿ ನೆರೆದಿದ್ದ ರಾಜಪುತ್ರರೆಲ್ಲಾ ನೋಡಿ ಕಡುದುಃಖದಿಂದ ತಮ್ಮತಮ್ಮ ದೇಶಗಳಿಗೆ ಹೊರಟು ಹೋದರು. ಕಾಂಭೋಜಪತಿಯಾದರೋ ಕಣ್ಣೀರನ್ನು ಸುರಿಸುತ್ತಾ ಅಳಿಯನನ್ನು ಕರೆದುಕೊಂಡುಹೋಗಿ ಐದುದಿನಗಳು ವಿವಾಹಮಹೋತ್ಸವವನ್ನು ನಡೆಯಿಸಿದನು. ಐದನೆಯದಿನ ರಾತ್ರಿ ಆ ವೇಷಧಾರಿಯು ತನ್ನ ಹಾಸಿಗೆಯಮೇಲಕ್ಕೆ ಬಂದ ಆ ಸುಂದರಿಯನ್ನು ನೋಡಿ, ಆಲಿಂಗನವಂ ಮಾಡಿಕೊಂಡು, ಪ್ರಾಣಕಾಂತೇ! ನಿನ್ನಂತಹ ಸುಂದರಿಯನ್ನು ವಿಧಿಯು ವೃದ್ಧನಾದ ನನಗೆ ಸೇರಿಸಬಾರದೆ! ಅಯ್ಯೋ! ನನ್ನ ಇಂದ್ರಿಯಗಳೆಲ್ಲಾ ತಮ್ಮತಮ್ಮ ವ್ಯಾಪಾರವನ್ನು ಬಿಟ್ಟಿರುವುವಲ್ಲಾ! ನಿನ್ನಿಂದ ನಿನಗೆ ಏನು ಸುಖವುಂಟಾವೀತು! ನನ್ನ ಅನುಮತಿಯಪ್ರಕಾರ ನೀನು ಸುಂದರಸುಕುಮಾರನಾದ ಮತ್ತೊಬ್ಬನಿಗೆ ಕೂಡಿ ಸುಖಿಸೆನ್ನಲು ಆ ಸುಂದರಾಂಗಿಯು ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ, ಪ್ರಾಣಸಖನೆ! ನಿನ್ನ ನುಡಿಯು ಧರ್ಮವಿರುದ್ಧವಾಗಿದೆಯಲ್ಲಾ! ನಾನು ಚಿತ್ತನಿಜಾತೆಯೆ ಹೆಂಗಸಲ್ಲವಲ್ಲಾ! ರಾಜಸಂಸೇವನ್ನು ಭಕ್ತಿಸುವನಾನು ಬೇರೆಯಾದದ್ದನ್ನು ಕಣ್ಣಿನಿಂದಲಾದರೂ ನೋಡಿಯೇನೆ! ನಾನು ಭೋಗಾಪೇಕ್ಷೆಯುಳ್ಳವಳಲ್ಲಾ. ನಿಮ್ಮ ಪ್ರಾಣನಿರುವವರೆಗೂ ನಾನು ನಿಮ್ಮನ್ನು ಪೂಜಿಸುತ್ತಿದ್ದು, ಅನಂತರ ನಿಮ್ಮೊಂದಿಗೆ ಸಹಗಮನವಂ ಮಾಡಿ ಪುಣ್ಯಲೋಕವನ್ನು ಹೊಂದುವೆನು. ನಾನು ಭೂಲೋಕದಲ್ಲಿ ಸುಖಿಸುವಳಾಗಿದ್ದರೆ ನನಗೆ ಆ ಶ್ರುತಕೀರ್ತಿಮಹಾರಾಯನೇ ಪತಿಯಾಗುತ್ತಿದ್ದನು ಎನ್ನಲಾಗಿ, ಅವೃದ್ಧನು ಮೂಢಳೆ,ನೀನು ಪುಣ್ಯಲೋಕಕ್ಕೆ ಹೋಗಿ ಪುನಃ ಹುಟ್ಟ್ಯದೇನೆ ಇರುವಿಯಾ? ಒಂದುದಿನವಾದರೂ ಭೋಗಿಸು, ಕಾರಣವಾದ ಇಂದ್ರಿಯಗಳಿಗೆ ಭೋಗವೇ ಸುಖವು. ಇದು ತಿಳಿಯದೆ ಮಾತನ್ನಾಡಿದೆ. ಆ ಶ್ರುತಕೀರ್ತಿಯು ಯೌವನ ಅಡವಿಯಲ್ಲಿದ್ದರೂ ನಾನು ಅವನನ್ನು ಕರತರುವೆನೆನ್ನಲು, ಆ ಸುಂದರಿಯು ಆಹಾ! ನೀವು ಹೀಗೆ ಭ್ರಾಂತರಾಗಿ ಮಾತನಾಡಬಾರದು, ಆ ಶ್ರುತಕೀರ್ತಿಯಾಗಲೀ, ದೇವೇಂದ್ರನೇ ಆಗಲಿ, ಮಹಾವಿಷ್ಣುವೇ ಆಗಲೀ ಎದುರಿಗೆ ಬಂದರೂ ನಾನು ಅವನನ್ನು ಕೋರುವಳಲ್ಲವೆಂದು ಆ ವೃದ್ಧನಿಗೆ ಉಪಚಾರವನ್ನು ಮಾಡುತ್ತಿದ್ದಳು.

ಆ ವೇಷಧಾರಿಯು ತನ್ನ ಸತಿಯ ಮನೋದಾರ್ಢ್ಯವನ್ನು ಪರೀಕ್ಷಿಸುವೇಕೆಂದು ಒಂದಾನೊಂದುದಿನ ಪ್ರಾಣನಾಯಕೀ! ನಾನು ಈದೇಶಕ್ಕೆ ಬಂದಕಾರ್ಯವು ಸಿದ್ಧಿಯಾಯಿತು, ಬೇಟೆಯಾಟವು ಮುರಿತುಹೋಗಿದೆ. ಈದಿನ ನಾನು

ಬೇಟೆಗೆ ಹೊರಡುವೆನೆನ್ನಲು ಆಸುಂದರಿಯು ಪ್ರಾಣನಾಥ! ನೀವು ಬೇಗೆ ಹೋಗಕೂಡದು, ನೀವು ದಿನದಿನಕ್ಕೆ ಅಕಕ್ತರಾಗುತ್ತಿರುವಿರಿ. ನಮ್ಮ ಅಡವಿಯಲ್ಲಿ ಹುಲಿಗಳು ಬಹಳ ಇವೆ. ನಿಮಗೆ ಬೇಟೆಯಾಡುವ ಪ್ರಾಯವು ತಪ್ಪಿರುವುದು, ಹೋಗಕೂಡದೆಂದು ಅಡ್ಡಗಿಸಿದಳು. ಆದರೂ ಆ ವೃದ್ಧನು ಅವಳಮಾತನ್ನು ಕೇಳದೆ ಸಾಯಂಕಾಲದ ಹೊತ್ತಿಗೆ ಬಂದುಬಿಡುವೆನೆಂದು ಸಮಾಧಾನೋಕ್ತಿಗಳನ್ನಾಡಿ ಬೇಟೆಗಾರರೊಂಬಿಗೆ ಅರಣ್ಯಕ್ಕೆ ಹೋಗಿ ಅಲ್ಲಿ ಅನೇಕ ಕಾಡುಮೃಗಗಳನ್ನು ಬೇಟೆಯಾಡುತ್ತಾ, ತಾನು ಹತ್ತಿದ್ದ ಕುದುರೆಯನ್ನಿಳಿದು ಎದುರಿಗೆ ಸಿಕ್ಕುವ ಕಾಲಿಗಳನ್ನು ತರುಮುತ್ತಾ, ಕೊನೆಗೆ ಬೇಟೆಗಾರರಿಗೂ ಕಾಣದೆ ಬಹಳ ದೂರಕ್ಕುಹೋಗಿ, ಅಲ್ಲಿ ತನ್ನ ದಿವ್ಯರೂಪವನ್ನು ತಾಳಿ ಒಂದಾನೊಂದು ಮರದಡಿ ಕುಳಿತಿದ್ದನು. ಬೇಟೆಗಾರರಾದರೋ ಆಮುದುಕನನ್ನು ಕಾಣದೆ ಅಲ್ಲೆಲ್ಲಾ ಹುಡುಕಾಡುತ್ತಿದ್ದರು. ಪುಷ್ಪವೇಣಿಯಾದರೋ ರಾತ್ರಿ ತನ್ನ ಗಂಡನು ಬಾರದಿರಲು ಬಹುವಾಗಿ ದುಃಖಿಗೊಂಡು, ಅರುಣೋದಯವಾಗಕೂಡಲೆ ತನ್ನ ತಂದೆಯಬಳಿಗೆ ಬಂದು, ತನ್ನ ಪತಿಯನೆಮಾಚಾರವನ್ನೆಲ್ಲಾ ಹೇಳಿ, ಪಲ್ಲಕ್ಕಿಯಲ್ಲಿ ಕುಳಿತು ಕೂರಸನ್ನೂ ತನ್ನ ಸಖಿಯರನ್ನೂ ಜೊತೆಮಾಡಿಕೊಂಡು ಅರಣ್ಯಕ್ಕೆ ಹೋಗುತ್ತಿದ್ದಳು. ಇಷ್ಟರಲ್ಲಿ ಆಬೇಟೆಗಾರರು ದಿವ್ಯಸುಂದರಾಕಾರನಾಗಿ ರಾರಾಜಿಸುತ್ತಲಿರುವ ಆ ರಾಜಪುತ್ರನನ್ನು ನೋಡಿ, ಆತನಿಗೆ ನಮಸ್ಕಾರವಂಮಾಡಿ, ಮಹೀಯನೆ! ನೀನುಯಾರೋ ನಾವು ಕಾಣೆವು. ನಮ್ಮ ಧೊರೆಯು ಅಳಿಯನು ಬಹು ವೃದ್ಧನು, ಬೇಟೆಗೆ ಬಂದು ಹುಲಿಗಳನ್ನು ತಿವಿಕೊಂಡು ಹೋದನು. ರಾತ್ರಿಯೆಲ್ಲಾ ಹುಡುಕಿದ್ವಾಯಿತು. ನೀವು ಆತನನ್ನು ನೋಡಿದಿರಾ ಎಂದುಕೇಳಲು, ಓಹೋ ಆವನನ್ನು ಒಂದು ಹುಲಿಯು ಕಚ್ಚಿ ಕೊಂಡುಹೋಯಿತೆಂದನು. ಈ ಮಾತನ್ನು ಕೇಳಿ ಆ ರಾಜಭಟರು ಬಹಳ ದುಃಖಾಕ್ರಾಂತರಾಗಿರಲು ಆ ಸುಂದರನಾದ ರಾಜಕುವರನು ನೀವು ಇನ್ನು ದುಃಖಿಸಿ ಪ್ರಯೋಜನವೇನು? ನಿಮ್ಮ ರಾಜನಿಗೆ ತಿಳಿಸಿಬಿಡಿ, ನಿಮ್ಮ ಪಟ್ಟಣವು ಇಲ್ಲಿಗೆ ಎಷ್ಟು ದೂರವಿದೆ? ನಿಮ್ಮ ರಾಜ್ಯವು ಯಾವುದು? ನಾನು ಮಾಳವದೇಶದ ರಾಜಪುತ್ರನು, ನನ್ನ ಹೆಸರು ಕೃತಕೀರ್ತಿಯು. ಪುಲಿಯಹಾಲನ್ನು ತರಲು ಎಲ್ಲಾ ಅಡವಿಗಳನ್ನೂ ತಿರುಗಿದೆನು, ಈ ಅಡವಿಯಲ್ಲಿ ಹುಲಿಯಹಾಲು ಸಿಕ್ಕಿತೆನ್ನಲು, ಆ ರಾಜಭಟರು ಈರಾಜಪುತ್ರನಿಗೆ ನಮಸ್ಕಾರಮಾಡಿ, ಪುಣ್ಯಶಾಲಿಯೇ! ನಿನ್ನ ನಿಮಿತ್ತವಾಗಿ ನಮ್ಮ ಅರಸನು ಬಹುವಾಗಿ ದುಃಖಿಸಿ, ಆ ಬಳಿಕ ತನ್ನ ಕುವರಿಯಾದ ಪುಷ್ಪವೇಣಿಗೆ ಸ್ವಯಂವರವೆಂದು ಪ್ರಕಟಿಸಿದನು. ಅನೇಕ ರಾಜರು ಬಂದು ಬಂದು ಆ ಕೋಕಿಲಯಂತ್ರವನ್ನು ಭೇದಿಸಲಾರದೆ ನಾಚಿಕೆಯಿಂದ ತ

ಮ್ಮತಮ್ಮ ದೇಶಕ್ಕೆ ಹೋಗುತ್ತಿದ್ದರು. ವಿಕಾರರೂಪವುಳ್ಳವನಾಗಿಯೂ, ಮುದುಕನಾಗಿಯೂ ಇರುವ ಅಡವಿಯರಾಜನು ಬಂದು, ಆ ಯಂತ್ರವನ್ನು ನಿರಾಯಾಸವಾಗಿ ಮುರಿದುಹಾಕಿ, ಆರಾಜಪುತ್ರಿಯನ್ನು ಮದುವೆಮಾಡಿ ಕೊಂಡನು. ನಾವು ತಲೆಯನ್ನು ತಗ್ಗಿಸುತ್ತಿರುವೆವು. ಇದು ಕಾಂಭೋಜದೇಶವು. ಬಹು ಸಮೀಪದಲ್ಲಿಯೇ ಇದೆ, ಹೋಗೋಣ ಬರಬೇಕೆಂದು ಕರೆದರು. ಅವರಲ್ಲಿ ಕೆಲವರು ಮುಂದಾಗಿಯೇ ಹೊರಟು ಈಸುದ್ದಿಯನ್ನು ಕಾಂಭೋಜಾಧಿಪನಿಗೂ ಪುಷ್ಪವೇಣಿಗೂ ತಿಳಿಸಬೇಕೆಂದು ಹೊಗ್ಗುತ್ತಿರುವಲ್ಲಿ, ದಾರಿಯಲ್ಲಿ ಆ ಪುಷ್ಪವೇಣಿಯೆನ್ನು ನೋಡಿ, ದುಃಖಿಸಿ, ನಡೆದ ವರ್ತಮಾನವನ್ನೂ ಶ್ರುತಕೀರ್ತಿಯ ಸುದ್ದಿಯೆನ್ನೂ ವಿಸ್ತರಿಸಿದರು. ಇದನ್ನು ಕೇಳಿದ ಕೂಡಲೇ ಆ ಪುಷ್ಪವೇಣಿಯು ರೋಮಾಂಚವುಳ್ಳವಳಾಗಿ, ಆಹಾ! ಶ್ರುತಕೀರ್ತಿಯು ಇನ್ನೂ ಬದುಕಿರುವನೆ! ಅಯ್ಯೋ! ತಂದೆಯು ತ್ವರೆಪಟ್ಟು ಸ್ವಯಂವರವನ್ನು ನಡೆಯಿಸಿದನು. ನನ್ನ ಕರ್ಣಯಬರಹವು ಈರೀತಿ ಇದ್ದಿತೆಂದು ದುಃಖಿಸುತ್ತಿದ್ದಳು.

ಶ್ರುತಕೀರ್ತಿಯಾದರೋ ಪುಷ್ಪವೇಣಿಯು ಸಮೀಪಕ್ಕೆ ಬಂದುಬಿಟ್ಟನು. ಆ ಸುಂದರಿಯನ್ನು ನೋಡಿ ಶ್ರುತಕೀರ್ತಿಯು ಪ್ರಾಣಸಖೀ! ನೀನು ದುಃಖಿಸುವುದು ಏತಕ್ಕೆ? ನಿನ್ನ ಸಲುವಾಗಿಯೇ ನಾನು ಕಾಡುಮೇಡುಗಳಲ್ಲೆಲ್ಲಾ ಅಲೆದು, ನಿನ್ನನ್ನು ಕೋರಿ ಇಲ್ಲಿಗೆ ಬಂದಿರುವೆನು. ನೀನು ಆ ವೃದ್ಧನನ್ನು ವರಿಸಿ ಏನು ಸುಖಿಸಿವೆ? ಅವನನ್ನು ಬಂದು ಹುಲಿಯು ಕಚ್ಚಿಕೊಂಡು ಹೊರಟುಹೋಯಿತು. ನಿನ್ನ ರೂಪಲೇಖಾಲಾವಣ್ಯಗಳಿಗೆ ಮೆಚ್ಚಿ ನಾನು ಬಂದಿರುವೆನು. ನನ್ನೊಂದಿಗೆ ನಮ್ಮ ಪಟ್ಟಣಕ್ಕೆ ಬಂದು ನನ್ನನ್ನು ವರಿಸಿ ನಮ್ಮ ಮನೆಯಲ್ಲಿ ಸುಖವಾಗಿರು. ನಿಮ್ಮ ಸೋದರತ್ತೆಯನ್ನೂ ಸಂತೋಷಗೊಳಿಸೆಂದನು. ಈಮಾತುಗಳನ್ನು ಕೇಳಿ ಆಪುಷ್ಪವೇಣಿಯು ತಲೆಯನ್ನು ಬಗ್ಗಿಸಿದವಳಾಗಿ, ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ, ಓಹೋ! ನಿಮ್ಮ ನುಡಿಯು ಧರ್ಮವಿರುದ್ಧವಾಗಿವೆ. ಅಗ್ನಿಸಾಕ್ಷಿಯಾಗಿ ಕೈಹಿಡಿದ ಗಂಡನು ಮುದುಕನಾಗಲೀ, ಕುರೂಪಿಯಾಗಲೀ, ಕುಂಟನಾಗಲೀ, ಪತಿತನಾಗಲೀ, ಮಾನವುಳ್ಳವನಾಗಲೀ ಸ್ತ್ರೀಗೆ ಅವನೇ ದೇವರಲ್ಲವೆ? ಅನ್ಯರನ್ನು ಕೋರಬಹುದೆ? ನಿರ್ಭಾಗ್ಯಳಾದ ನನಿಗೆ ನಿಮ್ಮಂಥವರು ದೊರೆಯುವರೆ? ನೀವು ಪಟ್ಟಣಕ್ಕೆ ಹೊರಡಬಹುದು. ನಾನು ನನ್ನ ಪತಿಯ ಶವವನ್ನಾದರೂ ಕಂಡುಹಿಡಿದು ಅದರೊಂದಿಗೆ ಸಹಗಮನವನ್ನಾದರೂ ಮಾಡುವೆನೆಂದಳು. ಪ್ರಾಣಕಾಂತೆಯೇ! ನೀನು ನನ್ನನ್ನು ತಿರಸ್ಕರಿಸಿದ್ದರಿಂದ ನಾನು ನಿಮ್ಮ ಊರಿಗೆ ಬರಲೊಲ್ಲೆನು, ನಿಮ್ಮ ತಂದೆಯ ಮುಖವನ್ನು ನಾನು ನೋಡುವುದು ಹೇಗೆ? ನನ್ನ ದೇಶಕ್ಕೆ ಹಿಂದಿರುಗುವೆ

ನೆಂದು ಹೊರಟು ಸ್ವಲ್ಪದೂರ ಹೋಗಿ ಕಾಣದೇಹೋದನು. ಅಷ್ಟರಲ್ಲಿ ಆಸುಕುಮಾರಿಯು ಕಣ್ಣೀರನ್ನು ಸುರಿಸುತ್ತಾ, ದಟ್ಟವಾದ ಕಾಡುಗಳಲ್ಲಿಯೂ, ಗುಟ್ಟುಗಳಲ್ಲಿಯೂ, ಬೆಟ್ಟುಗಳಲ್ಲಿಯೂ ಹುಡುಕುತ್ತಿದ್ದಳು. ಆಕ್ಷು ತಕೀರ್ತಿಯು ಕಾಳಿಕಾದೇವಿಯ ಮಹಿಮೆಯಿಂದ ದೇವೇಂದ್ರನ ರೂಪವನ್ನು ಧರಿಸಿ, ರಂಭೆ, ಊರ್ವಸಿ ಮೊದಲಾದ ಅಪ್ಸರಸ್ತ್ರೀಯರೊಂದಿಗೆ ಕೂಡಿರುವಂತೆ ಆ ಪುಷ್ಪವೇಣಿಗೆ ಕಾಣಿಸಿದನು. ಓಹೋ! ರಾಜಗಿಣಿಯೆ! ನಾನು ದೇವೇಂದ್ರನು, ತ್ರಿಲೋಕಾಧಿಪತಿಯು, ಇವರು ರಂಭೋರ್ವಸಿಯರು, ಇವರು ಮೇನಕತಿಲೋತ್ತಮೆ ಮೊದಲಾದ ದೇವಭಾನಿನಿಯರು. ಅಯ್ಯಯ್ಯೋ! ನೀನು ಆಮುದುಕನಿಗಾಗಿ ಇಷ್ಟವ್ಯಥೆಪಡುತ್ತಾ ಅಲೆಯಬಹುದೆ! ನಿನ್ನನ್ನು ಇಂದ್ರಲೋಕದ ರಾಜ್ಯಲಕ್ಷ್ಮಿಯಾಗಿ ಮಾಡುವೆನು. ಸಂತೋಷದಿಂದ ಈ ಪುಷ್ಪಕವಿಮಾನವನ್ನು ಹತ್ತಿ ನನ್ನೊಂದಿಗೆ ಹೊರಡೆಂದನು. ಅದಕ್ಕೆ ಆ ಪುಷ್ಪವೇಣಿಯು ಗಾಬರಿಬಿದ್ದು, ಓಹೋ! ದೇವೇಂದ್ರನಾದರೋ ತ್ರಿಲೋಕಾಧಿಪನು, ಇವನೂಕೂಡ ಅನಿತ್ಯವನ್ನು ಆಡಬಹುದೆ! ಹೀಗೆಂದು ತನ್ನ ಮನಸ್ಸಿನಲ್ಲಿ ಯೋಚಿಸಿ, ದೇವಲೋಕಪತಿಯೆ! ಧರ್ಮದೇವತೆಯು ನಿನ್ನನ್ನು ನೋಡಿ ನಗುತ್ತಿರುವುದು, ಗೌತಮಮುನಿಯ ಶಾಪವು ನಿನಗೆ ಮರತುಹೋಯಿತೊ? ಎನ್ನಲು ಆ ಇಂದ್ರವೇಷಧಾರಿಯು ಹಾಗಾದರೆ ನಿನ್ನ ಇಷ್ಟಪ್ರಕಾರ ನಡೆಯಬಹುದೆಂದನು. ಅಷ್ಟರಲ್ಲಿ ಆ ಪುಷ್ಪವೇಣಿಯು ತನ್ನ ಜತೆಯಲ್ಲಿದ್ದ ಸಖಿಯರನ್ನು ನೋಡಿ, ಸಖಿಯರೆ! ದೇವತೆಗಳೂಕೂಡ ಅನಿತ್ಯಕ್ಕೆ ಒಳಗಾದರು. ದೈವಗತಿಯು ನನ್ನನ್ನು ಹೀಗೆ ಅಲೆಯುವಂತೆ ಮಾಡಿಬಿಟ್ಟಿದೆ. ಅಯ್ಯಯ್ಯೋ! ಆ ಸುಕುಮಾರನು ಈಗ ಎಲ್ಲಿಹೋದನೋ ಏನು ಗಟ್ಟಿಯಾಗಿ ಅಳುತ್ತಿರುವುದನ್ನು ಸಖಿಯರು ಶಾಂತವಚನಗಳಿಂದ ಸಮಾಧಾನಮಾಡುತ್ತಿದ್ದರು. ಇಷ್ಟರಲ್ಲಿ ಆ ಶ್ರುತಕೀರ್ತಿಯು ತನ್ನ ಹೆಂಡತಿಯ ಗುಣವಿಶೇಷಗಳನ್ನು ಬಾಧವಾಗಿ ಕೊಂಡಾಡಿ, ಕನಿಕರವುಳ್ಳವನಾಗಿ, ಆ ಸುಕುಮಾರಿಗೆ ವೃದ್ಧರೂಪದಿಂದ ಕಾಣಿಸಿದನು. ಪಾರ್ವಣನಾಯಕೀ! ಈ ಘೋರಾರಣ್ಯಕ್ಕೆ ನೀನು ಏತಕ್ಕೆ ಬಂದೆ! ನಾನು ಅನೇಕ ಹುಲಿಗಳನ್ನು ಕೊಂದುಬಂದೆನು. ಶ್ರುತಕೀರ್ತಿ ಮಹಾರಾಜನನ್ನೂ ದೇವೇಂದ್ರನನ್ನೂ ನೋಡಿದೆನು. ಅವರು ನಿನಗೆ ಕಾಣಿಸಿದ ವರ್ತಮಾನವನ್ನು ಹೇಳಿದರೆ? ಎನ್ನಲು ಆ ಸುಕುಮಾರಿಗೆ ಮನಸ್ಸಿನಲ್ಲಿ ಸಂದೇಹವುಂಟಾಗಿ, ಸುಮ್ಮನಿದ್ದದ್ದನ್ನು ನೋಡಿ, ಆ ವೇಷಧಾರಿಯೊದ ಮುದುಕನು ಫಕ್ಕನೆ ನಕ್ಕು, ಪಾರ್ವಣಕಾಂತೆಯೆ! ನಿನ್ನ ಗುಣವಿಶೇಷಗಳನ್ನು ಪರೀಕ್ಷಿಸಬೇಕೆಂದೇ ನಾನು ಈರೂಪಗಳನ್ನೆಲ್ಲಾ ಧರಿಸಿದೆನು. ನಾನು ನಿಜವಾಗಿಯೂ ಮುದುಕನಲ್ಲವು, ನಿನ್ನ ಸೋದರತೆಯ

ಮಗನಾದ ಶ್ರುತಕೀರ್ತಿಯು, ನನಗೆ ಕಾಳಿಕಾದೇವಿಯು ವರವುಂಟಾದ್ದರಿಂದ ಆ ಕೋಕಿಲಯಂತ್ರವು ವಶವಾಗಿ ನಿನ್ನನ್ನು ವರಿಸಿದೆನು. ಆ ಯಂತ್ರವು ಯಾರಿಗೆತಾನೇ ಸಾಧ್ಯವಾದೀತು! ಎಂದು ಹೇಳಿ, ಅದುವರೆಗೆ ತಾನು ಧರಿಸಿದ್ದ ರೂಪಗಳನ್ನೆಲ್ಲಾ ಆ ಪುಷ್ಪವೇಣಿಯ ಎದುರಿಗೆ ಧರಿಸಿದನು. ಆ ಸುಕುಮಾರಿಗೆ ಅತ್ಯಾಶ್ಚರ್ಯವುಂಟಾಯಿತು. ಮನಸ್ಸಿನ ಸಂಶಯವೆಲ್ಲವೂ ಪರಿಹಾರವಾಯಿತು. ಆ ಬಳಿಕ ಪುಷ್ಪವೇಣಿಯು ಆಹಾ! ನನ್ನ ಭಾಗ್ಯವೇ ಭಾಗ್ಯವೆಂದು ಆನಂದದಿಂದ ಪತಿಯ ಪಾದಗಳಿಗೆ ಅಡ್ಡಬಿದ್ದು, ಪುಣ್ಯಮೂರುತಿಯೆ! ನನ್ನನ್ನು ಹೆಚ್ಚಾಗಿ ಅಲಸಿದೆ, ಪಟ್ಟಣಕ್ಕೆ ಹೋಗೋಣ ಬಾರೆನ್ನಲು, ಆ ಶ್ರುತಕೀರ್ತಿಯು, ಪ್ರಾಣನಾಯಕೀ! ನಿಮ್ಮ ತಂದೆಯು ಆತುರಬಿದ್ದು ಕೋಕಿಲಯಂತ್ರವನ್ನು ನಿರ್ಮಿಸಿ ನನಿಗೆ ಕೋಪವನ್ನುಂಟುಮಾಡಿರುವನು. ನಾನು ಚತುರಂಗಬಲಸಮೇತನಾಗಿ ಮುಂದೆಮುಂದೆ ಹೊರಡುವೆನು, ನೀನು ಸ್ವಲ್ಪ ನಿಧಾನವಾಗಿ ಬಾರೆಂದು ಹೇಳಿ, ಕಾಳಿಕಾದೇವಿಯ ಅನುಗ್ರಹದಿಂದ ಮೂರುಕೋಟಿ ಸೈನ್ಯದಿಂದಲೂ ಚತುರಂಗಬಲದಿಂದಲೂ ಕೂಡಿ, ರಣಭೇರಿಯನ್ನು ಬಾರಿಸುತ್ತಾ, ಕಾಂಭೋಜದೇಶದ ರಾಜಧಾನಿಯನ್ನುತ್ತಲೂ ಆವರಿಸಿದನು. ಆ ಕಾಂಭೋಜಪತಿಯು ಇದನ್ನು ಕೇಳಿದಕೂಡಲೇ ಎದೆಯು ಒಡೆದುಹೋಯಿತು. ಈಕೂಡಲೊಂದಿಗೆ ಸಮಾಧಾನವಾಡಿಕೊಂಡರೇ ತನ್ನ ಪ್ರಾಣವೂ, ರಾಜ್ಯಕೋಶಗಳೂ ಉಳಿಯುವುವೇ ಹೊರತು ಇಲ್ಲವಾದರೆ ಕೆಲಸ ಕೆಡುವುದೆಂದು ಯೋಚಿಸಿ, ತನ್ನ ಮಂತ್ರಿಪ್ರಧಾನಿಗಳೊಂದಿಗೆ ಬಂದು, ಆಸುಂದರಾಂಗನನ್ನು ಎದುರ್ಗೊಂಡು, ಕಪ್ಪಕಾಣಿಕೆಗಳನ್ನೊಪ್ಪಿಸಿ, ಮಹಾತ್ಮಾ! ನೀವು ಯಾವ ಲೋಕದಿಂದ ಬಂದಿರಿ, ನಿಮ್ಮ ಹೆಸರೇನು? ನಾನೂ ನನ್ನ ರಾಜ್ಯವೂ ನಿಮಿಗೆ ಎಷ್ಟುಮಾತ್ರವೆಂದು ವಿನಯವಾಗಿ ನುಡಿಯಲು, ಶ್ರುತಕೀರ್ತಿಯು, ಮಾವ! ನಾನು ನಿನ್ನ ತಂಗಿಯ ಮಗನಾದ ಶ್ರುತಕೀರ್ತಿಯು, ನೀನು ನಿನ್ನ ಕುಮಾರಿಯನ್ನು ವಿಕೃತರೂಪನಾದ ಮುದುಕನಿಗೆ ವಿವಾಹಮಾಡಿಕೊಟ್ಟಿ. ಈಕೋಪಾವೇಶದಿಂದ ನಾನು ಬಂದಿರುವೆನು, ಆ ಮುದುಕನನ್ನು ಕೊಂದು ನಿನ್ನ ಪಟ್ಟಣವನ್ನೆಲ್ಲಾ ಬೆಂಕಿಯಪಾಲುಮಾಡಿ, ನನ್ನ ಹೆಂಡತಿಯಾದ ಪುಷ್ಪವೇಣಿಯನ್ನು ತೆಗೆದುಕೊಂಡು ಹೋಗುವೆನು, ಇಂದ್ರಾದಿ ಸಕಲ ದೇವತೆಗಳು ನಿನ್ನ ಸಹಾಯಕರಾಗಿ ಬಂದರೂ ನಿಮಿಷದಲ್ಲಿ ಅವರನ್ನೆಲ್ಲಾ ಭಸ್ಮಮಾಡಿಬಿಡುವೆನು, ಬೆಂಕಿಯಿಲ್ಲದೆಡೆ ಬೆಂಕಿಯನ್ನೂ ನೀರು ಇಲ್ಲದಕಡೆ ನೀರನ್ನೂ ಸೃಷ್ಟಿಸಬಲ್ಲೆನು. ಸೂರ್ಯಚಂದ್ರರನ್ನು ಹಿಡಿದು ಚಂಡಾಡಿಬಿಡುವೆನು. ರಾತ್ರಿಯನ್ನು ಹಗಲುಮಾಡುವೆನು, ಹಗಲನ್ನು ರಾತ್ರಿಯಾಗಿ ಮಾಡಿಬಿಡುವೆನು. ನಾನು ಕಾಡಿನಲ್ಲಿ ಸತ್ತುಹೋದೆ

ನೆಂದು ಯೋಚಿಸಿ, ಕೋಕಿಲಯಂತ್ರವನ್ನು ನಿರ್ಮಿಸಿ ಸ್ವಯಂವರವನ್ನು ಮಾಡಿರುವಿಯೆಲ್ಲವೆ! ಎಂದು ದಿಕ್ಕುದಿಕ್ಕಿನಲ್ಲಿಯೂ ಪ್ರತಿಧ್ವನಿಯುಂಟಾಗುವಂತೆ ಧನುಷ್ಟಂಕಾರವನ್ನು ಮಾಡಿದನೋ ಇಲ್ಲವೋ ಆಗಲೇ ಆ ಕಾಂಭೋಜಪತಿಯ ಎದೆಯು ತಲ್ಲಣಿಸಿತು. ಏನೂತೋರದೆ ನಿಶ್ಚೇಷ್ಟಿತನಾಗಿ ಕಣ್ಣೀರನ್ನು ಸುರಿಸುತ್ತಾ ನಿಂತಿರಲು, ಆ ಕಾಲಕ್ಕೆ ಪುಷ್ಪವೇಣಿಯು ಬಂದು, ಗಂಡನಿಗೆ ನಮಸ್ಕಾರಮಾಡಿ, ತಂದೆಯನ್ನು ನೋಡಿ, ಜನಕನೆ! ನೀನು ವ್ಯಸನವನ್ನು ಬಿಟ್ಟು ನಿನ್ನ ಅಳಿಯನ ವರ್ತಮಾನವನ್ನೆಲ್ಲಾ ಕೇಳಿನಲು ಮನಸ್ಸಿನಲ್ಲಿ ಸಂಶಯವು ಪರಿಹಾರವಾಗದ ಆ ಶ್ರುತಕೀರ್ತಿಯನ್ನು ಆಲಿಂಗನಮಾಡಿಕೊಂಡು ನಾನಾಪ್ರಕಾರವಾಗಿ ಸ್ತೋತ್ರಮಾಡುತ್ತಾ, ಪುಣ್ಯಪುರುಷನೆ! ನಿನ್ನ ಮಾಯಾರೂಪಗಳನ್ನೆಲ್ಲಾ ನನಗೆ ತೋರಿಸಬೇಕೆಂದು ಕೇಳಿಕೊಂಡನು. ಶ್ರುತಕೀರ್ತಿಯು ವಿಕಾರವಾದ ವೃದ್ಧರೂಪವನ್ನೂ ತ್ರಿಲೋಕಾಧಿಪತಿಯಾದ ಇಂದ್ರನ ರೂಪವನ್ನೂ ಪುನಃ ತೋರಿಸಿದನು. ಇದನ್ನೆಲ್ಲಾ ನೋಡಿದಕೂಡಲೇ ರಾಜನಿಗೂ, ಮಂತ್ರಿಪ್ರಧಾನಿಗಳಿಗೂ, ಪುರಜನರಿಗೂ ಮನದ ಸಂಶಯವು ಪರಿಹಾರವಾಯಿತು. ಈತನೇ ಶ್ರುತಕೀರ್ತಿಯೆಂದು ನಂಬಿಕೆಯು ತಟ್ಟಿದಮೇಲೆ ಅಹಾ! ಈತನು ದೇವತೆಗಳಿಗೆ ಸಮಾನನು. ಈತನ ದರ್ಶನವಾದ ದಿನವೇ ಸುದಿನವು. ಈ ಮಹಾನುಭಾವನನ್ನು ನೋಡಿದಮಾತ್ರದಿಂದಲೇ ನಾವೆಲ್ಲಾ ಪವಿತ್ರರಾದೆವೆಂದು ಅಂದುಕೊಳ್ಳುತ್ತಿದ್ದರು. ಬಳಿಕ ಕಾಂಭೋಜಪತಿಯು ಪುತ್ರಿಯಾದ ಪುಷ್ಪವೇಣಿಯಕಡೆಗೆ ತಿರುಗಿ ಅಮ್ಮಾ! ನಿನ್ನ ಭಾಗ್ಯಕ್ಕೆ ಎಣೆಯೇ ಇಲ್ಲವು. ನಿನ್ನಂಥ ಪುಣ್ಯವತಿಯು ನನ್ನ ಗರ್ಭದಲ್ಲಿ ಜನಿಸಿದ್ದರಿಂದ ನನ್ನ ವಂಶವು ಪಾವನವಾಯಿತು. ನಾನೂ ಧನ್ಯನಾದೆನೆಂದು ಸಂತೋಷದಿಂದ ಆನಂದ ಬಾಷ್ಪಗಳನ್ನು ಸುರಿಸುತ್ತಾ, ಅಳಿಯನನ್ನು ಪಟ್ಟದಾನೆಯಮೇಲೆ ಕುಳ್ಳಿರಿಸಿಕೊಂಡು, ತನ್ನ ಅರಮನೆಗೆ ಕರೆದುಕೊಂಡುಹೋದನು. ಪಟ್ಟಣವನ್ನೆಲ್ಲಾ ಶೃಂಗಾರಮಾಡಿಸಿ ಬಹಳ ವೈಭವದಿಂದ ಪುನಃ ಪುಷ್ಪವೇಣಿಗೂ ಶ್ರುತಕೀರ್ತಿಮಹಾರಾಯನಿಗೂ ವಿವಾಹಮಹೋತ್ಸವವನ್ನು ಜರಿಗಿಸಿದನು. ಮಂಗಳವಾದ್ಯಗಳು ದಿಕ್ಕುದಿಕ್ಕುಗಳಲ್ಲಿಯೂ ಮೊಳಗುತ್ತಿದ್ದವು. ಅನಂತರ ತನ್ನ ತಂಗಿಯಾದ ಸುಮತೀದೇವಿಗೆ ನಡೆದವರ್ತಮಾನವನ್ನೆಲ್ಲಾ ಹೇಳಿಕಳುಹಿಸಿದನು. ಇಷ್ಟರೊಳಗಾಗಿಯೇ ನಾರದಮಹಾಮುನಿಯು ಮಾಳವಾಧೀಶನಿಗೆ ದರ್ಶನವನ್ನು ಕೊಟ್ಟು, ಪ್ರಭುವೆ! ನೀನು ನಿನ್ನ ಕಿರಿಯಸೆಂಡತಿಯಮೇಲಿನ ಮಮತೆಯಿಂದ ಪುಣ್ಯಮೂರುತಿಯೂ, ಪಾವನಚರಿತ್ರನೂ, ಸಕಲಸದ್ಗುಣ, ಧೈರ್ಯ, ಶಕ್ತಿ, ಸಾಹಸ ಸಂಪನ್ನನೂ ಆದ ಶ್ರುತಕೀರ್ತಿಮಹಾರಾಯನೆಂಬ ನಿನ್ನ ಪುತ್ರರತ್ನವನ್ನು ಅಡವಿಯಪಾಲು

ಮಾಡಿದೆ. ನೀನು ಭ್ರಾಂತನಾವೆ ಎಂದು ನಡೆದ ವರ್ತಮಾನವನ್ನೆಲ್ಲಾ ವಿಸ್ತರಿಸಿದನು. ಆಗ ಮಾಳವಾಧಿಪನು ತನ್ನ ಚಿಕ್ಕಹೆಂಡತಿಯನ್ನು ಬಹು ವಾಗಿ ನಿಂದಿಸಿ, ಹಿರಿಯಹೆಂಡತಿಯಾದ ಸುಮತೀದೇವಿಯಬಳಿಗೆ ಹೋಗಿ, ಆಕೆಯ ಪ್ರಾಜೆಯೆನ್ನು ಕೈಕೊಂಡು, ಶ್ರುತಕೀರ್ತಿಯ ವರ್ತಮಾನವನ್ನೆಲ್ಲಾ ಹೇಳಿ ಸಂತುಷ್ಟನಾಗಿ, ಕಾಂಭೋಜಪತಿಯ ಶುಭಲೇಖನವನ್ನು ಓದಿಕೊಂಡು ಪುತ್ರನ ಆಗಮನವನ್ನೇ ಎದುರುನೋಡುತ್ತಿದ್ದನು.

ಅತ್ತ ಶ್ರುತಕೀರ್ತಿಯಾದರೋ ಮಾವನ ಮನೆಯಲ್ಲಿ ಆರುತಿಂಗಳವರೆಗೂ ಸುಖವಾಗಿದ್ದು ಆಬಳಿಕ ಮಾವನು ಕೊಟ್ಟ ಚತುರಂಗಬಲವನ್ನೂ, ದಿವ್ಯವಸ್ತ್ರಾಭರಣಂಗಳನ್ನೂ ತೆಗೆದುಕೊಂಡು ಪತ್ನಿಯಾದ ಪುಷ್ಪವೇಣಿಯೊಂದಿಗೆ ಪ್ರಯಾಣಮಾಡುತ್ತಾ, ಕಾಳಿಕಾದೇವಾಲಯಕ್ಕೆ ಬಂದು, ಅಲ್ಲಿ ಸತ್ತುಬಿದ್ದಿದ್ದ ರಾಜಪುತ್ರರ ವಸ್ತ್ರಾಭರಣಗಳನ್ನೂ, ಅಲ್ಲಿದ್ದ ಕಾಸನವನ್ನೂ ತನ್ನ ಸೈನಿಗೆ ತೋರಿಸಿ, ಆ ವಸ್ತ್ರಾಭರಣಗಳನ್ನು ಮಾತ್ರ ತೆಗೆದುಕೊಂಡು, ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡುತ್ತಾ, ಮಾಳವದೇಶದ ಸಮೀಪವನ್ನು ಸೇರಿದ ಬಳಿಕ ತಾನು ಬರುತ್ತಿರುವ ಸಂಗತಿಯನ್ನು ತಾಯಿಯಾದ ಸುಮತೀದೇವಿಗೆ ಹೇಳಿಕಳುಹಿಸಿದನು. ಸುಮತಿಯೂ ರಾಜನೂ ಪ್ರಯಾಣಸಿದ್ಧರಾಗಿ ಪುತ್ರನನ್ನು ಎದುರುಗೊಳ್ಳಲು ಬರುವುದಕ್ಕೆ ಮುಂಚೆಯೇ ಆ ಸುನಂದೆಯು ಮುಂದೆ ಮೋಸವಾವೀತೆಂದು ಯೋಚಿಸಿ, ತನ್ನ ಪುತ್ರನೊಂದಿಗೆ ಎದುರಾದಳು. ಶ್ರುತಕೀರ್ತಿಯು ಅವರ್ಯರಿಗೂ ನಮಸ್ಕಾರಮಾಡಿ ಕ್ಷೇಮಸಮಾಚಾರವನ್ನು ವಿಚಾರಿಸಿದ ಬಳಿಕ ತಾಯಿಯೇ! ಸುಲಿಯಹಾಲನ್ನು ತಂದಿರುವೆನೆನ್ನಲು, ಆ ಸುನಂದೆಯು ಶ್ರುತಕೀರ್ತಿಯನ್ನು ಮುದ್ದಿಟ್ಟುಕೊಂಡು, ಮಗೂ! ನನ್ನಲ್ಲಿ ಯಾವ ತಪ್ಪಿದ್ದರೂ ಎಲ್ಲವನ್ನೂ ಕ್ಷಮಿಸಿ, ನಿನ್ನ ತಾಯಿಯಹಾಗೆಯೇ ಭಾವಿಸಬೇಕೆನ್ನಲು ಶ್ರುತಕೀರ್ತಿಯು, ತಾಯಿಗಿಂತಲೂ ಹೆಚ್ಚಾಗಿಯೇ ಭಾವಿಸುವೆನೆಂದು ನುಡಿದನು. ಅನಂತರ ಮಂಗಳವಾದ್ಯಗಳೊಂದಿಗೆ ಸಂತೋಷದಿಂದ ಎದುರ್ಗೊಳ್ಳಲು ಬರುತ್ತಿರುವ ಜನನೀಜನಕರಿಗೆ ನಮಸ್ಕಾರಮಾಡಿ, ವಿಶ್ವಾಸದಿಂದ ನಡೆದ ವರ್ತಮಾನವನ್ನೆಲ್ಲಾ ತಿಳಿಯಪಡಿಸಿದನು. ತರುವಾಯ ಪುಷ್ಪವೇಣಿಯು ಅತ್ತೆಮಾವಂದಿರಿಗೆ ನಮಸ್ಕಾರ ಮಾಡಿದಳು. ಆಗ ರಾಜನು ಶ್ರುತಕೀರ್ತಿಮಹಾರಾಯನಿಗೆ ಪಟ್ಟಾಭಿಷೇಕಮಹೋತ್ಸವವನ್ನು ಬೆಳೆಯಿಸಬೇಕೆಂದು ಸಜ್ಜುಗೊಳಿಸುತ್ತಿರಲು ತಮ್ಮ ಅಣ್ಣನಿಗೆ ಆ ರಾಜ್ಯಪಟ್ಟಾಭಿಷೇಕವನ್ನು ಮಾಡಿಸಬೇಕೆಂದೂ, ತನಗೆ ಬೇಡವೆಂದೂ ನಿಶ್ಚಯಮಾಡಿಕೊಂಡನು. ಅವರ ಅಣ್ಣನಿಗೇ ರಾಜ್ಯಾಭಿಷೇಕವನ್ನು ಮಾಡಿಸಿದನು. ತಾನು ತನ್ನ ಭುಜಬಲದಿಂದ ಸಕಲ ರಾಜರನ್ನೂ ಗೆದ್ದು ಭೂಮಂ

ಡಲಾಧಿಪತಿಯೆನ್ನಿಸಿಕೊಂಡು, ಅಷ್ಟದಿಕ್ಕುಗಳಿಗೂ ತನ್ನ ಕೀರ್ತಿಯನ್ನು ಹರಡುತ್ತಾ, ಧರ್ಮವನ್ನು ನಾಲ್ಕುಪಾದಗಳಿಂದಲೂ ನಡೆಯಿಸುತ್ತ, ತಾಯಿ ತಂದೆಗಳಿಗೆ ಸಂತೋಷವನ್ನುಂಟುಮಾಡುತ್ತ, ಹಿರಿಯರನ್ನು ಪೂಜಿಸುತ್ತ, ಯೋಗಿಗಳ ಸೇವೆಯನ್ನು ಮಾಡುತ್ತ, ಸಚ್ಚಿದಾನಂದಮಾರ್ಗವನ್ನು ಅಭ್ಯಾಸಮಾಡುತ್ತ, ಸುಖಿನಂದನವೃಷ್ಣಿವರಾಗಿ ಪುತ್ರೀಪುತ್ರರಂಪಡೆದು, ಚಿರಕಾಲ ಸುಖಿಸುತ್ತಾ, ಆನಂತರ ತಮ್ಮ ದೇಹಗಳನ್ನು ಪರಿತ್ಯಜಿಸಿ, ಶಾಶ್ವತವಾದ ಪುಣ್ಯಲೋಕವನ್ನು ಪಡೆದರೆಂದು ಶ್ರೀಕೃಷ್ಣಮೂರ್ತಿಯು ಅರ್ಜುನನಿಗೆ ವಿಸ್ತರಿಸಲು, ಪಾರ್ಥನು ಪರಮಾಶ್ಚರ್ಯವಂದಿಸಿ, ಆಹಾ! ಸಚ್ಚಿದಾನಂದಮಾರ್ಗವು ಬಹಳ ಶ್ಲಾಘ್ಯವಾದುದು. ಕೃತಕೀರ್ತಿಮಹಾರಾಯನ ಚರಿತ್ರೆಯೂ ಪಾವನವಾದದ್ದೆಂದು ಆ ಕೃತಕೀರ್ತಿಗೆ ನಮಸ್ಕಾರವಂಮಾಡಿ, ಪುರುಷೋತ್ತಮನನ್ನು ಕೊಂಗಳಿ, ಮಹಾನುಭಾವನೆ! ನಿದ್ರೆಯು ಕಣ್ಣುಗಳನ್ನು ಚುಚ್ಚುತ್ತಿರುವುದು, ಮಲಗಿ ನಿದ್ರಿಸೋಣವೆನ್ನಲು ಇಬ್ಬರೂ ಆ ಮರಲುದಿಣ್ಣೆಯಮೇಲೆ ಸುಖನಿದ್ರೆಯನ್ನು ಹೊಂದಿದರೆಂಬಲ್ಲಿಗೆ ಶ್ರೀಕೃಷ್ಣಬೋಧಾಮೃತಸಾರದೊಳು ಆರನೆಯ ಕಥೆಯು ಸಂಪೂರ್ಣವಾದುದು.

ಏಳನೆಯ ಕಥಾಪ್ರಾರಂಭವು.

ಏಳನೆಯದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಆಯವನಾನದೀ ದಡದಲ್ಲಿರುವ ಮರಲುದಿಣ್ಣೆಯಮೇಲೆ ಕುಳಿತುಕೊಂಡು, ತಾಂಬೂಲವನ್ನು ಸೇವಿಸುತ್ತಾ, ಸುಗಂಧಪರಿಮಳದಿಂದ ಆನಂದಯುತರಾಗಿರುವಲ್ಲಿ, ಕುಂತೀಪುತ್ರನು ಶ್ರೀಕೃಷ್ಣಸ್ವಾಮಿಯನ್ನು ಕುರಿತು- ಮಹಾನುಭಾವನೆ! ಪುಣ್ಯಮೂರುತಿಯೇ! ನಾಕಸದೃಶವಾದ ನನಗೆ ಹೃದ್ಗೋಚರವಾಗುವಹಾಗೆ ಒಂದಾನೊಂದು ಪುಣ್ಯಚರಿತ್ರೆಯನ್ನು ಬೋಧಿಸಿ, ಜನಿತ್ರನನ್ನಾಗಿ ಮಾಡಬೇಕೆಂದು ಪಾರ್ಥಿಸಲಾಗಿ, ಆ ಸ್ವಾಮಿಯು ಚಂದ್ರಗುಪ್ತಮಹಾರಾಯನ ಚರಿತ್ರೆಯನ್ನು ಹೇಳುವೆನೆಂದು ಅರ್ಜುನನನ್ನು ಕುರಿತು, ಕಥಾರಂಭವನ್ನು ಮಾಡುವನು.

ಚಂದ್ರಗುಪ್ತಮಹಾರಾಯನ ಕಥೆ.

ಪಾಂಡುಪುತ್ರನಾದ ಅರ್ಜುನನೆ! ಪೂರ್ವದಲ್ಲಿ ಮಗಧದೇಶವನ್ನು ನೊಗ್ಯನತ್ತನೆಂಬ ಮಹಾರಾಯನು ಪಾಲಿಸುತ್ತಿದ್ದನು. ಅತನಿಗೆ ಬಹುಕಾಲ ಮಕ್ಕಳೇ ಆಗಲಿಲ್ಲ. ಅನೇಕ ವ್ರತಗಳನ್ನೂ, ದಾನಧರ್ಮಗಳನ್ನೂ ಮಾಡುತ್ತಾ ಭಕ್ತಿಯಿಂದ ದೇವರನ್ನು ಸೇವಿಸುತ್ತಿರಲು ದೈವಕಟಾಕ್ಷದಿಂ

ದ ರಾಜಪತ್ನಿಯು ಗರ್ಭಿಣಿಯಾದಳು ನವಮಾಸವಾದಕೂಡಲೆ ಆಕೆಯು ಸುಂದರನಾದ ಸುಕುಮಾರನನ್ನು ಪೆತ್ತಳು. ರಾಜನಾದರೋ ಪುತ್ರೋತ್ಸವವಾಯಿತೆಂದು ಬಹುವಾಗಿ ಸಂತಸಗೊಂಡು ಮಹನೀಯರಿಗೆ ವಿವಿಧವಾದ ದಾನಗಳನ್ನು ಕೊಟ್ಟು, ಆ ಶಿಶುವಿಗೆ ಜಾತಕರ್ಮಾದಿ ಸಕಲ ಶಾಸ್ತ್ರೋಕ್ತವಾದ ಕರ್ಮಗಳನ್ನು ವಿಮ್ಯುಕ್ತವಾಗಿ ನಡೆಯಿಸಿ ಚಂದ್ರಗುಪ್ತನೆಂದು ಹೆಸರಿಟ್ಟನು. ಐದುಸಂವತ್ಸರದವರೆಗೂ ಮಗುವನ್ನು ಬಹುಪ್ರೀತಿಯಿಂದ ಸಾಕಿದನು. ಐದನೆಯಸಂವತ್ಸರವಾದಕೂಡಲೇ ಆ ಮಗುವಿಗೆ ಗುರುಮುಖದಿಂದ ನಿದ್ಯಾಭ್ಯಾಸಕ್ಕೆ ಆರಂಭಿಸಿದನು. ಆ ಸುಕುಮಾರನಾದರೋ ತನ್ನ ಬುದ್ಧಿಬಲದಿಂದ ಮಂತ್ರಿಕುಮಾರನಾದ ಪ್ರದೀಪನೊಂದಿಗೆ ಸೇರಿ, ಸಕಲ ವಿದ್ಯೆಗಳನ್ನೂ ಕಲಿತುಕೊಂಡು, ಬಾಲ್ಯವಿನೋದಗಳಿಂದ ತಾಯಿತಂದೆಗಳಿಗೆ ಆನಂದಗೊಳಿಸುತ್ತಾ, ಸಕಲಶಾಸ್ತ್ರಗಳಲ್ಲಿಯೂ ಪಂಡಿತನೆನ್ನಿಸಿಕೊಂಡು, ವಿವಾಸ್ತ್ರಪ್ರಯೋಗಗಳನ್ನೂ, ಅವುಗಳ ಉಪಸಂಹಾರವನ್ನೂ ತಿಳಿದವನಾಗಿ, ವಾಯುಸಮರ್ಥನಾದ ಬಳಿಕ ತಂದೆಯ ಸಭೆಗೆ ಮಂತ್ರಿಕುಮಾರನೊಂದಿಗೆ ಹೋಗುತ್ತಾ ಅಲ್ಲಿ ಶಾಸ್ತ್ರಪ್ರಸಂಗವನ್ನೂ, ಸಕಲ ಧರ್ಮಾಧರ್ಮಗಳನ್ನೂ ಕೇಳುತ್ತಿದ್ದನು

ಹೀಗಿರುವಲ್ಲಿ ಆ ರಾಜೇಂದ್ರನ ಸಭೆಯನ್ನು ಒಂದಾನೊಂದುದಿನ ನಾರದಮಹರ್ಷಿಗಳು ಅಲಂಕರಿಸಿದರು. ರಾಜೇಂದ್ರನು ಆ ಮಹನೀಯರನ್ನು ಅರ್ಘ್ಯಪಾದ್ಯಗಳಿಂದ ಸತ್ಕರಿಸಿದನು. ಅನಂತರ ಆ ಮಹನೀಯನನ್ನು ಕುರಿತು, ಮಹಾನುಭಾವನೆ! ನಿನ್ನ ದರ್ಶನದಿಂದ ನಾನೂ ನನ್ನ ವಂಶವೂ, ನಿನ್ನ ಪಾದಧೂಳಿಯಿಂದ ಈನನ್ನ ಅರಮನೆಯೂ ಪವಿತ್ರವಾದವು, ನನ್ನ ಜನ್ಮವೂ ಸಫಲವಾಯಿತು. ಭೂಲೋಕದಲ್ಲಿ ವಿಶೇಷವೇನಾದರೂ ಇದ್ದರೆ ತಿಳುಹಿಸಬೇಕೆಂದು ಬೇಡುತ್ತಿರುವ ರಾಜನನ್ನು ಕುರಿತು, ನಾರದಮಹರ್ಷಿಯು "ನಾರದಃ ಕಲಹಪ್ರಿಯಃ" ಎಂಬುದನ್ನು ಸಾರ್ಥಕಗೊಳಿಸುವಂತೆ ಇಂತೆಂದನು. ಮಾನವೇಂದ್ರ! ಕೇಳು, ಹಿಮವತ್ಪರ್ವತದ ಶಿಖರದಮೇಲೆ ಅತ್ಯಂತ ಪ್ರಕಾಶಮಾನವಾಗಿ ಸೂರ್ಯನಕಾಂತಿಯನ್ನೂ ಕೂಡ ಅಲೆಗಳೆಯುತ್ತಿರುವ ಒಂದಾನೊಂದು ದಿವ್ಯರತ್ನವು ಪ್ರಕಾಶಿಸುತ್ತಿರುವುದು. ಆ ಜೆಳಕಿನಲ್ಲಿ ಒಬ್ಬಾನೊಬ್ಬ ಘೋರರಾಕ್ಷಸಿಯು ತಿರುಗುತ್ತಿದ್ದಾಳೆ. ನೇಪಾಳದೇಶದ ರಾಜನು ಹಿಮವತ್ಪರ್ವತದ ಮೇಲಿರುವ ಪ್ರಕಾಶಮಾನವಾದ ಆ ರತ್ನವನ್ನು ಯಾರು ತರುವರೋ ಅವರಿಗೆ ತನ್ನ ಕುವರಿಯಾದ ಭ್ರಮರವೇಣಿಯನ್ನು ಕೊಟ್ಟು ಮದುವೆಮಾಡುವೆನೆಂದು ಪ್ರಕಟಿಸಿರುವನು. ಅದನ್ನು ತರುವುದು ಬಹಳ ಅಸಾಧ್ಯವೆಂದು ನುಡಿದು ಅಂತರ್ಧಾನನಾದನು. ಬಳಿಕ ಆ ಸಭೆಯಲ್ಲಿದ್ದ ಚಂದ್ರಗುಪ್ತಮಹಾರಾಯನಿಗೆ

ತಾನು ಹಿಮವತ್ಪರ್ವತಪಲ್ಲಿರುವ ಆ ಮಾಣಿಕ್ಯವನ್ನು ತಂದು ಭ್ರಮರವೇಣಿಯನ್ನು ಮದುವೆಮಾಡಿಕೊಳ್ಳಬೇಕೆಂದು ಮನಸ್ಸುಂಟಾಯಿತು. ಇದನ್ನು ತಾಯಿತಂದೆಗಳಿಗೆ ತಿಳಿಸಿದರೆ ಕಾರ್ಯಭಂಗವೆಂದು, ಮಂತ್ರಿಕುಮಾರನೂ ತಾನೂ ರಹಸ್ಯವಾಗಿ ಮಾತನಾಡಿಕೊಂಡು, ಭೂಸಂಚಾರಕ್ಕೆ ಹೊರಡಲು ಅನೇಕ ದಿವ್ಯವಸ್ತ್ರಾಭರಣಗಳನ್ನು ಕ್ಪೆಕೊಂಡು ಅರ್ಧರಾತ್ರಿಯಲ್ಲಿ ಇಬ್ಬರೂ ಹೊರಟು ಉತ್ತರದಿಕ್ಕಿಗೆ ಪ್ರಯಾಣಮಾಡಿದರು. ಬೆಳಗಾದ ಕೂಡಲೇ ಚಂದ್ರಗುಪ್ತನನ್ನು ಕಾಣದೆ ರಾಜನಾದ ಸೂರ್ಯಗುಪ್ತನೂ, ಪ್ರದೀಪನನ್ನು ಕಾಣದೆ ಮಂತ್ರಿವರ್ಯನೂ ಬಹುವಾಗಿ ದುಃಖಿಸಿದರು. ಇವರಿರ್ವರೂ ಕಾಣವಿರಲು ಪುತ್ರನಿವಾಸಿಗಳ ದುಃಖಕ್ಕೆ ಪಾರವೇ ಇರಲಿಲ್ಲವು. ರಾಜಪತ್ನಿಯೂ ಮಂತ್ರಿಪತ್ನಿಯೂ ತಮ್ಮತಮ್ಮ ಕುವರರನ್ನು ಕಾಣದೆ ದುಃಖಿಸುತ್ತಿದ್ದರು. ನಾಲ್ಕು ದಿಕ್ಕುಗಳಲ್ಲಿಯೂ ಚಾರರನ್ನು ಕಳುಹಿಸಿ ಹುಡುಕಿಸುತ್ತಿದ್ದರು, ಇತ್ತ ಚಂದ್ರಗುಪ್ತನೂ, ಪ್ರದೀಪನೂ ದೇಶವನ್ನು ಬಿಟ್ಟು ಅಶ್ವಾರೂಢರಾಗಿ ಉತ್ತರದಿಕ್ಕನ್ನೇ ಹಿಡಿದು ಪ್ರಯಾಣವಂ ಮಾಡುತ್ತಾ, ಘೋರಾರಣ್ಯವನ್ನು ಹೊಕ್ಕು, ಎದುರಿಗೆ ಬರುತ್ತಿರುವ ದುಷ್ಟಮೃಗಗಳನ್ನು ಸೀಳುತಾ, ಕೆಲವನ್ನು ತರಮುತಾ, ಅಲ್ಲಲ್ಲಿ ಸಿಕ್ಕುವ ಮಾಧುರ್ಯಫಲಗಳನ್ನು ತಿಂದು, ನೀರೀರನ್ನು ಕುಡಿದು, ಬೆಸಲಿನ ಬೇಗೆಯನ್ನು ತಡೆಯಲಾರದೆ, ಪತ್ರಿರದಲ್ಲಿ ಸಿಕ್ಕುವ ತಮಾಲವೃಕ್ಷದಕೆಳಗೆ ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳುತಾ, ಬಹುದೂರ ಪ್ರಯಾಣಮಾಡಿದರು. ಹೀಗೆ ಆರುತಿಂಗಳು ಪ್ರಯಾಣಮಾಡಿದ ಬಳಿಕ ನೇಪಾಳದೇಶವು ಸಿಕ್ಕಿತು. ರಾಜಪುತ್ರನೂ, ಮಂತ್ರಿಪುತ್ರನೂ ಆಪುರವನ್ನು ಪ್ರವೇಶಿಸಿ, ಅಲ್ಲಿ ಒಬ್ಬಾ ನೊಬ್ಬ ಅಡಗೂಲಜ್ಜಿಯಮನೆಗೆ ಹೋಗಿ, ಮಜ್ಜನಭೋಜನಾದಿಗಳನ್ನು ತೀರಿಸಿಕೊಂಡು, ಹತ್ತುದಿನಗಳವರೆಗೂ ಸಂತೋಷದಿಂದ ಅಲ್ಲಲ್ಲಿ ತಿರುಗಾಡುತ್ತಿದ್ದರು. ಒಂದುದಿನ ಆ ರಾಜಪುತ್ರನು ಅಡಗೂಲಜ್ಜಿಯನ್ನು ಕುರಿತು, ನಿಮ್ಮ ಊರಿನಲ್ಲಿ ವಿಶೇಷವೇನು? ಇದರ ಹೆಸರೇನು? ರಾಜನು ಯಾರೆಂದು ಕೇಳಿದನು. ಆಜಕ್ಕೆ ಆ ಅಡಗೂಲಜ್ಜಿಯು ಇಂತೆಂದಳು. ಈದೇಶವನ್ನು ನೇಪಾಳದೇಶವೆಂದು ಕರೆಯುವರು, ಇಲ್ಲಿ ಮಾನಾಂಕನೆಂಬ ಮಹಾರಾಜನು ಆಳುತ್ತಿರುವನು, ಈರಾಜನಿಗೆ ಭ್ರಮರವೇಣಿಯೆಂಬ ಒರ್ವಳು ಕನ್ಯಾರತ್ನವು, ಈಕೆಯ ಸೌಂದರ್ಯವನ್ನು ನೋಡಿ ದೇವ ಭಾಮಿನಿಯರೂಕೂಡ ತಲೆಯನ್ನು ತಗ್ಗಿಸಿಕೊಳ್ಳಬೇಕು. ಈ ಲೋಕದಲ್ಲಿ ಇಂತಹ ರೂಪವತಿಯೂ, ಸದ್ಗುಣಸಂಪನ್ನೆಯೂ ಇಲ್ಲವೇಇಲ್ಲವು. ಈಸುಂದರಿಗೆ ಈದೇಶದ ರಾಜನು ಸ್ವಯಂವರವೆಂದು ಪ್ರಕಟಿಸಿರುವನು, ಈಕೆಯನ್ನು ವರಿಸತಕ್ಕವರು ಹಿಮವತ್ಪರ್ವತದಮೇಲೆ ಘೋರತರಕಸಿನಿ

ರುವೆಡೆ ಇರುವ ದಿವ್ಯರತ್ನವನ್ನು ತರಬೇಕೆಂದು ರಾಜನ ಪ್ರತಿಜ್ಞೆಯು. ಅನೇಕ ರಾಜಾಧಿರಾಜರೆಲ್ಲಾ ವಿಫಲಯತ್ನರಾದರು. ಈಸುಂದರಿಯನ್ನು ವರಿಸುವರ ಭಾಗ್ಯವೇ ಭಾಗ್ಯವೆಂದಳು. ಈಮಾತುಗಳನ್ನು ಕೇಳಿದ ಕೂಡಲೆ ಮಂತ್ರಿಪುತ್ರನ ಎದೆಯು ತಲ್ಲಣಿಸಿತು. ತಮಗೆ ಇದು ಅಸಾಧ್ಯವೆಂದು ತೋರಿತು. ರಾಜಪುತ್ರನನ್ನು ಕುರಿತು ಮಂತ್ರಿಸುತನು, ಮಿತ್ರನೆ! ನಾವು ಊರುಬಿಟ್ಟು ಬಹುದಿನಗಳಾದವು, ಜನನೀಜನಕರು ಮರುಗುತ್ತಿರುವರು. ಅವರ ಗತಿಯು ಏನಾಯಿತೋ ಕಾಣೆನು, ಪಟ್ಟಣಕ್ಕೆ ಹಿಂದಿರುಗೆಂದನು. ರಾಜಪುತ್ರನಾದರೋ, ಮಂತ್ರಿಸುತನೆ! ಇದೇಕೆ ಇಂತಹ ಹೇಡಿಮಾತುಗಳನ್ನಾಡುವೆ? ಹೀಗೆ ಆಡಬಹುದೆ? ಊರುಬಿಟ್ಟು ಬಂದನಂತರ ಕಾರಾನುಕೂಲಮಾಡಿಕೊಳ್ಳದೆ ಹಿಂದಿರುಗಬಹುದೆ? ಅನುಕೂಲಪ್ರತಿಕೂಲಗಳನ್ನು ತಿಳಿದುಕೊಳ್ಳೋಣ, ನನ್ನೊಂದಿಗೆ ಬಾರೆಂದು ಹೋಗುತ್ತಿರುವಲ್ಲಿ ಎದುರಿಗೆ ವಿಕದಂಡಮಹಾಮುನಿಯು ಆಶ್ರಮವು ಸಿಕ್ಕಿತು. ಇಬ್ಬರೂಹೋಗಿ ಮುನಿವರ್ಯನ ಪಾದಗಳಿಗೆ ಆನತರಾದರು. ಮುನಿನಾಥನೂಕೂಡ ಅವರನ್ನು ಬಹುವಾಗಿ ಆದರಿಸಿದನು. ವಿಕದಂಡಮುನಿಯು, ರಾಜಪುತ್ರನೆ! ನೀನು ಯಾರು? ನಿನ್ನದೇಶವು ಯಾವ್ರದು? ಜನನೀಜನಕರನ್ನು ಬಿಟ್ಟು ಈಘೋರಾರಣ್ಯಕ್ಕೆ ಬರಲು ಕಾರಣವೇನೆಂದುಕೇಳಿ, ಅವರಿಂದ ಸಕಲ ವರ್ತಮಾನವನ್ನೂ, ರಾಜಪುತ್ರನ ಇಷ್ಟಾರ್ಥವನ್ನೂ ತಿಳಿದವನಾದನು. ಅನಂತರ ಮುನಿಯು ರಾಜಪುತ್ರನೆ! ನಿನ್ನ ಇಷ್ಟಾರ್ಥವು ಗೊತ್ತಾಯಿತು. ಭೈರವೇಣಿಯು ನಿಮಿತ್ತವಾಗಿ ಅನೇಕರು ಬಂದು ಭ್ರಾಂತರಾಗಿ ಹಿಂದಿರುಗಿದರು. ನೀನು ಈ ಅಲ್ಪಸುಖವನ್ನು ಬಯಸಿ, ಶಾಶ್ವತವಾದ ಮುಕ್ತಿಯನ್ನು ಕೊಡುವ ಸಾಕಾರಬ್ರಹ್ಮವಾದ ಜನನೀಜನಕರನ್ನು ಬಿಟ್ಟು, ಯಾವನಮಾದಿಂದ ಮಂತ್ರಿಸುತನನ್ನು ಹಿಂದಿಟ್ಟುಕೊಂಡು ಹೀಗೆ ಬಂದಿರುವಿ ನೀನು. ಕ್ಷತ್ರಿಯಧರ್ಮ ವ್ಯಾಸಮರ್ಯಗಳನ್ನು ಬೋಧಿಸಿ ನಿನ್ನ ದೇಶಕ್ಕೆ ಹಿಂದಿರುಗೆಂದನು. ರಾಜಪುತ್ರನಾದರೋ, ಮುನಿವರನೆ! ನಾನು ಶಪಥಮಾಡಿಕೊಂಡು ಬಂದಿರುವೆನು, ಭಗ್ನಮನಸ್ಕನಾಗಿ ಊರಿಗೆ ಹೋಗಲಿಷ್ಟವಿಲ್ಲ. ಮುನಿನಾಥನೆ! ಪವಿತ್ರನಾದ ನಿನ್ನ ದಯೆಯಿಂದ ನನ್ನಿಷ್ಟ ಸಿದ್ಧಿಯಾಗುವುದು. ನಿನ್ನ ದಯೆಯೊಂದುಂಟಾದರೆ ನನಗೆ ಇದೊಂದುಕಷ್ಟವೆ? ಮಹಾನುಭಾವನಾದ ನಿನ್ನದಯೆಯಿಂದ ನಾನು ಕೃತಾರ್ಥನಾಗಬೇಕು. ನಾನು ಪುನಃ ನಮ್ಮಪಟ್ಟಣಕ್ಕೆ ಹಿಂದಿರುಗಲಾರೆನು, ನಿಮ್ಮ ಪಾದಸೇವೆಯಲ್ಲಿಯೇ ನಿರತನಾಗಿ ಇಲ್ಲಿಯೇ ನಿಲ್ಲುವೆನೆನ್ನಲು, ರಾಜಪುತ್ರನ ನುಡಿಗಳನ್ನು ಕೇಳಿದ ವಿಕದಂಡಮಹಾಮುನಿಯು,

ರಾಜಸುತನೆ! ಇದುವರೆಗೆ ಅನೇಕ ರಾಜಪುತ್ರರು ಬಂದು ವಿಫಲಮನಸ್ಕರಾದರು. ನೀನುಮಾತ್ರ ನನ್ನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಟ್ಟಿರುವಿ. ನಿನ್ನಿಷ್ಟವು ಸಿದ್ಧಿಸುವುದು, ನೀನು ಕಡುಧೀರನು. ರಕ್ಕಸಿಯನ್ನು ಕೊಂದು, ಆ ದಿವ್ಯರತ್ನವನ್ನು ತೆಗೆದುಕೊಂಡು ಬಂದು, ಆ ಕನ್ಯಕಾಮಣಿಯನ್ನು ವರಿಸುವಿ, ಜನನೀಜನಕರಲ್ಲಿಯೇ ಸಾಕಾರಭಾವವಿರುವುದೆಂದು ಮುಂಪೆ ಹೇಳುವಂತೆ ನುಡಿಯುವನು.

ವಿಕದಂಡಮುಹರ್ಷಿಯು ಚಂದ್ರಗುಪ್ತನಿಗೆ ಬೋಧಿಸಿದ ಸಾಕಾರ ಪ್ರಭಾವವು.

ರಾಜನಂದನಾ! ಭಕ್ತಿ ಶ್ರದ್ಧೆಗಳಿಂದ ಕೂಡಿ ದೇವರಹಸ್ಯವನ್ನು ಕೇಳು. ಪ್ರಜ್ಞಾನಂಬ್ರಹ್ಮವೆಂಬ ಶ್ರುತಿಗಳು ಸಾರವಾಗಿ ಚೈತನ್ಯಸ್ವರೂಪನಾದ ಆತ್ಮಾರಾಮಬ್ರಹ್ಮವು ಪಿಪೀಲಿಕಾದಿ ಬ್ರಹ್ಮಪರ್ಯಂತವೂ ಇರುವ ಸಕಲ ಜೀವರಾಶಿಗಳಲ್ಲಿಯೂ ಸೇರಿ, ಸಾಕಾರಬ್ರಹ್ಮಸ್ವರೂಪವಾಗಿರುವುದು ಸತ್ಯವು. ಆದಾಗ್ಯೂ ಜನನೀಜನಕರ ಶುಕ್ಲಶೋಣಿತ ಸಂಯೋಗದಿಂದ ಹುಟ್ಟಿ, ಅವರಿಂದ ಪೋಷಿಸಲ್ಪಟ್ಟ ತರುವಾಯ, ಗುರುಮುಖದಿಂದ ಬ್ರಹ್ಮಸ್ವರೂಪನಿರ್ಣಯವನ್ನು ತಿಳಿಯುವೀಕಾಗಿರುವುದರಿಂದ ತಾಯಿಯೂ, ತಂದೆಯೂ, ಗುರುವೂ ಈ ಮೂವರೂ ಸಹ ಪೂಜ್ಯರಾಗಿರುವರು. ಅರ್ಚನವಂದನಾದಿಗಳೆಲ್ಲಾ ಈ ಮೂವರಿಗೇ ಕೊಡತು ಗುಡಿಗೋಪುರಾದಿಗಳಿಗೆ ಹೋಗಿ ದಾರುಶಿಲಾಪಾಷಾಣಾದಿಗಳಿಗೆ ಮಾಡುವುದು ನಿಷ್ಪ್ರಯೋಜನವು. ದೇವಮಾನವರಲ್ಲಿ ಯಾರೇ ಆದಾಗ್ಯೂ ಅವರವರಿಗೆ ಇಷ್ಟವೈವಾದ ಪರಿಕರಸೇವಾರ್ಥವಾದ ಮಂತ್ರಂಗಳನ್ನೂ, ಅಥವಾ ಇತರ ದೇವತೆಗಳ ಮಂತ್ರಂಗಳನ್ನೂ, ಶ್ರದ್ಧಾಭಕ್ತಿಯುತರಾಗಿ ಗುರುಮುಖದಿಂದ ಗ್ರಹಿಸಿ, ಆ ತರುವಾಯ ಅಂತರ್ಮುಖನಾಗಿ, ಪ್ರಾಣವಾಯುವಿನೊಂದಿಗೆ ಮನಸ್ಸನ್ನು ಸೇರಿಸಿ, ದೃಗ್ಭಾವವನ್ನು ಲಿಂಗಸ್ಥಾನದಲ್ಲಿ ನಿಲ್ಲಿಸಿ, ಚತುರ್ಮುಖನಿಂದ ನಾಭಿಸ್ಥಾನದಲ್ಲಿ ನಿಲ್ಲಿಸಿ, ವಿಷ್ಣುದೇವನಿಂದ ಹೃದಯಸ್ಥಾನದಲ್ಲಿ ನಿಲ್ಲಿಸಿ, ಈಶ್ವರನನ್ನು ಧ್ಯಾನಮಾಡುವುದರಿಂದ ಅವರವರಕರ್ಮಗನುಸಾರವಾಗಿ ಪದವಿಯನ್ನೂ, ಇಷ್ಟಸಿದ್ಧಿಯನ್ನೂ ಪಡೆಯುವರಾದ್ದರಿಂದ ನೀನು ನಾರಾಯಣ ಅಷ್ಟಾಕ್ಷರೀಮಂತ್ರವನ್ನು ನಿಯಮದಿಂದ ಧ್ಯಾನಿಸು. ಮಾಯಾಸ್ವರೂಪನಾದ ಆ ಶ್ರೀಮನ್ನಾರಾಯಣಮೂರ್ತಿಯು ನಿನ್ನಿಷ್ಟವನ್ನು ನೆರವೇರಿಸುವನು. ಹೀಗೆಂದು ವಿಕದಂಡಮುನಿಯು ಆ ಚಂದ್ರಗುಪ್ತಮಹಾರಾಯನಿಗೆ "ಓನ್ನಮೋ ನಾರಾಯೆಣಾಯ" ಎಂಬ ಅಷ್ಟಾಕ್ಷರೀಮಂತ್ರವನ್ನು ಉಪದೇಶಮಾಡಿದನೆಂದು ಶ್ರೀಕೃಷ್ಣನು ಅರ್ಜುನನಿಗೆ ವಿಸ್ತರಿಸಿದನು ಅದಕ್ಕೆ ಅರ್ಜುನನಾದರೋ, ಮಹಾನುಭಾವನೆ!

ಸಾಕಾರಧ್ಯಾನದಿಂದ ಮಾನವರಿಗೆ ಪದವಿಯೂ ಇಷ್ಟಸಿದ್ಧಿಯೂ ಆಗುವು ದಾದರೆ ನಿರಾಕಾರಧ್ಯಾನದಿಂದೇನುಪ್ರಯೋಜನವೆನ್ನಲು, ಶ್ರೀಕೃಷ್ಣ ಸ್ವಾಮಿಯು ಇಂತೆಂದನು. ಅರ್ಜುನಾ! ಪದವಿ ಎಂದರೆ ಶಾಶ್ವತಸುಖಾ ನಂದವಲ್ಲ. ಅವರವರ ಲೋಕದಲ್ಲಿರುವ ವ್ಯತ್ಯಸ್ತವಾದ ಪದವಿಯು. ಇ ಷ್ಟಸಿದ್ಧಿಯೆಂದರೆ ಮೋಕ್ಷಾಪೇಕ್ಷೆಯಲ್ಲ. ಶರೀರಸುಖಹೇತುವಾದವುಗಳು. ಮೋಕ್ಷಕ್ಕೂ ವಿದೇಹಕೈವಲ್ಯಕ್ಕೂ ಎಂದಿಗೂ ಭೇದರಾಹಿತ್ಯವುಂಟಾಗ ಲಾರದು. ಭಕ್ತಿ, ವೈರಾಗ್ಯ, ಯೋಗ, ಜ್ಞಾನಂಗಳನ್ನು ಸಹೇತುಕವಾ ಗಿ ಮಾಡಿ, ಗುಣನಿರ್ಗುಣದೈವವನ್ನು ದೇವಮಾನವರು ಭಜಿಸಿ, ಅವರವ ರಿಗೆ ತಕ್ಕ ಪದವಿಯನ್ನು ಹೊಂದುವುದು ಸತ್ಯನೇ ಹೊರತು, ನಿರ್ಹೇತು ಕಜಾಯಮಾನ ಕಟಾಕ್ಷವೆಂದು ಹೇಳುವುದು ತಪ್ಪು. ಆದಾಗ್ಯೂ ನಿರ್ಹೇ ತುಕವನ್ನು ಸ್ಥಾಪಿಸಿದಕಡೆ ಗುರುಶಿಷ್ಯರೆಂದೂ, ಹಿರಿಯರುಕಿರಿಯರೆಂದೂ, ಮೇಲುಕೀಳು ಎಂದೂ, ತಿಳಿಯದಿರುವುದನ್ನು ನೋಡಿ ಮಾನವರು ತಮ್ಮ ದುಷ್ಕಾರ್ಯಗಳನ್ನು ಬಿಟ್ಟು ಸನ್ಮಾರ್ಗಪ್ರವರ್ತಕರಾಗುವುದು ನಿಜವು. ನಿ ರ್ಹೇತುಕವೆಂದರೆ ತನಗೆ ಇತರರು ತೋರದೆ ತ್ರಿಲೋಕಗಳಲ್ಲಿಯೂ ತಾ ನೇತಾನಾಗಿ ಪರಿಣಮಿಸಿ, ಪರಿಪೂರ್ಣಭಾವದಲ್ಲಿ ತುಂಬಿರುವುದು. ಹೀ ಗೆಂದು ಹೇಳಿದ ಪುರುಷೋತ್ತಮನ ಮಾತುಗಳನ್ನು ಕೇಳಿದ ಆ ಇಂದ್ರನಂ ದನನು ಸಂತೋಷಪಟ್ಟು, ಶ್ರೀಕೃಷ್ಣನ ಪಾದಗಳಿಗೆ ಅಡ್ಡಬಿದ್ದು, ಕೈಗ ಳನ್ನು ಜೋಡಿಸಿಕೊಂಡು, ಮಹಾನುಭಾವನೆ! ಆ ಚಂದ್ರಗುಪ್ತಮಹಾ ರಾಜನ ಮುಂದಿನ ಕಥಾಸಂದರ್ಭವೇನೆಂದು ಕೇಳಲು, ಶ್ರೀಕೃಷ್ಣಮೂ ರ್ತಿಯು ಇಂತೆಂದನು.

ಅರ್ಜುನಾ! ಚಂದ್ರಗುಪ್ತನಾದರೋ, ಗುರುವಾದ ವಿಕದಂಡಮಹ ರ್ಷಿಗೆ ವಿಧವಿಧವಾದ ಶುಶ್ರೂಷೆಗಳನ್ನು ಮಾಡುತ್ತಾ, ವೈರಾಗ್ಯಾತಿಶಯ ದಿಂದಒಂದುಸಂವತ್ಸರದವರೆಗೂ, ನಾರಾಯಣಅಷ್ಟಾಕ್ಷರೀಮಂತ್ರವನ್ನು ಮನನಮಾಡುತ್ತಿರಲು ಆ ಮಹಾನುಭಾವನು ಪ್ರಸನ್ನನಾಗಿ, ಅದೃಶ್ಯಕರ ಣಿ ಯೆಂಬ ಮಹಾಮಂತ್ರವನ್ನು ಉಪದೇಶಮಾಡಿ ಅಂತರ್ಧಾನನಾದನು. ಆ ರಾಜಪುತ್ರನು ಮುನೀಂದ್ರನಪಾದಗಳಿಗೆ ನಮಸ್ಕಾರಮಾಡಿ, ಶ್ರೀಮ ನ್ನಾರಾಯಣನು ಅನುಗ್ರಹಿಸಿದ ದಿವ್ಯಮಂತ್ರವನ್ನು ಹೇಳಲು, ಮಹರ್ಷಿ ಯು, ವತ್ಸಾ! ನೀನು ಯಾವಾಗಲೂ ಈ ಮಹಾಮಂತ್ರವನ್ನು ಜಪಿಸು ತ್ತಿರು. ನೀನು ಯಾರಿಗೂ ಕಾಣಿಸುವುದಿಲ್ಲ. ಘೋರರಕ್ಕಸಿಯು ತನ್ನ ರೂಪವನ್ನು ಬದಲಾಯಿಸುವಳು. ನಿರ್ಭಯದಿಂದ ಹೊರಡೆಂದು ಅನು ಜ್ಞೆಯನ್ನಿತ್ತನು. ಆ ಧೀರಾಗ್ರಣಿಯಾದರೋ, ಆ ಪರ್ವತಶಿಖರವನ್ನೇರಿ

ಒಂದಾನೊಂದು ಪ್ರದೇಶದಲ್ಲಿ ಕುಳಿತು, ಆಹಾ! ಈ ಪರ್ವತಶಿಖರದಲ್ಲಿರು ವ ಮಾಣಿಕ್ಯವನ್ನು ತರುವುದು ದೇವೇಂದ್ರಾದಿಗಳಿಗೂಕೂಡ ಸಾಧ್ಯವಲ್ಲ ವಲ್ಲ! ಆ ಘೋರರಕ್ಕಸಿಯು ಇಂದ್ರಾದಿಗಳಿಗೆ ವಶವಾಗದವಳು, ನನಗೆ ವ ಶವಾಗುವುದುಂಟೆ! ಈರಕ್ಕಸಿಯನ್ನು ನಾನು ಕೊಲ್ಲುವುದು ಹೇಗೆಂದು ನಾನಾಪ್ರಕಾರವಾಗಿ ಯೋಚಿಸುತ್ತಿರುವಷ್ಟರೊಳಗೆ ಸಾಯಂಕಾಲವಾಯಿ ತು. ಆಗ ಆ ರಕ್ಕಸಿಯು ಗುಹೆಯಿಂದ ಹೊರಕ್ಕಬಂದು ಆರಾಜಪುತ್ರನ ನ್ನು ಕಾಣದೆ ಅವನ ಬಳಿಯಲ್ಲಿಯೇ ಆದಿವ್ಯರತ್ನವನ್ನಿಟ್ಟು, ಘೋರವಾ ದ ಆಕಾರವನ್ನು ಹೊಂದಿ, ದಿಕ್ಕುಗಳು ನಡನಡುಗುವಂತೆ ಜೂಬ್ಬಿಯಿಡು ತ್ತಾ, ಆದಿವ್ಯರತ್ನದ ಜಳಕಿನ ಸಹಾಯದಿಂದ ನಂಚಾರಾರ್ಥವಾಗಿ ಹೊ ರಟಳು. ಆ ಚಂದ್ರಗುಪ್ತನು ಆರಕ್ಕಸಿಯ ಆಕಾರವನ್ನು ನೋಡಿ ಗಾಬ ರಬಿದ್ದನು. ಬಳಿಕ ಸ್ವಲ್ಪಹೊತ್ತಿಗೆ ಚೇತರಿಸಿಕೊಂಡು, ತನಗೆ ದೈವಸ ಹಾಯ ಉಂಟಾಗುವುದೆಂದು ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡನು. ಅನಂತರ ಅತ್ಯುತ್ತಾಹವುಳ್ಳವನಾಗಿ ತನ್ನಲ್ಲಿದ್ದ ವಸ್ತ್ರವನ್ನು ಹತ್ತುಹನ್ನೆ ರಡು ವಡಿಕಗಳಾಗಿ ಮಡಿಸಿ, ಆ ರತ್ನದಮೇಲೆ ಮುಚ್ಚಿ ಬಿಟ್ಟನು. ಸುತ್ತ ಲೂ ಕತ್ತಲೆಯು ಕವಿದುಕೊಂಡಿತು ರಕ್ಕಸಿಗೆ ಮುಂದುವರಿಯಲು ಕಾ ಣಿಸದೇಹೋಯಿತು, ತನ್ನ ರತ್ನವನ್ನು ಯಾರೋ ಅಪಹರಿಸಿದರೆಂಬ ಸಂ ಗತಿಯನ್ನು ತಿಳಿದು, ದಿಕ್ಕುಗಳೆಲ್ಲಾ ಪ್ರತಿಧ್ವನಿಮಾಡುವಂತೆ ಅರಚುತ್ತಾ ಹಿಂದಿರುಗಿದಳು. ಚಂದ್ರಗುಪ್ತನಾದರೊ, ಕಡುಧೈರ್ಯವನ್ನು ತಂದುಕೊಂ ಡು, ತನ್ನ ಬಿಲ್ಲಿನ ಹೆದೆಯನ್ನೆಳೆದು, ಬಾಣವನ್ನು ತಗಲಿಸಿ, ಮೂರುಬಾಣ ಗಳನ್ನು ಆರಕ್ಕಸಿಯ ಎದೆಗೆ ಚುಚ್ಚಿದನು. ಆರಕ್ಕಸಿಯು, ಆಹಾ! ಇ ದು ದೇವಗಂಧರ್ವರ ಕಾರ್ಯವಿರಬಹುದೆಂದು ಚಿಂತಿಸಿ, ಚೊಚ್ಚೆಯಿಡುತ್ತಾ ಮೇಲಕ್ಕೆ ಎಗರಿ, ಸುತ್ತಲೂ ನೋಡಿ, ಯಾರನ್ನೂ ಕಾಣದೆ, ಕೆಳಗಿಳಿದು ಬಲದಕಡೆಗೆ ಬರುತ್ತಾಯಿರಲು ರಾಜಪುತ್ರನು ಆಗ್ನೇಯಾಸ್ತ್ರದಿಂದ ಅವ ಳನ್ನು ಹೊಡೆದರೂಕೂಡ ಅದನ್ನೂ ಲಕ್ಷ್ಯಮಾಡದೆ ಮುಂದರಿದು ಬರುತ್ತಿ ದ್ದಳು. ಚಂದ್ರಗುಪ್ತನು ಅವಳನ್ನು ವಾರಣಾಸ್ತ್ರದಿಂದ ಅಡ್ಡಗಿಸಿದನು. ರಾಕ್ಷಸಿಯು ಅದನ್ನೂ ದಾಟಿ ಮುಂದರಿಯುತ್ತಿದ್ದಳು. ಚಂದ್ರಗುಪ್ತ ನಾದರೋ ತನ್ನ ಅಸ್ತ್ರಗಳೆಲ್ಲಾ ವ್ಯರ್ಥವಾಗುತ್ತಿರುವುದನ್ನು ನೋಡಿ, ತ ನ್ನ ಮನಸ್ಸಲ್ಲಿ ಮಹರ್ಷಿಯನ್ನೂ, ಶ್ರೀಮನ್ನಾರಾಯಣನನ್ನೂ ಧ್ಯಾನ ಮಾಡುತ್ತಾ, ಜಿಗಿಕುಣಿಯುತ್ತಿರುವುದನ್ನು ನೋಡಿ, ಮುಂದೆ ಆಪತ್ತಾಯ ವಾದೀತೆಂದು ಭಾವಿಸಿ, ಆರಕ್ಕಸಿಯಮೇಲೆ ನಾರಾಯಣಾಸ್ತ್ರವನ್ನು ಬಿ ಟ್ಟನು. ಆ ಬಾಣವು ಘೋರಾಕಾರದಿಂದ ಆ ರಕ್ಕಸಿಯ ಎದೆಯಲ್ಲಿ ನಾ ಟಿಕೊಂಡು, ಹಿಂದಕ್ಕೆ ಒದೆಯುತ್ತಿರಲು ಘೋರರಕ್ಕಸಿಯು ರಕ್ತವನ್ನು

ಕಾರುತ್ತಾ, ಮಿಲಮಿಲನೆ ಸ್ವಲ್ಪಕೊತ್ತು ಒದ್ದಾಡಿ ಪ್ರಾಣವನ್ನು ಬಿಟ್ಟ ತರುವಾಯು, ಮಾನವಸ್ತ್ರೀರೂಪವನ್ನು ಧರಿಸಿ, ಆರಾಜಪುತ್ರನಬಳಿಗೆ ಬರಲು, ಚಂದ್ರಗುಪ್ತನಿಗೆ ಪರಮಾಶ್ಚರ್ಯವಾಯಿತು. ಬಳಿಕ ರಾಜಪುತ್ರನು ಆಕೆಗೆ ನಮಸ್ಕಾರಮಾಡಿ, ತಾಯೆ! ನೀನು ಯಾರು? ರಾಕ್ಷಸಿಯೊಗಿ ಇಲ್ಲಿರಲು ಕಾರಣವೇನು? ಎನ್ನಲು, ಆಮಾನಿನಿಯು, ರಾಜಪುತ್ರನೆ! ನಾನು ಎಕದಂಡಮಹರ್ಷಿಯ ಪತ್ನಿಯು, ನಾನು ಒಂದಾನೊಂದುದಿನ ಆಮುನಿಯ ಮನ ಮಾತಿಗೆ ಪ್ರತ್ಯುತ್ತರವನ್ನು ಕೊಟ್ಟೆನು, ಋಷಿಯು ಅದಕ್ಕೆ ಕುಪಿತನಾಗಿ ನನಗೆ ಈ ಶಾಪವನ್ನು ಕೊಟ್ಟನು. ಅದ್ದರಿಂದ ನಾನು ಬಹುವಾಗಿ ದುಃಖಿಸಿ ಕೇಳಿಕೊಂಡಮೇಲೆ ಆಮಹಾತ್ಮನು ನನ್ನ ಪ್ರಾರ್ಥನೆಯನ್ನು ಆಲಿಸಿ, ಜಾಗ್ರತೆಯಾಗಿಯೇ ಶಾಪನಿವೋಚನೆಯಾಗುವುದೆಂದು ವರವನ್ನಿತ್ತನು. ಕೂಡಲೆ ನಾನು ಘೋರರಕ್ಕಸಿಯ ರೂಪವನ್ನು ಪಡೆದು, ನಿರ್ಭಯದಿಂದ ತ್ರಿಲೋಕಗಳಲ್ಲಿಯೂ ಸಂಚರಿಸುತ್ತಾ, ನಾಗಲೋಕದಿಂದ ಈಮಾಣಿಕ್ಯವನ್ನೂ ನಾಗಕನ್ನಿಕೆಯನ್ನೂ ತಂದಿರುವೆನು. ದೇವಲೋಕದಿಂದ ದಿವ್ಯರತ್ನವನ್ನೂ, ದೇವಕನ್ನಿಕೆಯನ್ನೂ ತಂದಿರುವೆನು. ಇಗೋ! ಇಲ್ಲಿರುವ ಬಿಲದಲ್ಲಿ ನೋಡೆಂದು ಚಂದ್ರಗುಪ್ತನಿಗೆ ತೋರಿಸಿ, ರಾಜನಂದನಾ! ನೀನು ದಿವ್ಯವಾದ ಈ ರತ್ನಗಳನ್ನು ತೆಗೆದುಕೊಂಡು, ದೇವನಾಗಕನ್ನಿಕೆಯರನ್ನು ಪಾಣಿಗ್ರಹಣಮಾಡಿಕೊ ಎಂದು ಹೇಳಿ, ಆವರೀರ್ವರನ್ನೂ ಕುರಿತು, ನೀವಿಬ್ಬರೂ ಈಪುಣ್ಯಪುರುಷನನ್ನು ವರಿಸಿರೆಂದು ನುಡಿದಳು. ಚಂದ್ರಗುಪ್ತನೂಕೂಡ ಬಹಳ ಆಶ್ಚರ್ಯಾನ್ವಿತನಾಗಿ ಮುನಿಪತ್ನಿಯನ್ನು ಬಹುವಾಗಿ ಕೇರ್ತಿಸಿ, ಆ ದೇವನಾಗಕನ್ನಿಕೆಯರಿಗೆ ತನ್ನ ವರ್ತಮಾನವನ್ನೆಲ್ಲಾ ತಿಳಿಸಿದರೂಕೂಡ ಅವರಿಗೆ ಮನಸ್ಸಿನ ಸಂಶಯವು ಪರಿಹಾರವಾಗದಿರಲು ಎಲ್ಲರೂ ಬಿಲದಿಂದ ಹೊರಗೆ ಬಂದು ಘೋರರಕ್ಕಸಿಯ ಕಳೇಬರವನ್ನು ನೋಡಿದರು. ಆಗ ಆದೇವನಾಗಕನ್ನಿಕೆಯರಿಗೆ ದುಃಖಾಶ್ಚರ್ಯವುಂಟಾಗಿ, ಮುನಿಪತ್ನಿಯೆ ಇಷ್ಟಾನುಸಾರ ಆರಾಜಪುತ್ರನನ್ನು ಗಾಂದರ್ವವಿವಾಹವಿಂದ ವರಿಸಿ ರಾಜಪುತ್ರನೊಂದಿಗೆ ಅಲ್ಲಿಯೇ ಸುಖವಾಗಿದ್ದರು. ಆದಿನರಾತ್ರಿ ಅಪರ್ವತದ ಶಿಖರದಲ್ಲಿ ಎಂದಿನಂತೆ ಆದಿವ್ಯರತ್ನವು ಪ್ರಕಾಶಿಸದಿರುವುದನ್ನು ದೇವೇಂದ್ರಾದಿಗಳು ಕಂಡು ಆಶ್ಚರ್ಯಪಟ್ಟು, ಮಹಾತ್ಮನಾವನೋ ಬಂದು ಮುನಿಪತ್ನಿಯ ಶಾಪವಿಮೋಚನೆಯನ್ನು ಮಾಡಿರುವನೆಂದು ಯೋಚಿಸಿ, ಉತ್ಸಾಹದಿಂದ ಚಿರಗಾದಕೂಡಲೇ ದೇವಗಣಸಹಿತನಾಗಿ ಅಪರ್ವತಶಿಖರಕ್ಕೆ ಬಂದು, ಆ ಬಿಲವನ್ನು ಪ್ರವೇಶಮಾಡಿದನು. ಅಲ್ಲಿದ್ದ ರಾಜಪುತ್ರನೂ, ನಾಗಕನ್ನೆಯರೂ, ದೇವಕನ್ನೆಯರೂ ಸಹ ಆದೇವೇಂದ್ರನಿಗೆ ನಮಸ್ಕಾರವಂಮಾಡಿ, ನಡೆದ ವರ್ತಮಾನವನ್ನೆಲ್ಲಾ ಹೇಳಿ ಮುನಿಪತ್ನಿಯನ್ನು ತೋರಿಸಿದರು. ದೇವೇಂದ್ರನೂ

ರಾಜಪುತ್ರನನ್ನೂ, ಮುನಿಪತ್ನಿಯನ್ನೂ ಸಾಸಾವಿಧನಾಗಿ ಹೊಗಳಿ ವಿಕ
ದಂಡವಮುನಿಯ ಆಶ್ರಮಕ್ಕೆ ಹೋಗಲು ಆಜ್ಞೆಯನ್ನಿತ್ತು, ತನ್ನ ವಿಮಾನ
ವನ್ನು ರಾಜಪುತ್ರನಿಗೆ ಕೊಟ್ಟು, ತಾನು ದಿವ್ಯಲೋಕಕ್ಕೆ ಹೊರಟುಹೋ
ದನು. ಆಬಳಿಕ ರಾಜಪುತ್ರನು ಅಲ್ಲಿದ್ದ ದಿವ್ಯರತ್ನಗಳನ್ನೂ, ವಿಮಾನಗ
ಳನ್ನೂ, ವಿಧವಿಧವಾದ ವಸ್ತುಗಳನ್ನೂ ವಿಮಾನದಮೇಲಿಟ್ಟುಕೊಂಡು,
ಭಾರ್ಯೆಯರಾದ ದೇವನಾಗಕನ್ನಿಕೆಯರನ್ನೂ, ಮುನಿಪತ್ನಿಯನ್ನೂ ವಿಮಾ
ನದಲ್ಲಿ ಕುಳ್ಳಿರಿಸಿಕೊಂಡು, ತಾನೂ ಕುಳಿತವನಾಗಿ ಅಮರಪತಿಯನ್ನು ಸ್ಮ
ರಿಸುತಾ ಋಷಿಯ ಆಶ್ರಮಕ್ಕೆ ಬಂದು, ನಡೆದವರ್ತಮಾನವನ್ನೆಲ್ಲಾ ಮು
ನಿಸನಿಗೆ ವಿಜ್ಞಾಪಿಸಿಕೊಂಡನು. ತಾನು ತಂದಿದ್ದ ರತ್ನವನ್ನೂ ತೋರಿ
ಸಿದನು. ಮುನಿಪತ್ನಿಯಾದರೋ, ಪತಿಯಮಾಗಗಳಿಗೆ ಅಡ್ಡಬಿದ್ದು ದುಃಖಿ
ಸುತ್ತಿರಲು, ಆ ಮುನಿಯು ಆಕೆಯನ್ನು ಸಮಾಧಾನಪಡಿಸಿ, ಪತಿಯಾಜ್ಞೆ
ಯು ಬಹುಕಠಿನವಾದದ್ದು, ಅದನ್ನು ಕೂಗಲೆ ನಡಿಸಬೇಕಾದ್ದು ಅಲ್ಲವೆ
ಎಂದು ಹೇಳಿ, ರಾಜಪುತ್ರನನ್ನು ಕುರಿತು- ರಾಜನಂದನಾ! ಈಕೆಯು
ನನ್ನ ಹೆಂಡತಿಯೆಂಬು ಮೊದಲೇ ನಿನಗೆ ಹೇಳಿಸಿ ಇದ್ದದ್ದರಿಂದ ನಿನಗೆ ಇಷ್ಟು
ಧೈರ್ಯ ಸಾಹಸಗಳು ಬಾಗಿ ಜುಮ್ಮೇಲನಾಪೆ. ಇಲ್ಲದಿದ್ದರೆ ನಿನಗೆ ಜಯ
ವಾಗುತ್ತಿರಲಿಲ್ಲವೆಂದು ನುಡಿದು, ಆ ದೇವನಾಗಕನ್ನಿಕೆಯರಿಗೆ ಬುದ್ಧಿವಾದ
ಗಳನ್ನು ಹೇಳಿ, ಪಟ್ಟಣಕ್ಕೆ ಹೋಗಲು ಆಜ್ಞೆಯನ್ನಿತ್ತನು. ಚಂದ್ರಸು
ಪ್ತನು ಭಾರ್ಯೆಯರಿಬ್ಬರನ್ನೂ ಕುದುರೆಯಮೇಲೆ ಕುಳ್ಳಿರಿಸಿಕೊಂಡು,
ದಿವ್ಯರತ್ನಗಳನ್ನು ಕೈಕೊಂಡು, ಮುನಿಪಂಪತಿಗಳಿಗೆ ನಮಸ್ಕಾರಮಾಡಿ
ಅನುಜ್ಞೆಯಂಪಡೆದು, ಮಂತ್ರಿಪುತ್ರನಾದ ಪ್ರದೀಪನೂ ತಾನೂ ನಡೆದು
ಕೊಂಡು ಕೊಗುತ್ತಾ ದಾರಿಯಲ್ಲಿ ತಾನು ಆರಕ್ಷಿಸಿದ್ದನ್ನು ಕೊಂದು
ದಿವ್ಯರತ್ನವನ್ನು ತಂದ ಸಮಾಚಾರವನ್ನೂ, ದೇವನಾಗಕನ್ನಿಕೆಯರ ವರ್ತ
ಮಾನವನ್ನೂ ಮಂತ್ರಿಸುತನಿಗೆ ತಿಳಿಸಲು, ಆ ಪ್ರದೀಪನು ರಾಜಪುತ್ರನ
ಧೈರ್ಯಸಾಹಸಗಳನ್ನು ಬಹಳವಾಗಿ ಕೊಂಡಾಡಿ, ಆನಂದಭರಿತನಾದನು.
ಬಳಿಕ ಇಬ್ಬರೂ ಮಾರ್ಗಾಯಾಸವೇ ಕಾರಣದೆ ಬಹು ಸಂತೋಷದಿಂದ
ಪ್ರಯಾಣಮಾಡುತ್ತಾ ಕೊನೆಗೆ ನೇಪಾಳದೇಶವನ್ನು ಸೇರಿ ತಾವು ಮೊದ
ಲು ಇಳಿದುಕೊಂಡಿದ್ದ ಅವನೂಲಜ್ಜಿಯ ಮನೆಯಲ್ಲಿಯೇ ಇಳಿದು ಮಜ್ಜನ
ಭೋಜನಾದಿಗಳನ್ನು ತೀರಿಸಿಕೊಂಡು, ಆ ಪಟ್ಟಣದ ಸೌಂದರ್ಯವನ್ನೆಲ್ಲಾ
ತನ್ನ ಭಾರ್ಯೆಯರಿಬ್ಬರಿಗೂ ತೋರಿಸಿ ತಾನಂತೋಷದಿಂದಿದ್ದನು. ಸ್ವಲ್ಪ
ಹೊತ್ತಾದ ಮೇಲೆ ರಾಜಪುತ್ರನು ಆ ದೇಶದ ದೊರೆಯಮಗಳ ವರ್ತಮಾ
ನವನ್ನೆಲ್ಲಾ ಹೇಳಿ, ನಿಮ್ಮ ಅಭಿಪ್ರಾಯವೇನೆಂದು ಕೇಳಲು, ರಾಜಪುತ್ರ
ನ ಮಾತಿಗೆ ಅವರಿಬ್ಬರೂ ಪಕ್ಕನೆ ನಕ್ಕರು. ನಾಥನೆ! ನಿನ್ನ ಅಭಿಪ್ರಾ

ಯಕ್ಕೆ ನಾವು ಬದಲುಹೇಳಲು ಶಕ್ತರೆ! ಆ ರಾಜಸುತೆಯನ್ನು ಮೊದಲು ನೋಡಿ, ಆಕೆಯ ಸೌಂದಯವನ್ನು ನೀನು ಒಪ್ಪಿದಬಳಿಕ ನಿನ್ನಿಷ್ಟಾನು ಸಾರ ನಡೆಯಬಹುದೆಂದರು. ರಾಜಪುತ್ರನು ಇವರ ಮಾತುಗಳನ್ನು ಕೇಳಿ ಹಾಗೆಯೇ ಆಗಲೆಂದು ಒಪ್ಪಿ, ಶೃಂಗಾರಭೂಷಿತನಾಗಿ, ಹಗಲು ಮೂರ ನೆಯ ಝಾವದಲ್ಲಿ ಅದೃಶ್ಯಕರಣಿಯೆಂಬ ಮಹಾಮಂತ್ರವನ್ನು ಜಪಿಸುತ್ತಾ ಯಾರಿಗೂ ಕಾಣದಂತೆ ನೇಪಾಳದೇಶದ ರಾಜಭವನದ ಏಳು ಪ್ರಾಕಾರಗಳ ನ್ನೂದಾಟಿ ಹೊರಟು ಅಲ್ಲಿ ಅಂತಃಪುರದಲ್ಲಿ ದಿವ್ಯವಸ್ತ್ರಾಭರಣಗಳಿಂದಲಂ ಕರಿಸಿಕೊಳ್ಳುತ್ತಿದ್ದ ಆ ಭ್ರಮರವೇಣಿಯನ್ನು ಕಂಡನು ಆ ಇಂದುಮು ಖಿಯನ್ನೂ ಆಕೆಯ ಸೌಂದರ್ಯವನ್ನೂ ನೋಡಿದಕೂಡಲೇ ರಾಜಪುತ್ರ ನಿಗೆ ಮನ್ಮಥವಿಕಾರವಾಯಿತು, ಸಾವಿರಾರುಜನ ಕಾವಲುಗಾರರಾದ ಸಖಿ ಯರೊಂದಿಗೆ ಇರುವ ಆ ಭ್ರಮರವೇಣಿಗೆ ಅದೃಶ್ಯಕರಿಣಿ ಎಂಬ ಮಹಾ ಮಂತ್ರ ಬಲದಿಂದ ತಾನು ಕಾಣಿಸದೇನೆ, ಆ ಸುಂದರಿಯನ್ನು ತಬ್ಬಿ ಕೊಂಡು ಮುತ್ತಿಟ್ಟನು. ಆ ಸುಕುಮಾರಿಯು ಮೈರೋಮಾಂಚವಾಯಿತು. ಬಳಿಕ ಭ್ರಮರವೇಣಿಯು ಅಲ್ಲಿದ್ದ ಸಖಿಯರನ್ನು ನೋಡಿ, ಈ ಸಂಗತಿ ಯನ್ನು ಹೇಳಿದಳು ಸಖಿಯರೆಲ್ಲಾ ಭ್ರಮರವೇಣಿಯೆಮಾತಿಗೆ ಪಕ್ಕನೆ ನಕ್ಕುಬಿಟ್ಟರು, ರಾಜಪುತ್ರಿಯೆ! ನಿಮ್ಮ ತಂದೆಯಾದರೊ ಏಳು ಪ್ರಾಕಾರ ಗಳನ್ನು ಕಳೆದು ನರಮಾತ್ರ ಸಂಚಾರಕ್ಕವಕಾಶವಿಲ್ಲದಿರುವಂತೆ ಇಲ್ಲಿ ನಿನ್ನ ಅಂತಃಪುರವನ್ನು ನಿರ್ಮಿಸಿ, ಅನೇಕರನ್ನು ಕಾವಲಿಟ್ಟು ಇರುವನು, ಹೀ ಗಿರುವಲ್ಲಿ ಇತರರು ಬರುವುದೆಂದರೇನು! ನಿನ್ನನ್ನು ಆಲಿಂಗಿಸಿ ಮುತ್ತಿಟ್ಟು ಕೊಳ್ಳುವುದೆಂದರೇನು! ನಿನಗೆ ಯಾವನವು ಪ್ರಾದುರ್ಭವಿಸಿದಂತಾಗಿ ಹೀಗೆ ಆಗಿರಬಹುದೇಹೊರತು ಮತ್ತೆಯೇನೂ ಇಲ್ಲವೆಂದರು. ರಾಜಪು ತ್ರಿಯು ಸಖಿಯರಮಾತು ನಿಜವಾಗಿರಬಹುದೆಂದು ಯೋಚಿಸಿ, ಅಲಂಕಾ ರವು ಪೂರೈಸಿದ ಬಳಿಕ ನಿನೋದಕಾಲಕ್ಕೆ ಹೋಗಿ ಸಖಿಯರೊಂದಿಗೆ ಹಾ ಡುಗಳನ್ನು ಹಾಡುತ್ತಾ ಸಂತೋಷದಿಂದಿರುವಲ್ಲಿ, ಆ ಚಂದ್ರಗುಪ್ತನು ಆ ಇಂದುಮುಖಿಯ ಹಿಂದೆಯೇ ಹೋಗಿ ಅಧರಪಾನವನ್ನು ಮಾಡಿದನು, ಆಗ ಆ ಸುಂದರಿಯೊದ ರಾಜಪುತ್ರಿಯು ಒಹೋ ಸಖಿಯರೆ! ಇದೇನಾಶ್ಚರ್ಯ! ಯಾರೋ ಒಬ್ಬಪುರುಷನು ಬಂದು ನನ್ನ ಅಧರಪಾನವನ್ನು ಮಾಡಿದನಲ್ಲಾ! ಎಂದು ಆ ಸಖಿಯರೊಂದಿಗೆ ನುಡಿಯಲು, ಅವರೆಲ್ಲಾ ಮನ್ಮಥನದೇ ಇದೆ ಲ್ಲಾ ಆಶ್ಚರ್ಯವಾಗಿರಬೇಕೆಂದು ಆ ಲತಾಂಗಿಗೆ ಹೇಳಿ, ಅವಳನ್ನು ಸಮಾ ಧಾನಮಾಡುತ್ತಾ ಇದ್ದು, ಆಬಳಿಕ ಸ್ನಾನಮಂದಿರಕ್ಕೆ ರಾಜಪುತ್ರಿಯನ್ನು ಕರೆದುಕೊಂಡು ಹೋಗಿ, ಪನ್ನೀರಿನಿಂದ ಸ್ನಾನಮಾಡಿಸಿದರು. ಅನಂತ ರ ಇದು ಪಿಶಾಚದ ಕಾಟವಾಗಿರಬೇಕೆಂದು ಯೋಚಿಸಿ, ಅನೇಕಮಂತ್ರ

ತಂತ್ರಂಗಳನ್ನು ಮಾಡಿಸುತ್ತಾ, ವೀಭೂತಿಯನ್ನಿಟ್ಟು ದೃಷ್ಟಿಯನ್ನು ನಿವಾಳಿಸಿ, ಕರ್ಪೂರವನ್ನು ಹಚ್ಚಿ, ರಾಜಪುತ್ರಿಯೇ! ನೀನು ಭಯಪಡ ಬೇಕಾದ್ದಿಲ್ಲವು. ಸ್ವಸ್ಥವಾಗಿ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಿಂದು ನುಡಿಯುತಾ ಆಕೆಯನ್ನು ಶಯನಗೃಹಕ್ಕೆ ಕರೆದುಕೊಂಡುಬಂದರು. ಅಲ್ಲಿ ವಿಧವಿಧವಾದ ಹಣ್ಣುಗಳನ್ನೂ, ಭಕ್ಷ್ಯಗಳನ್ನೂ, ಕುಡಿಯುವುದಕ್ಕೆ ಹಾಲನ್ನೂ ಕೊಟ್ಟರು ರುಚಿಕರವಾದ ಅಡಕೆಯನ್ನೂ ಚಿಗುರೆಲೆಯನ್ನೂ ಕೊಟ್ಟರು. ಆ ರಾಜಪುತ್ರನಾದರೋ ಯಾರಿಗೂ ಕಾಣದಂತೆ ಆ ಸುಂದರಿಯುಕೈಯ್ಯಲ್ಲಿದ್ದ ಭಕ್ಷ್ಯಗಳನ್ನು ಕಸುಕೊಳ್ಳುತ್ತಾ ಇರಲು, ಆ ಲತಾಂಗಿಯು ಸಖಿಯರೇ! ಇದೇನು! ನೀವು ನನಿಗೆ ಕೊಟ್ಟ ಭಕ್ಷ್ಯಗಳನ್ನು ಯಾರೋ ನನ್ನ ಕೈಯಿಂದ ಕಸುಕೊಳ್ಳುತ್ತಿರುವರಲ್ಲಾ! ನೀವು ಕೊಡು ಹಾಲನ್ನೂ ತೆಗೆದುಕೊಂಡು ಪುನಃ ಹಾಲಿನವಾತ್ರೆಯನ್ನೂ ನನ್ನ ಕೈಯಲ್ಲಿಯೇ ಕೊಟ್ಟಿರುವನು, ತಾಂಬೂಲದ ಮಡಿತೆಗಳನ್ನೂ ತೆಗೆದುಕೊಂಡನು. ಆಹಾ! ಇದು ಏನೋ! ನನಗೆ ಏನೂ ತೋಚದಲಾಲ್ಲಾ! ಎನ್ನಲು, ಆ ಸಖಿಯರು ತಾಯಿ! ನೀನು ಗಾಬರಿಬಿದ್ದಿರಬಹುದು, ಸ್ವಲ್ಪಹೊತ್ತು ನಿದ್ರೆಮಾಡಿದರೆ ನಿನಗೆ ಈ ಭ್ರಾಂತಿಯು ಪರಿಹಾರವಾಗಿ, ನಿನ್ನ ಮನಸ್ಸು ನವಾಧಾನವಾಗುವುದು. ನೀನು ಸುಖವಾಗಿ ಮಲಗು ಎಂದು ಹೇಳಿ, ರಾಜಪುತ್ರಿಯನ್ನು ಹಂಸತೂಲಿಕಾತಲ್ಪದಲ್ಲಿ ಮಲಗಿಸಿ, ಬಾಗಿಲನ್ನು ಸೆಳೆದುಕೊಂಡು ತಾವು ಹೊರೆಗಡೆಯಲ್ಲಿ ಇದ್ದರು. ಅಲ್ಲಿ ಇವರು ನಾನಾವಿಧಾಕಾರವಾಗಿ ಭ್ರಾಂತಿಯಿಂದ ಯೋಚಿಸುತ್ತಲಿದ್ದರು, ಬಳಿಕ ಚಂದ್ರಗುಪ್ತನಾದರೋ ಆ ರಾಜಕನ್ನಕಾಮಣಿಯು ಪಕ್ಕದಲ್ಲಿ ಕುಳಿತುಕೊಂಡು, ಪ್ರಾಣಸಖಿ! ನನ್ನನ್ನು ವಿಶಾಚವೆಂದೆಣಿಸಿ ಬೆದರಬೇಡ. ಹಿಮವತ್ಪರ್ವತದಲ್ಲಿದ್ದ ಘೋರ ರಾಕ್ಷಸಿಯನ್ನು ಸಂಹಾರಮಾಡಿ ದಿವ್ಯಮಣಿಯನ್ನು ತಂದಿರುವ ರಾಜಪುತ್ರನು ನಾನು. ನನ್ನ ಮಹಿಮೆಯಿಂದ ನಾನು ನಿನಗೆ ಕಾಣದಿರುವೆನು. ದಿವ್ಯರತ್ನವನ್ನು ನೋಡೆಂದು ತಾನು ತಂದಿದ್ದ ರತ್ನವನ್ನು ಹೊರಕ್ಕೆ ತೆರೆದು ತೋರಿಸಿದನು, ಭೈರವೇಣಿಯು ಈ ದಿವ್ಯರತ್ನ ಕಾಂತಿಯನ್ನು ನೋಡಿದ ಮಾತ್ರಕ್ಕೇ ಕಣ್ಣುಗಳು ಮುಚ್ಚಿಹೋಗಿ, ಭ್ರಾಂತಳಾಗಿ, ಸ್ವಲ್ಪ ಹೊತ್ತಿನಮೇಲೆ ಚೇತರಿಸಿಕೊಂಡು, ಕಣ್ಬೆರೆದು ನೋಡುವಲ್ಲಿ ಪಕ್ಕದಲ್ಲಿಯೇ ದಿವ್ಯತೇಜಸ್ಸಿನಿಂದ ಕೂಡಿರುವ ರಾಜಪುತ್ರನನ್ನು ನೋಡಿದಳು. ಕೂಡಲೇ ಆ ಲತಾಂಗಿಯು ಹಾಸಿಗೆಯಿಂದ ಕೆಳಗಿಳಿದು ಬಂದು, ರಾಜಪುತ್ರನಿಗೆ ನಮಸ್ಕಾರಮಾಡಿ, ಮಹಾನುಭಾವನೆ! ಹದಿನೈದು ದಿನಗಳಿಂದಲೂ ಈ ರತ್ನದ ಕಾಂತಿಯು ನನ್ನ ಅಂತಃಪುರದಲ್ಲಿ ಬೀಳದಿರಲು ನಮ್ಮ ತಂದೆಯು ಬಹಳವಾಗಿ ಯೋಚಿಸುತ್ತಿದ್ದನು. ಮಹನೀಯನೆ! ನಿನ್ನನ್ನು

ವರಿಸಲು ನನ್ನ ಭಾಗ್ಯವು ಅಧಿಕವಾದದ್ದೇಸರಿ! ನಾನೇ ಧನ್ಯಳು. ಹೀಗೆಂದು ನಾನಾಪ್ರಕಾರವಾಗಿ ವರ್ಣಿಸಿ, ಆ ರಾಜಪುತ್ರನ ವರ್ತಮಾನವನ್ನೂ, ಆ ವಾಣಿಕ್ಯವನ್ನು ಪಡೆದುಕೊಂಡ ಸಮಾಚಾರವನ್ನೂ, ಪೇವನಾಗಕನ್ನಿಕೆಯರ ವರ್ತಮಾನವನ್ನೂ ಸಹ ರಾಜಪುತ್ರನಿಂದ ತಿಳಿದು, ಪರಮಾಶ್ಚರ್ಯಭರಿತಳಾಗಿ, ರೋಮಾಂಚನದಿಂದ ಕೂಡಿನಮ್ಯೆಯುಳ್ಳವಳಾಗಿ, ಪುನಃ ಕಯನವನ್ನೇರಿ ರಾಜಪುತ್ರನೊಂದಿಗೆ ಸಂತೋಷದಿಂದ ಯಥೇಚ್ಛವಾಗಿ ಭೋಗಿಸಿದಳು. ಆಬಳಿಕ ರಾಜಕುಮಾರನು (ಪದ್ಮನೇತ್ರಿಯಾದ) ಆಭರಣಮರವೇಣಿಗೆ ಮುತ್ತಿಟ್ಟು, ವಾಣಿಸಖೀ! ನಾಳೆಯದಿನ ಈರತ್ನವನ್ನು ನಿಮ್ಮ ತಂದೆಗೆ ತೋರಿಸಿ ನಿನ್ನನ್ನು ಮದುವೆ ಮಾಡಿಕೊಳ್ಳುವೆನು, ನೀನು ಧೈರ್ಯವಾಗಿರಬಹುದೆಂದು ಸಮಾಧಾನಮಾಡಿ, ಅಲ್ಲಿಂದ ಕೂರಟು ತನ್ನ ಬಿಡಾರಕ್ಕೆ ಬಂದು, ಆ ಪೇವನಾಗಕನ್ನಿಕೆಯರಿಗೆ ನಡೆದ ವರ್ತಮಾನವನ್ನೆಲ್ಲಾ ತಿಳಿಸಿದನು. ಅವರು ತಮ್ಮ ಪತಿಯ ಇಷ್ಟಕ್ಕೆ ವ್ಯತಿರಿಕ್ತವಾಗಿ ಹೇಳಲೊಲ್ಲದೆ, ಆತನಿಗೆ ದಿವ್ಯಭೂಷಣಾದಿಗಳಿಂದ ಅಲಂಕರಿಸಿ, ದಿವ್ಯಾಂಬರಗಳನ್ನುಡಿಸಿ, ನೇಪಾಳರಾಜನ ಸಭೆಗೆ ಕಳುಹಿಸಿದರು. ಚಂದ್ರಗುಪ್ತನಾದರೋ, ತನ್ನ ಮಂತ್ರಿಯನ್ನು ಅಲ್ಲಿಯೇ ಬಿಟ್ಟು, ತಾನೊರ್ವನೇ ಹೊರಟು ರಾಜಸಭೆಯನ್ನು ಸೇರಿ, ಅವರಿಂದ ಮರ್ಯಾದೆಯನ್ನು ಕೈಕೊಂಡು, ಉಚಿತಾಸನದಲ್ಲಿ ಕುಳಿತು, ರಾಜವರ್ಯನೇ! ನಾನು ಹಿಮವತ್ಪರ್ವತದ ಶಿಖರದಲ್ಲಿದ್ದ ಸೂರ್ಯರಕ್ಷಸಿಯನ್ನು ಕೊಂದು, ದಿವ್ಯವಾಣಿಕ್ಯವನ್ನು ತಂದಿರುವೆನು, ನೋಡಬೇಕೆಂದು ಅವನ್ನು ಹೊರ ತೆಗೆದನು. ಚಂದ್ರಗುಪ್ತನು ಆ ವಾಣಿಕ್ಯವನ್ನು ಹೊರಗೆ ತೆಗೆದನೋ ಇಲ್ಲವೋ, ಅದರ ಕಾಂತ್ಯತಿಶಯದಿಂದ ಅಲ್ಲಿದ್ದ ರಾಜನಿಗೂ ಸಭಿಕರಿಗೂ ಕಣ್ಣುಗಳನ್ನು ಮುಚ್ಚಿಕೊಳ್ಳುವಹಾಗಾಯಿತು, ಸ್ವಲ್ಪಹೊತ್ತಿನಮೇಲೆ ಕಣ್ಣನ್ನು ತೆರೆದು ಆ ವಾಣಿಕ್ಯದ ಕಾಂತಿಗೆ ಆಶ್ಚರ್ಯನಂದಡುತ್ತಾ, ರಾಜಪುತ್ರನೆ! ನೀನು ಯಾರು? ನಿನ್ನ ದೇಶವು ಯಾವುದು? ನಿನ್ನ ತಾಯಿತಂದೆಗಳು ಯಾರು? ನೀನು ಸೂರ್ಯರಕ್ಷಸಿಯನ್ನು ಕೊಂದು, ಈ ವಾಣಿಕ್ಯವನ್ನು ತಂದಬಗೆ ಹೇಗೆ? ಇವೆಲ್ಲವನ್ನೂ ಕೇಳಲೇಕೆಂದು ಕೇಳಿದ ರಾಜವರ್ಯನನ್ನು ಕುರಿತು, ಚಂದ್ರಗುಪ್ತನು ನಡೆದ ವರ್ತಮಾನವನ್ನೆಲ್ಲಾ ಹೇಳಿ, ತನ್ನ ವೃತ್ತಾಂತವನ್ನೂ ತಿಳಿಸಿದನು. ಮಾನಾಂಕಮಹಾರಾಯನಿಗೆ ಚಂದ್ರಗುಪ್ತನ ಧೈರ್ಯಸಾಹಸಗಳಿಗೆ ಅತ್ಯಾನಂದವುಂಟಾದರೂ, ತನ್ನ ಮನಸ್ಸಲ್ಲಿ ಬಾಲದಮೇಲೆ ಕಾಲಿಟ್ಟ ಕಾಲಸರ್ಪನಂತೆ ಆಗಿಬಿಟ್ಟನು. ತನ್ನ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ಮಂತ್ರಿಪ್ರಧಾನಿಗಳನ್ನು ಕುರಿತು, ಓಹೋ! ಮಂತ್ರಿಶ್ರೇಷ್ಠರೆ! ಇವೇನು ಮಹತ್ಕಾರ್ಯವಾಗಿ ಪರಿಣಮಿಸಿತಲ್ಲಾ! ಈಗ್ಗೆ

ನಿಳು ತಲೆ ಹಿಂದಿನಿಂದಲೂ, ನಮ್ಮ ಹಿರಿಯರಿಗೂ ಮಗಧದೇಶದ ಹಿರಿಯರಿಗೂ, ಶತ್ರುತ್ವವುಂಟಾಗಿ ಘೋರಯುದ್ಧಗಳು ನಡೆದು, ನಮ್ಮ ಹಿರಿಯರು ಅವರ ದೇಶದಲ್ಲಿಯೂ, ಅವರ ಹಿರಿಯರು ನಮ್ಮ ದೇಶದಲ್ಲಿಯೂ ಮೃತಿಯನ್ನೈದಿರುವುದು ನಿಮ್ಮೆಲ್ಲರಿಗೂ ತಿಳಿದೇ ಇರುವುದಷ್ಟೆ! ನಾವು ಈಗ ಏನು ಮಾಡಬೇಕು! ಸ್ವಯಂವರವನ್ನು ಪ್ರಕಟಿಸಿದ ರೀತಿಯಿಂದ ಈ ಪುಣ್ಯಪುರುಷನು ದಿವ್ಯಮಾಣಿಕ್ಯವನ್ನು ತಂದಿರುವನು. ಈಗ ನಾವು ಮಾತಿಗೆ ತಪ್ಪುವುದು ರಾಜಧರ್ಮವಲ್ಲವು. ಹೇಗಾದರೂ ಆಗಲಿ, ಈ ಮಹಾನುಭಾವನಿಗೇ ನನ್ನ ಮಗಳನ್ನು ವಿವಾಹಮಾಡುವುದು ನಿಜವು. ಆದರೆ ಈಗ ನಾವು ಒಂದು ಉಪಾಯವನ್ನು ಮಾಡಬೇಕು, ಚಂದ್ರಗುಪ್ತನು ನಮ್ಮ ಕಾರಾಗೃಹದಲ್ಲಿರುವನೆಂದು ಮಗಧರಾಜನಿಗೆ ಬರೆದರೆ, ಪುತ್ರವಾತ್ಸಲ್ಯದಿಂದ ಆ ರಾಜನು ನಮ್ಮೊಂದಿಗೆ ಸಮಾಧಾನ ಮಾಡಿಕೊಳ್ಳುವನು. ಅನಂತರ ನಾವು ಈ ಮಹಾತ್ಮನಿಗೆ ನನ್ನ ಪುತ್ರಿಯನ್ನು ಕೊಟ್ಟು ಮದುವೆ ಮಾಡುವೆನೆಂದನು. ಈಮಾತಿಗೆ ಮಂತ್ರಿಗಳೂ ಸಭಿಕರೂ ಸಮ್ಮತಿಸಿದರು. ಈ ಮಾತುಗಳನ್ನು ಕೇಳಿದಕೂಡಲೆ, ಚಂದ್ರಗುಪ್ತಮಹಾರಾನು, ಪ್ರಳಯಕಾಲದ ಕಾಲಭೈರವನಂತಾಗಿ, ರಾಜೇಂದ್ರನನ್ನು ನೋಡಿ, ರಾಜವರ್ಯ! ನನ್ನನ್ನು ಕಾರಾಗೃಹದಲ್ಲಿಡಲು ಇಷ್ಟಪಡುವೆಯಾ! ತ್ರಿಲೋಕದಲ್ಲಿರುವ ಎಲ್ಲಾ ಬಲಿಕವಾಗಿ ಬಂದರೂ ನನ್ನನ್ನು ಕಾರಾಗೃಹದಲ್ಲಿಡಲಾರರು, ನನ್ನ ಮಾಹಾತ್ಮ್ಯವನ್ನು ತಿಳಿಯದೆ ನೀನು ಹೀಗೆ ಮಾತನಾಡಿದೆ, ಕ್ಷಣಮಾತ್ರದಲ್ಲಿ ನಿನ್ನನ್ನೂ ನಿನ್ನ ಸೈನ್ಯವನ್ನೂ ಈ ಸಭಿಕರನ್ನೂ ನಿರ್ಮೂಲಮಾಡಿ ನಿನ್ನ ಪುತ್ರಿಯಾದ ಧ್ರುವದೇವಿಯನ್ನೆತ್ತಿಕೊಂಡು ನಮ್ಮ ತಂದೆಯಬಳಿಗೆ ಸೇರುವೆನು. ಬ್ರಪಂಚವೆಲ್ಲಾ ತಲೆಗೆಳಗಾದರೂ, ಸಮುದ್ರಗಳೆಲ್ಲಾ ಬತ್ತಿದರೂ, ಎಂದೆಂದಿಗೂ ನಮ್ಮ ತಂದೆಯು ನಿನಗೆ ಸಮಾಧಾನಪತ್ರಿಕೆಯನ್ನು ಕಳುಹಿಸುವನೆಂದು ತನ್ನಸ್ಥಾನದಲ್ಲಿಯೂ ಯೋಚಿಸಬೇಡ, ಕ್ಷಣಮಾತ್ರದಲ್ಲಿಯೇ ನಿನ್ನ ಮೃಗಕ್ಕೆ ಯೇನಾಗುವುದೋ ನೋಡೆಂದು ದಿಕ್ಕುಗಳು ನಡುಗುವಂತೆ ಗರ್ಜಿಸಿ, ಅದೃಶ್ಯಕರಿಣೀ ಎಂಬ ಮಂತ್ರವನ್ನು ಜಪಿಸಿ, ಯಾರಿಗೂ ಕಾಣದಂತಾಗಿ, ಆ ರಾಜನ ಕಿರೀಟವನ್ನೂ, ಸಭಿಕರ ಕಿರೀಟಗಳನ್ನೂ ಕೆಳಗೆ ಕೆಡವಿ ಭ್ರಮರವೇಗವೆಂಬ ಇದ್ದಲ್ಲಿಗೆ ಹೋಗಿ ನಡೆದ ವರ್ತಮಾನವನ್ನೆಲ್ಲಾ ವಿವರಿಸಿದನು. ಆ ಇಂದ್ರಮುಖಿಯಾದರೋ ಚಂದ್ರಗುಪ್ತನ ವೀರವಾಕ್ಯಗಳಿಗೆ ಹೆದರಿ, ಶಾಂತವಚನಗಳಿಂದ ರಾಜಪುತ್ರನಿಗೆ ಸಮಾಧಾನವನ್ನು ಮಾಡಿ. ಅವನನ್ನು ಬಿಡಾರಕ್ಕೆ ಕಳುಹಿಸಿ, ತಾನು ತಂದೆಯಬಳಿಗೆ ಬರುತ್ತಿದ್ದಳು, ಅತ್ತ ಸಭಾಭವನದಲ್ಲಿಯಾದರೋ, ರಾಜನೂ ಸಭಿಕರೂ ಕಿರೀಟಗಳು ತಲೆಯಿಂದ ಕೆಳಕ್ಕೆ ಬಿದ್ದು ಹೋಗಿರುವುದಕ್ಕಾಗಿ ಬಹಳವಾಗಿ ದುಃಖಿಸಿದರು

ರಾಜೇಂದ್ರನು ಕೆಂಡಗಳಂತಿರುವ ಕಣ್ಣುಗಳುಳ್ಳವನಾಗಿ, ಸುತ್ತಲೂನೋಡಿದನು. ಚಂದ್ರಗುಪ್ತನು ಎಲ್ಲಿಯೂ ಕಾಣದಿರಲು ದುಃಖಿಸಿ, ತನ್ನ ಬಿಡಾರವನ್ನು ಸೇರಿದನು, ಸಭಿಕರೂ ತಮ್ಮ ತಮ್ಮ ನೆಲೆಗಳಿಗೆ ಹೋದರು. ರಾಜನಂದನೆಯೊಡ ಭ್ರಮರವೇಣಿಯು, ತಂದೆಯ ಬಳಿಗೆ ಬಂದು, ವಿನಯವಾದ ಮಾತುಗಳಿಂದ ತಂದೆಯನ್ನು ಶಾಂತಿಗೊಳಿಸಿ, ಜನಿಕನೆ! ಆ ರಾಜಪುತ್ರನನ್ನು ಸಾಧಾರಣನೆಂದು ತಿಳಿಯಬೇಡ, ಏಕದಂಡಮಹರ್ಷಿಯು ಅನುಗ್ರಹಕ್ಕೆ ಪಾತ್ರನಾಗಿ, ಘೋರರಕ್ಕಸಿಯನ್ನು ನಿರ್ಮೂಲಮಾಡಿ ಹಿಮವತ್ಪರ್ವತದ ಶಿಖರದ ಮೇಲಿದ್ದ ದಿವ್ಯರತ್ನವನ್ನು ತಂದವನಾಗಿಯೂ, ದೇವನಾಗಕನ್ನಿಕೆಯರನ್ನು ವಿವಾಹಮಾಡಿಕೊಂಡು, ಇಂದ್ರಾದಿದೇವತೆಗಳ ದರ್ಶನಲಾಭವನ್ನು ಪಡೆದು ಕೀರ್ತಿವಂತನಾದ ಪುಣ್ಯಶೀಲನಾಗಿಯೂ ಇರುವನು.

ನಿನ್ನೆಯದಿನ ಸಂಜೆಯು ಮೂರನೆಯ ಜಾವದಲ್ಲಿ ಯಾರಿಗೂ ಕಾಣದಂತೆ ಅಪ್ಸ್ಯಕರಣಿಯೆಂಬ ಮಹಾಮಂತ್ರದ ಮಾಹಾತ್ಮ್ಯೆಯಿಂದ ನನ್ನ ಅಂತಃಪುರಕ್ಕೆ ಬಂದು, ವಿಧವಿಧವಾದ ಮಾಯೆಗಳನ್ನು ನಡೆಯಿಸಿದನು. ಈತನು ಮಹಾತ್ಮನು, ರಾಜೇಂದ್ರನೇ! ಹೆಣ್ಣುಮಕ್ಕಳನ್ನು ಪಡೆದವರಿಗೆ ಪೌರುಷವೆಲ್ಲಿಯದು? ಇದನ್ನು ಕಾಸ್ತ್ರಜ್ಞರಾದತಮಗೆ ನಾನು ಹೇಳಬೇಕಾದದ್ದೇ ಇಲ್ಲ. ಸರ್ವಪ್ರಯತ್ನದಿಂದಲೂ ಆ ಮಹಾತ್ಮನಿಗೇ ನನ್ನನ್ನು ಕೊಟ್ಟು ಮದುವೆಮಾಡು, ಇದರಿಂದ ನಮ್ಮವಂಶವು ಪಾವನವಾಗುವುದು, ನಿನ್ನ ಮಾತೂ ಉಳಿಯುವುದು, ನೀನೂ ಕೀರ್ತಿವಂತನಾಗುವಿ, ಇಲ್ಲದಿದ್ದರೆ ಪ್ರಾಣಹಾನಿಯೂ ಮಾನಹಾನಿಯೂ ಸಂಭವಿಸುವುದು, ನನ್ನ ಮಾತನ್ನು ಕೇಳಿ, ಜಾಗ್ರತೆ ಆ ರಾಜಪುತ್ರನ ಬಿಡಾರಕ್ಕೆ ಹೋಗಿ, ದೇವನಾಗಕನ್ನಿಕೆಯರನ್ನೂ ರಾಜಪುತ್ರನನ್ನೂ ಸಮಾಧಾನಮಾಡಿ, ಆರಮನೆಗೆ ಕರೆದುಕೊಂಡು ಬರುವುದೇ ಯುಕ್ತವೆನ್ನಲು, ತಂದೆಯು ಸಭಿಕರಿಗೆ ತನ್ನ ಕುವರಿಯ ಇಷ್ಟವನ್ನು ತಿಳಿಸಿದನು. ರಾಜೇಂದ್ರನು ಮಂತ್ರಿಗಳನ್ನೂ ಸಭಿಕರನ್ನೂ ಕೆಳಿ, ಆಗಬಹುದೆಂದು ಒಡಂಬಟ್ಟು ಎಲ್ಲರೂ ಹೊರಟು ಆ ಚಂದ್ರಗುಪ್ತನಿದ್ದಮನೆಯ ಬಳಿಗೆ ಬಂದರು. ಪೊರೆಯು ರಾಜಪುತ್ರನನ್ನು ಕುರಿತು ರಾಜಸೂನುವೆ! ನಿಮ್ಮನಮ್ಮ ಹಿರಿಯರಾದಿಯಾಗಿ ಪರಸ್ಪರದ್ವೇಷಾಸೂಯೆಗಳಿದೆಯೆಂದು, ಇದರ ಪರಿಹಾರಕ್ಕೆ ತಕ್ಕಯೋಚನೆಯನ್ನು ನಾನೂ ಸಭಿಕರೂ ಆಲೋಚಿಸುತ್ತಿದ್ದಮಾತ್ರಕ್ಕೇ ನೀನು ಕೋಪಾಟೋಪದಿಂದ ನನ್ನನ್ನೂ ನನ್ನ ಸಭಿಕರನ್ನೂ ಪರಾಜಯಮಾಡಿಸಿದೆ. ಆಹಾ! ನಿನ್ನ ಮಹಿಮೆಯು ಅಸಾಧಾರಣವಾದದ್ದು. ನಿನ್ನ ಇಷ್ಟಾನುಸಾರ ನಡೆಯಿಸುವೆನು, ನಮ್ಮ ಮನೆಗೆ ಹೊರಡೋಣವೆಂದು ನಾನಾಪ್ರಕಾರವಾಗಿ [illegible] ರಾಜಪುತ್ರನಾಗಲೋ, ರಾಜಶ್ರೇಷ್ಠನೆ! ನಿಮ್ಮ

ಹಿರಿಯರಿಗೂ ನಮ್ಮ ಹಿರಿಯರಿಗೂ ವೈರಭಾವವಿರುವುದೆಂದು ನನಗೆಗೊತ್ತಿದ್ದರೆ ಈ ಪಟ್ಟಣದ ಬಾಗಲಿಗೇ ನಾನು ಕಾಲಿಡುತ್ತಿರಲಿಲ್ಲ, ನಿಮ್ಮಇಷ್ಟಾನುಸಾರ ನಾನು ಈಗ ನಿಮ್ಮರಮನೆಯನ್ನುಹೊಕ್ಕು ನಿಮ್ಮಕುವರಿಯೆನ್ನು ವುದುವೆಯಾದ ಸಂಗತಿಯನ್ನು ನನ್ನತಂದೆಯು ಕೇಳಿದ್ದಾದರೆ ನನ್ನ ಮುಖದರ್ಶನವನ್ನೇ ಮಾಡದೆ ನನ್ನನ್ನು ತಿರಸ್ಕರಿಸಿಯಾನು. ನನಗೆ ದೇವನಾಗಕನ್ನಿಕೆಯರಿರ್ವರು ಚಿತ್ಸಿಯರಿರುವರು, ನಿನ್ನಕುವರಿಯನ್ನು ನೀನು ನಿನ್ನ ಇಷ್ಟಾನುಸಾರ ಎಲ್ಲಿಯಾದರೂ ಜೀರೆಕೊಟ್ಟು ಮದುವೆ ಮಾಡಬಹುದೆಂದನು. ರಾಜೇಂದ್ರನು ಈ ನುಡಿಗಳನ್ನು ಕೇಳಿದಕೂಡಲೇ ಕಣ್ಣೀರನ್ನು ಸುರಿಸುತ್ತಾ ರಾಜಾತ್ಮಜಾ! ನೀವು ಹೀಗೆ ಹೇಳಬಹುದೆ! ನನ್ನದುಃಖವನ್ನೂ ನನ್ನ ಕುವರಿಯ ಪ್ರಾಣಗಳನ್ನೂ ಉಳಿಸುವುದಕ್ಕಾಗಿ ಪುರಪ್ರವೇಶಮಾಡಿ, ನನ್ನಕುವರಿಯೆನ್ನು ಮದುವೆ ಮಾಡಿಕೊಳ್ಳಬೇಕೆಂದು ಸಮಾಧಾನಗೊಳಿಸಿ, ದೇವನಾಗಕನ್ನಿಕೆಯರೊಂದಿಗೆ ಪಟ್ಟಣಕ್ಕೆ ಕರೆದುಕೊಂಡು ಹೋಗಿ, ಶುಭಮುಹೂರ್ತವನ್ನು ಜೋತಿಷ್ಕರಿಂದ ಗೊತ್ತುಮಾಡಿಸಿ, ವಿವಾಹಮಹೋತ್ಸವವನ್ನು ಬಳೆಯಿಸಲು ಪುರಶೃಂಗಾರವನ್ನು ಮಾಡಿಸುತ್ತಿದ್ದನು. ಮಗಧದೇಶಾಧೀಶನಾದ ಸೂರ್ಯಗುಪ್ತಮಹಾರಾಜನಿಗೆ ಬಹುಮರ್ಯಾದೆಯಿಂದ ತನ್ನ ಕುವರಿಯಾದ ಭ್ರಮರವೇಣಿಯನ್ನು ಚಂದ್ರಗುಪ್ತಮಹಾರಾಜನಿಗೆ ಕೊಟ್ಟು ವಿವಾಹಮಹೋತ್ಸವವು ನಿಶ್ಚಯವಾಗಿರುವಂತೆಯೂ, ಬಂಧುವರ್ಗ ಪರಿವಾರಸಮೇತವಾಗಿ ಬಿಜಮಾಡಿಸಬೇಕೆಂದು ಶುಭಲೇಖನವನ್ನು ಕಳುಹಿಸಿದನು.

ಸೂರ್ಯಗುಪ್ತನು ಈ ಶುಭಲೇಖನಗಳನ್ನು ಓದಿಕೊಂಡಕೂಡಲೆ, ಬಹುಕಾಲದಿಂದಲೂ ತಿಳಿಯದಿದ್ದ ತನ್ನಮಗನ ಕ್ಷೇಮಲಾಭವನ್ನು ತಿಳಿದು ಅತ್ಯಾನಂದಭರಿತನಾದನು. ತನ್ನಮಂತ್ರಿಪ್ರಧಾನಿ ಸಾಮಂತರಾಜರನ್ನು ಕುರಿತು, ಶುಭಲೇಖನವನ್ನು ಓದಿ, ಆ ಸಭಿಕರನ್ನು ಕುರಿತು, ನೇಪಾಳದೇಶದ ಅರಸನಾದ ವಿಜಾನಾಂಕಮಹಾರಾಯನು ಇನ್ನು ನೇಪಾಳ ತನಗೆ ವಶನಾದನೆಂದು ತಿಳಿದು, ಮಂತ್ರಿಯನ್ನು ರಾಜ್ಯರಕ್ಷಣೆಗೆ ಬಿಟ್ಟು, ತನ್ನ ಪತ್ನೀಸಮೇತನಾಗಿ ಲಕ್ಷ ಚತುರಂಗಬಲದೊಂದಿಗೆ ಹೊರಟು ನೇಪಾಳರಾಜ್ಯದ ಬಳಿ ಬಂದು ಸೇರಿದನು. ವಿಜಾನಾಂಕಮಹಾರಾಯನು ಅಷ್ಟುಹೊತ್ತಿಗೆ ಮಗಧರಾಜನನ್ನು ಎದುರ್ಗೊಂಡು, ಬಹುಮರ್ಯಾದೆಯಿಂದ ಪುರಪ್ರವೇಶಮಾಡಿಸಿ, ಅವರಿಗಾಗಿ ಏರ್ಪಡಿಸಿದ್ದ ಬಿಡಾರದಲ್ಲಿಳಿಸಿದನು, ಚಂದ್ರಗುಪ್ತನು ದೇವನಾಗಕನ್ನಿಕೆಯರೊಂದಿಗೆ ತಾಯಿತಂದೆಗಳ ಬಳಿ ಬಂದು, ದೀರ್ಘದಂಡಪ್ರಣಾಮವನ್ನು ಮಾಡಿದನು. ತಾಯಿತಂದೆಗಳು ಮಗನನ್ನು ಬಾಚಿ ತಬ್ಬಿ ಕೊಂಡು ಆನಂದಾನಂದಭರಿತರಾದರು. ಸೂರ್ಯಗುಪ್ತನು ಬಂಧುಬಳಗಗಳನ್ನು ಸಲಹಿ ತಗಿಸಿ,

ದವರ್ತಮಾನವನ್ನೆಲ್ಲಾ ಕೇಳಿ ಆಶ್ಚರ್ಯಾನಂದಭರಿತರಾದರು, ಅನಂತರ ದೇವನಾಗಕನ್ನಿಕೆಯರು ನಮಸ್ಕಾರಮಾಡಿದರು. ಅವರಿಬ್ಬರನ್ನೂ ರಾಜ ದಂಪತಿಗಳು ಬಹುಪ್ರೀತಿಯಿಂದ ಸತ್ಕರಿಸಿದರು. ಪುತ್ರನನ್ನು ಸಕಲವಿಧ ದಲ್ಲಿಯೂ ಕಾಪಾಡಿದ ಏಕದಂಡಮಹರ್ಷಿಯನ್ನು ಅಂತರಂಗದಿಂದಲೇ ನಮಸ್ಕಾರಮಾಡಿ ಕೊಂಡಾಡಿದರು. ನೇಪಾಳದೇಶಾಧೀಶನು ಶುಭದಿನದ ಲ್ಲಿ ಮಂಗಳವಾದ್ಯಘೋಷಗಳನ್ನು ನಡೆಯಿಸಿ, ಭೈಮರವೇಣಿಯನ್ನು ದೇವ ನಾಗಕನ್ನಿಕೆಯರ ಇಷ್ಟಪ್ರಕಾರ ಚಂದ್ರಗುಪ್ತನಿಗೆ ಧಾರೆಯೆರೆದನು. ಆಗ ವಿಾನಾಂಕಮಹಾರಾಯನಿಗೂ ಪುರಜನರಿಗೂ ಉಂಟಾದ ಸಂತೋಷಕ್ಕೆ ಪಾರವೇ ಇಲ್ಲವು. ಅರ್ಜುನಾ! ಆಬಳಿಕ ಚಂದ್ರಗುಪ್ತನು ನೇಪಾಳರಾ ಜ್ಯದಲ್ಲಿ ಹದಿನೈದು ದಿನಗಳು ಭೈಮರವೇಣಿಯೊಂದಿಗೆ ಸುಖಸಂತೋಷ ಗಳನ್ನು ಪಡೆಯುತ್ತಾ ಇದ್ದು ಅನಂತರ ತನ್ನ ಪಟ್ಟಣಕ್ಕೆ ಪ್ರಯಾಣ ಸನ್ನ ದ್ಧನಾದನು. ಮಾವನಾದ ನೇಪಾಳದೇಶಾಧೀಶನು ಬಳುವಳಿಯಾಗಿ ಕೊ ಟ್ಟ ದಿವ್ಯವಸ್ತುಗಳನ್ನೂ ಚತುರಂಗಬಲವನ್ನೂ ಕೈಕೊಂಡು, ದೇವನಾಗ ಕನ್ನಿಕೆಯರೊಂದಿಗೂ, ಭೈಮರವೇಣಿಯೊಂದಿಗೂ ಕೂಡಿ, ತನ್ನಲ್ಲಿದ್ದ ದಿವ್ಯರತ್ನಗಳಲ್ಲಿ ಒಂದರಿಂದ ಮಾವನನ್ನು ಪೂಜಿಸಿ, ಅವನ ಅನುಮತಿಯ ನ್ನು ಪಡೆದು ಜನನೀಜನಕರೊಂದಿಗೂ, ಪತ್ನಿಯೊರೊಂದಿಗೂ, ಮಗಧದೇ ಶವನ್ನು ಪ್ರವೇಶಮಾಡಿ, ಮಂತ್ರಿಪ್ರಧಾನಿಗಳಿಗೂ, ಪುರಜನರಿಗೂ ಅತ್ಯಾ ನಂದವನ್ನುಂಟುಮಾಡಿದನು. ತರುವಾಯ ಚಂದ್ರಗುಪ್ತನು ರಾಜ್ಯಪದವಿ ಯನ್ನು ಕೈಕೊಂಡು, ತನ್ನ ಭುಜಬಲದಿಂದ ಸಕಲ ರಾಜರನ್ನೂ ಗೆದ್ದು, ನವಖಂಡಗಳಿಗೂ ರಾಜನಾಗಿ, ಏಕಛತ್ರಾಧಿಪತ್ಯದಿಂದಲೂ, ಧರ್ಮದಿಂದ ಲೂ, ಕೀರ್ತಿಯಿಂದಲೂ ಆಳುತ್ತಿದ್ದನು. ಸತ್ಯವನ್ನೂ, ಧರ್ಮವನ್ನೂ ಬಿ ಡದೆಯೂ, ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸುತ್ತಿದ್ದನು. ಏಕ ದಂಡ ಮಹರ್ಷಿಯನ್ನು ಸದಾ ಧ್ಯಾನಿಸುತ್ತಾ, ಗುರುಹಿರಿಯರನ್ನೂ, ತಾಯಿತಂದೆಗಳನ್ನೂ ಭಕ್ತಿಯಿಂದ ಪ್ರೀತಿಸುತ್ತಿದ್ದನು. ಪಂಡಿತರನ್ನೂ, ಬಂಧುಜನರನ್ನೂ ಮರ್ಯಾದೆಯಿಂದ ಕಾಣುತ್ತಾ, ಬಹುದಿನಗಳು ರಾ ಜ್ಯಸುಖವನ್ನನುಭವಿಸಿದ ಬಳಿಕ ತನ್ನ ದೇಹವನ್ನು ಪರಿತ್ಯಜಿಸಿ, ಶಾಶ್ವತ ವಾದ ವಿಷ್ಣುಸಾಯುಜ್ಯವನ್ನು ಪಡೆದನೆಂದು ಹೇಳಿದ ಶ್ರೀ ಕೃಷ್ಣನ ಮಾ ತುಗಳನ್ನು ಕೇಳಿದ ಅರ್ಜುನನು, ಅತ್ಯಾಶ್ಚರ್ಯಾನಂದಗಳನ್ನು ಹೊಂದಿ, ಆ ಚಂದ್ರಗುಪ್ತನನ್ನು ಹೊಗಳಿ, ಮಹಾನುಭಾವನಾದ ಶ್ರೀ ಕೃಷ್ಣಸ್ವಾ ಮಿಯನ್ನು ಕೊಂಡಾಡಿ, ಸ್ವಾಮಿಯೆ! ಇದು ಅತ್ಯಾಶ್ಚರ್ಯವಾದ ಕಥೆ ಯು, ನಿದ್ರೆಯಾನರೊ ಕಣ್ಣುಗಳನ್ನು ಮುಚ್ಚುತ್ತಲಿರುವುದು. ಮಲಗಿ ನಿನ್ನಿಸ್ಸೋಣವೆಂದು ಕೃಷ್ಣಾರ್ಜುನರಿರ್ವರೂ ಸುಖನಿದ್ರೆಯಂ ಮಾಡಿದ

ರೆಂಬಲ್ಲಿಗೆ ಶ್ರೀ ಕೃಷ್ಣಬೋಧಾಮೃತಸಾರದೊಳು ಏಳನೆಯ ಕಥೆಯು ಸಮಾಪ್ತಮಾದುದು.

ಎಂಟನೆಯ ಕಥಾಪ್ರಾರಂಭವು.

ಎಂಟನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾ ನದಿಯ ಮರಳ ದಿಬ್ಬದ ಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತಾ, ಸುಗಂಧ ಪರಿಮಳವನ್ನು ಲೇಪಿಸಿಕೊಂಡು, ಸುವಾಸನೆಯೊಂದ ಪುಷ್ಪಗಳನ್ನು ಆಘ್ರಾಣಿಸುತ್ತಾ, ಮಂದಮಾರುತನಿಗೆ ಮಯ್ಯೊಡ್ಡಿ ಆನಂದದಿಂದಿರುವಲ್ಲಿ, ಅರ್ಜುನನು ಶ್ರೀ ಕೃಷ್ಣಸ್ವಾಮಿಯೆನ್ನು ಕುರಿತು, ದೇವದೇವೋತ್ತಮಾ! ಲೋಕನಾಯಕಾ! ನಿರಾಕಾರ ಭಾವವನ್ನು ಹೃದ್ಗೋಚರವಾಗುವಂತೆ ಒಂದಾನೊಂದು ಪುಣ್ಯ ಚರಿತ್ರೆಯ ಮೂಲಕ ಬೋಧಿಸಿ ನನಗೆ ಮೋಕ್ಷಕ್ಕೆ ಸಾಧನವನ್ನು ಮಾಡಬೇಕೆಂದು ಕೇಳುವ ಅರ್ಜುನನನ್ನು ಕುರಿತು ಶ್ರೀ ಕೃಷ್ಣಮೂರುತಿಯು ಶುದ್ಧಾತ್ಮನಾದ ವಿಕ್ರಮಸೇನ ಮಹಾರಾಜನ ಚರಿತ್ರೆಯನ್ನು ಕೇಳೆಂದು ಇಂತೆಂದನು.

ವಿಕ್ರಮಸೇನನ ಕಥೆ.

ಕೇಳ್ದೆ ಅರ್ಜುನಾ! ಪೂರ್ವದಲ್ಲಿ ಮಹಾರಾಷ್ಟ್ರವೆಂಬ ದೇಶವೊಂದನ್ನು ಚಿತ್ರಸೇನನೆಂಬ ಮಹಾರಾಜನು ಆಳುತ್ತಿದ್ದನು. ಆ ರಾಜೇಂದ್ರನಿಗೆ ವೀರಸೇನ, ರೌದ್ರಸೇನ, ವಿಕ್ರಮಸೇನನೆಂಬ ಮೂವರು ಕುಮಾರರು. ಅವರಲ್ಲಿ ಕಿರಿಯವನಾದ ವಿಕ್ರಮಸೇನನು ಬಲು ಸುಂದರನು, ಗುಣಾಢ್ಯನು. ಶೌರ್ಯ ಧೈರ್ಯ ಸಾಹಸಗಳಲ್ಲಿ ಅದ್ವಿತೀಯನು, ಧನುರ್ವಿದ್ಯೆಯಲ್ಲಿ ನಿಪುಣನು, ತನ್ನ ಅಣ್ಣಂದಿರಿಬ್ಬರಿಗಿಂತಲೂ ಶಕ್ತಿ ಸಾಹಸಗಳಲ್ಲಿ ಮೇಲಾದವನು. ಇವನ ತೇಜಸ್ಸನ್ನೂ, ಸೌಂದರ್ಯವನ್ನೂ ಸಕಲಗುಣಗಳನ್ನೂ ನೋಡಿ, ಆ ಪುರವಾಸಿಗಳೆಲ್ಲಾ ಅತ್ಯಾಶ್ಚರ್ಯಪಡುತ್ತಾ, ಇವನು ದೇವಾಂಶ ಸಂಭೂತನೂ, ಅದ್ವಿತೀಯವಾದ ಶಕ್ತಿ ಸಾಹಸ ಗುಣಯುತನೂ ಆಗಿರುವನೆಂದು ನಾನಾ ಪ್ರಕಾರವಾಗಿ ಹೊಗಳುತ್ತಿದ್ದರು. ಹೀಗಿರುವಲ್ಲಿ ಈ ಮೂವರು ರಾಜಪುತ್ರರೂ ಒಂದಾನೊಂದು ದಿನ ವಿನೋದಾರ್ಥವಾಗಿ ಬೇಟೆಗೆ ಹೊರಡಲುದ್ಯುಕ್ತರಾಗಿ, ತಾಯಿತಂದೆಗಳ ಅನುಮತಿಯನ್ನು ಪಡೆದು, ಬೇಟೆಗಾರರನ್ನು ಹಿಂಬಿಟ್ಟುಕೊಂಡು; ಅರಣ್ಯವನ್ನು ಹೊಕ್ಕು, ಅನೇಕ ಕಾಡುಮೃಗಗಳನ್ನು ಬೇಟೆಯೊಡುತ್ತಾ ದಟ್ಟವಾದ ಕಾಡಿನೊಳಗೆ ನುಗ್ಗಿ ಹೋರಟರು. ಅಲ್ಲಿ ಅನೇಕ ಹುಲಿಗಳು ಎದುರು ಬೀಳುತ್ತಿರಲು ಮೂವರು ರಾಜಪುತ್ರರೂ ಅತ್ಯುತ್ಸಾಹದಿಂದ ಬಾಣಪ್ರಯೋಗಗಳನ್ನು ಮಾಡಿ, ಆ ಹೆಬ್ಬುಲಿಗಳನ್ನು [illegible] ಮುಂದೆ ಮುಂದೆ ಹೋರಟು ಕಡೆ

ಗೆ ಮೂವರೂ ಮೂರು ದಾರಿಯಾದರು. ಅವರಲ್ಲಿ ವಿಕ್ರಮಸೇನನೆಂಬ ರಾಜಪುತ್ರನು ಒಂದಾನೊಂದು ಹೆಬ್ಬಿಲಿಯನ್ನು ಬಾಣದಿಂದ ಹೊಡೆಯಲು ಅದು ಈ ಬಾಣದೇಟಿಗೆ ಸಿಕ್ಕದೆ ಓಡಿಹೋಗುತ್ತಿತ್ತು. ವಿಕ್ರಮಸೇನನಿಗೆ ಬಹು ಕೋಪಬಂದು ಅದನ್ನು ತರವಿಕೊಂಡು ಹೋಗಿ, ಒಂದು ದಿವ್ಯಾಸ್ತ್ರವನ್ನು ಪ್ರಯೋಗಿಸಿದನು. ಆ ವ್ಯಾಘ್ರವು ಆ ಅಸ್ತ್ರದ ಹೊಡೆತವನ್ನು ತಪ್ಪಿಸಿಕೊಳ್ಳಲಾರದೆ ಸ್ವಲ್ಪ ಹೊತ್ತಿನೊಳಗೆ ನೆಲದಮೇಲೆ ಧೊಪ್ಪನೆ ಬಿದ್ದು. ಮಿಲಮಿಲನೆ ಒದ್ದಾಡಿ ಪ್ರಾಣಗಳನ್ನು ಬಿಟ್ಟುಬಿಟ್ಟಿತು. ಆ ವ್ಯಾಘ್ರವು ಕೂಡಲೆ ದಿವ್ಯ ಸುಂದರಾಕಾರವಾದ ಒಂದು ಜಿಂಕೆಯ ವೇಷವನ್ನು ತಾಳಿ, ರಾಜಪುತ್ರನನ್ನು ಮುಖನೆತ್ತಿ ನೋಡುತ್ತಾ, ಅವನಿಗೆ ಭ್ರಾಂತಿಯನ್ನು ಹುಟ್ಟಿಸುತ್ತಾ, ಗಂತುಗಮ್ಮನೆ ಹಾಕಿ ಹಾರಿಕೊಂಡು ಮುಂದೆ ಮುಂದೆ ಹೋಗುತ್ತಿತ್ತು. ಇದನ್ನು ರಾಜಪುತ್ರನು ನೋಡಿ ಕಳವಳಪಟ್ಟು ಹೇಗಾದರೂ ಮಾಡಿ ಈ ಜಿಂಕೆಯನ್ನು ಹಿಡಿಯಬೇಕೆಂದು ಅದನ್ನು ಹಿಂಬಾಲಿಸಿದನು. ಜಿಂಕೆಯಾದರೊ ರಾಜಪುತ್ರನ ಕೈಗೆ ಸಿಕ್ಕುವಂತೆಯೇ ಇದ್ದು ಬಹುದೂರ ಹೋಗುತ್ತಾ, ರಾಜಾತ್ಮಜನನ್ನು ಬಹುದೂರ ಎಳೆದುಕೊಂಡು ಹೋಗಿ, ಕಟ್ಟಕಡೆಗೆ ಆ ರಾಜಪುತ್ರನ ಕಣ್ಣಿಗೆ ಕಾಣದೆ ಮಾಯುವಾಗಿ ನವಯೌವನದಿಂದ ರಾರಾಜಿಸುತ್ತಿರುವ ಒಂದು ಸುಂದರ ಸುಕುಮಾರಿಯಾದಕನ್ಯಕಾಮಣಿಯಾಗಿ ಅಲ್ಲಿದ್ದ ಲತೆಗಳಲ್ಲಿಯೂ, ಹೂವಿನ ಗಿಡಗಳಲ್ಲಿಯೂ ಹೂವನ್ನು ಕೊಯ್ಯುತ್ತಿತ್ತು. ವಿಕ್ರಮಸೇನನಾದರೊ ಆ ಜಿಂಕೆಯು ತನ್ನೆದುರಿಗೆ ಕಾಣದೆ ಮಾಯುವಾದ್ದನ್ನು ನೋಡಿ ಭ್ರಾಂತನಾಗಿ ಎಲ್ಲೆಲ್ಲಿಯೂ ನೋಡುತ್ತಾ ಹಿಂದಿರುಗುವಲ್ಲಿ ತನ್ನ ಅಣ್ಣಂದಿರೂ, ತನ್ನ ಜತೆಯಲ್ಲಿ ಬಂದಿದ್ದ ಬೇಟೆಗಾರರೂ ಯಾರೂ ಕಾಣಲಿಲ್ಲ. ರಾಜಪುತ್ರನಿಗೆ ಬಹು ವ್ಯಸನವಾಗಿ ಕುದುರೆಯಿಂದ ಪಟ್ಟನೆ ಕಳಗಿಳಿದು, ನೆಮ್ಮೀಪದಲ್ಲಿದ್ದ ಒಂದು ಮರದ ನೆರಳಿನಲ್ಲಿ ಕುಳಿತು, ಏನೂ ತೋರದೆ ಚಿಂತಿಸುತ್ತಾ, ಸುತ್ತಲೂ ನೋಡುತ್ತಿರುವಲ್ಲಿ, ಅಲ್ಲಿ ತನ್ನ ಪಕ್ಕದಲ್ಲಿ ಒಂದಾನೊಂದು ಪುನ್ನಾಗವೃಕ್ಷವು ಕಾಣಿಸಿತು. ಅದರ ಸೊಗಸನ್ನೆ ರಾಜಪುತ್ರನು ನೋಡುತ್ತಿರಲು, ಅಲ್ಲೊಂದು ದಿವ್ಯ ತೇಜಸ್ಸು ರಾಜಪುತ್ರನ ಕಣ್ಣುಗಳನ್ನು ಮುಚ್ಚಿಬಿಟ್ಟಿತು. ರಾಜಕುವರನು ಏನೂ ತೋರದೆ ಸ್ತಬ್ಧನಾದನು, ಸ್ವಲ್ಪಹೊತ್ತಿನಮೇಲೆ ನಿಧಾನವಾಗಿ ಕಣ್ದೆರೆದು ನೋಡುವಲ್ಲಿ ಅಲ್ಲ ಒಬ್ಬಾನೆಒಬ್ಬ ದಿವ್ಯ ಸುಂದರ ಸಂಪನ್ನೆಯಾದ ಕನ್ನಿಕೆಯು ಹೂಗಳನ್ನು ಕೊಯ್ಯುತ್ತಿದ್ದಳು. ರಾಜಪುತ್ರನು ಈ ಸುಂದರಿಯ ಅಂದ ಚೆಂದಗಳಿಗೆ ವಿರಗಾದನು. ಮನೋವಿಕಾರವು ಹೆಚ್ಚಿತು. ಬುದ್ಧಿಯು ಚಪಲವಾಯಿತು. ಆ ಬಳಿಕ ಆ ಸುಂದರಾಂಗನು ಆ ಸುಕುಮಾರಿಯ ಬಳಿ

ಹೋಗಿ, ಸುಂದರಿಯೆ! ನೀನು ಯಾರು? ಈ ಘೋರಾರಣ್ಯದಲ್ಲಿ ನಿರ್ಭಯವಾಗಿ ಒರ್ವಳೆ ಸಂಚರಿಸಲು ಕಾರಣವೇನು? ಹೀಗೆಂದು ಕೇಳಿದನು. ಅದಕ್ಕೆ ಆ ಕನ್ಯಕೆಯು ರಾಜಪುತ್ರನೆ! ನಾನು ನಾಗಕನ್ನಿಕೆಯು, ಹೂಗಳನ್ನು ಕೊಯ್ದುಕೊಂಡು ಹೋಗಲು ಬಂದಿರುವೆನು. ನೀನು ನನ್ನ ಬಳಿಗೆ ಬರಬಾರದೆ! ನೀನು ನಿನ್ನ ವರ್ತಮಾನವನ್ನೆಲ್ಲಾ ಹೇಳಿ, ತುಂಟನಾದ ಬಿಲ್ಲಾರನು ಬರಲು ಮುಂಚೆಯೇ ನಿನ್ನ ಪಟ್ಟಣಕ್ಕೆ ಹೊರಡೆನ್ನು ತಾ?, ಕರುನೋಟದಿಂದ ನೋಡುತಾ? ಮನ್ಮಥಚೇಷ್ಟೆಯನ್ನು ಮಾಡುತ್ತಿದ್ದಳು. ಸುಂದರಿಯು ಈ ಅಂಗವಿಕಾರಗಳಿಂದ ರಾಜಪುತ್ರನಿಗೆ ಕಾಮವಿಕಾರವು ಮತ್ತಷ್ಟು ಹೆಚ್ಚಿತು. ಆಗ ರಾಜಪುತ್ರನು ಆ ಕನ್ನಿಕೆಯನ್ನು ಕುರಿತು, ಓ ಸುಂದರೀ! ನಾನು ಮಹಾರಾಷ್ಟ್ರದೇಶದ ಅರಸುಮಗನು. ಬೇಟೆಗೆ ಬಂದು ಬೇಟೆಯಾಟದಲ್ಲಿ ನನ್ನ ಅಣ್ಣಂದಿರನ್ನು ಕಾಣದೆ ವ್ಯಥೆಪಡುತ್ತಿರುವೆನು. ನಾನು ತರುಮಿಕೊಂಡು ಹೋದ ಹುಲಿ ನತ್ತುಬೆದ್ದು ಒಂದು ಜಿಂಕೆಯ ರೂಪವಾಗಿ ನಾನು ಅದನ್ನು ತರುನಿಕೊಂಡು ಹೋಗಲು ಅದು ಮಾಯೆಯಾಯಿತು. ಏನೂ ತೋರದೆ ಈ ಮರದಡಿ ಕುಳಿತು ಚಿಂತಿಸುತ್ತಿರುವಲ್ಲಿ, ನಿನ್ನ ದಿವ್ಯ ಸುಂದರ ವಿಗ್ರಹವನ್ನು ನೋಡಿ, ನನ್ನ ಬುದ್ಧಿಯು ಚಾಂಚಲ್ಯವನ್ನು ಹೊಂದಿರುವುದು, ಸುಕುಮಾರಿಯೇ! ನಿನ್ನನ್ನಗಲಿ ನಾನು ಅರಗಳಿಗೆಯೂ ಇರಲಾರೆನು. ನನ್ನನ್ನು ಆಲಿಂಗಿಸಿಕೊಂಡು ಮನ್ಮಥ ಬಾಧೆಯನ್ನು ತಪ್ಪಿಸೆನ್ನಲು, ಆ ಲತಾಂಗಿಯು ಸುಂದರನೆ! ನಿನ್ನನ್ನ ನೋಡಿದಂದಿನಿಂದ ನನಗೂ ಮನ್ಮಥಬಾಧೆಯು ಹೆಚ್ಚುತ್ತಿರುವುದು, ನಿನ್ನನ್ನು ಸೇರಲು ನನ್ನ ಮನಸ್ಸು ಕಳವಳಪಡುತ್ತಿರುವುದಾದರೂ, ನಮ್ಮ ತಂದೆಯೊದ ನಾಗೇಂದ್ರನ ಆಜ್ಞೆಇಲ್ಲದೆ ನಾನೇನೂ ಮಾಡಲಾಗದು. ಆದ ಕಾರಣ ತಡಮಾಡದೆ ನನ್ನೊಂದಿಗೆ ಬಾರೆಂದು ಆ ಸುಂದರಿಯು ಕೂಡಲೆ ಮಾಯಾಶ್ವಗಳೆರಡನ್ನು ನಿರ್ಮಿಸಿ ರಾಜಪುತ್ರನೂ ತಾನೂ ಕುಳಿತು ಬಹು ದೂರ ಪ್ರಯಾಣವಂ ಮಾಡಿದ ಬಳಿಕ ಅಲ್ಲಿದ್ದ ಆಲದ ಮರದ ಕೆಳಗೆ ಇಬ್ಬರೂ ಇಳಿದರು, ಆ ಕನ್ನಿಕೆಯು ರಾಜಪುತ್ರನನ್ನು ಕುರಿತು,ರಾಜಾತ್ಮಜಾ! ಇಗೋ ನೋಡು! ಇಲ್ಲಿ ಒಂದು ದೊಡ್ಡ ಹುತ್ತವು ಕಾಣುವುದು, ಇದರಲ್ಲಿ ನಮ್ಮ ತಲದೆಯಾದ ನಾಗೇಂದ್ರನಿರುವನು, ನೀನು ಇಲ್ಲಿಯೇ ಇರು, ನಾನು ಈ ಹುತ್ತದೊಳಗೆ ಹೋಗಿ ನಮ್ಮ ತಂದೆಯನ್ನು ಕರತರುವೆನು. ಭಯಪಡಬೇಡವೆಂದು ಹೇಳಿ ಆ ಕನ್ನಿಕೆಯು ಆ ಹುತ್ತವನ್ನು ಪ್ರವೇಶಿಸಿದಳು ರಾಜಪುತ್ರನು ಭ್ರಾಂತನಾದನು. ಸುತ್ತಲೂ ನೋಡುತ್ತಿರುವಲ್ಲಿ ಅಲ್ಲಿದ್ದ ಮಾಯಾಶ್ವಗಳೆರಡೂ ಕಣ್ಣಳಿಗೆ ಕಾಣದೆ ಹೋದವು. ರಾಜಪುತ್ರನಿಗೆ ನಾಗೇಂದ್ರನಿಂದೇನು ಅಪಾಯವೋ ಎಂದು ಇನ್ನೂ ಕಳವಳವು

ಸೆಚ್ಚಿತು. ಆ ಹುತ್ತದ ಕಡೆಯೇ ನೋಡುತ್ತಿದ್ದನು. ಹೀಗೆ ನೋಡುತ್ತಿರು ವಲ್ಲಿ ಆ ಹುತ್ತವಿಂದ ಒಂದಾನೊಂದು ಘೋರಸರ್ಪವು ಹೊರಗೆ ಬಂಪಿತು. ರಾಜಪುತ್ರನು ಭಯಾಶ್ಚರ್ಯದಿಂದ ಕೂಡಿ ಆ ಸರ್ಪಕ್ಕೆ ಸಾಷ್ಟಾಂಗ ದಂಡ ಪ್ರಣಾಮವಂ ಮಾಡಿದನು. ಆಗ ಸರ್ಪವು ರಾಜಪುತ್ರನೆ ! ನೀನು ಹೆದರಬೇಡ, ನಿನ್ನನ್ನು ಪ್ರಯತ್ನಪೂರ್ವಕವಾಗಿ ನಾನು ಇಲ್ಲಿಗೆ ಬರಮಾ ಡಿರುವೆನು. ನಿನಗೆದುರಾದ ವ್ಯಾಘ್ರವೂ, ನಿನ್ನನ್ನು ಬಹುದೂರ ಎಳೆದು ಕೊಂಡು ಹೋಗಿ ಆಯಾಬಪಡಿಸಿದ ಜಿಂಕೆಯೂ, ನಿನ್ನನ್ನು ಕಾಮಬಾಧೆಗೆ ಸಿಕ್ಕಿಸಿ ಎಳೆದುಕೊಂಡು ಬಂದ ಆ ಕನ್ಯಾಕೆಯೂ, ಎರಡು ಕುದುರೆಗಳೂ ಸಹ ನನ್ನ ಮಾಯೆಯೇ ಹೊರತು ನಿಜವಾದವುಗಳಲ್ಲ ನೀನು ಆ ಮಾ ಯಾ ಕನ್ನಿಕೆಯ ನಿಮಿತ್ತವಾಗಿ ಚಿಂತಿಸಬೇಡ. ಆ ಚಿಂತೆಯನ್ನು ಬಿಡು. ಆ ಕನ್ನೆಗಿಂತಲೂ, ದೇವ ನಾಗ ಯಕ್ಷ ಗಂಧರ್ವ ಕನ್ನೆಯರಿಗಿಂತಲೂ ಮೀರಿದ ಸುಂದರಿಯಾದ, ನಿಳು ಮಲ್ಲಿಗೆ ಹೂವಿನಷ್ಟೇ ಭಾರವಿರುವ, ಪದ್ಮಿನೀ ಜಾತಿಯಲ್ಲಿ ಹುಟ್ಟಿದ ಒಬ್ಬಾನೊಬ್ಬ ಸುಕುಮಾರಿಯೆನ್ನು ರಾ ಜೋತ್ತಮನಾದ ನಿನಗೆ ದೊರೆಯುವಂತೆ ಮಾಡಬೇಕೆಂದೇ ನಿನ್ನನ್ನು ಇ ಲ್ಲಿಗೆ ಬರಮಾಡಿರುವೆನು. ಕಾಶ್ಮೀರ ದೇಶದಲ್ಲಿ ಕನಕಾಂಗಮಹಾರಾಜನೆಂ ಬವನು ರಾಜ್ಯವನ್ನು ಪರಿಪಾಲಿಸುತ್ತಿರುವನು. ಆ ರಾಜೇಂದ್ರನಿಗೆ ಹೇಮ ಕಾಂತಾ ಮಣಿಯೆಂಬ ಸರ್ವ ಸುಂದರಾಂಗಿಯು ಸುಪ್ರಶಿಯಾಗಿರುವಳು. ತನ್ನ ಕುವರಿಯು ಪ್ರಾಪ್ತವಯಸ್ಕಳಾಗಲು ರಾಜನು ಸ್ವಯಂವರವನ್ನು ನಿಷ್ಕರ್ಷಿಸಿರುವನು. ಅತನು ಒಂದು ರುಚ್ಲಿಕಾ ಯಂತ್ರವನ್ನು ನಿರ್ಮಿಸಿ ರುವನು. ಇದನ್ನು ಭೇದಿಸಲು ಇಂದ್ರಾದಿಗಳೂ ಸಮರ್ಥರಲ್ಲ. ಅನೇಕ ರಾಜಾಧಿರಾಜರು ಪರಾಜಿತರಾಗಿ ಹಿಂದಿರುಗುತ್ತಲಿರುವರು, ರಾಜಪುತ್ರನೆ! ನೀನು ನಿರ್ಭಯನಾಗಿ ಅಲ್ಲಿಗೆ ಹೋಗು. ನನ್ನ ಪ್ರಭಾವದಿಂದ ನಿನಗೆ ಆ ಯಂತ್ರವು ವಶವಾಗುವುದು, ನೀನು ಆ ಹೇಮಕಾಂತಾಮಣಿಯನ್ನು ವರಿ ಸುವೆ. ನಿನ್ನಿಬ್ಬರಿಗೂ ವಿವಾಹ ಮಹೋತ್ಸವವು ಬಳಿಯುವುದು. ಅನಂ ತರ ನೀವಿಬ್ಬರೂ ಕ್ರೀಡಿಸಲೆ ಈ ಹುತ್ತದ ಬಳಿಗೆ ಬಂದು ಸ್ನಾನಮಾಡಿ, ಅರಿಸಿನವ ವಸ್ತ್ರಗಳನ್ನುಟ್ಟು, ನನ್ನನ್ನು ಕರೆದರೆ ನಾನು ಹೊರಗೆ ಬರು ವೆನು ದಂಪತಿಗಳಾದ ನೀವಿಬ್ಬರೂ ಹೆದರದೆ ನಿಮ್ಮ ಬಲಗೈಯನ್ನು ನನ್ನ ಹೆಡೆಯೊಳೀಯಿಷ್ಟೆ ನನ್ನ ಕಾಣಿಕೆಯೋಚನೆಯಾಗುವುದು. ನೀನು ಸಂ ತೋಷದಿಂದ ಹೋಗಿಬಾರೆಂದು ಹರಸಿ ಒಂದು ದಿವ್ಯ ಬಾಣವನ್ನು ಅನು ಗ್ರಹಿಸಿತು. ಇದನ್ನು ಕೇಳಿದ ಕೂಡಲೆ ರಾಜಪುತ್ರನಿಗೆ ಆತ್ಯಾಶ್ಚರ್ಯ ವಾಯಿತು. ತನ್ನ ಮನದಲ್ಲಿ ಆಹಾ! ಇದು ಪರಮಾಶ್ಚರ್ಯವು. ನಾಗೇಂ ದ್ರನಿಂದ ನನಗೆ ಇವರು ಅನೇಕ ಸುಖಗಳುಂಟಾಗಬಹುದು. ಹೀಗೆಂದು

ಯೋಚಿಸಿ ನಾಗೇಂದ್ರನು ಕೊಟ್ಟ ಬಾಣವನ್ನು ಭದ್ರಪಡಿಸಿಕೊಂಡು, ನಾಗೇಂದ್ರನಿಗೆ ನಮಸ್ಕಾರಮಾಡಿ ಅನುಜ್ಞೆಯಂ ಪಡೆದು, ಫಣಿರಾಜನಿಂದ ಅನುಗ್ರಹಿಸಲ್ಪಟ್ಟ ಮಾಯಾಶ್ವವನ್ನೇರಿ, ತಡಮಾಡದೆ ಪ್ರಯಾಣಮಾಡಿದನು. ಅತ್ತ ವಿಕ್ರಮಸೇನನ ಅಣ್ಣಂದಿರು ಅನೇಕ ದುಷ್ಟ ಮೃಗಗಳನ್ನು ಬೇಟೆಯಾಡಿ ಯಾಡಿ ಆಯಾಸಕೊಂಡಿ, ಆಬಳಿಕ ಅತ್ತಿತ್ತ ನೋಡಿ ತಮ್ಮನನ್ನು ಕಾಣದೆ ಚಿಂತಿಸಿ ಅಲ್ಲಲ್ಲಿ ಹುಡುಕಿದರು. ಎಲ್ಲಿಯೂ ಕಾಣಲಿಲ್ಲ. ವಿಕ್ರಮಸೇನನ ಬೇಟೆಗಾರರನ್ನು ನೋಡಿ, ವಿಕ್ರಮಸೇನನೆಲ್ಲಿ, ಅವನನ್ನು ಬಿಟ್ಟು ನೀವು ಮಾತ್ರ ಇರಲು ಕಾರಣವೇನು ಎನ್ನಲು, ಬೇಟೆಗಾರರುಭಯಭ್ರಾಂತರಾಗಿ, ರಾಜಪುತ್ರರನ್ನು ಕುರಿತು, ವಿಕ್ರಮಸೇನನು ಹುಲಿಯನ್ನು ತರಮಿಕೊಂಡು ಹೋದನೆಂದೂ, ಅವನನ್ನು ಹಿಂಬಾಲಿಸುವುದು ನಮಗೆ ಅಸಾಧ್ಯವಾಯಿತೆಂದೂ ಹೇಳಿದರು. ರಾಜಪುತ್ರರಿರ್ವರೂ ಹುಲಿಯು ಹೋದ ದಾರಿಯನ್ನೇ ಹಿಡಿದು ಬಹುದೂರ ಹೋಗಲು, ಅಲ್ಲಿ ವಿಕ್ರಮಸೇನನ ಕುದುರೆ ಮಾತ್ರ ಕಾಣಿಸಿತು, ವಿಕ್ರಮಸೇನನ ಹೆಸರೇ ಇಲ್ಲ. ರಾಜಪುತ್ರರಿರ್ವರೂ ತಮ್ಮನನ್ನು ಕಾಣದೆ, ಬಹುವಾಗಿ ದುಃಖಿಸಿ, ವಿಚಾರಿಸಲು ಕಡೆಗೆ ತಮ್ಮ ಪುರಪ್ರವೇಶವಂ ಮಾಡಿ, ನಡೆದ ಸುದ್ದಿಯನ್ನೆಲ್ಲಾ ಜನನೀ ಜನಕರಿಗೆ ತಿಳಿಸಿದರು. ಅವರಿಬ್ಬರೂ ದುಃಖಾಕ್ರಾಂತರಾಗಿ, ಪುತ್ರಶೋಕದಿಂದ ಮೂರ್ಛಿತರಾಡರು. ಸ್ವಲ್ಪಹೊತ್ತಿನಮೇಲೆ ಎಚ್ಚೆತ್ತು ಪುತ್ರಶೋಕದಿಂದ ಚಿಂತಿಸುತ್ತ, ಪುತ್ರನ ಗುಣಾವಳಿಯನ್ನು ಸ್ಮರಿಸಿ ಸ್ಮರಿಸಿ ದುಃಖಿತರಾಗಿದ್ದರು. ಪಟ್ಟಣದ ಜನರಾದರೋ ವಿಕ್ರಮಸೇನನನ್ನು ಕಾಣದೆ ಬಹುವಾಗಿ ದುಃಖಿತರಾದರು. ಅತ್ತ ವಿಕ್ರಮಸೇನ ಮುಖಾರಾಯನಾನರೊ, ನಾಗೇಂದ್ರನು ಅನುಗ್ರಹಿಸಿದ ಬಾಣವನ್ನು ಭದ್ರಪಡಿಸಿಕೊಂಡು, ಮಂತ್ರಾಶ್ವವನ್ನೇರಿ, ವಾಯುವೇಗದಿಂದ ಕಾಶ್ಮೀರ ದೇಶವನ್ನು ಸೇರಿದನು. ಅಲ್ಲಿ ಕುದುರೆಯಿಂದ ಕೆಳಗಿಳಿದು ಪುರಪ್ರವೇಶವನ್ನು ಮಾಡಿದನು. ಹೇಮಕಾಂತಾಮಣಿಯ ಸ್ವಯಂವರ ಸೂಚಕವಾದ ಪುರಶೃಂಗಾರವು ವಿಕ್ರಮಸೇನನ ಮನಸ್ಸಿಗೆ ಪರಮಾಶ್ಚರ್ಯವನ್ನುಂಟುಮಾಡಿತು. ಅಲ್ಲಲ್ಲಿ ಅನೇಕ ವಿಚಾರಗಳನ್ನು ಮಾಡಿದ್ದರು. ಸ್ವಯಂವರಾರ್ಥವಾಗಿ ಅನೇಕ ರಾಜಾಧಿರಾಜರು ಬಂದು ಸೇರಿದ್ದರು. ಎಲ್ಲೆಲ್ಲಿಯೂ ಮಂಗಳವಾದ್ಯಗಳು ಭೋರ್ಗರೆಯುತ್ತಲಿದ್ದವು. ಜನಸಮ್ಮರ್ದವು ಬಯಲಾಗಿ ಕಿಕ್ಕಿರಿಯುತ್ತಲಿತ್ತು. ವಿಕ್ರಮಸೇನನು ಆ ಪಟ್ಟಣದ ಸೌಂದರ್ಯವನ್ನು ನೋಡುತ್ತಾ, ಪುರಶೃಂಗಾರವನ್ನೂ, ಬಿಡಾರಗಳ ವೈಭವವನ್ನೂ ನೋಡಿ ಪರಮಾಶ್ಚರ್ಯವನ್ನು ಪಡುತ್ತಾ, ಜನಸಮ್ಮರ್ದವನ್ನು ತಪ್ಪಿಸಿಕೊಂಡು ಧುಲ್ಲಿಕಾ ಯಂತ್ರದ ಬಳಿಗೆ ಬಂದು ಸೇರಿದನು. ಅಲ್ಲಿ ನೆರೆದಿದ್ದ ರಾಜರಾದರೊ ಆ ಯಂತ್ರ

[illegible]

ವನ್ನು ನೋಡಿ, ಆಹಾ ! ಇದು ದೇವ ಗಂಧರ್ವ ಯಕ್ಷರಿಗೂ ಸಾಧ್ಯವಾ ಗದೆಂದು ಮಾತನಾಡಿಕೊಳ್ಳುತ್ತಿದ್ದರು. ರಾಜಪುತ್ರನು ಇದನ್ನು ಕೇಳು ತಾ ಆ ಝುಲ್ಲಿಕಾ ಯಂತ್ರದ ಬಳಿ ಅಲ್ಲಿದ್ದ ಮಂತ್ರಿ ಪುರೋಹಿತರನ್ನು ಕುರಿತು, ನಿಮ್ಮ ರಾಜನು ಬಂದಿರುವನೆ? ರಾಜನನ್ನು ಬೇಗ ಇಲ್ಲಿಗೆ ಬರ ಮಾಡಿರಿ. ನಾನು ಈ ಯಂತ್ರವನ್ನು ಭೇದಿಸುವೆನು. ಹೀಗೆನ್ನಲು, ಆ ಮಂತ್ರಿಯು ಪಕ್ಕನೆ ನಗುತಾ, ರಾಜಪುತ್ರನೆ ! ನೀನು ಹುಡುಗಾಟದಿಂದ ಹೀಗೆ ಮಾತನಾಡುತ್ತಿ. ಕೆಳಗಡೆ ಇರುವ ಕನ್ನಡಿಯಿಂದ ಲಕ್ಷ್ಯವನ್ನು ನಿ ಲ್ಲಿಸಿಕೊಂಡು, ಒಂದೇ ಬಾಣವಿಂದ ಈ ಯಂತ್ರವನ್ನು ಭೇದಿಸಲು ದೇವ ತೆಗಳಿಗೂ ಸಾಧ್ಯವಿಲ್ಲವಲ್ಲಾ ! ಅನೇಕ ಯುದ್ಧಗಳಲ್ಲಿ ಜಯಶೀಲರಾಗಿ, ಶೂರಾಗ್ರೇಸರರೆನ್ನಿಸಿಕೊಂಡಿರುವ ಅಂಗ, ವಂಗ, ಕಳಿಂಗ, ಕಾಂಭೋಜ, ಮಾಳವ, ನೇಪಾಳ, ಘೂರ್ಜರ, ಬರ್ಬರ, ಸಿಂಧು, ಸೌರಾಷ್ಟ್ರ, ವಾರಸೀ ಕ, ಟಿಂಕಣ, ಕೊಂಕಣಾಧೀಶ್ವರರೆಲ್ಲಾ ಈ ಯಂತ್ರವನ್ನು ನೋಡಿ, ಗಡ ಗಡನೆ ನಡಗುತ್ತಾ, ಕಾಂತಿಹೀನರಾಗಿ, ಕಂದಿಹೋದ ಮುಖವುಳ್ಳವರಾಗಿ, ತಲೆಯನ್ನು ತಗ್ಗಿಸಿರುವರು. ಅಯ್ಯೋ ! ಹುಡುಗನಾದ ನಿನ್ನ ಹುಡುಗ ಬುದ್ಧಿಗೆ ಈ ಯಂತ್ರವು ವಶವಾಗುವುದೆ ! ನೀನು ಇಲ್ಲಿ ನಿಲ್ಲದೆ ಹಿಂದಿರು ಗೆನ್ನಲು, ರಾಜಪುತ್ರನಿಗೆ ಬಹಳ ಕೋಪವುಂಟಾಯಿತು, ಕಣ್ಣುಗಳು ಅಗ್ನಿ ಕಣಗಳಾದವು, ರೆಪ್ಪೆಗಳು ನೆಟ್ಟಗೆ ಮಿಡಿದುನಿಂತವು, ಮಂತ್ರಿಯನ್ನು ನೀ ನು ಮಾತನಾಡಬೇಡವೆಂದು ಹೇಳಿ, ನಾಗೇಂದ್ರನನ್ನು ತನ್ನಂತರಂಗದಲ್ಲಿ ನೆನೆದು, ವಿಕ್ಷಟಂಗಳು ಗಡಗಡನೆ ನಡುಗುವಂತೆ ಧನುಷ್ಟಂಕಾರವಂ ಮಾ ಡಿ, ಉರಗಪತಿಯು ಅನುಗ್ರಹಿಸಿದ್ದ ದಿವ್ಯ ಬಾಣವನ್ನು ಬಿಲ್ಲಿಗೆ ತಗಲಿಸಿ, ಕೆಳಗಡೆ ಇರುವ ಕನ್ನಡಿಯೊಳಗೆ ಲಕ್ಷ್ಯವನ್ನು ನಿಲ್ಲಿಸಿಕೊಂಡು, ನಾಗೇಂ ದ್ರನನ್ನು ಮನದಲ್ಲಿ ಧ್ಯಾನಿಸುತ್ತಾ ಪ್ರಯೋಗಿಸಿದ ಕೂಡಲೆ, ಆ ಬಾಣವು ತ್ರೇತಾಗ್ನಿಯಂತೆ ಮಹಾ ವೇಗದಿಂದ ಕೆಂಡಗಳನ್ನು ಕಾರುತಾ, ಚಟ ಪಟ ಎಂದು ಶಬ್ದಮಾಡುತಾ ಹೊರಟು, ಆ ಝುಲ್ಲಿಕಾ ಸಹಿತನಾದ ಯಂ ತ್ರವನ್ನು ನೆಲಕ್ಕೆ ಕೆಡವಿ, ಆ ಬಳಿಕ ಸೌಮ್ಯರೂಪದಿಂದ ಬಂದು ಪುನಃ ರಾಜಪುತ್ರನ ಬತ್ತಳಿಕೆಯೊಳಗೆ ಸೇರಿತು. ದೇವತೆಗಳೆಲ್ಲಾ ರಾಜಪುತ್ರನ ನ್ನೇ ಕೊಂಡಾಡುತಾ ದೇವದುಂದುಭಿಯನ್ನು ಧ್ವನಿಮಾಡಿದರು, ಆಹಾ! ಈತನು ಇಂದ್ರನೊ, ಚಂದ್ರನೊ,ದೇವೇಂದ್ರನೊ, ವರುಣನೊ ಯಾರೊ ಆಗಿರಬೇಕೆಂದು ಅಲ್ಲಿದ್ದ ರಾಜರುಗಳೆಲ್ಲಾ ಈ ರಾಜಪುತ್ರನನ್ನು ಕೊಂಡಾ ಡುತಾ ಧ್ವನಿಮಾಡಿದ ಕೈಚಪ್ಪಾಳೆಯ ಶಬ್ದವು ದಿಕ್ಕುಟಂಗಳನ್ನು ವ್ಯಾಪಿ ಸಿತು. ಜಯಭೇರಿಯ ಶಬ್ದದಿಂದ ದಿಕ್ಕುದಿಕ್ಕುಗಳಿಂದಲೂ ಪ್ರತಿಧ್ವನಿಯು [illegible]

ವಾಗಿ ಕೀರ್ತಿಸಿ, ಗಾಢಾಲಿಂಗನವನ್ನು ಮಾಡಿಕೊಂಡನು. ಅಳಿಯನನ್ನು ಕುರಿತು, ಮಹಾನುಭಾವನೆ! ನನ್ನ ವಂಶವನ್ನು ಪವಿತ್ರವಾಗಿ ಮಾಡಬೇಕೆಂದೇ ನೀನು ಈ ಲೋಕದಲ್ಲಿ ಅವತರಿಸಿರುವಿಯೆಂದು ನಾನು ಭಾವಿಸಿರುವೆನೆಂದು ನಾನಾ ಪ್ರಕಾರವಾಗಿ ಕೀರ್ತಿಸಿದನು. ಅನಂತರ ರಾಜಪುತ್ರಿಯಾದ ಹೇಮಕಾಂತಾಮಣಿಯೆ ತನ್ನ ಮೈ ಹೊನಪಿನಿಂದಲೂ, ವಸ್ತ್ರಾಭರಣಗಳ ಕಾಂತಿಯಿಂದಲೂ ಅಲ್ಲಲ್ಲಿರುವ ಸಭಿಕರನ್ನು ಚಿತ್ರಗುಮಾಡುತ್ತಾ ಸಖಿಯರೊಂದಿಗೆ ಬಂದು ವಿಕ್ರಮಸೇನನ ಕೊರಳಿಗೆ ಪ್ರೇಮಾಲೆಯನ್ನು ಹಾಕಿದಳು. ಕಾಶ್ಮೀರಾಧೀಶನು ಅಳಿಯನನ್ನು ಪಟ್ಟದಾನೆಯ ಮೇಲೆ ಕುಳ್ಳಿರಿಸಿಕೊಂಡು, ವಿವಿಧ ಮಂಗಳವಾದ್ಯಗಳಿಂದ ಪುರಪ್ರವೇಶವನ್ನು ಮಾಡಿಸಿ, ಶುಭ ಮುಹೂರ್ತದಲ್ಲಿ ಹೇಮಕಾಂತಾ ಮಣಿಗೂ ವಿಕ್ರಮಸೇನ ಮಹಾರಾಯನಿಗೂ ಅತ್ಯಂತ ವೈಭವದಿಂದ ವಿವಾಹ ಮಹೋತ್ಸವವನ್ನು ಬಲು ಸಂಭ್ರಮದಿಂದ ನಡೆಯಿಸಿದನು. ರಾಜನು ವಿಕ್ರಮಸೇನನ ವರ್ತಮಾನವನ್ನೆಲ್ಲಾ ಕೇಳಿ ಅತ್ಯಾನಂದಭರಿತನಾದನು.

ಐನನೆಯದಿನ ರಾತ್ರಿ ಮಲಗುವ ಮನೆಯನ್ನು ನವರತ್ನ ಖಚಿತವಾದ ದಿವ್ಯಾಲಂಕಾರಗಳಿಂದಲೂ, ಶ್ರೇಷ್ಠವಾದ ಜರತಾರಿ ವಸ್ತ್ರಗಳಿಂದಲೂ, ದಿವ್ಯ ಪರಿಮಳಯುಕ್ತವಾದ ಪುಷ್ಪಂಗಳಿಂದಲೂ, ಸುಗಂಧದಿಂದಲೂ ಅಲಂಕರಿಸಿ, ಭರತಶಾಸ್ತ್ರ ಪದ್ಧತಿಯಂತೆ ನಾಟ್ಯಗಳನ್ನೂ ಮಂಗಳ ವಾದ್ಯಗಳನ್ನೂ ಮಾಡಿಸಿ ದಂಪತಿಗಳನ್ನು ಶಯನ ಗೃಹಕ್ಕೆ ಕಳುಹಿದರು. ರಾಜಪುತ್ರನು ತನಗಾಗಿ ನಿರ್ಮಿತವಾಗಿದ್ದ ನವರತ್ನ ಖಚಿತವಾದ ಹಂಸತೂಲಿಕಾ ತಲ್ಪದಲ್ಲಿ ಪವಡಿಸಿದನು. ಹೇಮಕಾಂತಾಮಣಿಯು ಆ ದಿವ್ಯವಾದ ಹಂಸತೂಲಿಕಾ ತಲ್ಪಕ್ಕೆ ಪ್ರದಕ್ಷಿಣೆಬಂದು ಕೈಮುಗಿದು ನಿಂತುಕೊಳ್ಳಲು, ರಾಜಪುತ್ರನು ಆ ಸುಂದರಿಯನ್ನು ಕುರಿತು, ಪ್ರಾಣಕಾಂತೆಯೇ! ನೀನು ಪೀಠದಮೇಲೆ ಕುಳಿತುಕೊಂಡು ನನ್ನ ವರ್ತಮಾನವನ್ನೆಲ್ಲಾ ಕೇಳಿ, ಆನಂತರ ನಿನ್ನ ಪತಿಯ ಪ್ರಾಣಗಳನ್ನು ಉಳಿಸೋಕೆಂದು ತನ್ನ ವರ್ತಮಾನವನ್ನೂ, ನಾಗೇಂದ್ರನ ಅಪ್ಪಣೆಯನ್ನೂ ತಿಳಿಸಿ, ನಾವು ಆ ದೇವರ ಆಜ್ಞಾವ್ಯತಿರಿಕ್ತವಾಗಿ ನಡೆಯುವುದರಿಂದ ಅನರ್ಥವಾಗಬಹುದೆಂದು ನುಡಿದನು. ಆ ಸುಂದರಾಂಗಿಯು ಚನ್ನಾಗಿ ಆಲೋಚಿಸಿ, ನಾಗೇಂದ್ರನ ಮಹಿಮೆಯನ್ನೂ, ಪತಿಯ ಅಭಯವನ್ನೂ ತಿಳಿದು, ಪ್ರಾಣನಾಥಾ! ನಿಮ್ಮಿಷ್ಟವನ್ನೂ ನಾಗೇಂದ್ರನ ಅಭಿಪ್ರಾಯವನ್ನೂ ನೆರವೇರಿಸಲು ಯಾವ ಸಂಕಯವೂ ಇಲ್ಲವು. ನೀವು ಯೋಚಿಸಬೇಕಾದದ್ದಿಲ್ಲವು. ಅದಕ್ಕೆ ತಕ್ಕ ಯುಕ್ತಿಯನ್ನು ನಾನು ಈಗಲೇ ಹುಡುಕುವೆನು. ಹೀಗೆಂದು ತನ್ನ ಸಖಿಯರನ್ನು ಕರೆದು, ಜಡೆಯೆನ್ನು ಬಿಚ್ಚಿಸಿಕೊಂಡು, ಆಭರಣಗಳನ್ನೆಲ್ಲಾ ತೆಗಿಸಿ,

ಭವ್ಯವಾಗಿಟ್ಟು, ಪತಿಯು ಹಾಸಿಗೆಯಿದ್ದ ಮಂಚದ ಕೆಳಗೊಂದು ಹಾಸಿಗೆಯನ್ನು ಹಾಸಿಸಿ ಅಲ್ಲಿ ತಾನು ಮಲಗಿಕೊಳ್ಳು. ಬಳಿಗಾಸ ಕೂಡಲೆ ಹೊರಹೊರಟು ಪತಿಯೊಂದಿಗೆ ಸುಖವಾಗಿದ್ದಂತೆ ತನ್ನ ಜನನೀ ಜನಕರಿಗೆ ತಿಳಿಸಿದಳು. ಹೀಗೆಯೇ ಹದಿನೈದು ದಿನಗಳನ್ನು ಕಳೆದನು. ಆ ಬಳಿಕ ರಾಜಪುತ್ರನು ತನ್ನ ಪ್ರಯಾಣ ಸಮಾಚಾರವನ್ನು ಮಾವನಿಗೆ ತಿಳಿಸಿದನು. ರಾಜನು ಅನೇಕ ದಿವ್ಯ ವಸ್ತ್ರಾಭರಣಗಳನ್ನೂ ಚತುರಂಗ ಬಲವನ್ನೂ, ಬಳುವಳಿಯಾಗಿ ಕೊಟ್ಟನು. ರಾಜಪುತ್ರನು ಇವೆಲ್ಲವನ್ನೂ ತೆಗೆದುಕೊಂಡು, ಹೆಂಡತಿಯಾದ ಹೇಮಕಾಂತಾ ಮಣಿಯನ್ನು ಪಲ್ಲಕ್ಕಿಯೊಳು ಕುಳ್ಳಿರಿಸಿಕೊಂಡು, ಚತುರಂಗಬಲ ಸಹಿತನಾಗಿ ಪ್ರಯಾಣಮಾಡಿ ಹೋಗುತ್ತ ಕೆಲವು ದಿನಗಳಿಗೆ ನಾಗೇಂದ್ರನಿದ್ದ ವಟವೃಕ್ಷದ ಬಳಿ ಬಂದು ಸೇರಿ, ಅಲ್ಲಿ ಬಿಡಾರವನ್ನು ಮಾಡಿಸಿ ನಿಂತನು. ಅನಂತರ ಆ ದಂಪತಿಗಳು ಸ್ನಾನವಂ ಮಾಡಿ, ಅರಿಸಿನದ ವಸ್ತ್ರಗಳನ್ನುಟ್ಟು, ಸರ್ಪರಾಜನಿದ್ದ ಹುತ್ತದ ಬಳಿ ಬಂದು, ನಾನಾ ಪ್ರಕಾರವಾಗಿ ಪ್ರಾರ್ಥಿಸಲಾಗಿ, ಆ ಘೋರಸರ್ಪವು ಹೊರಕ್ಕೆ ಬಂದಿತು. ಆ ದಂಪತಿಗಳು ಸ್ವಲ್ಪವೂ ಹೆದರಿಕೆಯಿಲ್ಲದೆ ಆ ಸರ್ಪರಾಜನಿಗೆ ಅಡ್ಡಬಿದ್ದು, ಅದರ ಹೆಡೆಯಮೇಲೆ ತಮ್ಮ ಬಲಗೈಯನ್ನಿಟ್ಟರು. ಆ ಕೂಡಲೆ ಆ ಘೋರಸರ್ಪಕ್ಕೆ ಶಾಪವಿಮೋಚನೆಯಾಗಿ, ಜುಟಾವಲ್ಕಲದಂಡ ಕಮಂಡಲಗಳನ್ನು ಧರಿಸಿದ ಒಂದು ಋಷಿರೂಪವಾಗಲು, ಆ ವಿಕ್ರಮಸೇನನಿಗೆ ಆಶ್ಚರ್ಯವುಂಟಾಗಿ ನಮಸ್ಕಾರವಂ ಮಾಡಿದನು. ಮಹಾನುಭಾವನೆ! ನಿಮ್ಮಂತಹ ಪುಣ್ಯಾತ್ಮರಿಗೆ ಈ ಶಾಪವು ಏಕೆ ಬಂದಿತು? ಇದರ ಕಾರಣವನ್ನು ತಿಳಿಸಬೇಕೆನ್ನಲು ಮುನೀಂದ್ರನಿಂತೆಂದನು.

ರಾಜನಂದನಾ! ನನ್ನನ್ನು ಜಲಧರ ಮಹರ್ಷಿಯೆಂದು ತಿಳಿ. ನಾನೂ ವಿಭಾಂಡಕಮುನಿಯೂ ಒಂದಾನೊಂದು ಕಾಲದಲ್ಲಿ ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದೆವು. ಒಂದಾನೊಂದುದಿನ ನಾನು ಅಲ್ಲಿದ್ದ ಹಣ್ಣೊಂದನ್ನು ತೆಗೆದುಕೊಂಡು ವಿಭಾಂಡಕಮುನಿಯ ಮೇಲೆ ಹಾಕಿ ಹಾವು ಹಾವೆಂದು ಹಾಸ್ಯಮಾಡಿದೆನು ಮುನಿಯು ಇದನ್ನು ನೋಡಿ ಕೋಪಗೊಂಡು, ನೀನು ಹಾವಾಗೆಂದು ಶಪಿಸಿದನು. ಕೂಡಲೆ ನನಗೆ ಘೋರಸರ್ಪದ ಜನ್ಮ ಬಂದಿತು. ಇದನ್ನು ನೋಡಿ ವಿಭಾಂಡಕಮುನಿಗೆ ಬಹಳ ವ್ಯಸನವುಂಟಾಯಿತು ಅನಂತರ ಶಾಪವಿಮೋಚನೆಯಾಗುವಂತೆ ಅನುಗ್ರಹಿಸಿದನಲ್ಲದೆ ಪೂರ್ವಜ್ಞಾನವೂ ನನ್ನ ಮಹಿಮೆಯೂ ಸರ್ವವಾಗಿರುವಾಗಲೂ ಇರುವಂತೆ ಅನುಗ್ರಹಿಸಿದನು. ಆದ್ದರಿಂದ ನಾನು ಪ್ರಯತ್ನಪೂರ್ವಕವಾಗಿ ನಿಮ್ಮಿರ್ವರಿಗೂ ದಾಂಪತ್ಯವನ್ನುಂಟುಮಾಡಿದೆನು. ಪುಣ್ಯಾತ್ಮ! ನನ್ನಲ್ಲಿರುವ ಅನೇಕ ರತ್ನಗಳನ್ನು ಕೈಕೊಂಡು, ನೀವು ದಂಪತಿಗಳು ಇ

ನ್ನು ಸುಖವಾಗಿರಿರೆಂದು ಹೇಳಿದ ಜಲಧರ ಮಹರ್ಷಿಯನ್ನು ಕುರಿತು, ಮಹಾನುಭಾವನೆ! ಪಂಚಭೂತಾತ್ಮಕವಾದ ಸಾಕಾರ ಶರೀರಗಳಿಗೆ ವೃದ್ಧಿ ಕ್ಷೀಣಗಳೂ, ಜನನ ಮರಣಗಳೂ ಉಂಟಾಗುವ ಹಾಗೆ ನಿಮ್ಮಿಂದ ನನಗೆ ತಿಳಿಯಬಂದಿತು. ನಿರಾಕಾರ ಶರೀರ ಭಾವವನ್ನು ತಿಳಿಯಪಡಿಸಿ ಕೃತಾರ್ಥನನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಲಿರುವ ವಿಕ್ರಮಸೇನನನ್ನು ಕುರಿತು ಜಲಧರ ಮಹರ್ಷಿಯು ಇಂತೆಂದನು.

ಜಲಧರ ಮಹರ್ಷಿಯು ವಿಕ್ರಮಸೇನನಿಗೆ ಬೋಧಿಸಿದ ನಿರಾಕಾರ ಭಾಷವು.

ರಾಜಪುತ್ರನೆ! ನೀನು ದೇವತೆಗಳಿಗೂ ಕೂಡ ಸಾಧ್ಯವಲ್ಲದ ಪ್ರಶ್ನೆ ಮಾಡಿದೆ. ನೀನು ಪುಣ್ಯಮೂರುತಿಯು, ನನಗೆ ನಿನ್ನಲ್ಲಿರುವ ಪ್ರೇಮದಿಂದ ನೀನು ಕೇಳಿದ ನಿರಾಕಾರ ಭಾವವನ್ನು ತಿಳಿಸುವೆನು. ಕೇಳು—ಪಿಪೀಲಿಕಾದಿ ಬ್ರಹ್ಮಪರ್ಯಂತವೂ ಎಲ್ಲಾ ದೇಹವೂ ಸಾಕಾರ ಭಾವದಿಂದ ಕೂಡಿರುವುದು ಸತ್ಯವೆಂದು ಅವನಿಗೆ ಹಂಸಪಂಚಾಕ್ಷರಿ ಮಂತ್ರವನ್ನು ಉಪದೇಶಮಾಡಿದನು ಆ ಬಳಿಕ ಮಹರ್ಷಿಯು ಮಗೂ! "ಅಯಮಾತ್ಮಾಬ್ರಹ್ಮ" ಎಂಬ ಶ್ರುತಿಗನುಸಾರವಾಗಿ, ರೂಪನಾಮಕ್ರಿಯೆಗಳಿಲ್ಲದೆ ಆತ್ಮಾರಾಮಬ್ರಹ್ಮವು ಸಾಕಾರಶರೀರದೊಳು ನಾಯುವಿಧದಿಂದ ಪ್ರವೇಶಮಾಡಿ, ಅಂತರ್ಬಹಿರ್ವ್ಯಾಪಕತ್ವವುಂಟಾಗಿ, ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳುಂಟಾಗಿ, ರಾತ್ರಿ ಹಗಲನ್ನೂ, ಹಸಿವು ಬಾಯಾರಿಕೆಗಳನ್ನೂ, ಅಸ್ತಿ, ಜಾಯತೆ, ವರ್ಧತೆ, ವಿಪರಿಣಾಮತೆ, ಅಪಕ್ಷೀಯತೆ, ವಿನಶ್ಯತಿ ಎಂಬ ಷಡ್ಭಾವ ವಿಕಾರವು ಇಲ್ಲದೆ, ಕಳಾವಶಿಷ್ಟನಾಗಿ ಸೂತ್ರಧಾರಿಯಾಗಿ, ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯವೆಂಬ ಪಂಚಕೋಶಂಗಳಿಗೆ ವ್ಯತಿರಿಕ್ತವಾಗಿ, ತಂತುಗಳ ಹಾಗೆ ಷಟ್ಚಕ್ರಗಳನ್ನೂ ಸುತ್ತಿಕೊಂಡು, ರೇಚಕ ಕುಂಭಕಪೂರಕಗಳಿಂದ ಇಡಾಪಿಂಗಳಸುಷುಮ್ನಾ ನಾಡಿಗಳಲ್ಲಿ ಸಂಚರಿಸುತ್ತಾ, ಇರುವುದನ್ನು ಆರೋಹಣ ಅವರೋಹಣಗಳಿಂದೂ, ಅವನ್ನೇ ಪ್ರಣವಾಕ್ಷರದ್ವಯವೆಂದೂ ದೊಡ್ಡವರು ಹೇಳುವರು. ಅಂತಹ ಹಂಸನನ್ನು ನಿರಾಕಾರನೆಂದೂ, ಆತನ ಮಾಹಾತ್ಮ್ಯೆಯನ್ನು ತಿಳಿಯಲು ಅಸಾಧ್ಯನೆಂದೂ ತ್ರಿಮೂರ್ತಿಗಳು ಏಕವಾಕ್ಯದಿಂದ ತಿಳಿಸಿರುವರು. ನಾಮರೂಪಗಳಿಲ್ಲದಂತೆ ಮಾಡಿ ನಿರಾಕಾರನೆಂದು ಹೇಳಬೇಕಾಯಿತು. ಇದಕ್ಕೆ ಮಹಾವಾಕ್ಯಗಳೇ ಪ್ರಮಾಣಗಳು. ಇದೇ ಚೈತನ್ಯವು. ಸಚ್ಚಿದಾನಂದವೂ ಇದೇ. ಇದರಿಂದಲೆ ಶುದ್ಧವಾದ ಆತ್ಮಯೌವನಪರಿಪೂರ್ಣತೆಯನ್ನು ದರ್ಶಿಸುವುದು. ಇದೇ ವೇದಾಂತ ಸಾರವು. ಇದಕ್ಕೆ ವೇದವಾಕ್ಯಗಳೆ ಮಾರ್ಗಗಳು. ಆ ಸಾಂಖ್ಯಾಯನ ಮಹಾಯೋಗನಿಗೆ

ಳಿಂದ, ಇಡಾಪಿಂಗಳ ನಾಡಿಗಳೆರಡೂ ಸೂರ್ಯ ಚಂದ್ರರ ಸಂಚಾರ ಮಾರ್ಗಗಳು. ಆ ದಾರಿಯಲ್ಲಿ ಸಂಚರಿಸುವ ಹಂಸವನ್ನು ಜಪಕುಂಡಲಿ ಯಿಂದ ಭೇದಿಸಿ, ಸುಷುಮ್ನ ನಾಳವನ್ನು ಪತ್ತಿ ಹೋಗಿ, ಗಂಗಾ ಯಮುನಾ ನದಿಗಳಲ್ಲಿ ಸ್ನಾನವಂ ಮಾಡಿ, ಆ ಮಂಟಪದೊಳು ನಿಂತು, ಅಲ್ಲಿಂದ ದೇವನಾಗರತ್ನ ಕಾಂತಿಗಳನ್ನು ಕಳೆದು, ಸೂರ್ಯ ಚಂದ್ರರ ಬೆಳಕನ್ನು ಬಯಲಲ್ಲಿ ಸೇರಿಸಿ, ಬಟ್ಟಬಯಲಾಗಿ ನಿಂತು, ಆನಂದಿಸುವುದು, ಅಜ್ಞಾನರಾದ ಕೆಲವರು ಹಂಸದ ಮಹಿಮೆಯು ಇಂಥಾದ್ದೆಂದು ತಿಳಿಯದೆ ಅದನ್ನು ಪ್ರಾಣವಾಯುವೆನ್ನುವರು. ಗುದದಲ್ಲಿ ಅಪಾನವಾಯುವೂ. ನಾಭಿಯೊಳಗೆ ಸಮಾನವಾಯುವೂ, ಹೃದಯದಿಂದ ಪ್ರಾಣವಾಯುವೂ, ಕಂಠದಿಂದ ಉದಾನವಾಯುವೂ, ವ್ಯಾನವಾಯುವು ಹೃದಯದ ಎಲ್ಲೆಲ್ಲಿಯೂ ವ್ಯಾಪಿಸಿರುವನೆಂದು ಪ್ರಮಾಣವಿರುವುದು. ಹೀಗಿರುವಲ್ಲಿ ಪ್ರಾಣವಾಯುವು ತನ್ನ ಸ್ಥಾನವನ್ನು ಬಿಟ್ಟು, ಉದಾನವಾಯುವನ್ನು ಕಳೆದುಕೊಂಡು, ರೇಚಕ ಪೂರಕಗಳನ್ನುಂಟುಮಾಡುವುದೆಂದು ಹೇಳುವುದು ವ್ಯಕ್ತವಾದುದು. ಪ್ರಾಣವಾಯುವು ಹೃದಯಕಮಲದಲ್ಲಿ ಯಾವಾಗಲೂ ಕುಂಟಿಯಲ್ಲಿರುವ ಕಪ್ಪೆಯಹಾಗೆ ಬದಿದುಕೊಳ್ಳುತ್ತಿರುವುದೆಂದು ಎಲ್ಲವನ್ನೂ ಶೋಧಿಸಿದ ಬಳಿಕ ಆ ಮಹರ್ಷಿಯು ತನ್ನ ಆಶ್ರಮಕ್ಕೆ ಹೊರಟುಹೋದನೆಂದು ಕೃಷ್ಣಮೂರುತಿಯು ಅರ್ಜುನನಿಗೆ ಬೋಧಿಸಿದನು. ಅರ್ಜುನನು ನಿರಾಕಾರಭಾವವನ್ನೆಲ್ಲಾ ಶ್ರೀ ಕೃಷ್ಣನಿಂದ ಚನ್ನಾಗಿ ತಿಳಿದ ಬಳಿಕ ಮಹಾನುಭಾವನೆ! ಆ ವಿಕ್ರಮಸೇನನ ಮುಂದಿನ ಕಥಾಸಂಪರ್ಕವೇನೆಂದು ಪ್ರಶ್ನೆಮಾಡಲು ಶ್ರೀ ಕೃಷ್ಣನಿಂತೆಂದನು.

ಕೇಳು ಅರ್ಜುನಾ! ಆ ಬಳಿಕ ವಿಕ್ರಮಸೇನ ಮಹಾರಾಯನು ಆ ಹುತ್ತವನ್ನು ಅಗೆದು ಅಲ್ಲಿದ್ದ ದೇವನಾಗರತ್ನಗಳನ್ನೆಲ್ಲಾ ತೆಗೆದುಕೊಂಡು, ಭಾರ್ಯೆಯೊಂದಿಗೆ ಸರಸಲ್ಲಾಪಗಳನ್ನಾಡುತ್ತಾ ತನ್ನ ದೇಶದ ಬಳಿಗೆ ಬಂದು, ತಾಯಿತಂದೆಗಳಿಗೆ ತಾನು ಬಂದ ವರ್ತಮಾನವನ್ನು ಹೇಳಿ ಕಳುಹಿಸಿದನು. ಆ ಚಿತ್ರಸೇನ ಮಹಾರಾಯನು ವಿಕ್ರಮಸೇನನ ಲಿಖಿತವನ್ನು ನೋಡಿ ಆಶ್ಚರ್ಯಾನಂದಗಳಿಂದ ವಿಕ್ರಮಸೇನನ ಆಗಮನವನ್ನೇ ಎದುರು ನೋಡುತ್ತಿದ್ದನು. ಹೀಗಿರುವಲ್ಲಿ ಕೋಸಲ ದೇಶಾಧೀಶನು ಮಕ್ಕಳಿಲ್ಲದೆ ಚಿಂತಾ ಪರವಶವಾಗಿ ತನ್ನ ಪಟ್ಟದಾನೆಯನ್ನು ಸ್ವೇಚ್ಛೆಯಾಗಿ ಬಿಟ್ಟಿದ್ದನು. ಈ ಪಟ್ಟದಾನೆಯು ಯಾರನ್ನು ತನ್ನ ಬೆನ್ನಿನ ಮೇಲೆಕುಳ್ಳಿರಿಸಿಕೊಂಡು ಬರುವುದೊ ಅಂತಹವನಿಗೇ ಈ ರಾಜ್ಯಭಾರವನ್ನು ವಹಿಸಿ ತಾನು ವಾನಪ್ರಸ್ಥಾಶ್ರಮವನ್ನು ವಹಿಸುವೆನೆಂದು ಧೋರೆಯುಪ್ರತಿಜ್ಞೆಮಾಡಿದನು. ಆ ಪಟ್ಟದಾನೆಯು ಅನೇಕ ದೇಶಗಳನ್ನೆಲ್ಲಾ ತಿರುತಿರುಗಿ ಕೊನೆಕೊನೆಗೆ ಚ

ತುರಂಗಬಲಸಹಿತನಾಗಿ ಬರುತ್ತಲಿದ್ದ ವಿಕ್ರಮಸೇನನನ್ನೂ ಅವನ ಸಖಿಯನ್ನೂ ತನ್ನ ಬೆನ್ನಿನಮೇಲೆ ಕುಳ್ಳಿರಿಸಿಕೊಂಡು ಹೊರಟಿತು. ಚತುರಂಗಬಲವೂ ಆ ಪಟ್ಟದಾನೆಯನ್ನು ಅನುಸರಿಸಿತು. ಆ ಪಟ್ಟದಾನೆಯು ಬಹುಬೇಗನೆ ಕೋಸಲ ದೇಶವನ್ನು ಸೇರಿತು. ಅಲ್ಲಿನ ಮಂತ್ರಿಪ್ರಧಾನಿಗಳೂ ಸಕಲ ಪುರಜನರೂ ಪಟ್ಟದಾನೆಯ ಬರುವಿಕೆಯನ್ನೆ ನಿರೀಕ್ಷಿಸುತ್ತಿರುವಲ್ಲಿ, ಈ ಆನೆಯು ಸೂರ್ಯ ತೇಜಸ್ಸನ್ನೂ ಅಲೆಗಳೆಯುತ್ತಲಿರುವ, ದಿವ್ಯ ಸುಂದರ ಸುಕುಮಾರನನ್ನು ಅಂಬಾರಿಯಲ್ಲಿ ಕುಳ್ಳಿರಿಸಿಕೊಂಡು ಬರುತ್ತಿದ್ದುದನ್ನು ಕಂಡು ಮಂಗಳವಾದ್ಯಗಳಿಂದ ರಾಜಪುತ್ರನನ್ನೂ ಅವನ ಚತುರಂಗ ಬಲವನ್ನೂ ಎದುರ್ಗೊಂಡು ಪುರಪ್ರವೇಶವಂ ಮಾಡಿಸಿ, ಕೋಸಲ ದೇಶಾಧೀಶನಿಗೆ ರಾಜಪುತ್ರನ ವರ್ತಮಾನವನ್ನೂ, ಹೇಮಕಾಂತಾಮಣಿಯು ಸುದ್ದಿಯನ್ನೂ ವಿವರಿಸಿದರು. ರಾಜೇಂದ್ರನು ಸಂತೋಷಾತಿಶಯದಿಂದ ವಿಕ್ರಮಸೇನನನ್ನು ಬಾಚಿ ತಬ್ಬಿಕೊಂಡು, ಶುಭಮುಹೂರ್ತದಲ್ಲಿ ವಿಕ್ರಮಸೇನನಿಗೆ ಕೋಸಲ ದೇಶದ ರಾಜ್ಯಪಟ್ಟವನ್ನು ಕಟ್ಟಿ, ತಾನು ಸನ್ನೀಸಮೇತನಾಗಿ ವಾನಪ್ರಸ್ಥಾಶ್ರಮವನ್ನು ಪಡೆದು ಅರಣ್ಯಕ್ಕೆ ಹೊರಟುಹೋದನು. ಅತ್ತ ಮಹಾರಾಷ್ಟ್ರ ದೇಶದಲ್ಲಿ ವಿಕ್ರಮಸೇನನ ಬರುವಿಕೆಯನ್ನೇ ಎದುರುನೋಡುತ್ತಿದ್ದ ಇವನ ತಾಯಿತಂದೆಗಳು ಕೋಸಲದೇಶದ ಚಕ್ರವರ್ತಿಯು ಲೇಖನವನ್ನು ನೋಡಿ, ತನ್ನ ಕುಮಾರನೆಂದು ಸಂತೋಷಪಟ್ಟು ಕುಟುಂಬ ಸಹಿತನಾಗಿ ತನ್ನ ಪುತ್ರನನ್ನು ನೋಡಿಕೊಂಡು ಬರಬೇಕೆಂದು ತೊರಟನು. ವಿಕ್ರಮಸೇನನಾದರೊ, ತನ್ನನ್ನು ನೋಡಿಕೊಂಡು ಹೋಗಬೇಕೆಂದು ಬಂದ ತಾಯಿತಂದೆಗಳಿಗೂ ಅಣ್ಣಂದಿರಿಗೂ ನಮಸ್ಕಾರಮಾಡಿ, ತನ್ನ ವರ್ತಮಾನವನ್ನೂ ಹೇಮಕಾಂತಾಮಣಿಯ ಸುದ್ದಿಯನ್ನೂ ವಿವರಿಸಿದನು. ಎಲ್ಲರೂ ಆಶ್ಚರ್ಯಾನಂದ ಭರಿತರಾದರು. ಬಳಿಕ ವಿಕ್ರಮಸೇನನು ಜನನೀ ಜನಕರನ್ನು ತನ್ನ ಬಳಿಯಲ್ಲಿರಿಸಿಕೊಂಡು, ಅಣ್ಣಂದಿರಿಬ್ಬರನ್ನೂ ಮಹಾರಾಷ್ಟ್ರ ದೇಶಕ್ಕೆ ಕಳುಹಿ, ತನ್ನ ಭುಜಬಲದಿಂದ ಸಕಲ ರಾಜ್ಯಗಳನ್ನೂ ಗೆದ್ದು, ರಾಜಾಧಿರಾಜನೆಂದೆನ್ನಿಸಿಕೊಂಡು, ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಾ, ತಾಯಿತಂದೆಗಳನ್ನೂ, ಗುರುಹಿರಿಯರನ್ನೂ ಭಕ್ತಿಯಿಂದ ಪೂಜಿಸುತ್ತಾ, ಹೇಮಕಾಂತಾಮಣಿಯೊಂದಿಗೆ ಸುಖ ಸಂತೋಷಗಳನ್ನನುಭವಿಸುತ್ತ, ಬಹುಕಾಲ ರಾಜ್ಯಭಾರವಂ ಮಾಡಿ, ಅನಂತರ ಈ ದೇಹವನ್ನು ಬಿಟ್ಟು, ಶಾಶ್ವತ ಕೈವಲ್ಯವನ್ನು ಪಡೆದನೆಂದು ಶ್ರೀ ಕೃಷ್ಣನು ಅರ್ಜುನನಿಗೆ ಬೋಧಿಸಿದನು. ಅರ್ಜುನನಾದರೊ, ಅತ್ಯಾನಂದದಿಂದ ಮಹಾನುಭಾವನೆ! ವಿಕ್ರಮಸೇನನ ಚರಿತೆಯನ್ನೂ, ನಿರಾಕಾರ ಭಾವವನ್ನೂ ನನಗೆ ಬೋಧಿಸಿದ ರಿಂದ

ನಾನು ಧನ್ಯನಾದೆನು. ನಿದ್ರೆಯಾದರೊ ಕಣ್ಣುಗಳನ್ನು ಚುಚ್ಚುತ್ತಲಿರುವುದು. ನಿದ್ರಿಸೋಣವೆನ್ನಲು ಶ್ರೀ ಕೃಷ್ಣನೂ ಒಡಂಬಟ್ಟನು. ಇಬ್ಬರೂ ಆ ಮರಳ ದಿಬ್ಬದಮೇಲೆಯೇ ಸುಖದಿಂದ ನಿದ್ರಿಸಿದರೆಂಬಲ್ಲಿಗೆ ಶ್ರೀ ಕೃಷ್ಣ ಚೋಧ್ಯಾವೃತ ಸಾರದೊಳು ಎಂಟನೆಯ ಕಥೆಯು ಸಮಾಪ್ತವಾದುದು.

ಒಂಭತ್ತನೆಯ ಕಥಾ ಪ್ರಾರಂಭವು.

ಒಂಭತ್ತನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಭೋಜನಾನಂತರ ಯಮುನಾ ನದಿಯ ಮರಳ ದಿಬ್ಬದ ಮೇಲೆ ಕುಳಿತು, ಸುಗಂಧವನ್ನು ಲೇಪಿಸಿಕೊಂಡು, ಸುಪುಷ್ಪಗಳನ್ನು ಮುಡಿದುಕೊಂಡು, ಮಂದ ಮಾರುತನಿಗೆ ಮೈಯೊಡ್ಡಿ, ಆನಂದದಿಂದ ಸರಸೋಕ್ತಿಗಳನ್ನಾಡುತ್ತಿರುವಾಗ, ಅರ್ಜುನನು ಶ್ರೀ ಕೃಷ್ಣಸ್ವಾಮಿಯನ್ನು ಕುರಿತು, ಮಹಾನುಭಾವನೆ! ಲೋಕಪೂಜ್ಯನೆ! ಸುಮನಸ್ಕ ಭಾವವನ್ನು ಒಂದು ಪುಣ್ಯ ಚರಿತ್ರೆಯ ಮೂಲಕ ಬೋಧಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಪ್ರಾರ್ಥಿಸಲು ಶ್ರೀ ಕೃಷ್ಣನು ರಾಜಹಂಸ ಮಹಾರಾಯನ ಕಥೆಯನ್ನು ಹೇಳಲಾರಂಭಿಸಿದನು.

ರಾಜಹಂಸ ಮಹಾರಾಯನ ಚರಿತ್ರೆ.

ಇಂದ್ರತನುಜಾ! ಪೂರ್ವದಲ್ಲಿ ಮಾಳವ ದೇಶದಲ್ಲಿ ಹಂಸವಾದ ಮಹಾರಾಯನೆಂಬ ಧೊರೆಯು ರಾಜ್ಯಭಾರವಂ ಮಾಡುತ್ತಲಿದ್ದನು. ಆ ರಾಜೇಂದ್ರನಿಗೆ ರಾಜಹಂಸನೆಂದೂ, ಹಂಸಗಮನನೆಂದೂ ಇಬ್ಬರು ಕುವರರಿರುವರು. ಅವರಲ್ಲಿ ದೊಡ್ಡವನಾದ ರಾಜಹಂಸನು ಬಹಳ ಸುಂದರನು. ಧೈರ್ಯ ಶೌರ್ಯ ಶಕ್ತಿ ಸಾಹಸಾದಿ ಸಕಲ ಗುಣಯುತನು. ಸಕಲ ವಿದ್ಯಾ ನಿಪುಣನೂ ಧನುರ್ವಿದ್ಯೆಯಲ್ಲಿ ಅತ್ಯತೀಯನೂ ಆಗಿದ್ದನು. ವೇದಾಂತ ಶಾಸ್ತ್ರವನ್ನೂ ಚನ್ನಾಗಿ ಅಭ್ಯಾಸಮಾಡಿದ್ದನು. ಆದರೆ ತದಂಗವಾದ ಧರ್ಮ ಮರ್ಮ ಕರ್ಮ ವಿಚಾರವು ತಿಳಿಯದೆ ಅವನ್ನು ಅಭ್ಯಾಸಮಾಡಬೇಕೆಂಬ ಆಸೆಯುಳ್ಳವನಾಗಿ, ವೇದಾಭ್ಯಾಸಿಗಳನ್ನೂ, ಯೋಗಿಗಳನ್ನೂ, ಜ್ಞಾನಿಗಳನ್ನೂ ಆಶ್ರಯಿಸಿ, ಭಕ್ತಿ ವೈರಾಗ್ಯ ಬುದ್ಧಿಯಿಂದ ಅವರನ್ನು ಸೇವಿಸುತ್ತಾ, ಅವರಿಂದ ತನ್ನ ಮನಸ್ಸಿನ ಸಂಶಯವನ್ನು ಹೋಗಲಾಡಿಸಿಕೊಳ್ಳುತ್ತಾ, ಇರುವುದನ್ನು ಅವನ ತಾಯಿ ತಂದೆಗಳು ನೋಡಿ, ಸುಕುಮಾರನೆ! ನಿನ್ನಿಂದ ನಮಗೆ ಸುಖವೂ ಕೀರ್ತಿಯೂ ಉಂಟಾಗುವುದೆಂದು ನಂಬಿದ್ದೆವು. ನೀನು ಧೈರ್ಯ ಶೌರ್ಯ ಗಾಂಭೀರ್ಯಗಳನ್ನೆಲ್ಲಾ ಬಿಟ್ಟು, ರಾಜಋಷಿಯಂಥ ವಾದ ಕೆಲಸಗಳನ್ನೂ ಬಿಟ್ಟು, ಸನ್ಯಾಸಿಗಳನ್ನೂ ಯೋಗಿ

ಗಳನ್ನೂ ಸೇವಿಸುತ್ತಾ, ನಿದ್ರಾಹಾರಗಳನ್ನು ಬಿಟ್ಟು ಒಣಗುತ್ತಿರುವಿ. ಅಯ್ಯೋ! ಜನರು ನಮ್ಮನ್ನು ನಿಂದಿಸುವರು, ನಿನ್ನನ್ನು ಹಾಸ್ಯಮಾಡುವರು, ಯುವರಾಜ ಪಟ್ಟವನ್ನು ಹೊಂದಿ ನಮಗೆ ಸಂತೋಷವನ್ನುಂಟುಮಾಡೆನಲು, ರಾಜಪುಂಸನು ತಾಯಿ ತಂದೆಗಳ ಮಾತಿಗೆ ಪಕ್ಕನೆ ನಕ್ಕು, ಅವರಿಗೆ ನಮಸ್ಕಾರವಂ ಮಾಡಿ, ದೇವತೆಗಳಿಗೆ ಸಮವಾದ ತಾಯಿ ತಂದೆಗಳೆ! ನನ್ನಿಂದ ನಿಮಗೆ ಸಕಲ ಸುಖಗಳೂ ಲಭಿಸಲು ಏನೂ ಅಡ್ಡಿ ಇಲ್ಲ. ಹರಿಶ್ಚಂದ್ರ ಮನು ಮಾಂಧಾತಾದಿ ಚಕ್ರವರ್ತಿಗಳೂ, ಗಯ ಅಂಬರೀಷಾದಿ ಮಹಾರಾಜರೂ, ಈ ಭೂಲೋಕ ಸುಖವನ್ನು ತುಚ್ಛವೆಂದೆಣಿಸಿ, ಇಹಲೋಕ ಸುಖದಾಯಕಗಳಾದ ನವರತ್ನಗಳನ್ನೂ, ಗೋವ್ರಜಗಳನ್ನೂ ಭೂಮಿಯನ್ನೂ, ಭಂಗಾರ, ಬೆಳ್ಳಿ ಇವೆಲ್ಲವನ್ನೂ ಹೀನವಾಗಿ ಭಾವಿಸಿ, ಬಂಧು ಜನಗಳ ಮೇಲಿನ ಮಮತೆಯನ್ನೂ ತೊರೆದು, ಶಾಶ್ವತಸುಖಾನಂದವನ್ನು ಪಡೆಯಲು ರಾಜ್ಯಭಾರದಲ್ಲಿಯೂ ಮಮತೆಯನ್ನು ತೊರೆದು, ಅರಣ್ಯವಾಸವಂ ಕೈಗೊಂಡಿರುವರು. ಅಂತಹ ಶ್ರೇಷ್ಠವಾದ ವೇದಾಂತ ಮಾರ್ಗವನ್ನು ನೀವು ಅಲ್ಪವಾಗಿ ಎಣಿಸಬಹುದೆ? ಅವು ಬಾಲ್ಯದಲ್ಲಿಯೇ ಗ್ರಹಿಸುವುದು ಸುಲಭ. ಅನಂತರ ರಾಜ್ಯಸುಖವನ್ನು ಅನುಭವಿಸಬಹುದು. ಧ್ರುವನೂ, ಪ್ರಹ್ಲಾದನೂ ಎಷ್ಟನೆ ವಯಸ್ಸಿನಲ್ಲಿ ತಪಸ್ಸು ಮಾಡಿದರು? ಅದರಿಂದ ಅವರು ನಿತ್ಯಾನಂದ ಸುಖವನ್ನು ಪಡೆಯಲಿಲ್ಲವೇ ಎಂದು ತಾಯಿ ತಂದೆಗಳನ್ನು ಸಂತೋಷಪಡಿಸಿ, ತಾನು ಮಾತ್ರ ಯೋಗಿಗಳಲ್ಲಿಯೂ, ಗುರುಹಿರಿಯರಲ್ಲಿಯೂ ವಿಕಲ್ಪರಹಿತಬುದ್ಧಿಯುಳ್ಳವನಾಗಿದ್ದನು. ಹೀಗಿರುವಲ್ಲಿ ಒಂದಾನೊಂದು ದಿನ ಅಲ್ಲಿಗೆ ದೀರ್ಘದೃಷ್ಟಿಯಾದ ಮುನಿಯು ಬಂದನು. ರಾಜಪುಂಸ ಮಹಾರಾಯನಾದರೊ, ಆ ಮುನಿಯನ್ನು ಅಘ್ರ್ಯಪಾದ್ಯಗಳಿಂದ ಸತ್ಕರಿಸಿ, ಮುನಿಯನ್ನು ಭಕ್ತಿಯಿಂದ ಸೇವಿಸಿದನು ರಾಜಪುತ್ರನ ಬಾಲ್ಯವನ್ನೂ, ಗುರುಹಿರಿಯರಲ್ಲಿ ಭಕ್ತಿಯನ್ನೂ, ವೈರಾಗ್ಯ ಬುದ್ಧಿಯನ್ನೂ ದೀರ್ಘದೃಷ್ಟಿಯಾದ ಮಹರ್ಷಿಯು ನೋಡಿ ಬಹಳವಾಗಿ ಸಂತೋಷಪಟ್ಟನು. ರಾಜಪುತ್ರನನ್ನು ಕುರಿತು, ರಾಜಪುಂಸನೆ! ನನಗೆ ಅವಸಾನ ಕಾಲವು ಸವಿಾಪಿಸಿತು. ನನ್ನ ಬಳಿ ಇರುವ ಶತ್ರುನಾಶನಿ ಎಂಬ ಈ ಚಂದ್ರಾಯುಧವನ್ನು ನಿನ್ನ ಭಕ್ತಿ, ವೈರಾಗ್ಯಗಳಿಗೆ ಮೆಚ್ಚಿ ಮಂತ್ರಪೂರ್ವಕವಾಗಿ ಕೊಟ್ಟಿರುವೆನು. ರಾಜಪುತ್ರನೆ! ಇದು ಪೂರ್ವದಲ್ಲಿ ಕೃತಯುಗದಲ್ಲಿ ಘೋರಜಟನೆಂಬ ಮಹರ್ಷಿಯಲ್ಲಿದ್ದಿತು. ಆ ಮುನಿಯು ತನ್ನ ತಪಸ್ಸಿಗೆ ರಾಕ್ಷಸರಿಂದಲೂ, ದುಷ್ಟ ಮೃಗಗಳಿಂದಲೂ ಭಂಗಬಾರದಂತೆ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ, ಈ ಚಂದ್ರಾಯುಧವನ್ನು ಪಡೆದನು. ಇದರ ಸಹಾಯದಿಂದಲೇ ದುಷ್ಟ ರಾಕ್ಷಸರನ್ನೂ, ವ್ಯಾಘ್ರ, ಭಲ್ಲೂಕಾದಿ

ಮೃಗಗಳನ್ನೂ ಸಂಹರಿಸಿ ತನ್ನ ತಪಸ್ಸನ್ನು ನಿರ್ವಿಘ್ನವಾಗಿ ಕಾಪಾಡಿ ಕೊಂಡನು. ಈ ಚಂದ್ರಾಯುಧವನ್ನು ನಿಲ್ಲಿಸಿ ತಾನು ತಪಸ್ಸಿಗೆ ಕುಳಿ ತುಕೊಂಡರೆ ಯಾವ ರಾಕ್ಷಸರೂ ಎದುರಿಗೆ ನಿಲ್ಲಲಾರದೆ ಇದ್ದರು. ಯಾವ ದುಷ್ಟ ಮೃಗವೂ ಅಲ್ಲಿ ಸುಳಿಯುತ್ತಿರಲಿಲ್ಲ. ಇಂತಹ ಶ್ರೇಷ್ಠವಾದ ಈ ಚಂದ್ರಾಯುಧವು ಶಿಷ್ಯಪರಂಪರೆಯಿಂದ ನನಗೆ ಬಂದಿತ್ತು. ನಾನು ಈಗ ಇದನ್ನು ಮಂತ್ರಪೂರ್ವಕವಾಗಿ ನಿನಗೆ ಅನುಗ್ರಹಿಸಿರುವೆನು. ಇದರ ಪ್ರಭಾವದಿಂದ ನೀನು ಸಕಲ ರಾಜರನ್ನೂ ಗೆಲ್ಲುವೆ. ಸಾಮ್ರಾಜ್ಯ ಪಟ್ಟಾ ಭಿಷೇಕವನ್ನೂ ಸಕಲ ಸುಖಾನಂದಗಳನ್ನೂ ಅನುಭವಿಸುವೆ. ನೀನು ಇ ದನ್ನು ಭಕ್ತ್ಯತಿಶಯದಿಂದ ಧರಿಸು. ಇದನ್ನು ಧರಿಸಿದವರು ಮೂರು ವರ್ಷಗಳು ವಾದಚಾರಿಗಳಾಗಿ ಭೂಸಂಚಾರ ಮಾಡಬೇಕು. ಅನಂತರ ಸುಖಾನಂದವನ್ನು ಪಡೆಯಬಹುದು. ನಿನ್ನ ವಿಯೋಗ ಕಾಲದಲ್ಲಿ ಇದು ಸತ್ಯಲೋಕದಲ್ಲಿರುವುದೆಂದು ಹೇಳಿ ಆ ಮುನಿಯು ಪ್ರಾಣಗಳನ್ನು ಬಿಟ್ಟ ನು. ಋಷಿಯ ಮರಣದಿಂದ ಆ ರಾಜಹಂಸನು ಬಹುವಾಗಿ ದುಃಖಿಸಿ, ಆ ಮಹಾತ್ಮನಿಗೆ ಸಮಾಧಿಯನ್ನು ಮಾಡಿ, ಋಷಿಪ್ರೀತ್ಯರ್ಥವಾಗಿ ಸತ್ಪಾತ್ರ ರಿಗೆ ವಿಧವಿಧನಾದ ದಾನಗಳನ್ನು ಕೊಟ್ಟು, ತಾಯಿ ತಂದೆಗಳಿಗೆ ನಮ ಸ್ಕಾರವಂ ಮಾಡಿ, ಅವರಿಗೆ ಚಂದ್ರಾಯುಧದ ಮಹಿಮೆಯನ್ನೆಲ್ಲಾ ಬೋ ಧಿಸಿ, ತಾನು ಭೂ ಸಂಚಾರಾರ್ಥವಾಗಿ ಅವರ ಅನುಮತಿಯಿಂದ ಹೊರ ಟನು. ರಾಜಹಂಸನು ಪಾದಚಾರಿಯಾಗಿ ಉತ್ತರ ದಿಕ್ಕಿಗೆ ಹೋರಟು, ಅಲ್ಲಲ್ಲಿ ಸಿಕ್ಕುವ ನದಿಗಳಲ್ಲಿಳಿದು ಸ್ನಾನಮಾಡುತ್ತಾ, ಋಷಿಗಳನ್ನು ಸೇವಿ ಸುತ್ತಾ, ನಿರ್ಭಯವಾಗಿ ಬಿಲಗಳಲ್ಲಿ ಪ್ರವೇಶಮಾಡುತ್ತಾ, ಚಿಟ್ಟಗಳನ್ನ ಹತ್ತುತ್ತಾ, ಸಿದ್ಧಪುರುಷರನ್ನು ಸೇವಿಸುತ್ತಾ, ಒಂದೊಂದು ಆಶ್ರಮದಲ್ಲಿ ಮೂರು ಮೂರು ದಿನಗಳಿರುತ್ತಾ, ತನ್ನ ಮನಸ್ಸಂದೇಹವು ಯಾರಿಂದ ಪರಿಹಾರವಾದೀತೆಂದು ಚಿಂತಿಸುತ್ತಾ, ಎರಡು ಸಂವತ್ಸರಗಳ ವರೆಗೂ ಅಲೆ ದ ಬಳಿಕ ವಾಲ್ಮೀಕಿ ಮಹರ್ಷಿಯ ಆಶ್ರಮವು ಸಿಕ್ಕಿತು, ರಾಜಪುತ್ರನು ಆ ಶ್ರಮವನ್ನು ಹೊಕ್ಕು ಅಲ್ಲಿದ್ದ ಮಹರ್ಷಿಗೆ ಸಾಷ್ಟಾಂಗ ನಮಸ್ಕಾರವಂ ಮಾಡಿದನು. ವಾಲ್ಮೀಕಿ ಮುನಿಯು ರಾಜಪುತ್ರನನ್ನು ಹತ್ತಿರ ಕುಳ್ಳಿರಿಸಿ ಕೊಂಡು, ಸುಕುಮಾರನೆ ವೈದಡವಿ, ಮಗೂ ! ನೀನು ಯಾರು? ಈ ಘೋರಾರಣ್ಯದಲ್ಲಿ ಯಾಕೆ ಬಂದೆ ? ನಿನ್ನ ವರ್ತಮಾನವೇನೆಂದು ಕೇಳಲು ರಾಜಹಂಸನು ತನ್ನ ದೇಶವನ್ನೂ, ತಾಯಿ ತಂದೆಗಳನ್ನೂ, ದೀರ್ಘವಾದ ಮುನಿಯು ತನಗೆ ಅನುಗ್ರಹಿಸಿದ ಚಂದ್ರಾಯುಧದ ಮಹಿಮೆಯನ್ನೂ, ಇ ದಕ್ಕಾಗಿ ತಾನು ಭೂಸಂಚಾರ ಹೊರಟು ಅಲ್ಲಲ್ಲಿ ತಿರುಗುತ್ತಾ ಎರಡು ಸಂ ವತ್ಸರಗಳು ಕಳೆದು, ಮಹರ್ಷಿಯಾದ ನಿಮ್ಮ ಆಶ್ರಮಕ್ಕೆ ಬಂದೆನೆನಲು,

ಮುನಿಯು ಬಹುವಾಗಿ ಸಂತೋಷಿಸಿ, ರಾಜನಂದನಾ ! ನೀನು ಎರಡುವರ್ಷಗಳಿಂದಲೂ ಗಟ್ಟಿಬೆಟ್ಟಗಳಲ್ಲಿಯೂ, ಕಾಡುಮೇಡುಗಳಲ್ಲಿಯೂ ಅಲೆದು ತುಂಬಾ ಆಯಾಸಗೊಂಡಿರುವೆ. ಕೆಲವುದಿನ ನಮ್ಮ ಆಶ್ರಮದಲ್ಲಿಯೇ ಸುಖವಾಗಿದ್ದು ಆಯಾಸವನ್ನು ಪರಿಹರಿಸಿಕೊಳ್ಳಿನಲು, ರಾಜ ತ್ಯನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಪ್ರತಿನಿತ್ಯವೂ ವಾಲ್ಮೀಕಿ ಮಹರ್ಷಿಯ ಸೇವೆಮಾಡುತ್ತಾ, ಸಮಿತ್ಕುಶಂಗಳನ್ನು ತಂದುಕೊಡುತ್ತಾ, ಸಮಯೆಸಿಕ್ಕಿದಾಗಲೆಲ್ಲ ಆ ಮಹರ್ಷಿಯಿಂದ ವೇದಾಂತಸಾರವನ್ನು ತಿಳಿದುಕೊಳ್ಳುತ್ತಾ ಕಾಲವಂ ಕಳೆಯುತ್ತಲಿದ್ದನು. ಅನೇಕ ದಿವ್ಯಾಸ್ತ್ರಂಗಳ ಪ್ರಯೋಗ ಉಪಸಂಹಾರಗಳನ್ನು ಕಲಿತನು. ಹೀಗೆಯೇ ಅನೇಕ ದಿನಗಳು ಕಳೆದಬಳಿಕ ಒಂದಾನೊಂದು ದಿನ ರಾಜಹಂಸನು ವಾಲ್ಮೀಕಿಮುನಿಯ ಪಾದಾರವಿಂದಗಳಿಗೆ ಅಡ್ಡಬಿದ್ದು, ಮುನಿವರ್ಯನೆ! ಮನುಷ್ಯನಿಗೆ ಬ್ರಹ್ಮತ್ವ ಉಂಟಾಗುವುದು ಹೇಗೆ? ಮನಸ್ಸನ್ನು ಬ್ರಹ್ಮದಲ್ಲಿ ನಿಲ್ಲಿಸುವುದು ಹೇಗೆ? ಎಂಬದಾಗಿ ಪ್ರಶ್ನೆಮಾಡಿದನು. ವಾಲ್ಮೀಕಿಮುನಿಯು ಪಕ್ಕನೆ ನಕ್ಕು, ರಾಜಪುತ್ರನೆ! ನಿನ್ನ ಅಮೋಘವಾದ ಈ ಪ್ರಶ್ನೆಯು ದೇವತೆಗಳಿಗೂ ಸಾಧ್ಯವಲ್ಲವು. ಅತ್ಯಂತ ರಹಸ್ಯವಾದ ದೇವರಹಸ್ಯವನ್ನು ಪ್ರಶ್ನೆಮಾಡಿದೆ. ಪರಿಶುದ್ಧವಾದ ದೇವರಹಸ್ಯವನ್ನು ನಿನಗೆ ಬೋಧಿಸುವೆನೆಂದು ಹರ್ಷಿತರಕುಳ್ಳಿರಿಸಿಕೊಂಡು ಆ ಮುನೀಂದ್ರನಿಂತು ಬೋಧಿಸಿದನು.

ವಾಲ್ಮೀಕಿಮುನಿಯು ರಾಜಹಂಸ ಮಹಾರಾಯನಿಗೆ ಬೋಧಿಸಿದ ಅಮನಸ್ಕ ಭಾವವು.

ರಾಜಪುತ್ರನೆ ಕೇಳು! ಆನಂದೋ ಬ್ರಹ್ಮವೆಂಬ ಶ್ರುತಿಗನುಸಾರವಾಗಿ ಕಶ್ಯಪ, ಭರದ್ವಾಜ, ಗೌತಮ, ವಸಿಷ್ಠ, ವಿಶ್ವಾಮಿತ್ರ, ಶುಕ ಮೊದಲಾದ ಮಹರ್ಷಿಗಳೂ ಇನ್ನೂ ಅನೇಕ ದೇವಮಾನವರೂ ಸಚ್ಚಿದಾನಂದಸ್ವರೂಪನಾದ ಬ್ರಹ್ಮನನ್ನು ಉಪ್ಪೇಕ್ಷಿಸಿ, ಸದೂಪ, ಚಿದೂಪಂಗಳನ್ನು ಒಂದಾಗಿ ಸೇರಿಸಿ, ತನಂದಸ್ವರೂಪವಾಗುವಂತೆ ಮಾಡಿಕೊಂಡು, ನಾ ಬ್ರಹ್ಮಾಸ್ಮಿಣತಾಪೆವು. ದೇವಮಾನವರಲ್ಲಿ ಯಾರೇ ಆಗಲಿ ಬ್ರಹ್ಮತ್ವನನ್ನು ಪಡೆಯದೆ ಮೋಕ್ಷವನ್ನು ಹೊಂದಲಾರರು. ವಿಧಿನಿಷೇಧ ಜನಹೋಮಾದಿ ಕ್ರಿಯೆಗಳಿಂದಾಗಲಿ ಮೋಕ್ಷಕ್ಕೆ ಮಾರ್ಗವಲ್ಲವು. ಅವಿಕರ್ಮಕಾಂಡದೊಳಗೂ ಕರ್ಮಕಾಂಡದೊಳಗೂ ವಿಲೀನವನ್ನು ಹೊಂದದೆ ತಪಿಸುತ್ತಿರುವರು. ಜ್ಞಾನಕಾಂಡದೊಳಗೆ ಸೇರಿದ ದೇವಮಾನವರಲ್ಲಿ ಯಾರೇ ಆಗಲಿ ಸನ್ಯಾಸಿಗಳಾಗಿ ತಪೋವೃತ್ತಿಯಿಂದಿದ್ದರೂ ಅಥವಾ ಗೃಹಸ್ಥಾಶ್ರಮ ಧರ್ಮವನ್ನವಲಂಬಿಸಿದರೂ, ಭೇದರಹಿತವಾಗಿ ಬ್ರಹ್ಮತ್ವವನ್ನೂ ಮೋಕ್ಷವನ್ನೂ

ಹೊಂದುವರು. ವೇದಗಳಲ್ಲಿ ಅಥರ್ವಣವೇದವೂ, ಉಪನಿಷತ್ತುಗಳಲ್ಲಿ ನಿರ್ಗುಣೋಪನಿಷತ್ತೂ, ಶಾಸ್ತ್ರಂಗಳಲ್ಲಿ ವೇದಾಂತಶಾಸ್ತ್ರವೂ, ಗುಣಗಳಲ್ಲಿ ಸತ್ವಗುಣವೂ, ಯೋಗಗಳಲ್ಲಿ ರಾಜಯೋಗವೂ, ಮಂತ್ರಗಳಲ್ಲಿ ಪ್ರಣವ ಮಂತ್ರವೂ, ಮಾರ್ಗಗಳಲ್ಲಿ ಕುಂಡಲಿಮಾರ್ಗವೂ, ಮನುಷ್ಯರಲ್ಲಿ ವೇದಾಂತಪ್ರವರ್ತನವೂ, ಮಿಕ್ಕವುಗಳಿಲ್ಲಾ ಮನಸ್ಸು ಲಯವಾಗುವುದರಿಂದ ಅಮನಸ್ಕವು. ಇದನ್ನೇ ಯೋಗವೆಂದೂ ಹೇಳುವರು ಈ ಅಷ್ಟಾಕ್ಷರೀ ಮಂತ್ರವನ್ನು ಗ್ರಹಿಸಿ, ಷಡಾಧಾರಂಗಳಿಗೂ ಅಧಿದೇವತೆಯಾದ ಗಣಪತಿ, ಬ್ರಹ್ಮ, ವಿಷ್ಣು, ಶಿವ, ಜೀವಾತ್ಮರಿಗೆ ನಮಸ್ಕಾರವಂಮಾಡಿ, ನಾದಬ್ರಹ್ಮವನ್ನು ಸೇರಿಸಿ, ನಾಂ ಬೇಜಾರಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಆ ದೃಷ್ಟಿಯನ್ನು ಚದರಲೀಸದೆ, ಅಘೋ ಕುಂಡಲಿಯಿಂದ ಹೊಂದಿರುವ ಹಂಸವನ್ನು ರೇಚಕಪೂರಕಾದಿಗಳಿಂದ ಆ ಜಪಕುಂಡಲಿಗೆದುರಾಗಿರುವಂತೆ ಮಾಡಿ, ಅಷ್ಟಾಂಗುಳಿಯನ್ನು ಪೂರಿಸಿ, ದ್ವಾದಶಾಂಗುಳಿಯನ್ನು ಚಿರ್ರನೆ ರೇಚಿಸಿ, ಆ ಜಪಕುಂಡಲಿಯನ್ನು ಸ್ಪೋಟಿಸಿ, ನಾದಬ್ರಹ್ಮವನ್ನು ನಿಲ್ಲಿಸಿ, ಸೂರ್ಯನಾಡಿಯಿಂದ ಚಂದ್ರನನ್ನೂ, ಚಂದ್ರನಾಡಿಯಿಂದ ಸೂರ್ಯನನ್ನೂ ಪ್ರಕಾಶಗೊಳಿಸಿ, ಆ ಚಂದ್ರಭಾಸ್ಕರರನ್ನು ಒಂದುಮಾಡಿ, ಹಂಸವನ್ನು ಸೂಕ್ಷ್ಮವಾದ ವಿದ್ಯುಲ್ಲೀಲೆಯುಂತಿರುವಸುಷುಮ್ನವನ್ನು ನಾಡಿಯುಲ್ಲಿನೇರಿಸಿ, ಪದ್ಮಾಸನವಲ್ಲಯಾಗಲಿ ಅಥವಾ ಎರಡು ಕಾಲ್ಗಳ ಮೇಲಾಗಲಿ ಕುಳಿತು, ನಡುವನ್ನು ಸಮಾನವಾಗಿಮಾಡಿಕೊಂಡು, ಮುಖವನ್ನು ನೇಗವಾಗಿ ನಿಲ್ಲಿಸಿ, ಜಂಟಿ ನಾಗಸ್ವರವನ್ನು ಸುಡಿಸುತ್ತಾ, ಮಧುವೀಥಿಯನ್ನಲಂಕರಿಸಿ, ಒಂದು ಕೈ ಚೆರಳಿನಿಂದ ನಾಲಿಗೆಯನ್ನು ಹಿಡಿದು, ಮತ್ತೊಂದು ಚೆರಳಿನಿಂದ ಹಂಸಸಂಚಾರಮಾರ್ಗವನ್ನಷ್ಟಗಿಸಿ, ಚೀರೊಂದು ಮಾರ್ಗವನ್ನು ಹಿಡಿದು ಬಂಧಿಸಿ, ಚೀರೊಂದು ಚೆರಳಿನಿಂದ ಜೋತಿಯನ್ನುಂಟುಮಾಡಿ, ವಿಕಾರೀತಿಯಾಗಿ ಬಾಯಪಡಿಸಿ, ಹಂಸವನ್ನು ಊರ್ಧ್ವಕುಂಡಲಿಯಿಂದ ದಾಟಿಸಿ, ತ್ರಿವೇಣಿಸಂಗಮವನ್ನು ಹೊಂದುವಂತೆ ಮಾಡಿ, ಮನೋವಾಕ್ಕುತಗಳನ್ನು ಒಟ್ಟುಗೂಡಿಸಿ, ಆ ಎರಡನ್ನೂ ಲಕ್ಷ್ಯದಲ್ಲಿಟ್ಟು ನಿಲ್ಲಿಸಿ ನೋಡಿದರೆ ವಿಚಿತ್ರವಾದ ಕಾಂತಿಯೂ ಸೂರ್ಯಚಂದ್ರರ ಪ್ರಕಾಶವೂ, ನಾದಬ್ರಹ್ಮನಂದವುಂಟಾಗುವುದು. ಥಾ ರಾಕಾಶ ಚಿದಾಕಾಶಗಳನ್ನು ನೋತುತಾ, ಪ್ರಕಾಶವಾದ ಶಶಿಕಾಂತಿಯನ್ನು ಒಂದಾಗಿ ಮಾಡಿ, ಈ ಕಾಂತಿಯನ್ನೂ ಒಳಭಾಗದಲ್ಲಿರುವ ಕಾಂತಿಯನ್ನೂ ಒಂದಾಗಿ ಮಾಡುವುದು. ಇದನ್ನೆ ಅಮನಸ್ಕಭಾವವೆಂದೂ ಎಲ್ಲವನ್ನೂ ಜೋಧಿಸಿದನು. ಆ ರಾಜಹಂಸ ಮಹಾರಾಯನೂ ಕೂಡ ಇದನ್ನೆಲ್ಲ ಚನ್ನಾಗಿ ಗ್ರಹಿಸಿ, ಹೆಚ್ಚಾದ ವೈರಾಗ್ಯಮಾರ್ಗದಿಂದ ಅದನ್ನು ಸಾಧಿಸುತಿದ ನೆಂದು ಶ್ರೀ ಕೃಷ್ಣ ನು ಅರ್ಜುನನಿಗೆ ಜೋಧಿಸಿದನು. ಆಗ ಅರ್ಜು

ನನು ಆಹಾ! ಇದು ಪರಮಾಶ್ಚರ್ಯವೂ ಅತ್ಯದ್ಭುತವೂ ಆದದ್ದು. ಈ ಅ
ಮನಸ್ಕ ಭಾವವನ್ನು ಅನುಸರಿಸುವುದು ಬಹುಕಷ್ಟವು. ಕಷ್ಟವಿಂದ ಸಾ
ಧಿಸಿದರೆ ಇಹಪರ ಸುಖವು ಅವಾಗವಾದದ್ದು. ಹೀಗೆಂದು ಹೇಳುತ್ತಾ ಶ್ರೀ
ಕೃಷ್ಣಸ್ವಾಮಿಯನ್ನು ನಾನಾ ಪ್ರಕಾರವಾಗಿ ಕೊಂಡಾಡಿ, ಮಹಾನುಭಾ
ವನೆ! ರಾಜಹಂಸ ಮಹಾರಾಯನ ಮುಂದಿನ ಕಥಾಸಂದರ್ಭವನ್ನು ತಿಳಿಸ
ಬೇಕೆನ್ನಲು ಶ್ರೀ ಕೃಷ್ಣನಿಂತೆಂದನು.

ಆ ಬಳಿಕ ಆ ರಾಜಪುತ್ರನು ಮಾಡುತ್ತಿರುವ ಯೋಗಸಮಾಧಿಗಳಿಗೆ
ವಾಲ್ಮೀಕಿ ಮುನಿಯು ಮೆಚ್ಚಿ, ರಾಜಪುತ್ರನನ್ನು ಕುರಿತು, ಮಗೂ! ನಿನ
ಗೆ ಯೋಗಸಮಾಧಿಯು ಚೆನ್ನಾಗಿ ತಿಳಿಯುವಂತಿತು. ಪಾವನಮೂರುತಿ
ಯಾದೆ. ಇನ್ನು ನೀನು ನಿನ್ನ ಪಟ್ಟಣಕ್ಕೆ ಹೋಗಿ ಸುಖವಾಗಿ ರಾಜ್ಯಪರಿ
ಪಾಲನೆಯನ್ನು ಮಾಡುತ್ತಾ ರಾಜಯೋಗಿಯಾಗಿರು. ನಿನಗೆ ನಿಯಮಿತ
ವಾಗಿದ್ದ ಮೂರುವರ್ಷ ಭೂರಿಸಂತಾರದ ಗತುವನ್ನು ಕಳೆದಿತು. ಎಂದು ಆ
ಜ್ಞಾಪಿಸಿದನು. ರಾಜಪುತ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡು,
ಮುನಿಯ ಅಪ್ಪಣೆಯನ್ನು ಪಡೆದು ಸ್ವಲ್ಪದೂರ ಬೀಳ್ಕೊಡುವ ಮೇಲೆ ತಿರುಗಿ
ಆಬಳಿಕ ತನ್ನ ರಾಜ್ಯಕ್ಕೆ ಹೋಗುವೆನೆಂದು ಹೇಳಿ ಸ್ವಯಾಜ್ಞೋನ್ಮುಖನಾ
ಗಿ ಬಹುದೂರ ಬರಲು ಅಲ್ಲೊಂದು ಊರು ಸಿಕ್ಕಿತು. ರಾಜಪುತ್ರನು ಆ
ಊರಿನೊಳಗೆ ಹೋಗಿ ಅಲ್ಲೊಬ್ಬ ಅಡಗೂಲಜ್ಜಿಯ ಮನೆಯಲ್ಲಿಳಿದು ಸ್ನಾ
ನಭೋಜನಾದಿಗಳನ್ನು ತೀರಿಸಿಕೊಂಡು, ಆ ಬಳಿಕ ಆ ಮುದುಕಿಯನ್ನು
ಕುರಿತು, ಅಮ್ಮಾ! ಈ ದೇಶವು ಯಾವದು? ಇಲ್ಲಿನ ದೊರೆಯಾರು? ನಿನು ವಿ
ಶೇಷವೆಂದು ಕೇಳಲು, ಆ ಮುದುಕಿಯು ಹೇಳುತ್ತಾಳೆ; ಇದು ಗಾಂಧಾರ
ವೆಂಬ ದೇಶವು. ಈ ದೇಶದಲ್ಲಿ ಕಾರ್ತಿಕೇಯನೆಂಬ ರಾಜನಿರುವನು. ಈ
ರಾಜನಿಗೆ ಕಂಜಾಕ್ಷನೆಂಬ ಮಗನೂ ಕಂಜಾಕ್ಷಿಯೆಂಬ ಮಗಳೂ ಇರುವ
ರು. ಆ ಕಂಜಾಕ್ಷಿಯ ಸೌಂದರ್ಯವನ್ನು ವರ್ಣಿಸಲು ಚತುರ್ಮುಖನೂ ಅ
ಸಮರ್ಥನು. ರಾಜನು ದೇಶದೇಶದ ರಾಜಪುತ್ರರ ಪಟಗಳನ್ನು ತರಿಸಿ ನೋ
ಡಿಸಿದರೂ ಆ ಸುಂದರಿಯು ಯಾರನ್ನೂ ಒಪ್ಪಳು. ಹೀಗೆಂದು ಹೇಳಿದ ಆ
ಅಡಗೂಲಜ್ಜಿಯ ಮಾತುಗಳನ್ನು ಕೇಳಿ, ರಾಜಹಂಸನು ತಾನು ಅನಾ
ಯಾಸವಾಗಿ ಈ ಸುಂದರಿಯನ್ನು ಮದುವೆಯಾಗಿ ಅನಂತರ ತಮ್ಮ ಪುರಿ
ಗೆ ಹೋಗಬೇಕೆಂದು ಆಲೋಚಿಸಿ, ರಾಜಸಭೆಗೆ ಹೊರಟನು. ಎದುರಿಗೆ
ಬರುತ್ತಿರುವ ಈ ರಾಜಪುತ್ರನನ್ನು ದೊರೆಯು ಕಂಡು, ಮುನಿಪುತ್ರನೆಂ
ದು ಭಾವಿಸಿ, ಜಾಗ್ರತೆ ಬಂದು ಎದುರ್ಗೊಂಡು, ತನ್ನ ರಮನೆಗೆ ಕರೆದು
ಕೊಂಡು ಹೋಗಿ, ಉಚಿತಾಸನದಲ್ಲಿ ಕುಳ್ಳಿರಿಸಿ, ಸತ್ಕರಿಸಿದ ಬಳಿಕ, ಮ
ಹಾಸ್ವಾಮಿನಿಾ! ತಾವು ಬಂದ ಕಾರಣವೇನು ತನು ಅಪ್ಪಣೆಯಾಗಲಿ

ನನ್ನಿಂದ ಆಗಬೇಕಾದದ್ದು ವಿನುಃ ಹೀಗೆಂದು ಪ್ರಶ್ನೆ ಮಾಡಿದನು, ಅದಕ್ಕೆ ಆ ರಾಜಸಂತನು, ಧೊರೆಯೇ! ನಾನು ರಾಜಪುತ್ರನೆ ಹೊರತು ಮುನಿಪುತ್ರನಲ್ಲ. ಭೂಸಂಚಾರಕ್ಕಾಗಿ ಮೂರು ವರ್ಷಗಳಿಂಸಲೂ ಕಾಡುಮೇಡುಗಳಲ್ಲೆಲ್ಲಾ ಅಲೆದೆನು. ಭೂಸಂಚಾರವನ್ನು ಪೂರ್ತಿಮಾಡಿಕೊಂಡು ಇಲ್ಲಿಗೆ ಬಂದಿರುವೆನೆಂದು ತನ್ನ ವರ್ತಮಾನವನ್ನೆಲ್ಲ ತಿಳಿಸಿದನು. ಕಾರ್ತಿಕೇಯ ಮಹಾರಾಯನು ಪರಮಾಶ್ಚರ್ಯ ಭರಿತನಾಗಿ ಆ ರಾಜಪುತ್ರನ ಚಿತ್ರಪಟವನ್ನು ತನ್ನ ಮಗಳಾದ ಕಂಜಾಕ್ಷಿಯು ಬಳಿಗೆ ಕಳುಹಿಸಿದನು. ಆ ಸುಂದರಿಯು ತಂದೆಯ ಬಳಿ ಬಂದು, ತಂದೆಯೇ! ಇದೇನು! ಮುನಿಪುತ್ರನ ಪಟವನ್ನು ಕಳುಹಿಸಿದುವೆಯೆನ್ನಲು, ಆ ರಾಜೇಂದ್ರನು, ತಾಯೇ! ಇದುರಾಜಪುತ್ರನ ಪಟವು. ಮುನಿಪುತ್ರನಲ್ಲ ಮಾಳವ ದೇಶಾಧೀಶನ ಮಗನಾದ ರಾಜಹಂಸ ಮಹಾರಾಯನ ಚಿತ್ರಪಟವು. ಆ ರಾಜಪುತ್ರನು ಗುರುವಾಕ್ಯಪರಿಪಾಲನಾರ್ಥವಾಗಿ ಭೂ ಸಂಚಾರವನ್ನು ಮೂರು ವರ್ಷಗಳು ಮಾಡಿ ಇಲ್ಲಿಗೆ ಬಂದಿರುವನು. ಕಾಡಿನಲ್ಲಿ ಕಂದಮೂಲ ಫಲಗಳನ್ನು ತಿಂದು ಮೈ ಬಾಡಿಹೋಗಿದೆ. ಪಾವನಚರಿತ್ರನಾದ ಪುಣ್ಯಮೂರುತಿಯು, ಮಹಾನುಭಾವನು ಎನ್ನಲು, ಆ ರಾಜಪುತ್ರಿಯು ಆ ಚಿತ್ರಪಟವನ್ನು ಮುಖಾಮುಖಿ ನಿಧಾನವಾಗಿ ನೋಡಿ, ಅವಯವಗಳ ಬಿಕ್ಕಟ್ಟನ್ನೆಲ್ಲಾ ಚನ್ನಾಗಿಪರೀಕ್ಷಿಸಿ, ಅನಂತರ ತಂದೆಯನ್ನು ಕುರಿತು ಇಂತೆಂದಳು. ಜನಕನೆ! ಈ ರಾಜಪುತ್ರನ ಜಟ್ಟಿಗಳನ್ನೂ ನಾರು ಮಡಿಗಳನ್ನೂ ತೆಗೆದುಹಾಕಿ, ಅಭ್ಯಂಜನವನ್ನು ಮಾಡಿಸಿ ಸುಖಭೋಜನವನ್ನು ಮಾಡಿಸುತ್ತಾ ಕೆಲವು ದಿನ ಆರೈಕೆ ಮಾಡಲು ವಿನಂತಿಸು,. ಆಮೇಲೆ ನೋಡೋಣವೆನ್ನಲು, ರಾಜನು ಹಾಗೆಯೇ ಆಗಲೆಂದು ರಾಜಪುತ್ರನ ಜಟಾಭಾರಗಳನ್ನು ತೆಗೆಸಿ, ತೈಲಾಭ್ಯಂಜನವಂ ಮಾಡಿಸಿ, ದಿವ್ಯದುಕೂಲಗಳನ್ನು ಕೊಟ್ಟು ಕೆಲವುಕಾಲ ಸುಖವಾಗಿ ಉಪಚಾರಮಾಡಲು ವಿನಂತಿಸಿದನು. ಹೀಗಿರುವಲ್ಲಿ ಒಂದಾನೊಂದು ದಿನ ರಾಜಪುತ್ರನ ಮನನಾದ ಕಂಜಾಕ್ಷನು ಉಪ್ಪರಿಗೆಯ ಮೇಲೆ ಕುಳಿತು, ದಿವ್ಯವಾದ ಸಂಗೀತವನ್ನು ಹೇಳುತ್ತಾ ವೀಣಾಗಾನವನ್ನು ಮಾಡುತ್ತಿದ್ದನು. ವರುಣದೇವನ ಸಭೆಗೆ ಹೋಗಿದ್ದ ರಂಭೋರ್ವಶಿ ಮೇನಕೆ ತಿಲೋತ್ತಮಾದಿ ದೇವವೇಶ್ಯೆಯರು ಈ ಮಾರ್ಗವಾಗಿ ಬರುತ್ತಿರಲು, ಶ್ರೇಷ್ಠವಾದ ಈ ವೀಣಾಗಾನವನ್ನು ಕೇಳಿದರು. ರಂಭೆಯು ಆಹಾ! ಇವನು ಘನಪಾಠಿಯೆಂದು ಸ್ತೋತ್ರಮಾಡಿದಳು. ಮನುಷ್ಯಮಾತ್ರನಾದ ಇವನನ್ನು ಹೊಗಳುವಳಲ್ಲ ಎಂದು ಊರ್ವಶಿಯು ತನ್ನ ಎಡದ ಕೈಯಿಂದ ಈ ಕಂಜಾಕ್ಷನ ಮೇಲೆ ಬೀಸಿದಳು. ಅನಂತರ ಆ ಕಂಜಾಕ್ಷನು ವೀಣಾಗಾನವನ್ನು ಬಿಟ್ಟು ಮೂರ್ಛೆಗಲಾಗಿ ಬಿದ್ದು ಹೋದನು. ಕಂಜಾಕನು ಈರೀತಿ ಬಿದ್ದ ಕೂಡಲೆ

ಅಲ್ಲಿದ್ದ ಪರಿಚಾರಕರೆಲ್ಲಾ ಗೋಳಾಡುತ್ತಾ ಬಂದು ಧೊರೆಗೆ ತಿಳಿಸಿದರು. ಆ ರಾಜನು ಮಗನು ಸತ್ತು ಬಿದ್ದಿದ್ದ ಕಡೆ ಹೋಗಿ ಆ ಹೆಣದಮೇಲೆ ಬಿದ್ದು ಗಟ್ಟಿಯಾಗಿ ಅಳುತ್ತಿದ್ದನು. ಕಾರ್ತಿಕೇಯನ ರಾಜ್ಯದಲ್ಲಿಯೂ ರಾಜಧಾನಿಯೆಲ್ಲಯೂ ಎಲ್ಲೆಲ್ಲೂ ರೋದನಧ್ವನಿಯೇ ಕೇಳಬರುತ್ತಲಿತ್ತು. ಸಮಾಧಿಯೋಗದೊಳು ನಿಶ್ಚೇಷ್ಟಿತನಾಗಿದ್ದ ರಾಜಹಂಸ ಮಹಾರಾಯನು ಈ ರೋದನಧ್ವನಿಯನ್ನು ಕೇಳಿದೊಡಲೆ ಥಟ್ಟನೆ ಎದ್ದು ಪುರವಂ ಪ್ರವೇಶಿಸಿ, ಕಂಜಾಕ್ಷನ ಮರಣವಾರ್ತೆಯನ್ನು ಕೇಳಿ ತಾನೂ ದುಃಖಗೊಂಡು, ಅನಂತರ ರಾಜನನ್ನು ಕುರಿತು, ಮಹಾರಾಜನೆ! ದೈವಿಕವಾದ ಈ ವ್ಯಾಪಾರಕ್ಕೆ ದುಃಖಿಸಿ ಫಲವೇನೆಂದು ನಾನಾ ಪ್ರಕಾರವಾಗಿ ಶಾಂತವಚನಂಗಳನ್ನು ಆಡಿದನು. ಆ ಕಾರ್ತಿಕೇಯ ಮಹಾರಾಯನಾದರೊ, ರಾಜಪುತ್ರನೆ! ನಮ್ಮ ಪಟ್ಟಣದ ಶವಗಳನ್ನೆಲ್ಲಾ ಭೇತಾಳನಿಗೂ ರಾಕ್ಷಸರಿಗೂ ಆಹಾರವಾಗಿ ಕೊಡಬೇಕಾದ ವಾಡಿಕೆಯು ಬಹುಕಾಲದಿಂದಲೂ ಇರುವುದು. ಅಯ್ಯೋ! ಇಂತಹ ಸುಕುಮಾರನಾದ ಮಗನನ್ನು ಕಯ್ಯಾರ ನಾನುಹೇಗೆ ರಾಕ್ಷಸರ ಬಾಯಿಗೆ ತುತ್ತುಮಾಡಲಿ! ಹಾ! ದೈವನೆ!! ಅಯ್ಯಯ್ಯೋ! ಎಂದು ಘೋರವಾಗಿ ಅಳಲಾರಂಭಿಸಿದನು. ರಾಜಪುತ್ರನಿಗೂ ಬಹಳ ದುಃಖವುಂಟಾಗಿ ಅನಂತರ ರಾಜನನ್ನು ಕುರಿತು, ಪ್ರಭುವೆ! ಇವತ್ತಿನಿಂದ ನಿಮ್ಮ ಪಟ್ಟಣದ ಶವಗಳನ್ನು ಭೇತಾಳ ರಾಕ್ಷಸರಿಗೆ ಕೊಡುವ ಪದ್ಧತಿಯನ್ನು ತಪ್ಪಿಸಿಬಿಡಿ. ನಿಮಿಷಮಾತ್ರದಲ್ಲಿ ನಾನು ಆ ರಾಕ್ಷಸರನ್ನೆಲ್ಲಾ ಯಮದ್ವಾರವನ್ನು ಸೇರುವಂತೆ ಮಾಡುವೆನು. ಈ ಪಟ್ಟಣದ ಜನರ ಕಷ್ಟವನ್ನು ನಾನು ತಪ್ಪಿಸುವೆನೆಂದು ಹೇಳಲು, ರಾಜನು, ಅಯ್ಯಾ ರಾಜಸೂನುವೆ! ರಾಕ್ಷಸರು ಸಾಧಾರಣರೆಂದು ನೀನು ಯೋಚಿಸಬೇಡ. ಅನೇಕ ಮಾಯೆಗಳನ್ನು ಮಾಡಿ ನಿನ್ನನ್ನು ಪರಾಜಯಪಾಗುವಂತೆ ಮಾಡುವರು. ಅನಂತರ ನನಗೂ ನಮ್ಮ ಪ್ರಜೆಗಳಿಗೂ ಬಹು ಅಪಾಯವಾವೀತು, ಪದ್ಧತಿಯು ಪ್ರಕಾರ ಈ ಕಂಜಾಕ್ಷನ ಶರೀರವನ್ನು ರಾಕ್ಷಸರ ಪಾಲುಮಾಡುವುದೇ ಉತ್ತಮವೆಂದನು. ಧೊರೆಯು ಈ ಹೇಡಿಮಾತುಗಳನ್ನು ಕೇಳಿದಕೂಡಲೆ ರಾಜಹಂಸನ ಕಣ್ಣುಗಳೆರಡೂ ಕೆಂಡಗಳಂತಾಗಿ ಮಹಾ ಕೋಪಾಟೋಪದಿಂದ ರಾಜನನ್ನು ಕುರಿತು, ರಾಜೇಂದ್ರನೆ ' ನಾನು ಸಾಧಾರಣನೆಂದು ತಿಳಿಯಬೇಡ. ರಾಕ್ಷಸರೂ ಭೇತಾಳನೂ ನನಿಗೆ ಚಟ್ಟಣಿಯ ಹಾಗೆಂದು ತಿಳಿ. ಕ್ಷಣಮಾತ್ರದಲ್ಲಿ ರಾಕ್ಷಸರ ಗುಂಪನ್ನೂ ಭೇತಾಳನನ್ನೂ ನಿರ್ಮೂಲಮಾಡಿ ಬಿಡುವೆನು. ಇಂದಾದಿ ಸಕಲ ದೇವತೆಗಳೂ ಈ ರಾಕ್ಷಸರಿಗೆ ಸಹಾಯಕರಾದರೂ ಕ್ಷಣಮಾತ್ರದಲ್ಲಿ ಎಲ್ಲರನ್ನೂ ಧ್ವಂಸಮಾಡುವೆನೆಂದು ಹೇಳಿ, ಕಂಜಾಕ್ಷನ ಶವವನು ತನ ಹಾಸಿಗೆಗು [illegible]

ತೆಗೆಸಿಕೊಂಡು ಹೋಗಿ ಒಂದೆಡೆಯಲ್ಲಿಳಿಸಿದರು. ರಾಜಪುತ್ರನು ಆ ಶವದ ಸುತ್ತಲೂ ಪಹರೆ ತಿರುಗುತ್ತಿದ್ದನು ರಾಜನೂ ಮಂತ್ರಿಪ್ರಧಾನಿಗಳೂ ಕೂಡ ಕಂಜಾಕ್ಷನ ಮರಣಕ್ಕಾಗಿ ವ್ಯಸನವನ್ನು ತೊರೆದು, ಈ ರಾಜಹಂಸನು ರಾಕ್ಷಸರ ಮಾಯೆಯಿಂದ ಸತ್ತು ಬೀಳುವನಲ್ಲ ಎಂದು ದುಃಖಿಸುತ್ತಾ ತಾವೆಲ್ಲರೂ ಬಂದು, ರಾಜಹಂಸನಿಗೂ ರಾಕ್ಷಸರಿಗೂ ಏನಾಗುವುದೊ ಎಂದು ಎದುರುನೋಡುತ್ತಿದ್ದರು. ಈ ವರ್ತಮಾನವು ಭೇತಾಳನಿಗೆ ತಿಳಿಯಿತು, ತನ್ನ ಸೈನ್ಯವಾದ ರಾಕ್ಷಸರನ್ನೆಲ್ಲಾ ಕರೆದು, ಓ ರಾಕ್ಷಸರೆ ! ಈ ದೇಶದ ರಾಜನು ಇದುವರೆಗೂ ನಮ್ಮ ಆಹಾರಾರ್ಥವಾಗಿ ಕೊಡುತ್ತಿದ್ದನ್ನು ಈಗ ತಪ್ಪಿಸಲು, ಸತ್ತುಹೋದ ತನ್ನ ಮಗನ ಕಾವಲಿಗೆ ವೀರನಾದ ರಾಜಪುತ್ರನೊಬ್ಬನನ್ನು ಕಾವಲಿಟ್ಟು ಹೋಗಿರುವಂತೆ ತೋರುವುದು. ನೀವುಗಳು ರಾಕ್ಷಸ ಸೇನಾ ಸಮೇತವಾಗಿ ಹೊರಟು, ಆ ಶೂರನನ್ನು ಕೊಂದು, ಆ ಎರಡು ಹೆಣಗಳನ್ನೂ ನನ್ನ ಬಳಿಗೆ ತರಬೇಕೆಂದು ಆಜ್ಞಾಪಿಸಿದನು, ರಾಕ್ಷಸರು ಅದಕ್ಕೆ ಒಪ್ಪಿಕೊಂಡು, ಸೇನಾಸಮೇತವಾಗಿ ರಾಜಹಂಸನನ್ನು ಭಂಗಪಡಿಸಬೇಕೆಂದು ಹೊರಟರು. ರಾಕ್ಷಸರಿಗೂ ರಾಜಹಂಸನಿಗೂ ಘೋರಯುದ್ಧವು ಪ್ರಾರಂಭವಾಯಿತು. ರಾಕ್ಷಸರು ಮುಸಲ, ಮುದ್ಗರ, ಬಿಂಡಿವಾಲಂಗಳನ್ನೆಲ್ಲಾ ರಾಜಹಂಸನ ಮೇಲೆ ಬಿಟ್ಟು ಎಲ್ಲೆಲ್ಲಿಯೂ ಅಂಧಕಾರವು ಕವಿದುಕೊಳ್ಳುವಂತೆ ಮಾಡಿದರು. ರಾಜಹಂಸನಿಗೆ ಬಹಳವಾಗಿ ಕೋಪವುಂಟಾಯಿತು. ವಾಲ್ಮೀಕಿ ಮಹರ್ಷಿಯು ಅನುಗ್ರಹಿಸಿದ್ದ ಭಾಸ್ಕರಾಂಬುವಿನಿಂದ ರಾಕ್ಷಸರು ಕಲ್ಪಿಸಿದ್ದ ಕತ್ತಲೆಯನ್ನು ಹೋಗಲಾಡಿಸಿ, ಅನೇಕ ರಾಕ್ಷಸರ ತಲೆಗಳನ್ನು ಉರುಳಿಸಿದ್ದರಿಂದ ಹತಶೇಷರಾದ ರಕ್ಕಸರೆಲ್ಲರೂ ಭಯಗ್ರಸ್ತಮನಸ್ಕರಾಗಿ ಓಡಿಹೋಗಿ ನಡೆದ ವರ್ತಮಾನವನ್ನೆಲ್ಲಾ ಭೇತಾಳನಿಗೆ ತಿಳಿಯಪಡಿಸಿದರು. ಅಖಿಶಾಚಾಧಿಪನು ರೌದ್ರಾವೇಶದಿಂದ ಘೋರಾಕೃತಿಯುಳ್ಳ ರಾಕ್ಷಸರನ್ನು ನೋಡಿ, ಭೂತಗಳಿರಾ ! ನೀವೆಲ್ಲರೂ ಒಟ್ಟಾಗಿ ಆ ರಾಜಪುತ್ರನನ್ನು ಕೊಂದು ತನ್ನಿರೆಂದು ಕಳುಹಿಸಲಾಗಿ, ಆ ರಾಕ್ಷಸರು ಸಿಂಹನಾದಗಳನ್ನು ಮಾಡುತ್ತಾ, ಗರ್ಜಿಸುತ್ತಾ ಬರಲು, ಆ ಮಾನವೇಂದ್ರನಾದ ರಾಜಹಂಸನು ನೋಡಿ, ಕೋಪಾವಿಷ್ಟನಾಗಿ, ರಾಕ್ಷಸವೀರರ ಮಾಯೆಗಳನ್ನು ನಿರ್ಮೂಲಮಾಡುತ್ತಾ, ರಕ್ತವನ್ನು ಕಾರಿಸುತ್ತಾ, ಕೈಕಾಲುಗಳನ್ನು ಕತ್ತರಿಸುತ್ತಾ, ಈ ಪ್ರಕಾರವಾಗಿ ರೂಪಹೀನರಾಗಿ ಕಂಗೆಟ್ಟ ರಾಕ್ಷಸರೆಲ್ಲಾ ಪ್ರಾಣಾವಶಿಷ್ಟರಾಗಿ ಬಂದು ತಮ್ಮ ಪ್ರಭುವಿನೊಂದಿಗೆ ಹೇಳಿಕೊಂಡರು. ಭೇತಾಳನಾದರೊ ರೌದ್ರಾವೇಶದಿಂದ ದಿಕ್ಕುಗಳು ಪ್ರತಿಧ್ವನಿಯನ್ನುಂಟುಮಾಡುವಂತೆ ಬೊಬ್ಬೆಯಿಕ್ಕುತ್ತಾ ಸಿಟ್ಟಿನಿಂದ ಹಲ್ಲುಗಳನ್ನು ಕಡಿಯುತ್ತಾ ಕಣ್ಣುಗಳಿಂದ ಕೆಂಡ

ಗಳನ್ನು ಸುರಿಸುತ್ತಾ, ಓ ನರಾಧಮನೆ! ನೀನೆಲ್ಲಿಗೆ ಹೋಗಿ ಔತುಕೊಂಡರೂ ನಾನು ನಿನ್ನ ಪ್ರಾಣಗಳನ್ನು ತೆಗೆಯದೆ ಬಿಡೆನು ನನ್ನನ್ನು ಭೇತಾಳನೆಂದು ಕಾಣೆಯಾ ಎಂದು ನುಡಿಯುತ್ತಾ ಬೆದರಿಸಲು, ರಾಜಹಂಸನು ಈ ಭೇತಾಳನಿಗೆ ಬೆದರದೆ ಕಡುಸ್ಥೈರ್ಯದಿಂದ ಇಪ್ಪತ್ತು ಬಾಣಗಳನ್ನು ಧನುಸ್ಸಿಗೆ ಸೇರಿಸಿ ಆ ಭೇತಾಳನ ಮೇಲೆ ಬಿಟ್ಟನು. ಭೇತಾಳನಾದರೊ, ಈ ಬಾಣಗಳನ್ನು ಲಕ್ಷ್ಯವೇ ಮಾಡದೆ ಮೇಘಾಕೃತಿಯನ್ನು ತಾಳಿ ಪಾಷಾಣ ವರ್ಷವನ್ನು ಏಕಪ್ರಕಾರನಾಗಿ ಸುರಿಸುತ್ತಾ ಬರಲು, ರಾಜಹಂಸನು ಸ್ವಲ್ಪವೂ ಹೆದರದೆ ವಾಯವ್ಯಾಸ್ತ್ರವನ್ನು ಪ್ರಯೋಗಮಾಡಿ, ಆ ಮೇಘಗಳನ್ನು ಒಡಿಸಿ ಕೂಡಲೆ ಆಗ್ನೇಯಾಸ್ತ್ರವನ್ನು ಭೇತಾಳನಮೇಲೆ ಪ್ರಯೋಗಿಸಿದನು. ಭೇತಾಳನು ಇದನ್ನೂ ಲಕ್ಷ್ಯವಿಡದೆ ರಾಜಪುತ್ರನಮೇಲೆ ಅನೇಕ ಬಾಣಗಳನ್ನು ಬಿಡುತ್ತಿದ್ದನು. ಇದರಿಂದ ರಾಜಹಂಸನಿಗೆ ಬಹಳ ಕೋಪಬಂದಿತು, ಆಗ ರಾಜಪುತ್ರನು ಚಂದ್ರಾಯುಧವನ್ನು ಪ್ರಯೋಗಿಸಿದನು ಆ ಚಂದ್ರಾಯುಧವಾದರೊ ಘೋರಾಕೃತಿಯನ್ನು ಹೊಂದಿ, ಭೇತಾಳನು ಎಲ್ಲೆಲ್ಲಿಗೆ ಹೋದರೂ, ಯಾವಯಾವ ಆಕೃತಿಯನ್ನು ಪಡೆದರೂ ಎತ್ತಿಪಿಡಪೆ ಹಿಂದಟ್ಟಿಕೊಂಡು ಬರುತ್ತಿರಲು, ಭೇತಾಳನು ಭಯೋತ್ಕ್ಷೋಭರಿತನಾಗಿ, ಆ ರಾಜಹಂಸನ ಬಳಿ ಬಂದು, ನಮಸ್ಕಾರಮಾಡಿ, ಕೈಗಳನ್ನು ಜೋಡಿಸಿಕೊಂಡು, ಮಹಾನುಭಾವನೆ! ನಿನ್ನ ಪ್ರಭಾವವನ್ನು ವರ್ಣಿಸಲು ಸಾಧ್ಯವಿಲ್ಲ. ಆಹಾ! ಅತಿದುರ್ಭರವಾದ ಈ ಚಂದ್ರಾಯುಧವು ನನ್ನನ್ನು ಕೊಲ್ಲದೆ ಬಿಡುವಹಾಗಿಲ್ಲ. ನನಗೆ ಪ್ರಾಣದಾನವನ್ನು ಮಾಡಬೇಕೆಂದು ನಾನಾ ಪ್ರಕಾರವಾಗಿ ಕೇಳಿಕೊಂಡನು. ರಾಜಹಂಸನಾದರೊ, ಭೇತಾಳನೆ! ನೀನು ದುಷ್ಟನು, ನಿನ್ನಿಂದ ಲೋಕಕ್ಕೆ ಬಹಳ ತೊಂದರೆಯಾಗಿದೆಯೊ ದ್ದರಿಂದ ನಿನ್ನನ್ನು ಕೊಲ್ಲದೆ ಬಿಡುವದಿಲ್ಲವೆನ್ನಲು, ಭೇತಾಳನಿಂತೆಂದನು. ಮಹಾನುಭಾವನೆ! ನಾನು ಅಡು ಮೊದಲ್ಗೊಂಡು ಮೇರುಪರ್ವತದ ಗಾತ್ರದಷ್ಟು ದಪ್ಪನಾಗಿ ತ್ರಿಲೋಕಗಳಲ್ಲಿಯೂ ಸಂಚರಿಸಬಲ್ಲೆನು. ನನಿಗೆ ಪ್ರಾಣದಾನವನ್ನು ಮಾಡಿದರೆ ನೀನು ಸ್ಮರಿಸಿದಾಗ ಪ್ರತ್ಯಕ್ಷನಾಗಿ ಬಂದು ನಿನ್ನಿಷ್ಟವನ್ನು ನೆನೆನೇರಿಸುವೆನು, ನಾನು ಇನ್ನುಮೇಲೆ ಈ ಪಟ್ಟಣದ ಜನರಿಗೆ ಯಾರಿಗೂ ಹಿಂಸೆಮಾಡುವುದಿಲ್ಲವು. ಈ ಪುರಜನರನ್ನು ಎಚ್ಚರಿಕೆಯಿಂದ ಕಾಪಾಡುವೆನು, ಈ ಪಟ್ಟಣಕ್ಕೆ ಹತ್ತುಗಾವುದದ ಆಚೆ ನನ್ನ ಪರಿವಾರ ಸಮೇತನಾಗಿ ಹೊರಟುಹೋಗುವೆನು. ನನ್ನ ಪ್ರಾಣವನ್ನುಳಿಸಬೇಕೆಂದು ನಾನಾ ಪ್ರಕಾರವಾಗಿ ಕೇಳಿಕೊಳ್ಳಲು, ರಾಜಹಂಸನಿಗೆ ಕರುಣವುಂಟಾಗಿ, ನಾನು ಸ್ಮರಿಸಿದಾಗ ಬಂದು ನನ್ನಿಷ್ಟವನ್ನು ನೆರವೇರಿಸಬೇಕೆಂದು ಪ್ರತಿಜ್ಞೆ ಮಾಡಿಸಿಕೊಂಡು, ಆ ಬಳಿಕ ತನ್ನ ಚಂದ್ರಾಯುಧವ

ನ್ನು ಹಿಂದಕ್ಕೆ ತೆಗೆದುಕೊಂಡನು. ಆ ಭೇತಾಳನು ರಾಜಹಂಸನಿಗ ಯಾ ವಾಗಲೂ ದಾಸಾನುದಾಸನಾಗಿರುವೆನೆಂದು ನಮಸ್ಕಾರಮಾಡಿ, ತನ್ನ ಪ್ರೇತಭೂತಗಳನ್ನೆಲ್ಲಾ ಕರೆದುಕೊಂಡು, ಬಹುದೂರ ಹೊರಟುಹೋದನು. ಆ ಬಳಿಕ ರಾಜಹಂಸನು ಇನ್ನು ರಾಕ್ಷಸರ ಬಾಧೆಯು ತಪ್ಪಿತೆಂದು ಸಂತೋಷಪಟ್ಟು ಆ ಕಂಜಾಕ್ಷನನ್ನು ಮಲಗಿಸಿದ್ದ ಹಾಸಿಗೆಯ ಮೇಲೆ ಕುಳಿತು ನಾನಾ ಪ್ರಕಾರವಾಗಿ ಯೋಚಿಸುತ್ತಿದ್ದನು. ಹೀಗಿರುವಲ್ಲಿ ವರುಣನ ಸಭೆಗೆ ಹೋಗಿದ್ದ ರಂಭೋರ್ವಶಿಯರೆ ಮೊದಲಾದ ದೇವಕನ್ಯಕೆಯರು ಹಿಂದಿರುಗಿ ಬರುತ್ತಿರುವಾಗ, ಆಕಾಶಮಾರ್ಗದಲ್ಲಿ ರಂಭೆಯು ಊರ್ವಶಿಯನ್ನು ಕುರಿತು, ತಂಗಿ! ನೀನು ಎಂತಹ ಅಕೃತ್ಯವನ್ನು ಮಾಡಿದಿವಿ. ನಿರಪರಾಧಿಯೋದ ಆ ರಾಜಪುತ್ರನನ್ನು ಕೊಲ್ಲಬಹುದೆ? ನಿನಗೆ ಶಾಪವನ್ನು ಕೊಡದೆ ಬಿಡೆನೆಂದಳು. ಅದಕ್ಕೆ ಊರ್ವಶಿಯು ಅಮ್ಮಾ! ಹಾಗಾದರೆ ನಾನು ಈಗಲೆ ಆ ರಾಜಪುತ್ರನನ್ನು ಬದುಕಿಸುವೆನೆಂದು ತನ್ನ ಸಂಜೀವಿನೀ ರೆಕ್ಕೆಯಿಂದ ಬೀಸಿದಳು. ರಾಜಹಂಸನಾದರೊ ಇದು ಆ ಊರ್ವಶಿಯ ಕೆಲಸವೆಂದು ತಿಳಿದು, ಅವಳ ರೆಕ್ಕೆಯನ್ನು ತರುವಂತೆ ತನ್ನ ಚಂದ್ರಾಯುಧವನ್ನು ಕಳುಹಿಸಲು, ಅದು ಹಾಗೆಯೇ ಮಾಡಿತು. ಹಾಸಿಗೆಯ ಮೇಲೆ ಬಿದ್ದಿದ್ದ ಕಂಜಾಕ್ಷನಾನರೊ, ನಿದ್ರೆಯಿಂದೆದ್ದವನಂತೆ ಕಣ್ಣುಗಳನ್ನು ಒರಸಿಕೊಳ್ಳುತ್ತಾ ಮೇಲಕ್ಕೆದ್ದನು. ರಾಜಹಂಸನು ಆ ಕಂಜಾಕ್ಷನನ್ನು ಆಲಿಂಗನ ಮಾಡಿಕೊಂಡು ನಡೆದ ವರ್ತಮಾನವನ್ನೆಲ್ಲಾ ವಿವರಿಸುತ್ತಿದ್ದನು. ಅತ್ತ ಊರ್ವಶಿಯೊಡರೊ, ರಾಜಹಂಸನಿಂದ ತನ್ನ ರೆಕ್ಕೆಗಳು ಹೋಯಿತೆಂದು ತಿಳಿದು, ರಾಜಹಂಸನ ಬಳಿಗೆ ಬಂದು, ನಾನಾ ಪ್ರಕಾರವಾಗಿ ವರ್ಣಿಸಿ, ಪುನಃ ಅವನಿಂದ ರೆಕ್ಕೆಗಳನ್ನು ಪಡೆದು ತಾನು ದೇವಲೋಕಕ್ಕೆ ಹೊರಟು ಹೋದಳು. ಆ ಕಂಜಾಕ್ಷನು ನಡೆದ ವರ್ತಮಾನವನೆಲ್ಲಾ ಕೇಳಿ, ಆಶ್ಚರ್ಯಾನಂದಭರಿತನಾಗಿ, ಆಹಾ! ಇಂತಹ ಅಸಾಧ್ಯಸಾಧ್ಯ ಕಾರ್ಯಸಾಧನೆಯು ಮತ್ತಾರಿಗಾದರೂ ವಶವಾಗುತ್ತದೆಯೇ! ಎಂದು ಆ ಮಹಾತ್ಮನನ್ನು ನಾನಾ ಪ್ರಕಾರವಾಗಿ ಹೊಗಳಿ, ಜಳಗಾಗುತ್ತ ಬಂದಿತೆಂದು ಇಬ್ಬರೂ ಸಂತೋಷವಾಗಿ ಮಾತನಾಡಿಕೊಳ್ಳುತ್ತಿದ್ದರು.

ಅತ್ತ ಕಾರ್ತಿಕೇಯ ಮಹಾರಾಯನಾದರೊ, ಜಳಗಾಗುತ್ತ ಬಂದಿತೆಂದು ತಿಳಿದು, ಸತ್ತುಹೋದ ಕಂಜಾಕ್ಷನೆಂಬ ತನ್ನ ಮಗನ ಪ್ರೇತ ಸಂಸ್ಕಾರಕ್ಕಾಗಿ ತಕ್ಕ ಸಲಕರಣೆಗಳನ್ನು ಒದಗಿಸಿ, ಮಂತ್ರಿ ಪ್ರಧಾನಿ ಸಾಮಂತ ರಾಜರೊಂದಿಗೆ ಹೊರಡು, ಅನೇಕ ಶೂರರನ್ನು ಜೊತೆಯಲ್ಲಿ ಕರೆದುಕೊಂಡು ಪ್ರೇತಭೂಮಿಗೆ ಹೋಗುತ್ತಿದ್ದನು. ದಾರಿಯಲ್ಲಿ ಅಲ್ಲಲ್ಲಿ ಮೈಲ್ಗಿ ರಾಕ್ಷಸರ ತಲೆಗಳೂ, ಖಂಡಗಳೂ ಮುಂಡಗಳೂ ತುಂಬಿದ್ದವು ಅಲ್ಲ

ಲ್ಲಿ ರಕ್ತವೂ ಮಾಂಸವೂ ತುಂಬಿತ್ತು. ರಾಜನೂ ಮಂತ್ರಿ ಪ್ರಧಾನಿಗಳೂ ಇವೆಲ್ಲವನ್ನೂ ನೋಡಿ ಇದು ರಾಜಹಂಸನ ಕೆಲಸವೆಂದೇ ಭಾವಿಸಿ, ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು. ರಾಜಹಂಸನ ಪ್ರಭಾವವು ಅತ್ಯಧಿಕವಾದದ್ದೆಂದು ಆಶ್ಚರ್ಯಪಡುತ್ತಿದ್ದರು. ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಿರುವಲ್ಲಿ ಸನಿಹದಲ್ಲಿಯೇ ರಾಜಹಂಸನು ಕಂಜಾಕ್ಷನೊಂದಿಗೆ ಮಾತನಾಡಿಕೊಳ್ಳುತ್ತಿರುವದು ಕೇಳಬಂದಿತು. ಕಾರ್ತಿಕೇಯನಿಗೆ ಪರಮಾನಂದವಾಯಿತು. ಕೂಡಲೆ ಎಲ್ಲರೂ ರಾಜಹಂಸನ ಬಳಿಗೆ ಬಂದರು. ರಾಜಹಂಸನನ್ನೂ ಬಳುಕಿರುವ ಕಂಜಾಕ್ಷನನ್ನೂ ನೋಡಿ, ಕಾರ್ತಿಕೇಯ ಮಹಾರಾಯನು ಪರಮಾನಂದ ಭರಿತನಾಗಿ, ರಾಜಹಂಸನನ್ನು ಗಾಢಾಲಿಂಗನಮಾಡಿಕೊಂಡು, ಪುಣ್ಯಾತ್ಮನೆ! ನಡೆದ ವರ್ತಮಾನವೇನೆಂದು ಕೇಳಿದನು. ರಾಜಹಂಸನು ಪೊರೆಯೋ! ರಾತ್ರಿಯೆಲ್ಲಾ ನನಗೂ ಘೋರರಾಕ್ಷಸರಿಗೂ ಭೇತಾಳನಿಗೂ ಮಹಾ ಯುದ್ಧವು ನಡೆದು ರಾಕ್ಷಸರು ಭೇತಾಳರು ಪರಾಜಿತರಾಗಿ ಈ ಊರಿಗೆ ಪತ್ತು ಗಾವುದದ ಆಚೆ ಹೊರಟು ಹೋದರು. ಇನ್ನು ಎಂದೆಂದಿಗೂ ಇಲ್ಲಿಗೆ ಬರುವುದಿಲ್ಲ. ಈ ಪಟ್ಟಣದ ಜನರನ್ನು ಇನ್ನುನೀಲ ಹಿಂಸೆಮಾಡುವುದಿಲ್ಲ. ಅನೇಕ ರಾಕ್ಷಸರನ್ನು ಸಂಹಾರಮಾಡಿದೆನು. ಇಗೋ! ಅವರ ತಲೆ ಬುರುಡೆಗಳು ಕಾಣಬರುತ್ತಿರುವವು. ಕಂಜಾಕ್ಷನ ಪ್ರಾಣವನ್ನು ಅಪಹರಿಸಿದ ಘೂರ್ಣಿಯೆ ಪುನಃ ಕಂಜಾಕ್ಷನ ಪ್ರಾಣವನ್ನು ಉಳಿಸುವಂತೆ ಮಾಡಿರುವೆನು. ಇನ್ನುಮುಂದೆ ನಿನಗೂ ನಿಮ್ಮ ಪುರಜನರಿಗೂ ಯಾವ ಬಾಧೆಯೂ ಇಲ್ಲದಂತೆ ಮಾಡಿರುವೆನೆಂದು ನುಡಿದನು. ಕಾರ್ತಿಕೇಯನಾದರೊ, ರಾಜಪುತ್ರನನ್ನು ಬಳಿಗಾಗಿ ಕೊಂಡಾಡಿ, ಕಂಜಾಕ್ಷನಿಗಾಗಿ ಮಾಡತಕ್ಕಾದ ಕೃತ್ಯಗಳನ್ನೆಲ್ಲ ಮಾಡಿ, ಕಂಜಾಕ್ಷನನ್ನೂ ರಾಜಹಂಸನನ್ನೂ ಕರೆದುಕೊಂಡು ಮಂತ್ರಿ ಪ್ರಧಾನಿಗಳೊಂದಿಗೆ ತನ್ನ ಪುರವನ್ನು ಪ್ರವೇಶಿಸಿದನು. ಸ್ವಗೃಹಸ್ಥರಾದರೊ ನಡೆದ ವರ್ತಮಾನವನ್ನೆಲ್ಲ ಕೇಳಿ, ರಾಜಹಂಸನ ಶಕ್ತಿ ಸಾಹಸಗಳನ್ನು ಕೊಂಡಾಡಿ, ಆಹಾ! ಈ ರಾಜಪುತ್ರನು ಮನುಷ್ಯಮಾತ್ರನಲ್ಲ, ದೈವಾಂಶಸಂಭೂತನು, ಎಂದು ಭಾವಿಸಿ, ಅನೇಕ ಪ್ರಾರ್ಥನೆಗಳನ್ನು ಸಲ್ಲಿಸಿದರು, ಅದನ್ನೆಲ್ಲ ಅರಮನೆಯ ಮಹಡಿಯಮೇಲಿನಿಂದ ರಾಜಪುತ್ರಿಯಾದ ಕಂಜಾಕ್ಷಿಯು ನೋಡುತ್ತಿದ್ದಳು, ರಾಜಹಂಸನ ದಿವ್ಯ ದೇಹವನ್ನೂ ದೇಹಕಾಂತಿಯನ್ನೂ ನೋಡಿ ಸಂತೋಷಪಟ್ಟು, ಆಹಾ! ಈತನೆ ತನಗೆ ಅನುರೂಪನಾದ ವರನೆಂದು ಮನದಲ್ಲಿ ಭಾವಿಸಿ, ತಂದೆಯಬಳಿಗೆ ಬಂದು, ತಂದೆಯೆ! ಆ ಮಹಾತ್ಮನಾದ ರಾಜಪುತ್ರನಿಗೆ ನನ್ನನ್ನು ಕೊಟ್ಟು ಮದುವೆಮಾಡು. ಇದು ವಿನಹ ಆ ಮಹಾನುಭಾವನಿಗೆ ನಾವೇನೂ ಪ್ರತ್ಯುಪಕಾರ ಮಾಡ

ಲಾರೆವೆಂದಳು. ರಾಜೇಂದ್ರನಾದರೊ, ತನ್ನ ಕುವರಿಯನ್ನು ಕುರಿತು- ಅಮ್ಮಾ! ನಾನೂ ಹಾಗೆಯೇ ಯೋಚಿಸುತ್ತಿರುವೆನೆಂದು ನುಡಿದು, ರಾಜ ಪುತ್ರನನ್ನು ನೋಡಿ, ಪುಣ್ಯಾತ್ಮಾ! ನೀನು ಮಾಡಿರುವ ಈ ಮಹದುಪಕಾರಕ್ಕೆ ಪ್ರತ್ಯುಪಕಾರವಾಗಿ ನಾನು ಏನನ್ನೂ ಮಾಡಲಾರೆನು. ನನ್ನ ಈ ಪುತ್ರಿಕಾರತ್ನವನ್ನು ನಿನಗೆ ಧಾರೆಯೆರೆಯುವೆನೆಂದು ನುಡಿದು, ಮಗಳಮದುವೆಗಾಗಿ ಪಟ್ಟಣಶೃಂಗಾರವನ್ನು ಮಾಡಿಸುತ್ತಿದ್ದನು. ಸುಮುಹೂರ್ತವು ನಿಶ್ಚಯವಾಯಿತು. ರಾಜೇಂದ್ರನು ಪಟ್ಟಣವನ್ನು ಈರೀತಿ ಶೃಂಗರಿಸುತ್ತಾ ಅತ್ಯಂತ ವೈಭವದಿಂದ ಇರುವಲ್ಲಿ, ಕಂಜಾಕ್ಷನು ತಂದೆಯನ್ನು ಕುರಿತು, ತಂದೆಯೇ! ನಂಜೀವಿನೀ ರೆಕ್ಕೆಯನ್ನು ಬೀಸಿ ನನ್ನ ಪ್ರಾಣವನ್ನು ಕಾಪಾಡಿದ ಆ ದೇವಲೋಕದ ಊರ್ವಶಿಯನ್ನು ತಂದು ನನಗೆ ಮದುವೆ ಮಾಡಬೇಕೆಂದು ಕೇಳಿದನು. ರಾಜನು ಗಾಬರಿಯಿಂದ ಪುತ್ರನೆ! ನಿನಗೆ ಅಸಾಧ್ಯವಾದ ಇಂಥಹ ಕೆಲಸವನ್ನು ನೀನು ಕೋರಬಹುದೆ? ಇದು ಅಸಾಧ್ಯವೆಂದು ಹೇಳಿದನು. ಎಷ್ಟೆಷ್ಟು ವಿಧವಾಗಿ ಸಮಾಧಾನಮಾಡಿದರೂ ಕಂಜಾಕ್ಷನು ಊರ್ವಶಿಯನ್ನೇ ಮದುವೆ ಮಾಡಿಕೊಳ್ಳಬೇಕೆಂದು ಹಟ ಹಿಡಿದನು. ರಾಜೇಂದ್ರನು ಏನೂ ತೋಚದೆ ಸ್ತಂಭೀಭೂತನಾದನು. ರಾಜಹಂಸನಿಗೆ ಈ ವರ್ತಮಾನವು ತಿಳಿಯಿತು, ರಾಜಹಂಸನು ಕೂಡಲೆ ದೊರೆಯ ಬಳಿಗೆ ಬಂದು, ರಾಜೇಂದ್ರನೆ! ಕಂಜಾಕ್ಷನ ಮೇಲೆ ನೀನು ಕೋಪಿಸಿಕೊಳ್ಳಬೇಕಾಗಿಲ್ಲ. ನಾನು ದೇವಲೋಕಕ್ಕೆ ಹೋಗಿ ಆ ಊರ್ವಶಿಯನ್ನು ಎತ್ತಿಕೊಂಡು ಬಂದು ಕಂಜಾಕ್ಷನಿಗೆ ಮದುವೆಮಾಡುವೆನು. ನೀನು ಯೋಚಿಸಬೇಡವೆನ್ನಲು, ರಾಜನು ಗಾಬರಿಪಟ್ಟು, ಮಹಾನುಭಾವನೆ! ದೇವಲೋಕಕ್ಕೆ ಹೋದ ಮಾನವರು ಪುನಃ ಭೂಲೋಕಕ್ಕೆ ಬಂದುದೆಂದಿರೇನು! ಪುಣ್ಯಾತ್ಮನೆ! ನನ್ನ ಮಗನಾದ ಕಂಜಾಕ್ಷನಿಗೆ ಮದುವೆಯಿಲ್ಲದಿದ್ದರೂ ನನಗೆ ಬಹಳ ಸಂತೋಷವು. ನೀನುಮಾತ್ರ ದೇವಲೋಕಕ್ಕೆ ಹೋಗಕೂಡದೆಂದು ಹಟಹಿಡಿದನು. ರಾಜಹಂಸನು, ಧೊರೆಯೇ! ನನಗಾಗಿ ನೀವು ಯೋಚಿಸಬೇಕಾದಿಲ್ಲ. ಹದಿನೈದು ದಿನಗಳಲ್ಲಿ ನಾನು ಊರ್ವಶಿಯನ್ನು ತೆಗೆದುಕೊಂಡು ಹಿಂದಿರುಗಿ ಬರುವೆನು. ನನ್ನ ಮಾತನ್ನು ನಂಬಿರಬಹುದೆಂದು ನಾನಾ ಪ್ರಕಾರವಾಗಿ ನಂಬಿಕೆಯನ್ನು ಹೇಳಿ, ದೇವಲೋಕಕ್ಕೆ ಹೊರಡಲುದ್ಯುಕ್ತನಾಗಿ, ಪಾದಚಾರಿಯಾಗಿಯೇ ಹೋಗುತ್ತಿದ್ದನು. ಈ ವರ್ತಮಾನವನ್ನು ಮುಡಿಯ ಮೇಲಿದ್ದ ಕಂಜಾಕ್ಷಿಯು ಕೇಳಿದ ಕೂಡಲೆ ಮೂರ್ಛಾಕಾಂತೆಳಾಗಿ ಬಿದ್ದಳು. ಹತ್ತಿರಿದ್ದ ಸಖಿಯರು ಶೈತೋಪಚಾರಗಳನ್ನು ಮಾಡಿದನೇಲೆ ರಾಜಪುತ್ರಿಯು ಮತ್ತೆ ಎಚ್ಚತ್ತು, ತಂದೆಯ ಬಳಿಗೆ ಬಂದು, ಜನಕನೆ! ಪ್ರಾಣಪದಕವಾದ ನನ್ನ ಪತಿಯನ್ನು ನೀವು ದೇವ

ಲೋಕಕ್ಕೆ ಕಳುಹಿಸಿದ ಮೇಲೆ ನಾನು ಬದುಕುವುದು ಹೇಗೆ? ದೇವಲೋಕಕ್ಕೆ ಹೋದ ಮಾನವರು ಮತ್ತೆ ಹಿಂದಿರುಗಿ ಬರುವುದುಂಟೆ? ಅಯ್ಯೋ! ವಿಧಿಯೆ! ಮುಂದೆ ನಾನೇನುಮಾಡಲಿ! ಹಾ! ದೇವರೆ!! ಏಗೆಂದು ಗೋಳಿಡುತಾ, ಅಯ್ಯೋ! ಆ ಮಹಾತ್ಮನ ದಿವ್ಯ ದೇಹವನ್ನು ಇನ್ನೊಂದಾವರ್ತಿ ಕಣ್ಣಾರ ನೋಡಿ ಅನಂತರ ಅಗ್ನಿ ಪ್ರವೇಶವಂ ಮಾಡಬೇಕೆಂದು ತನ್ನ ಮನದಲ್ಲಿ ಭಾವಿಸಿ, ಪಲ್ಲಕ್ಕಿಯಲ್ಲಿ ಕುಳಿತು, ರಾಜಹಂಸನನಿಗೆ ಅಡ್ಡಲಾಗಿ ಹೋಗಿ, ಆ ರಾಜಪುತ್ರನಿಗೆ ನಮಸ್ಕಾರಮಾಡಿ, ಮಹಾನುಭಾವನೆ! ನಿನ್ನನ್ನೆ ಕಾಯೆ ವಾಚಾ ಮನಸಾ ನಂಬಿದ್ದ ನನ್ನನ್ನು ಕಾಡುಪಾಲುಮಾಡಿ, ನೀನು ಈಗಲೆ ದೇವಲೋಕಕ್ಕೆ ಹೊರಡುವುದು ಧರ್ಮವೆ? ಪ್ರಾಣನಾಥಾ! ನೀನು ಖಂಡಿತವಾಗಿಯೂ ದೇವಲೋಕಕ್ಕೆ ಹೋಗಕೂಡದೆಂದು ತಡೆಮಾಡಿದಳು. ರಾಜಹಂಸನಾದರೊ ಆ ಕಂಜಾಕ್ಷಿಯನ್ನು ನಾನಾ ಪ್ರಕಾರವಾಗಿ ಸಮಾಧಾನಪಡಿಸಿ, ಹದಿನೈದು ದಿನಗಳಲ್ಲಿ ತಪ್ಪದೆ ಬರುವೆನೆಂದು ನುಡಿಕೆಯೆನ್ನು ಹೇಳಿದನು. ಕಂಜಾಕ್ಷಿಯು ಏನೂ ತೋರದೆ, ಮಹಾನುಭಾವನೆ! ನಾನು ಹದಿನೈದು ದಿನಗಳನ್ನೂ ಅಹೋ ರಾತ್ರಿಯೂ ನಿನ್ನ ಧ್ಯಾನದಲ್ಲಿಯೇ ಕಳೆಯುವೆನು. ಹದಿನಾರನೆಯ ದಿನ ನೀನು ಬಾರದಿದ್ದಲ್ಲಿ ನಾನು ಅಗ್ನಿ ಕುಂಡವನ್ನು ತೆಗೆಯಿಸಿ, ಅಗ್ನಿಯಲ್ಲಿ ಪ್ರವೇಶಮಾಡುವೆನು, ಇದು ನಿಜವೆಂದು ಹೇಳಿ, ಪತಿಯ ಅಪ್ಪಣೆಯನ್ನು ಪಡೆದು, ಪಲ್ಲಕ್ಕಿಯಲ್ಲಿ ಕುಳಿತು, ಅರಮನೆಗೆ ಬಂದು ಸೇರಿಕೊಳ್ಳು. ಹದಿನೈದು ದಿನವೂ ಪತಿಯನ್ನು ಮನದಲ್ಲಿ ಧ್ಯಾನಮಾಡುತಾ, ಪತಿಯು ಸುರಕ್ಷಿತನಾಗಿ ಜಯವನ್ನು ಪಡೆದು ಬರಬೇಕೆಂದು ಧರ್ಮದೇವತೆಯನ್ನು ಪ್ರಾರ್ಥಿಸುತ್ತಿದ್ದಳು. ನಿದ್ರಾಹಾರಗಳನ್ನು ಬಿಟ್ಟುಬಿಟ್ಟಳು. ಅತ್ಯಂತ ನೈರಾಶ್ಯವನ್ನು ತಾಳಿದಳು.

ಅತ್ತ ರಾಜಹಂಸನಾದರೊ ಸ್ವಲ್ಪದೂರದವರೆಗೆ ಪಾದಚಾರಿಯಾಗಿಯೇ ಹೋಗಿ, ಆ ಬಳಿಕ ಭೇತಾಳನನ್ನು ಸ್ಮರಿಸಿದನು. ಆ ಕೂಡಲೇ ಭೇತಾಳನು ರಾಜನಿಗೆ ಪ್ರತ್ಯಕ್ಷನಾಗಿ, ಎದುರಿಗೆ ನಿಂತು, ಕೈಗಳನ್ನು ಜೋಡಿಸಿಕೊಂಡು, ರಾಜಶ್ರೇಷ್ಠನೆ! ದಾಸನಾದ ನನ್ನನ್ನು ಸ್ಮರಿಸಿದ ಕಾರಣವೇನೆಂದು ಕೇಳಿದನು. ರಾಜಹಂಸನಿಗೆ ಬಹಳ ಸಂತೋಷವಾಯಿತು. ತನ್ನ ಅಭಿಪ್ರಾಯವನ್ನು ಭೇತಾಳನಿಗೆ ತಿಳಿಸಿದನು. ಭೇತಾಳನು ರಾಜಹಂಸನನ್ನು ಕುರಿತು, ರಾಜಪುತ್ರನೆ! ನಾನು ದೇವಲೋಕದ ಒಳಕ್ಕೆ ಬರುವುದಿಲ್ಲ. ಊರ ಹೊರಗೆ ನಿನ್ನನ್ನು ಇಳಿಸಿ ನಾನು ಹೊರಟುಹೋಗುವೆನೆಂದು ಹೇಳಿ, ರಾಜಪುತ್ರನನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿಕೊಂಡು, ರೆಪ್ಪೆ ಬಡಿಯುವುದರೊಳಗಾಗಿ ದೇವಲೋಕವನ್ನು ಸೇರಿ, ರಾಜಪುತ್ರನನ್ನು ಅಲ್ಲಿಳಿಸಿ ತಾನು ಹೊರಟುಹೋದನು. ರಾಜಹಂಸನಾದರೊ ಸೊ

ವೇಂದ್ರನ ಪಾರಿಜಾತವನವನ್ನು ಪ್ರವೇಶಿಸಿದನು. ಅಲ್ಲಿದ್ದ ವನಪಾಲಕರು ಬಂದು ರಾಜಹಂಸನನ್ನು ಯಾತಕ್ಕೆ ಬಂದೆಯೆಂದು ಗರ್ಜಿಸಿ ಚಿತ್ತಾದಿಂದ ಹೊಡೆದರು. ರಾಜಹಂಸನಿಗೆ ಬಹಳ ಕೋಪಬಂದಿತು, ತನ್ನ ಮುಷ್ಟಿಯಿಂದ ಆ ವನಪಾಲಕರನ್ನು ಚನ್ನಾಗಿ ಹೊಡೆದೋಡಿಸಿ, ತಾನು ಆ ವನದಲ್ಲೆಲ್ಲಾ ತಿರುಗಿ ಅಲ್ಲಿನ ಸೊಬಗನ್ನು ನೋಡಿ ಆನಂದಿಸುತ್ತಿದ್ದನು. ಪೆಟ್ಟುಗಳು ತಿಂದ ಆ ದಿವಿಜಪತಿಯ ವನಪಾಲಕರುಗೋಳಿಡುತ್ತಾ ದೇವೇಂದ್ರನ ಬಳಿ ಹೋಗಿ ನಡೆದ ವರ್ತಮಾನವನ್ನೆಲ್ಲಾ ವಿಸ್ತರಿಸಿದರು. ಅಮರನಾಥನು ಗಾಬರಿಯಾಗಿ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ಹಲ್ಲುಗಳನ್ನು ಪಟಪಟನೆ ಕಡಿಯುತ್ತಾ, ದೇವಗಂಧರ್ವಾದಿಗಳನ್ನು ಕರೆದುಕೊಂಡು, ಪಾರಿಜಾತವನದ ಬಳಿಗೆ ಬಂದು ಓ ನರಾಧಮಾ! ಮನುಷ್ಯರು ದೇವಲೋಕಕ್ಕೆ ಬರಬಹುದೆ? ಇಂತಹ ದುರಾತ್ಮನೂ ಗರ್ವಿಷ್ಠನೂ ಆದ ನಿನ್ನನ್ನು ಈಗಲೆ ಕೊಲ್ಲುವೆನೆನ್ನಲು, ರಾಜಹಂಸನು ಅಮರಪತಿಯೆ! ನೀನು ಇಂತಹ ಗರ್ವದ ಮಾತುಗಳನ್ನಾಡಬಹುದೆ? ನನ್ನ ಪ್ರಭಾವವನ್ನು ತಿಳಿಯದೆ ನೀನು ಈರೀತಿ ಮಾತನಾಡಿದ್ದರಿಂದ ನಿನ್ನನ್ನು ಈಗಲೆ ಸಂಹರಿಸುವೆನೆನ್ನಲು, ದೇವೇಂದ್ರನು ಕೋಪಾಟೋಪದಿಂದ ನರಾಧಮಾ! ಹೊರಗೆ ಬಾರೆಂದು ಕೂಗುತ್ತಾ ದಿಕ್ಕುಗಳು ಗಡಗಡನೆ ನಡುಗುವಂತೆ ಗರ್ಜಿಸಿ ಮೂರು ಬಾಣಗಳನ್ನು ರಾಜಹಂಸನ ಮೇಲೆ ಬಿಟ್ಟನು ರಾಜಹಂಸನು ಇದನ್ನು ಲಕ್ಷ್ಯಮಾಡದೆ ಐದು ಬಾಣಗಳಿಂದ ಇಂದ್ರನನ್ನು ಹೊಡೆಯಲು ದೇವೇಂದ್ರನು ಪರಮಾಶ್ಚರ್ಯವುಳ್ಳವನಾಗಿ, ಆಗ್ನೇಯಾಸ್ತ್ರವನ್ನು ರಾಜಹಂಸನಮೇಲೆ ಪ್ರಯೋಗಿಸಿದನು. ರಾಜಹಂಸನಾದರೊ ವಾರುಣಾಸ್ತ್ರದಿಂದ ಆಗ್ನೇಯಾಸ್ತ್ರದ ಹೊಡೆತವನ್ನು ತಪ್ಪಿಸಿಕೊಂಡು ಮೇಘಾಸ್ತ್ರವನ್ನು ಬಿಟ್ಟನು. ದೇವೇಂದ್ರನು ಆ ಮೇಘಾಸ್ತ್ರವನ್ನು ವಾಯವ್ಯಾಸ್ತ್ರದಿಂದ ಒಡಿಸಿ ಅಂಧಕಾರಾಸ್ತ್ರವನ್ನು ಬಿಟ್ಟರೆ ಆ ವೀರಾಗ್ರಣಿಯಾದ ರಾಜಪುತ್ರನು ಭಾಸ್ಕರಾಸ್ತ್ರವನ್ನು ಪ್ರಯೋಗಿಸಿ, ಅಂಧಕಾರಾಸ್ತ್ರವನ್ನು ಓಡಿಸಿಬಿಟ್ಟನು. ನಾಗಾಸ್ತ್ರದಿಂದ ದೇವೇಂದ್ರನನ್ನು ನೋಯಿಸಿದನು. ಅಮರನಾಥನಾದರೊ ಗರುಡಾಸ್ತ್ರದಿಂದ ನಾಗಾಸ್ತ್ರವನ್ನು ತಪ್ಪಿಸಿಕೊಂಡು ವೀರಾವೇಶದಿಂದ ತನ್ನ ವಜ್ರಾಯುಧವನ್ನು ಪ್ರಯೋಗಿಸಿದನು. ರಾಜಹಂಸನು ತಡಮಾಡದೆ ಆ ವಜ್ರಾಯುಧದ ಮೇಲೆ ತನ್ನ ಚಂದ್ರಾಯುಧವನ್ನು ಪ್ರಯೋಗಿಸಿದನು. ಈ ವಜ್ರಾಯುಧ ಚಂದ್ರಾಯುಧಗಳಿರಡೂ ತೀವ್ರತಾಗ್ನಿಯನ್ನು ಹುಟ್ಟಿಸಿ, ಘೋರನಾಗಿ ಹೋರಾಡುತ್ತಿರಲು, ಆ ಅಗ್ನಿಜ್ವಾಲೆಯು ಬ್ರಹ್ಮಲೋಕವನ್ನು ವ್ಯಾಪಿಸಿದ್ದರಿಂದ ಅಲ್ಲಿ ಚತುರ್ಮುಖ ಬ್ರಹ್ಮನು ಜಗದ್ರಕ್ಷಣೆಯನ್ನರಿತು ಗಾಬರಿಯಾಗಿ, ತ್ರಿಲೋಕಗಳೂ

ನಾಶವಾದೀತೆಂದು ಬೆದರಿ, ಕೂಡಲೆ ಹಂಸಾರೂಢನಾಗಿ ದೇವೇಂದ್ರನ ಬಳಿ ಬಂದು, ಅಮರಪತಿಯೆ! ನೀನು ಹೀಗೆ ತ್ವರೆಪಟ್ಟು ಇಂತಹ ಕಾರ್ಯವನ್ನು ಮಾಡಬಹುದೆ? ನಿನಗೆ ಆ ರಾಜಹಂಸನ ಪ್ರಭಾವವು ತಿಳಿಯದು. ತಪಸ್ವಿಗಳಾದ ಗುರುಮುಖದಿಂದ ಪಡೆದಿರುವ ಮಹಾತ್ಮೆಯುಳ್ಳ ಅವನ ಚಂದ್ರಾಯುಧದೆದುರಿಗೆ ನಿನ್ನ ವಜ್ರಾಯುಧವು ನಿಲ್ಲಲಾರದು. ನೀನು ಆ ಪುಣ್ಯಾತ್ಮನನ್ನು ಸಮಾಧಾನಪಡಿಸುವುದು ಮೇಲು, ಜಾಗ್ರತೆಯಾಗಿ ನಿನ್ನ ವಜ್ರಾಯುಧವನ್ನು ಹಿಂದಕ್ಕೆ ಕರೆದುಕೊಳ್ಳಿಂದು ಹೇಳಿ ತಾನು ಅಂತರ್ಧಾನನಾದನು. ಕೂಡಲೆ ಇಬ್ಬರೂ ತಮ್ಮತಮ್ಮ ಆಯುಧಗಳನ್ನು ಹಿಂದಕ್ಕೆ ಕರೆದುಕೊಂಡರು. ಆ ಬಳಿಕ ದೇವೇಂದ್ರನು ರಾಜಹಂಸನನ್ನು ತನ್ನ ಅಂತಃಪುರಕ್ಕೆ ಕರೆದುಕೊಂಡು ಹೋಗಿ ಕೊಂಡಾಡಿ, ತನ್ನ ಸುತೆಯಾದ ಸೂರ್ಯಕಾಂತಾಮಣಿಯನ್ನು ಕೊಟ್ಟು ವಿವಾಹಮಾಡಿದನು. ರಾಜಹಂಸನು ದೇವೇಂದ್ರನ ಅರಮನೆಯಲ್ಲಿ ಸೂರ್ಯಕಾಂತಾಮಣಿಯೊಂದಿಗೆ ರತಿಕ್ರೀಡೆಗಳನ್ನಾಡುತ್ತಾ, ಸಂತೋಷದಿಂದ ಇರುವಲ್ಲಿ ಒಂದಾನೊಂದು ದಿನ ರಾಜಹಂಸನು ಊರ್ವಶಿಯೊಂದಿಗೆ ಕಂಜಾಕ್ಷನ ಅಭಿಪ್ರಾಯವನ್ನು ಹೇಳಿದನು. ಊರ್ವಶಿಯಾದರೊ ರಾಜಹಂಸನನ್ನು ಕುರಿತು, ಮಹಾನುಭಾವನೆ! ನಾನು ದೇವಲೋಕವನ್ನು ಬಿಟ್ಟು ಭೂಲೋಕದಲ್ಲಿ ಹೇಗೆ ಇರಲಾರೆನು. ನಾನು ಒಂದು ವೀಣೆಯನ್ನು ಕೊಡುವೆನು, ಈ ವೀಣೆಯನ್ನು ಕಂಜಾಕ್ಷನು ಯಾವಾಗ ಬಾರಿಸುವನೊ ಆ ಕೂಡಲೆ ನಾನು ಅಲ್ಲಿಗೆ ಬಂದು ಆ ರಾಜಪುತ್ರನ ಇಷ್ಟವನ್ನು ನೆರವೇರಿಸುವೆನು. ಹೀಗೆಂದು ನುಡಿದು ಒಂದಾನೊಂದು ವೀಣೆಯನ್ನು ರಾಜಹಂಸನಿಗೆ ಕೊಟ್ಟಳು. ರಾಜಹಂಸನು ಅದನ್ನು ತೆಗೆದುಕೊಂಡು ಸೂರ್ಯಕಾಂತಾಮಣಿಯೊಂದಿಗೆ ಸುಖಸಂತೋಷಗಳನ್ನು ಅನುಭವಿಸುತ್ತಿದ್ದನು. ಅಲ್ಲದೆ ಕಂಜಾಕ್ಷಿಯು ತನ್ನಮೇಲಿಟ್ಟು ಕೊಂಡಿರುವ ಮೋಹವನ್ನೂ, ಹದಿನಾರನೆಯ ವಿನ ಅಗ್ನಿಕುಂಡದಲ್ಲಿ ಬಿದ್ದು ಹೋಗುವನೆಂಬ ಪ್ರತಿಜ್ಞೆಯನ್ನೂ ಮನದಲ್ಲಿ ಸ್ಮರಿಸಿಕೊಂಡು, ಹದಿನಾರನೆಯ ದಿನಕ್ಕೆ ಸರಿಯಾಗಿ ಪ್ರಯಾಣಮಾಡಲು ನಿರೀಕ್ಷಿಸುತ್ತಿದ್ದನು.

ಅತ್ತ ಗಾಂಧಾರಾಧಿಪತಿಯಾದ ಕಾರ್ತಿಕೇಯನು ಮಹಾರಾಯನಾದರೊ, ರಾಜಹಂಸನ ವರ್ತಮಾನವೇ ತಿಳಿಯದೆ, ಮಗಳಾದ ಕಂಜಾಕ್ಷಿಯ ಬಳಿಗೆ ಬಂದು, ಬಹಳವಾಗಿ ದುಃಖಿಸಿ, ಅವ್ವಾ! ನಿನಿನ್ನು ದುಃಖಿಸಿ ಫಲವೇನು! ದೇವಲೋಕಕ್ಕೆ ಹೋದ ರಾಜಹಂಸನು ಹಿಂದಿರುಗಿ ಬರುವುದನ್ನು ನಾನು ಕಾಣೆನು. ಆದ್ದರಿಂದ ನೀನು ಇನ್ನು ಮುಂದೆ ದುಃಖವನ್ನು ಬಿಟ್ಟುಬಿಡು. ನಿನ್ನಲ್ಲಿರುವ ಚಿತ್ರಪಟಗಳಲ್ಲಿನ ಯಾರನ್ನಾದರೂ ಮದುವೆ ಮಾಡಿಕೊ ಎನ್ನಲು, ಕಂಜಾಕ್ಷಿಯು ತಂದೆಯೇ! ಮಾನಿಷ್ಯೆಯಾದ ಹೆಂಗ

ಸಿಗೆ ಒಬ್ಬ ಗಂಡನಲ್ಲದೆ ಅನೇಕ ಗಂಡಂದಿರಿರುವರೆ? ನನ್ನ ಮನಸ್ಸಿನಲ್ಲಿ ಆ ರಾಜಹಂಸ ಮಹಾರಾಯನನ್ನು ಯಾವಾಗ ವರಿಸಿದೆನೋ ಪುನಃ ಮನಸ್ಸನ್ನು ಎಂದಿಗೂ ಬದಲಾಯಿಸಲಾರೆ. ನನಿಗೆ ರಾಜಹಂಸನ ವಿನಹ ಇಂದಾವ ದೇವತೆಗಳು ಪ್ರತ್ಯಕ್ಷವಾಗಿ ಬಂದರೂ ತ್ರಿಮೂರ್ತಿಗಳೆ ನನಗೆದು ರಾದರೂ ನಾನುಮಾತ್ರ ಎಂದೆಂದಿಗೂ ನನ್ನ ಮನಸ್ಸನ್ನು ಚಲಿಸುವಳಲ್ಲವು. ರಾಜಹಂಸನು ಬಾರದಿದ್ದರೆ ನಾನು ಅಗ್ನಿಪ್ರವೇಶವನ್ನು ನಿಶ್ಚಯಿಸಿರುವೆನೆಂದಳು. ಪುತ್ರಿಯ ಈ ರೀತಿಯಾದ ಕಾರ್ಯಪ್ರತಿಜ್ಞೆಯನ್ನು ಕಾರ್ತಿಕೇಯನು ಕೇಳಿ, ಮಗೂ! ಕಂಜಾಕ್ಷೀ! ರಾಜಹಂಸನಿಗೆ ನಿನ್ನನ್ನು ಕೊಟ್ಟು ಮದುವೆಯೇ ಮಾಡಿಸಿಲ್ಲವಲ್ಲಾ! ಹೀಗಿರುವಲ್ಲಿ ನೀನು ರಾಜಹಂಸನೇ ನನ್ನ ಪತಿಯೆಂದು ಈಗೆ ನಿಶ್ಚಯಿಸಿರುವೆಯೆನ್ನಲು, ಕಂಜಾಕ್ಷಿಯು ಸಾವಿತ್ರಿಮತ್ತು ಚಂದ್ರನಿಭಾನನಾ ದೇವಿಯರ ಚರಿತ್ರೆಯನ್ನು ಹೇಳಿ ರಾಜೇಂದ್ರನನ್ನು ಸಮಾಧಾನಪಡಿಸಿದಳು. ಆಗ ರಾಜನೂ ಬದಲು ಮಾತನ್ನಾಡಲು ಶಕ್ತನಾಗದೆ ಪಟ್ಟಣವನ್ನಲಂಕರಿಸಿ, ಊರಹೊರಗೆ ಅಗ್ನಿಕುಂಡವನ್ನು ತೆಗೆಸಿದನು. ಪಟ್ಟಣದಲ್ಲೆಲ್ಲಾ ಪುರವೆಲೆಗಳ ತೋರಣಗಳನ್ನೂ ಚಪ್ಪರಗಳನ್ನೂ ಮಾಡಿಸಿದನು. ಎಲ್ಲೆಲ್ಲಿಯೂ ಮಂಗಳವಾದ್ಯಗಳು ಭೋರ್ಗರೆಯುತ್ತಲಿದ್ದವು. ಹದಿನೈದು ದಿನಗಳ ವರೆಗೂ ರಾಜಹಂಸನ ವರ್ತಮಾನವೇ ಇಲ್ಲದಿರಲು, ಕಂಜಾಕ್ಷಿಯು ಕಡು ದುಃಖದಿಂದ ಅಗ್ನಿಪ್ರವೇಶಮಾಡುವುದನ್ನೆ ದೃಢಮಾಡಿಕೊಂಡಳು. ಹದಿನಾರನೆ ದಿನ ಬೆಳಿಗ್ಗೆ ಅರಿಶಿನದ ನೀರಿನಲ್ಲಿ ಸ್ನಾನವನ್ನು ಮಾಡಿ, ಅರಿಶಿನದ ವಸ್ತ್ರವನ್ನುಟ್ಟು ಕುಂಕುಮವನ್ನು ಹಣೆಗೂ ಮೈಗೂ ಬಳಿದುಕೊಂಡು, ರಕ್ತಪುಷ್ಪಗಳನ್ನು ಮುಡಿದು, ಪತಿವ್ರತಾಚಾರಿಯಾಗಿ ಮಂಗಳವಾದ್ಯಗಳೊಂದಿಗೆ, ಪಟ್ಟಣದಲ್ಲೆಲ್ಲಾ ತಿರುಗುತ್ತಾ ದಾರಿಯಲ್ಲಿ ಅನೇಕ ಮುತ್ತೈದೆಯರಿಗೆ ಬೇಕಾದ ದಾನಧರ್ಮಗಳನ್ನು ಕೊಡುತ್ತಾ, ಊರಹೊರಗಿರುವ ಅಗ್ನಿಕುಂಡದ ಬಳಿಗೆ ಬಂದು ಸೇರಿದಳು. ಪುರಜನರೆಲ್ಲಾ ಈ ವಿಚಿತ್ರವನ್ನು ನೋಡಲು ಗುಂಪುಗುಂಪಾಗಿ ನೆರೆದರು.

ಅತ್ತ ರಾಜಹಂಸ ಮಹಾರಾಯನಾದರೊ, ದೇವೇಂದ್ರನು ಕೊಟ್ಟ ವಿವಿಧ ವಸ್ತುಗಳನ್ನೆಲ್ಲ ತೆಗೆದುಕೊಂಡು, ಹೆಂಡತಿಯಾದ ಸೂರ್ಯಕಾಂತಾ ಮಣಿಯನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು, ಊರ್ವಶಿಯು ಕೊಟ್ಟ ವೀಣೆಯನ್ನು ತೆಗೆದುಕೊಂಡು ವಾಯುವೇಗದಿಂದ ಬರುತ್ತಿದ್ದನು. ಅಷ್ಟರಲ್ಲಿ ಸರ್ವಾಭರಣಭೂಷಿತೆಯಾದ ಕಂಜಾಕ್ಷಿಯು ರಾಜಹಂಸನು ಬರಲಿಲ್ಲವೆಂದು ಅಗ್ನಿಗುಂಡಕ್ಕೆ ಪ್ರದಕ್ಷಿಣೆಗಳಂ ಮಾಡಿ ಬೇಳಲೇಕೆಂದು ಸಿದ್ಧಪಡಿಸಿಕೊಳ್ಳುವ ಹೊತ್ತಿಗೆ ಸರಿಯಾಗಿ ದೇವಲೋಕದಿಂದ ರಾಜ

ಹಂಸನ ವಿಮಾನವು ಆ ಅಗ್ನಿಕುಂಡದ ಬಳಿ ಬಂದಿತು. ರಾಜಹಂಸನಾದ ರೊ ಪರ್ಣನಾಯಕಿ! ನಿಲ್ಲು ನಿಲ್ಲು!! ಆತುರಪಡಬೇಡ! ಆತುರಪಡಬೇಡ!! ಇದೊ ಬಂದೆನೆಂದು ಚೀಗನೆ ಪಲ್ಲಕ್ಕಿಯಿಂದಿಳಿದು ಆ ಕಂಜಾಕ್ಷಿಯನ್ನು ಹಿಡಿದುಕೊಂಡನು, ರಾಜಹಂಸನನ್ನು ನೋಡಿದ ಕೂಡಲೆ ಆ ಕಂಜಾಕ್ಷಿಯು ಮೂರ್ಛಿತಳಾಗಿ ಕಳಗೆ ಬಿದ್ದಳು. ಕಾರ್ತಿಕೇಯು ಮಹಾರಾಯನು ಕೂಡಲೆ ಬಂದು, ತನ್ನ ಮಗಳನ್ನು ಮೂರ್ಛೆಯಿಂದ ಎಚ್ಚರಗೊಳಿಸಿ, ಪಲ್ಲಕ್ಕಿಯಲ್ಲಿ ಕೂಡಿಸಿ, ತನ್ನರಮನೆಗೆ ಕಳುಹಿಸಿದನು. ಆ ಬಳಿಕ ರಾಜಹಂಸನನ್ನು ಸಾಸಾ ಪ್ರಕಾರವಾಗಿ ಕೊಂಡಾಡಿ, ಆ ರಾಜಹಂಸನು ದೇವಲೋಕಕ್ಕೆ ಹೋಗಿಬಂದ ವರ್ತಮಾನವನ್ನೆಲ್ಲಾ ಕೇಳಿ ಅತ್ಯಾನಂದವನ್ನು ಹೊಂದಿ, ಸೂರ್ಯಕಾಂತಾಮಣಿಯನ್ನು ಕೊಂಡಾಡಿ, ಆಕೆಯನ್ನು ತನ್ನ ಮಗಳ ಬಳಿಗೆ ಕಳುಹಿಸಿ, ರಾಜಹಂಸನನ್ನು ಪಟ್ಟದಾನೆಯ ಮೇಲೆ ಕುಳ್ಳಿರಿಸಿ, ಪುರಪ್ರವೇಶವಂ ಮಾಡಿಸಿದನು. ಪುರಜನರಾದರೊ, ಆಹಾ! ಈ ಮಹಾನುಭಾವನು ಮನುಷ್ಯಮಾತ ನಲ್ಲವು. ದೇವತಾಸ್ವರೂಪನು. ನಮ್ಮ ಭಾಗದ ದೇವರೇ ಈತನೆಂದು ಅನೇಕ ಮರ್ಯಾದೆಗಳನ್ನು ಮಾಡಿದರು. ಆನಂತರ ಗಾಂಧಾರಪತಿಯು ಅಳಿಯನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ರಾಜಹಂಸನು ತಾನು ತಂದಿದ್ದ ನೀಲಿಯನ್ನು ಆ ಕಂಜಾಕ್ಷನಿಗೆ ಕೊಟ್ಟು ಊರ್ವಶಿಯ ಸಂಗತಿಯನ್ನೆಲ್ಲಾ ಹೇಳಿದನು. ಕಂಜಾಕ್ಷನು ಅತ್ಯದ್ಭುತವಾದ ರಾಜಹಂಸನ ಸಾಹಸವನ್ನು ಕೊಂಡಾಡಿ ನಮಸ್ಕಾರಮಾಡಿದನು. ಕಾರ್ತಿಕೇಯನೆಂಬ ಗಾಂಧಾರಪತಿಯೊದರೊ ತನ್ನ ಕುವರನಾದ ಕಂಜಾಕ್ಷನಿಗೆ ಅನುರೂಪವಾದ ಕನ್ಯಕಾಮಣಿಯನ್ನು ಗೊತ್ತುಮಾಡಿ ಅವನಿಗೂ, ರಾಜಹಂಸನಿಗೆ ತನ್ನ ಕುವರಿಯನ್ನು ಕೊಟ್ಟು ಶುಭಮುಹೂರ್ತದಲ್ಲಿ ವಿವಾಹ ಮಹೋತ್ಸವವನ್ನು ಬಳಿಯಿಸಿದನು. ರಾಜಹಂಸನು ತನ್ನ ಇಬ್ಬರು ಭಾರ್ಯೆಯರೊಂದಿಗೆ ಅಲ್ಲಿ ಸುಖವಾಗಿ ಕೆಲವುಕಾಲವಿದ್ದು, ಆ ಬಳಿಕ ತಮ್ಮ ದೇಶಕ್ಕೆ ಹೊರಡಲುದ್ಯುಕ್ತನಾದನು. ಕಾರ್ತಿಕೇಯನು ಅಳಿಯನಿಗೆ ಅನೇಕ ವಿಧವಸ್ತ್ರಾಭರಣಗಳನ್ನೂ ಚತುರಂಗ ಬಲವನ್ನೂ ಬಳುವಳಿಯಾಗಿ ಕೊಟ್ಟನು. ರಾಜಹಂಸನು ಆ ವುಗಳನ್ನೆಲ್ಲಾ ತೆಗೆದುಕೊಂದು, ಕಂಜಾಕ್ಷಿಯನ್ನೂ, ಸೂರ್ಯಕಾಂತಾ ಮಣಿಯೆನ್ನೂ ಕರೆದುಕೊಂಡು ಪ್ರಯಾಣಮಾಡಿದನು.

ಅತ್ತ ರಾಜಹಂಸನ ತಾಯಿತಂದೆಗಳಾದರೊ ಪುತ್ರವಿಯೋಗ ದುಃಖವನ್ನು ತಡೆಯಲಾರದೆ, ಪುತ್ರನ ವರ್ತಮಾನವೇ ಇಲ್ಲದೆ ಕೊರಗಿ ಕೃಶರಾಗಿ ಪುತ್ರನ ಭೂಸಂಚಾರದ ಅವಧಿಯನ್ನೆ ಎದುರುನೋಡುತ್ತಿರುವಲ್ಲಿ ರಾಜಹಂಸನು ಬಗುತಿ ರುವನೆಂಬ ವರ್ತಮಾನವ

ಆಗ ಆ ಜನನೀಜನಕರ ಸಂತೋಷವನ್ನು ನಾನೇನೆಂದು ಹೇಳಲಿ! ಕೂಡಲೆ ಜನನೀಜನಕರು ಪಟ್ಟಣವನ್ನೆಲ್ಲಾ ಶೃಂಗಾರಮಾಡಿಸಿದರು. ಮಂಗಳವಾದ್ಯಗಳೊಂದಿಗೆ ಹೊರಟು ಮಗನನ್ನು ಎದುರ್ಗೊಳ್ಳಲು ರಾಜಹಂಸನು ತಾಯಿತಂದೆಗಳಿಗೆ ನಮಸ್ಕಾರವಂ ಮಾಡಿದನು. ಆ ಬಳಿಕ ಅವನ ಸತಿಯರಿರ್ವರೂ ಅಡ್ಡಬಿದ್ದರು. ತಾಯಿತಂದೆಗಳಿಬ್ಬರೂ ಮಗನನ್ನು ಆಶೀರ್ವದಿಸಿ ಗಾಢಾಲಿಂಗನವಂ ಮಾಡಿಕೊಂಡು ಪುತ್ರನಿಂದ ಸಕಲವಾದ ಭೂಸಂಚಾರ ವರ್ತಮಾನವನ್ನೂ ಕೇಳಿ ಅತ್ಯಾನಂದ ಭರಿತರಾದರು. ಆ ಬಳಿಕ ಇಬ್ಬರು ಸೊಸೆಯರನ್ನೂ ಬಹಳವಾಗಿ ಕೊಂಡಾಡಿ ಪುರಪ್ರವೇಶವನ್ನು ಮಾಡಿಸಿದರು. ರಾಜಹಂಸನಾದರೊ ತನ್ನ ಭುಜಬಲದಿಂದ ಸಕಲ ರಾಜರನ್ನೂ ಗೆದ್ದು ವಿಕಲ್ಪಕಾರ್ಧಿಪತ್ಯವನ್ನು ಪಡೆದು ಭೂಮಂಡಲವನ್ನೆಲ್ಲಾ ಧರ್ಮದಿಂದಲೂ ಕೀರ್ತಿಯಿಂದಲೂ ಆಳಿದನು. ಅನಂತರ ರಾಜ್ಯಭಾರವನ್ನೆಲ್ಲ ತನ್ನ ತಮ್ಮನಿಗೆ ಒಪ್ಪಿಸಿ ತಾನು ತಾಯಿತಂದೆಗಳ ಸೇವೆಯನ್ನು ಮಾಡುತ್ತಾ, ಗುರುಹಿರಿಯರನ್ನೂ ಯೋಗಿಗಳನ್ನೂ ಪೂಜಿಸುತ್ತಾ, ರಾಜತಪಸ್ವಿಯಾಗಿ ಬಹುಕಾಲ ಐಹಿಕ ಸುಖವನ್ನನುಭವಿಸಿ ಅನಂತರ ಪತಿವ್ರತೆಯೊಪ ಕುಂಜಾಕ್ಷಿಯೊಂಬಿಗೆ ದೇಯವನ್ನತ್ಯಜಿಸಿ ಶಾಶ್ವತವಾದ ಮುಕ್ತಿಯನ್ನು ಪಡೆದನೆಂದು ಶ್ರೀ ಕೃಷ್ಣಸ್ವಾಮಿಯು ಅರ್ಜುನನಿಗೆ ಬೋಧಿಸಿದನು. ಅರ್ಜುನನಾದರೊ ಮಹಾನುಭಾವನೆ, ಇದು ಅತ್ಯದ್ಭುತವಾದ ಕಥೆಯು. ನಿದ್ರೆಯು ಕಣ್ಣುಗಳನ್ನು ಮುಚ್ಚುತ್ತಲಿರುವುದು ನಿದ್ರಿಸೋಣವೆನ್ನಲು, ಶ್ರೀ ಕೃಷ್ಣನೂ ಒಪ್ಪಿಕೊಂಡು ಇಬ್ಬರೂ ಸುಖನಿದ್ರೆಯಂ ಗೈದರೆಂಬಲ್ಲಿಗೆ ಶ್ರೀ ಕೃಷ್ಣಬೋಧಾಮೃತ ಸಾರದೊಳು ಒಂಭತ್ತನೆಯ ಕಥೆಯು ಸಮಾಪ್ತಮಾದುದು.

ಹತ್ತನೆಯ ಕಥಾ ಪ್ರಾರಂಭವು.

ಹತ್ತನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾನದಿಯ ಮರಳ ದಿಬ್ಬದ ಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತಾ, ಸುಗಂಧ ಪರಿಮಳದಿಂದಲೂ, ಸುವಾಸನೆಯುಳ್ಳ ಪುಷ್ಪಗಳಿಂದಲೂ ಅಲಂಕೃತರಾಗಿ, ಮಂದಮಾರುತನಿಗೆ ಮೈಯೊಡ್ಡಿ, ಸಂತೋಷದಿಂದ ಕುಳಿತುಕೊಂಡಿರುವಾಗ ಅರ್ಜುನನು ಭಕ್ತಜನರಕ್ಷಕಾ! ಆಪದ್ಬಾಂಧವ! ದೇವಾದಿದೇವನೆ! ಸುಜ್ಞಾನವುಂಟಾಗುವಂತೆ ದರ್ಪಣ ಭಾವವನ್ನು ನನಗೆ ಬೋಧಿಸಿ ಮುಕ್ತಿಮಾರ್ಗವನ್ನು ತೋರಿಸಿ ಕಾಪಾಡಬೇಕೆಂದು ಪ್ರಾರ್ಥಿಸಲು ಶ್ರೀ ಕೃಷ್ಣ ಸ್ವಾಮಿಯು, ಇಂದ್ರಸುತನೆ! ಆದರ್ಶದರ್ಪಣ ಭಾವವನೂ,

ಜ್ಞಾನಮಾರ್ಗವನ್ನೂ ಧರಿಸಿ, ಅನೇಕರು ಮೋಕ್ಷವನ್ನು ಪಡೆದಿರುವರು. ನೀನೂ ಅಂತಹ ಅತ್ಯುತ್ತಮವಾದ ಮಾರ್ಗವನ್ನು ಹೊಂದಿ, ಆತ್ಮವನ್ನು ಧರಿಸಿ, ಸಂಶಯವನು ಹೋಗಲಾಡಿಸಿಕೊಂಡು, ಮೋಕ್ಷವನ್ನು ಪಡೆಯುವನಾಗೆಂದು ಅತ್ಯದ್ಭುತವಾದದ್ದಾಗಿರುವ ಪುಣ್ಯಮೂರ್ತಿಯಾದ ವೀರಸೇನ ಮಹಾರಾಯನ ಕಥೆಯನ್ನು ಹೇಳತೊಡಗಿದನು.

ವೀರಸೇನ ಮಹಾರಾಯನ ಚರಿತ್ರೆ.

ಅರ್ಜುನನು ಕೇಳು, ಪೂರ್ವದಲ್ಲಿ ಪಾಂಚಾಲವೆಂಬ ದೇಶವನ್ನು ಜಯಸೇನನೆಂಬ ಮಹಾರಾಯನು ಪರಿಪಾಲಿಸುತ್ತಿದ್ದನು. ಆ ರಾಜೇಂದ್ರನಿಗೆ ವೀರಸೇನನೆಂಬ ಪೂರ್ವ ಕುವರನು ಹುಟ್ಟಿದನು. ಆ ಬಾಲನಾದರೊ ಬಾಲಸೂರ್ಯನಂತೆ ದಿನೇ ದಿನೇ ವೃದ್ಧಿಯನ್ನೈದುತ್ತಾ, ಸಕಲ ವಿದ್ಯೆಗಳಲ್ಲಿಯೂ ಅದ್ವಿತೀಯವಾದ ಪಾಂಡಿತ್ಯವನ್ನು ಪಡೆದನು ಧನುರ್ವಿದ್ಯೆಯಲ್ಲಿ ನಿಸ್ಸೀಮನಾದನು. ಕುದುರೆಯ ಸವಾರಿಯಲ್ಲಿ ಯಾರೂ ಇವನನ್ನು ಮೀರಿಸಲಾರರು. ಶಾಂತನಾಗಿಯೂ ಶಮದಮಾದಿ ಸಕಲ ಸದ್ಗುಣಯುತನಾಗಿಯೂ ಪ್ರಕಾಶಿಸುತ್ತಿದ್ದನು. ಕೆಲವು ಕಾಲದಲ್ಲಿಯೇ ಇವನು ಪಾಪ್ತಯೌವನವುಳ್ಳವನಾದನು. ಹೀಗಿರುವಲ್ಲಿ ರಾಜಪುತ್ರನು ಒಂದಾನೊಂದು ದಿನ ತನ್ನ ತಂದೆಯ ಸಭೆಯಲ್ಲಿ ಕುಳಿತುಕೊಂಡಿರುವಲ್ಲಿ ಅಲ್ಲಿಗೆ ಸಿಂಹಳದ್ವೀಪದಿಂದ ರಾಜದೂತರು ಬಂದು, ಜಯಸೇನ ಮಹಾರಾಯನನ್ನು ಕುರಿತು, ರಾಜೇಂದ್ರನೇ, ನಮ್ಮರಸನಾದ ಸಿಂಹಳೇಶ್ವರನು ಹಂಸವೇಣಿಯಿಂದ ಕೂಡಿದ ಶಾರದಾವೇಣಿಗೆ ಸ್ವಯಂವರವೆಂದು ಪ್ರಕಟಿಸಿರುವನು. ಪ್ರಭುಗಳಾದ ತಾವೂ ಪರಿವಾರ ಸಮೇತ ಆ ಸ್ವಯಂವರಕ್ಕೆ ಬರಬೇಕೆಂದು ಪ್ರಕಟಿಸಿ ಹೊರಟುಹೋದರು. ಅನಂತರ ರಾಜಪುತ್ರನಾದ ವೀರಸೇನ ಮಹಾರಾಯನಾದರೊ, ಹಂಸವೇಣಿಯಿಂದ ಕೂಡಿದ ಶಾರದಾವೇಣಿಗೆ ಸ್ವಯಂವರವೆಂದರೆ ಮನಸ್ಸಿಗೆ ಚನ್ನಾಗಿ ಅರ್ಥವಾಗದೆ ಆ ರಾತ್ರಿ ಮಂತ್ರಿಯ ಮನೆಗೆ ಬಂದು ಮಂತ್ರಿಯನ್ನು ಕುರಿತು, ಅಮಾತ್ಯವರ್ಯ! ಈದಿನ ನಮ್ಮ ತಂದೆಯ ಸಭೆಗೆ ಸಿಂಹಳೇಶ್ವರನ ದೂತರು ಬಂದು, ಹಂಸವೇಣಿಯಿಂದ ಕೂಡಿದ ಶಾರದಾವೇಣಿಗೆ ಸ್ವಯಂವರವೆಂದೂ, ನೀವುಗಳು ದಯಮಾಡಬೇಕೆಂದೂ ಹೇಳಿ ಹೊರಟುಹೋದದ್ದನ್ನೂ ನೀನೂ ನೋಡಿದೆಯಷ್ಟೆ! ಈ ವಿಷಯವು ನನಗೆ ಸರಿಯಾಗಿ ತಿಳಿಯದೆ ಚಪಲಚಿತ್ತನಾಗಿರುವೆನು. ನನಗೆ ಈ ವಿಚಾರವನ್ನೆಲ್ಲಾ ಸರಿಯಾಗಿ ತಿಳುಹಿಸಬೇಕೆಂದು ಕೇಳಿದನು. ಮಂತ್ರಿಯಾದರೊ ತನ್ನ ಮನಸ್ಸಿನಲ್ಲಿ ಗಾಬರಿಯಾಗಿ ಆಹಾ! ರಾಜಪುತ್ರನ ಪ್ರಶ್ನೆಗೆ ಉತ್ತರ ಹೇಳಿದರೆ ಏನು ಪ್ರಮಾದವುಂಟಾಗುವುದೊ! ಹೇಳದೆ ಹೋದರೆ ಏನೇನು ಕಷ್ಟಗಳು ಬರುವವೊ! ಎನುವಾದಲ್ಲಿ

ಕು! ಹೀಗೆಂದು ಸ್ವಲ್ಪಹೊತ್ತು ಯೋಚಿಸಿ, ರಾಜಪುತ್ರಳ! ನೀನು ಇಂತಹ ಪ್ರಶ್ನೆಗೆ ಉತ್ತರವನ್ನು ಅಪೇಕ್ಷಿಸಬಾರದು. ಅದರಿಂದ ಅನೇಕ ಬಾಧಕಗಳುಂಟು. ನಿನಗೆ ಮನೋವ್ಯಸನಕ್ಕೆ ಕಾರಣವಾಗಿ, ಆ ವ್ಯಸನದಿಂದ ಅನೇಕ ಬಾಧಕಗಳುಂಟಾಗುವವು. ಅನಂತರ ಪ್ರಾಣಹಾನಿಗೂ ಕಾರಣವಾದೀತು, ಇದನ್ನು ತಿಳಿದರೆ ಆಗುವ ಪ್ರಯೋಜನವೂ ಕಡಮೆಯೇ! ಆದ್ದರಿಂದ ಪ್ರಭುಗಳು ಈ ಪ್ರಶ್ನೆಗೆ ಉತ್ತರವನ್ನು ಅಪೇಕ್ಷಿಸಬಾರದೆಂದು ಅನೇಕ ವಿಧವಾಗಿ ವಿಜ್ಞಾಪಿಸಿ ಹೇಳಿದರೂ ಕೇಳದೆ, ರಾಜಪುತ್ರನು ನಾನು ಅವಶ್ಯಕವಾಗಿಯೂ ಕೇಳಿ ತಿಳಿದುಕೊಳ್ಳಬೇಕೆಂದು ನುಡಿಯಲು ಮಂತ್ರಿವರ್ಯನಿಂತೆಂದನು.

ರಾಜಸೂನೂ! ಈಗ್ಗೆ ಸುಮಾರು ಮುನ್ನೂರು ವರ್ಷಗಳ ಹಿಂದೆ ಸಿಂಹಳಾಧೀಶನು ತನ್ನ ಕುವರಿಯಾದ ಹಂಸವೇಣಿಗೆ ಸ್ವಯಂವರವನ್ನು ಬಳೆಯಿಸಬೇಕೆಂದು ಅನೇಕ ರಾಜಪುತ್ರರ ಚಿತ್ರಪಟಗಳನ್ನು ತರಿಸಿ ತೋರಿಸಿದರೂ ಯಾರನ್ನೂ ಒಪ್ಪದೆ ವಿವಾಹವನ್ನೆ ಮಾಡಿಕೊಳ್ಳಲಿಲ್ಲ. ಅನಂತರ ಆ ಸಿಂಹಳೇಂದ್ರನ ಕುವರನು ತನ್ನ ಸಹೋದರಿಯ ಸ್ವಯಂವರಕ್ಕಾಗಿ ದೇಶದೇಶಗಳ ರಾಜಪುತ್ರರನ್ನೂ ಬರಮಾಡಿದನು. ಆ ಹಂಸವೇಣಿಯು ಆ ರಾಜಪುತ್ರರಲ್ಲಿ ಯಾರನ್ನೂ ವರಿಸಲಿಲ್ಲ. ಅನಂತರ ಅವನ ಮಗನು ತನ್ನ ಸೋದರತ್ತೆಯಾದ ಹಂಸವೇಣಿಯನ್ನು ಕುರಿತು, ಅಮ್ಮಾ! ನೀನು ಮದುವೆಮಾಡಿಕೊಳ್ಳದೆ ಹೀಗೆಯೇ ಇರುವುದು ಯುಕ್ತವಲ್ಲ. ಇದರಿಂದ ನಾವೂ ನಮ್ಮ ವಂಶವೂ ದೋಷಕ್ಕೆ ಭಾಗಿಗಳಾಗುವೆವು. ದಯಮಾಡಿ ವಿವಾಹವನ್ನು ಮಾಡಿಕೊಳ್ಳಲು ಒಪ್ಪಬೇಕೆಂದು ಅನೇಕ ವಿಧವಾಗಿ ವಿಜ್ಞಾಪಿಸಿದನು. ಅದಕ್ಕೆ ಹಂಸವೇಣಿಯು ಮಗೂ! ನನ್ನ ಪ್ರಶ್ನೆಗಳಿಗೆ ಯಾರು ಉತ್ತರವನ್ನು ಕೊಡುತ್ತಾರೆಯೊ ಅವರನ್ನು ನಾನು ವರಿಸುವೆನು. ಉತ್ತರ ಕೊಡಲಾರದವರನ್ನು ಕಣ್ಣೆತ್ತಿಯೂ ನೋಡತಕ್ಕವಳಲ್ಲವೆಂದು ತನ್ನ ಅಭಿಪ್ರಾಯವನ್ನು ತಿಳಿಸಿದಳು. ಆ ರಾಜೇಂದ್ರನು ಹಂಸವೇಣಿಯ ಸ್ವಯಂವರವನ್ನು ಸಾರಿಸಿದನು. ಅನೇಕ ರಾಜಪುತ್ರರು ಸಿಂಹಳ ದ್ವೀಪಕ್ಕೆ ಆ ಸುಂದರಿಯನ್ನು ವರಿಸಬೇಕೆಂಬಚ್ಛೆಯಿಂದಲೂ, ಯೌವನ ಮದದಿಂದಲೂ ಹೋಗಿ ಆ ಹಂಸವೇಣಿಯ ಪ್ರಶ್ನೆಗಳಿಗೆ ಉತ್ತರವನ್ನೆ ಕೊಡಲಾರದೆ ಅಲ್ಲಿಯೆ ಸತ್ತುಹೋದರು. ಸಿಂಹಳದ್ವೀಪದ ರಾಜರಲ್ಲಿ ಒಂಭತ್ತು ತಲೆಯವರೆಗೂ ಹಂಸವೇಣಿಯ ಸ್ವಯಂವರವನ್ನು ಪ್ರಕಟಿಸಿದ್ದೇ ಹೊರತು ಆ ಹಂಸವೇಣಿಯು ಯಾರನ್ನೂ ವರಿಸಲೆ ಇಲ್ಲ. ಆ ರಾಜೇಂದ್ರನು ಈಗ ಹತ್ತನೆ ತಲೆಯವನಾದ ಸಿಂಹಳೇಂದ್ರನಿಗೆ ಶಾರದಾವೇಣಿಯೆಂಬ ಪುತ್ರಿ ಇರುವಳು. ಆ ರಾಜೇಂದ್ರನು ಈಗ ಹಂಸವೇಣಿಗೂ, ತನ್ನ ಪುತ್ರಿಯಾ

ದಕಾರದಾವೇಣಿಗೂ, ಸ್ವಯಂವರವೆಂಬು ಪ್ರಕಟಸಿದ್ದಾನೆ. ಹಿಂದೆ ನಿಮ್ಮ ದೇಶವಿಂದ ನಿಮ್ಮ ವಂಶದ ಮೂವರು ರಾಜಪುತ್ರರು ಹಂಸವೇಣಿಯ ಸ್ವಯಂವರಕ್ಕಾಗಿ ಹೋಗಿ ಅಲ್ಲಿಯೇ ಮರಣವನ್ನೈದಿರುವರು. ಹಂಸವೇಣಿಯು ಈಗ ಮುನ್ನೂರು ವರುಷಗಳಾದರೂ ಮುದುಕಿಯಾಗದೆ ಸಾವನ್ನೂ ಇಲ್ಲದೆ ಸುಂದರ ಸುಕುಮಾರಿಯಾಗಿರಲು ಕಾರಣವೇನೊ ನನಗೆ ತಿಳಿಯದು. ಆಹಾ! ಇದು ಅತ್ಯದ್ಭುತವಾದ ವಿಷಯವು. ನೀನು ಜಾಗರೂಕನಾಗಿರು. ಮೋಸಹೋಗಬೇಡವೆಂದು ಅನೇಕ ನೀತಿಮಾರ್ಗಗಳನ್ನೂ, ಧರ್ಮಶಾಸ್ತ್ರಗಳನ್ನೂ ಬೋಧಿಸಿದನು. ಅನಂತರ ಆ ವೀರಸೇನನು ಮಂತ್ರಿಯ ಮನೆಯಿಂದ ತನ್ನ ಬಿಡಾರಕ್ಕೆ ಹೋಗಿ ಮಂತ್ರಿಯು ನೀತಿಮಾರ್ಗದಂತೆಯೇ ಕೆಲವು ದಿನಗಳು ತನ್ನ ಬುದ್ಧಿಯನ್ನು ಸ್ಥಿಮಿತಮಾಗಿಟ್ಟುಕೊಂಡರೂ ಕೂಡ ದೈವತಂತ್ರದಿಂದ ರಾಜಪುತ್ರನ ಮನಸ್ಸು ಚಂಚಲವಾಯಿತು. ಅಹೋ ರಾತ್ರಿಯೂ ಹಂಸವೇಣಿಯ ನಿಮಿತ್ತವಾಗಿ ಕೊರಕೊರಗಿ ಕೃಶನಾದನು. ಪ್ರಾಣವನ್ನು ತೃಣಪ್ರಾಯವಾಗಿ ಮಾಡಿದನು. ಆ ಬಳಿಕ ಒಂದಾನೊಂದು ದಿನ ಎನೂ ತೋರದೆ ಅರ್ಧರಾತ್ರಿಯಲ್ಲಿದ್ದು, ತನ್ನ ವಸ್ತ್ರಾಭರಣಂಗಳನ್ನೂ, ಆಯುಧವನ್ನೂ, ಅನೇಕ ಧನವನ್ನೂ ತೆಗೆದುಕೊಂಡು ಪಂಚಕಲ್ಯಾಣಿಯಾದ ತನ್ನ ಕುದುರೆಯಮೇಲೇರಿ ದಕ್ಷಿಣಾಭಿಮುಖವಾಗಿ ಪ್ರಯಾಣಮಾಡಿದನು. ಬಿಳಗಾದ ಮೇಲೆ ರಾಜೇಂದ್ರನಾದ ಜಯತ್ಸೇನನು ತನ್ನ ಕುವರನನ್ನೂ ಅವನ ಕುದುರೆಯನ್ನೂ ಕಾಣದೆ, ಬಹುವಾಗಿ ಹೆದರಿ, ಅನೇಕದೂತರನ್ನು ದಿಕ್ಕುದಿಕ್ಕಿಗೂ ಕಳುಹಿಸಿದನು, ಎಲ್ಲೆಲ್ಲ ಹುಡುಕಿದರೂ ವೀರಸೇನನ ವರ್ತಮಾನವೇ ತಿಳಿಯದಿರಲು ರಾಜನೂ ರಾಜಪತ್ನಿಯೂ ದುಃಖಾಕ್ರಾಂತರಾದರು. ಈಸಮಾಚಾರವನ್ನು ಕೇಳಿ ಗಾಬರಿಬಿದ್ದು, ಆಹಾ! ನಾನು ಹಂಸವೇಣಿಯ ವರ್ತಮಾನವನ್ನು ರಾಜಪುತ್ರನಿಗೆ ತಿಳಿಸಿದ್ದರಿಂದ ಹೀಗೆ ಆಗಿರಬಹುದೆಂದು ಯೋಚಿಸಿ, ಇದನ್ನು ರಾಜನಿಗೆ ತಿಳಿಸಿದರೆ ಏನುಪದ್ರವಮಾಡುವೆನೋ ಎಂದು, ರಾಜನಿಗೆ ಇದನ್ನು ತಿಳಿಸದೆ ಸುಮ್ಮನಿದ್ದನು, ಅತ್ತ ವೀರಸೇನನಾದರೊ ತನ್ನ ಪಂಚಕಲ್ಯಾಣಿಯ ಉತ್ತಮಾಶ್ವದ ಮೇಲೇರಿ ಬಿಳಗಾಗುವುದರೊಳಗೆ ಇಪ್ಪತ್ತುಗಾವುದ ದೂರ ಪ್ರಯಾಣ ಮಾಡಿದನು, ದಟ್ಟವಾದ ಅಡವಿಗಳಲ್ಲಿ ನಿರ್ಭಯವಾಗಿ ತಿರುಗುತ್ತಾ, ಎದುರು ಬೀಳುವ ಹೆಬ್ಬುಲಿಗಳನ್ನು ಕೊಲ್ಲುತ್ತಾ, ಕಾಡಾನೆಗಳನ್ನೂ ಕರಡಿಗಳನ್ನೂ ಓಡಿಸುತ್ತಾ, ಮುಂದುಮುಂದಕ್ಕೆ ಸೊರಟು, ಅಲ್ಲಲ್ಲಿ ಸಿಕ್ಕುವ ಮಾಧುರ್ಯಫಲಗಳನ್ನು ಮನದಣಿಯೆ ತಿಂದು, ಸರೋವರಂಗಳಲ್ಲಿ ಸಿಕ್ಕುವ ತಿಳಿನೀರ್ಗುಡಿದು, ನದಿಯುಪನಾಹಗಳಲ್ಲಿ ಈಜಾಡುತ್ತಾ, ಕಡುಧೈರ್ಯದಿಂದ ಕಾಡಿನಲ್ಲಿ ಅಲೆ

ಯುತ್ತಾ ಬಹುದೂರ ಪ್ರಯಾಣ ಮಾಡಿದನು, ಮಾರ್ಗಾಯಾಸದಿಂದ ರಾಜ ಪುತ್ರನು ಮರದ ನೆರಳಲ್ಲಿ ಸ್ವಲ್ಪನಿಶ್ರಮಿಸಿಕೊಳ್ಳಜೇಕೆಂದು ಇರುವಲ್ಲಿ. ಆ ಸಹಂವೇಣಿಯ ಸ್ಮರಣೆಯಿಂದ ಕಾಮಪೀಡಿತನಾಗಿ ಭ್ರಾಂತಿಯಿಂದ ಮುಂದಮುಂದಕ್ಕೆ ಹೋಗುತ್ತಿರುವಲ್ಲಿ, ಎದುರಾಗಿ ಅಗಸ್ತ್ಯಮುನೀಂದ್ರನ ಆಶ್ರಮವು ಸಿಕ್ಕಿತು. ಅಲ್ಲಲ್ಲಿ ತಿರುಗುತ್ತಿದ್ದ ಮುನಿವಟುಗಳಿಂದ ಮಹರ್ಷಿಯ ಪ್ರಭಾವವನ್ನು ತಿಳಿದು, ಕೂಡಲೆ ಆ ಮುನೀಂದ್ರನಬಳಿ ಬಂದು, ಆ ಮಹರ್ಷಿಯ ಪಾದಗಳಿಗೆ ಅಡ್ಡಬಿದ್ದನು. ಆ ತಾಪಸೇಂದ್ರನು ರಾಜಪುತ್ರನ ಮೇಲೆ ಕರುಣವನ್ನಿಟ್ಟು ಆ ಸುಕುಮಾರನನ್ನು ಮೇಲಕ್ಕೆಬ್ಬಿಸಿ, ರಾಜಕುವರ! ನೀನು ಯಾರು? ನಿನ್ನ ವೇಶವು ಯಾವುದು? ನಿಮ್ಮ ತಾಯಿತಂದೆಗಳು ಯಾರು? ನಿರ್ಭಯವಾಗಿ ಈ ಘೋರಾರಣ್ಯಕ್ಕೆ ಬರಲು ನಿಮಿತ್ತವೇನು? ಇದನ್ನೆಲ್ಲಾ ವಿಸ್ತಾರವಾಗಿ ನನಗೆ ತಿಳಿಯಪಡಿಸೆನ್ನಲು, ರಾಜಪುತ್ರನು ಭಯಭಕ್ತಿಯುತನಾಗಿ ತನ್ನ ವರ್ತಮಾನವನ್ನೆಲ್ಲಾ ಹೇಳಿದನು. ಇದನ್ನು ಕೇಳಿದ ಅಗಸ್ತ್ಯಮುನಿಯು ಪಕ್ಕನೆ ನಕ್ಕು, ಓ ರಾಜಕುವರಾ! ನೀನು ಬಾಲಬುದ್ಧಿಯಿಂದ ಈರೀತಿ ಈ ಘೋರಾರಣ್ಯವನ್ನು ಸುತ್ತಿಕೊಂಡು ಇಲ್ಲಿಗೆ ಬಳಲಿ ಬಂದಿರುವಿ, ಆ ಹಂಸವೇಣಿಯು ನಿಮಿತ್ತವಾಗಿ ಅನೇಕಾನೇಕ ರಾಜರು ಮೃತಿಯನ್ನೈದಿರುವರು, ನಿನಗೆ ಇದು ಅಸಾಧ್ಯವು. ನೀನು ನಿಮ್ಮ ತಾಯಿತಂದೆಗಳ ಬಳಿಗೆ ಹೊರಟುಕೋಗು ಎನ್ನಲು, ಮುನಿನಾಥನೆ! ಆ ಹಂಸವೇಣಿಯು ಮುನ್ನೂರುವರ್ಷಗಳಾದರೂ ಮುದಕಿಯಾಗದೆ ಮರಣವೂ ಇಲ್ಲದೆ ಕನ್ಯಕೆಯಾಗಿ ಸುಂದರ ಸುಕುಮಾರಿಯಾಗಿರಲು ಕಾರಣವೇನೆಂದು ಕೇಳಿದನು, ಆಗ ಅಗಸ್ತ್ಯಮಹರ್ಷಿಯು ರಾಜಪುತ್ರನೆ! ಅದನ್ನು ವರ್ಣಿಸಲು ಚತುರ್ಮುಖನಿಗೂ ಸಾಧ್ಯವಿಲ್ಲವು. ಆ ಸುಕುಮಾರಿಯು ನನಗೆ ಅನೇಕ ದಿನಗಳು ಶುಶ್ರೂಷೆ ಮಾಡಿದ್ದರಿಂದ ನಾನು ಮೆಚ್ಚಿ, ಆ ಬಾಲೆಯು ಎಷ್ಟುದಿನಗಳಾಗದರೂ ಮುದಿಯಾಗದೆ ಕೋಮಲಾಂಗಿಯಾಗಿರಲೆಂದು ನಾನು ವರವನ್ನು ಕೊಟ್ಟಿರುವೆನು, ನೀನು ಆ ಹಂಸವೇಣಿಯು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಾರೆ, ಹೋಗೆಂದು ಹೇಳಿ, ಈ ರಾಜಪುತ್ರನ ಸಮಾಚಾರವನ್ನೆಲ್ಲಾ ತನ್ನ ಹೆಂಡತಿಯಾದ ಲೋಪಾಮುದ್ರೆಗೆ ತಿಳಿಸಿದನು. ಆ ಮಹಾಪತಿವ್ರತೆಯಾದ ಲೋಪಾಮುದ್ರೆಯು ಪತಿಯನ್ನು ಕುರಿತು, ಮಹಾನುಭಾವನೆ! ಆ ಹಂಸವೇಣಿಯು ಸುಖವನ್ನೇ ತಿಳಿಯದೆ ಎಷ್ಟುದಿನಗಳು ಜೀನಿಸಿದರೆತಾನೆ ಪ್ರಯೋಜನವೇನು? ಈತನು ಆ ಮಾತೆಲವಂಕದಲ್ಲಿ ಹುಟ್ಟಿದ ವೀರನು, ನಿಮ್ಮ ಕರುಣವು ಈತನ ಮೇಲಿರಲೆಂದಳು, ಹೀಗಿರುವಲ್ಲಿ ಆ ರಾಜಕುವರನು ತನ್ನ ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ, ಮುನೀಂದ್ರನ ಪಾದಗಳಿಗೆ ಅಡ್ಡಬಿದ್ದು, ಮಹಾ

ನುಭಾವನೆ! ನನಿಗೆ ಆ ಕನ್ಯೆಯು ಲಭಿಸದಿದ್ದರೆ ಈ ಅಡವಿಯಲ್ಲಿ ನನಗೆ ದಿಕ್ಕುಯಾರು? ಪುಣ್ಯಮೂರುತಿಯೆ! ಪೂರ್ವದಲ್ಲಿ ನೀನು ಸಮುದ್ರೋದಕವನ್ನೆಲ್ಲಾ ಪಾನಮಾಡಿ, ದೇವತೆಗಳನ್ನು ಸಂತೋಷಪಡಿಸಿದ ಆ ನಿನ್ನ ಕರುಣೆಯು ಇಂದು ಎಲ್ಲಿಹೋಯಿತು? ವಿಂಧ್ಯಪರ್ವತದ ಎತ್ತರವನ್ನು ಕಡಮೆಮಾಡಿ ಸೂರ್ಯಸಂಚಾರಕ್ಕೆ ತಡೆಯಿಲ್ಲದೆ ಮಾಡಿ, ಲೋಕವನ್ನುರಕ್ಷಿಸಿದ ನಿನ್ನಕರುಣೆಯು ಇಂದು ಮಾಯವಾಯಿತೆ? ಆಹಾ! ನನ್ನ ಕೋರಿಕೆಯನ್ನು ಈಡೇರಿಸುವುದು ಮಹಾನುಭಾವನಾದ ನಿನಗಷ್ಟುಮಾತ್ರವೆಂದು ನುಡಿದು, ಆ ಮಹನೀಯನ ಸೇವೆಯಿನ್ನು ಮಾಡುತ್ತಿದ್ದನು, ಆ ಮುನೀಂದ್ರನು ಲೋಪಾಮುದ್ರೆಯ ಇಚ್ಛಾನುಸಾರ ಆ ರಾಜಪುತ್ರನ ಮೇಲೆ ಕರುಣವುಂಟಾಗಿ, ರಾಜಾತ್ಮಜಾ! ನೀನು ಹೆಚ್ಚಾದ ಪುಣ್ಯಮೂರ್ತಿಯು, ಆ ಕಂಸವೇಣಿಯು ನಿನಗೆ ಹೆಂಡತಿಯಾಗುವಂತೆ ನಾನು ಸಂಕಲ್ಪಮಾಡಿರುವೆನು, ಆ ಕನ್ಯೆಯನ್ನು ನೀನು ಜಯಿಸಲು ಅನುಕೂಲಿಸುವಂತೆ ವೇದಾಂತರಹಸ್ಯಗಳನ್ನೂ ಆರ್ಯಾರ್ಪಣವೆಂಬ ಜ್ಞಾನಮಾರ್ಗವನ್ನೂ ತಿಳಿಸುವೆನೆಂದು ನುಡಿದನು.

ಅಗಸ್ತ್ಯಮುನಿಯು ವೀರಸೇನ ಮಹಾರಾಯನಿಗೆ ಬೋಧಿಸಿದ ಜ್ಞಾನದರ್ಪಣ ಪ್ರಭಾವವು.

ರಾಜಪುತ್ರನೆ! ನಮಶ್ಶಿವಾಯ ಎಂಬ ಪಂಚಾಕ್ಷರೀಮಂತ್ರವನ್ನೂ ಓಂಕಾರವಾದ ಪ್ರಣವವನ್ನೂ ಮನನಮಾಡಿ, ಪಾಪಂಗಳಿಲ್ಲವನ್ನೂ ಭಸ್ಮಮಾಡತಕ್ಕ ಬ್ರಹ್ಮನು ಅವಾಙ್ಮನಸಗೋಚರನೆಂದು ಹೇಳುವ ವೇದಪ್ರಮಾಣವನ್ನು ವಿಚಾರಮಾಡುವಲ್ಲಿ, ಅಚಲಬ್ರಹ್ಮವು ವಾಙ್ಮನಸ್ಸುಗಳಿಗೆ ಅಗೋಚರನೆಂಬುದು ಸತ್ಯವು. ನಿತ್ಯವಾದ ನಿರಾಕಾರ ಬ್ರಹ್ಮವು ಅನಿತ್ಯವಾದ ಇಂದ್ರಿಯಗಳನ್ನು ನೋಡಲಾರವು, ಆಕಾಶದೊಂದಿಗೆ ಆಕಾಶವನ್ನೂ, ವಾಯುವಿನೊಂದಿಗೆ ವಾಯುವನ್ನೂ, ಅಗ್ನಿಯೊಂದಿಗೆ ಅಗ್ನಿಯನ್ನೂ, ಜಲದೊಂದಿಗೆ ಜಲವನ್ನೂ, ಭೂಮಿಯೊಂದಿಗೆ ಭೂಮಿಯನ್ನೂ, ಲೋಹದೊಂದಿಗೆ ಲೋಹವನ್ನೂ ಕೂಡಿಸುವುದು ಸಾಧ್ಯವಾಗುವಂತೆಯೇ "ಆಪೋಜ್ಯೋತೀರಸೊ ಅಮೃತಂಬ್ರಹ್ಮ" ಎಂಬ ಶ್ರುತಿಪ್ರಮಾಣರೀತ್ಯಾ ಆಪೋಜ್ಯೋತಿಗಳೊಂದಿಗೆ ನಾದಬ್ರಹ್ಮವನ್ನು ನೋಡಬಹುದೇಹೊರತು, ಜ್ಞಾನೇಂದ್ರಿಯಂಗಳಾದ ತ್ವಕ್ಚಕ್ಷುಶ್ರೋತ್ರಜಿಹ್ವಾಘ್ರಾಣಂಗಳನ್ನೂ, ಕರ್ಮೇಂದ್ರಿಯಂಗಳಾದ ವಾಕ್ಪಾಣಿಪಾದ ಗುಹ್ಯ ಪಾಯುಗಳಿಗೂ, ಮಾನಸೇಂದ್ರಿಯಕ್ಕೂ ಅಗೋಚರನಾದ ಉದಕಸಂಬಂಧವಾದ ಜ್ಯೋತಿಯು ಪ್ರಜ್ವಲಿಸುತ್ತಲಿಪೆ ಎನ್ನಲಾಗಿ, ಆಉದಕದಲ್ಲಿ ಪ್ರತಿಬಿಂಬಗಳಾದುದರಿಂದ ಅಪೋಜ್ಯೋತಿ ಎನ್ನುವ ಅರ್ಥದಲ್ಲಿರುವ ಪ್ರತಿಬಿಂಬಾಕೃತಿಯನ್ನು ನೋ-

ಡು ಎಂದು ದರ್ಪಣವನ್ನು ಆ ರಾಜಪುತ್ರನ ಕೈಯ್ಯಲ್ಲಿ ಕೊಟ್ಟು, ಮಗೂ! ಗವಾಕ್ಷಗಳನ್ನು ತೆರೆದು, ಸೂಕ್ಷ್ಮವಾದ ಕಣ್ಣುಗುಡ್ಡನ್ನೂ, ಅದರಲ್ಲಿ ಸೂಕ್ಷ್ಮವಾದ ಪಾಪವನ್ನೂ, ಆ ಪಾಪದನಡುವೆ ಅಕಾರಣವಾದ ಬಿಂಬಗಳನ್ನೂ ನೋಡು. ಅವನ್ನೇ ತೇಜಸ್ಸೆಂದೂ, ಗಳವೆಂದೂ, ಎರುಕವೆಂದೂ, ಆಪೋಜ್ಯೋತಿ ಎಂತಲೂ, ಮಹಾಲಿಂಗವೆಂದೂ ಕೇಳಲ್ಪಡುವುದು, ಬಿಂಬವನ್ನು ಬಿಟ್ಟು ಜೀರೊಂದು ಬ್ರಹ್ಮವನ್ನು ನೋಡಲಾಗುವುದಿಲ್ಲ. ಮತ್ತು ಅಲ್ಲಿಯೇ ವಟಪತ್ರಶಯನನೂ, ಕಾರಣಸ್ವರೂಪನೂ ಆದ ನಾರಾಯಣಮೂರ್ತಿಯೂ, ಗಂಗಾ ಯಮುನಾ ಸರಸ್ವತಿಗಳೂ, ಮುಕ್ತಿಕಾಂತಾಮಣಿಯೂ ಇರುವುದು, ಗುರುಮುಖದಿಂದ ಇವೆಲ್ಲವನ್ನೂ ಗ್ರಹಿಸಿದ ಪುಣ್ಯಾತ್ಮರಿಗೆ ಮೋಕ್ಷವು ಕರಗತವಾದದ್ದೆಂದು ತಿಳಿ, ಅಂತಹ ಪುಣ್ಯಾತ್ಮರು ಆ ಚಂದ್ರಾರ್ಕವಾಗಿ ಜನನ ಮರಣಗಳಿಂದ ಬಿಡುಗಡೆಯಾಗಿ ಸುಖಿಸುವರೆಂದು ಉಪದೇಶಿಸಿದನು. ವೀರಸೇನನಾದರೋ ತಾನು ಧನ್ಯನಾದೆನೆಂದು ಆ ಮುನಿವರ್ಯನ ಪಾದಾರವಿಂದಗಳಿಗೆ ಅಡ್ಡಬಿದ್ದನು. ಮಹಾತ್ಮ! ನನ್ನ ಭಾಗ್ಯವೇ ಭಾಗ್ಯವು. ಪೂರ್ವದಲ್ಲಿ ಯಾವಾಗಲೂ ನನಗೆ ಕಾಣಿಸದೆ ಇದ್ದ ಸರ್ವವೂ ಈದಿನ ಗೋಚರವಾಯಿತು, ನನ್ನ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಮಹರ್ಷಿಯನ್ನು ನಾನಾಪ್ರಕಾರವಾಗಿ ಕೊಂಡಾಡಿದನು. ಆ ಮಹರ್ಷಿಯಿಂದ ಆರಾಜಪುತ್ರನು ವೇದಾಂತರಹಸ್ಯವನ್ನೆಲ್ಲಾ ತಿಳಿದನೆಂದು ಶ್ರೀಕೃಷ್ಣನು ಅರ್ಜುನನೊಂದಿಗೆ ನುಡಿಯಲು ಆ ಅರ್ಜುನನು ಆಶ್ಚರ್ಯಪಟ್ಟು, ಶ್ರೀಕೃಷ್ಣಮೂರ್ತಿಯನ್ನು ಕೊಂಡಾಡಿ, ಆ ವೇದಾಂತರಹಸ್ಯಗಳನ್ನೆಲ್ಲಾ ತಾನು ತಿಳಿದಬಳಿಕ ಶ್ರೀಕೃಷ್ಣಭಗವಂತನನ್ನು ಕುರಿತು, ಮಹಾತ್ಮ ಆ ವೀರಸೇನಮಹಾರಾಯನ ಮುಂದಿನ ಕಥಾವಿಚಾರವನ್ನು ವಿಸ್ತರಿಸೆಂದು ಕೇಳಲು ಶ್ರೀಕೃಷ್ಣನಿಂತೆಂದನು.

ಅರ್ಜುನಾ ಕೇಳು! ಆಬಳಿಕ ಅಗಸ್ತ್ಯಮಹರ್ಷಿಯು ರಾಜಾವರನಾದ ವೀರಸೇನನನ್ನು ಕುರಿತು, ರಾಜನಂದನಾ! ನಿನಗೆ ಈಗ ವೇದಾಂತರಹಸ್ಯವೆಲ್ಲಾ ಗೊತ್ತಾಯಿತಷ್ಟೆ! ನೀನು ಈಗ ಆ ಹಂಸವೇಣಿಯ ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ಹೇಳಿ ಆ ಸುಂದರಿಯನ್ನು ಮದುವೆ ಮಾಡಿಕೊಂಡು ಇಲ್ಲಿಗೆ ಕರೆದುಕೊಂಡು ಬಾರೆಂದು ನುಡಿದನು. ಮಹರ್ಷಿಯಿಂದಾಜ್ಞಾಪ್ತನಾದ ರಾಜತನಯನಾದರೊ ಅಲ್ಲಿಂದ ಪ್ರಯಾಣಮಾಡಿ ಕೆಲವು ದಿನಗಳಿಗೆ ಪಾಂಡ್ಯದೇಶವನ್ನು ಸೇರಿ ಅಲ್ಲೊಬ್ಬ ಅಡಗೂಲಜ್ಜಿಯ ಮನೆಯಲ್ಲಿಳಿದುಕೊಂಡನು, ಅಲ್ಲಿ ಮಜ್ಜನಭೋಜನಾದಿಗಳನ್ನು ತೀರಿಸಿಕೊಂಡು ಮಾರ್ಗಾಯಾಸವನ್ನು ಪರಿಹರಿಸಿಕೊಂಡ ಬಳಿಕ ಆ ಮುದುಕಿಯನು ಕುರಿತು ಅಮ್ಮಾ! ಈಪಟ್ಟಣವು ಯಾವುದು? ಇದಕ್ಕೆ ರಾಜನು

ಯಾರು? ವಿಶೇಷವೇನಿರುವುದೆಂದು ಕೇಳಲು ಆ ಮುದುಕಿಯು ಇಂತೆಂ
ದಳು. ಮಗೂ! ಇದು ಮಧುರಾಪುರವು, ಈ ರಾಜ್ಯವನ್ನು ಚಿತಾಂಗದ
ನೆಂಬ ಮಹಾರಾಜನು ಆಳುತ್ತಿರುವನು, ಆ ರಾಜೇಂದ್ರನಿಗೆ ದೇವಕನ್ಯ
ಕೆಯರ ಸೌಂದರ್ಯವನ್ನೂ ತಿರಸ್ಕರಿಸತಕ್ಕ ಶುಕವೇಣಿಯೆಂಬ ಪುತ್ರಿಕಾರ
ತ್ನವುಂಟು, ನಮ್ಮರಾಜನು ಮುವ್ವತ್ತಡಿ ಎತ್ತರವಾದ ಸ್ತಂಭದತುದಿಯಲ್ಲಿ
ಒಂದು ಗಂಟೆಯನ್ನು ಕಟ್ಟಿಸಿರುವನು, ಕುದುರೆಯು ಮೇಲೇರಿ ಆ ಗಂಟೆ
ಯನ್ನು ಹೊಡೆಯುವವರಿಗೆ ತನ್ನ ಕುವರಿಯನ್ನು ಕೊಟ್ಟು ಮದುವೆ ಮಾಡ
ಲುಜ್ಜುಗಿಸಿ ಸ್ವಯಂವರವೆಂದು ಪ್ರಕಟಿಸಿದ್ದಾನೆ, ಇದಕ್ಕಾಗಿ ಅನೇಕ ರಾಜ
ಪುತ್ರರು ಬಂದು, ಆ ಯಂತ್ರವನ್ನು ನೋಡಿ ಆಶ್ಚರ್ಯಪಟ್ಟು, ಮೂಗಿನ
ಮೇಲೆ ಬೆರಳಿಟ್ಟುಕೊಂಡು ತಮ್ಮತಮ್ಮ ದೇಶಕ್ಕೆ ಹೊರಟುಹೋದರು.
ಹೀಗೆಂದು ಹೇಳಿದ ಆ ಮುದುಕಿಯ ಮಾತುಗಳನ್ನು ಕೇಳಿದಕೂಡಲೇ
ಆ ವೀರಸೇನಮಹಾರಾಯನು ತನ್ನ ಮನಸ್ಸಿನಲ್ಲಿ ಆಹಾ! ನಾನು ಈಕನ್ನಿ
ಕೆಯನ್ನು ಮದುವೆ ಮಾಡಿಕೊಂಡು, ಸುಖವನ್ನನುಭವಿಸಿ, ಅನಂತರ ಸಿಂಹ
ಳದ್ವೀಪಕ್ಕೆ ಹೋಗಬಹುದೆಂದು ಯೋಚಿಸಿ, ಶೃಂಗಾರಭೂಷಿತನಾಗಿ,
ರಾಜಸಭೆಯನ್ನು ಸೇರಿ, ಓಹೊ! ರಾಜಪುತ್ರರೆ? ಇದು ನಿಮಗೆ ಅಸಾ
ಧ್ಯವಾಯಿತೆ? ಇದು ನನಗೆಷ್ಟುಮಾತ್ರವೆಂದು ನುಡಿಯುತ್ತಾ, ಆ ಗಂಟೆ
ಯಬಳಿಗೆ ಬಂದು, ಅನಂತರ ತನ್ನ ಕುದುರೆಯನ್ನು ನಾಲ್ಕು ದಿಕ್ಕುಗಳಿಗೂ
ನಡೆಯಿಸಿದ ಮೇಲೆ ಆ ಗಂಟೆಯಿಂದ ಮುವತ್ತಡಿ ದೂರಹೋಗಿ ನಿಂತು,
ತನ್ನ ಉತ್ತಮಾಶ್ವವನ್ನು ಕುರಿತು, ಓಹೋ! ಪಂಚಕಲ್ಯಾಣಿಯೆ! ನಾನು
ಪ್ರಯತ್ನಪಟ್ಟಿರುವುದನ್ನು ಸಾರ್ಥಕಗೊಳಿಸಿ ನನಗೆ ಮರ್ಯಾದೆಯನ್ನು
ಕೊಡಿಂದು ಪ್ರಾರ್ಥಿಸಿ, ಗಂಟೆಯನ್ನು ಕಟ್ಟಿರುವ ಯಂತ್ರದವರೆಗೂ ಕುದು
ರೆಯಮೇಲೆ ಸವಾರಿ ಮಾಡಿಕೊಂಡು ಹೋಗಿ, ಸಮೀಪಸ್ಥವಾದ ಕೂಡಲೆ
ತನ್ನ ಕುದುರೆಯನ್ನು ಮುವ್ವತ್ತಡಿ ಮೇಲಕ್ಕೆ ಹಾರುವಂತೆ ಮಾಡಿ, ಆಗಂಟೆ
ಯನ್ನು ಹೊಡೆದನು. ಅಲ್ಲಿ ನೆರೆದಿದ್ದ ರಾಜಪುತ್ರರೆಲ್ಲರೂ ವೀರಸೇನನನ್ನು
ಕೊಂಡಾಡಿದರು, ಆ ಚಿತಾಂಗದಮಹಾರಾಯನು ಆನಂದಭರಿತನಾಗಿ,
ಅಳಿಯನನ್ನು ಆಲಿಂಗಿಸಿಕೊಂಡು, ಅನೇಕವಿಧವಾಗಿ ಹೊಗಳಿ, ಆತನವೃ
ತ್ತಾಂತವನ್ನೆಲ್ಲಾ ಕೇಳಿ ತಿಳಿದುಕೊಂಡು, ತನ್ನ ಕುವರಿಯನ್ನು ಕೊಟ್ಟು
ವಿವಾಹವನ್ನು ಬಳಿಯಿಸಿದನು, ಆ ವೀರಸೇನನಾದರೊ, ಸೌಂದರ್ಯಾತಿ
ಶಯದಿಂದೊಪ್ಪುತ್ತಲಿರುವ ಆ ಶುಕವೇಣಿಯೊಂದಿಗೆ ಸುಖಸಂತೋಷಂಗಳ
ನ್ನು ಅನುಭವಿಸುತ್ತಾ, ನಿಶ್ಚಯವನ್ನು ಹೇಳಿದರೆ ಮುಂದೆ ಕಾರ್ಯಕ್ಕೆ ವಿಘ್ನ
ಒದಗೀತೆಂದು ಹೆದರಿ, ಸುಳ್ಳುಹೇಳುವುದಕ್ಕಿಂತಲೂ ಬೇರೆ ಪಾಪವು ಮತ್ತೆ
ಯಾವುದೂ ಇಲ್ಲವೆಂದು ಚಿಂತಿಸಿ, ತನ್ನ ಯತ್ನವು [illegible]

ಒಂದಾನೊಂದು ಯುಕ್ತಿಯನ್ನಾಲೋಚಿಸಿ, ಮಾವನನ್ನು ಕುರಿತು ರಾಜ ಶ್ರೇಷ್ಠನೆ! ನಾನು ಗುರುಕಾರ್ಯಾರ್ಥವಾಗಿ, ಸಿಂಹಳದ್ವೀಪಕ್ಕೆ ಹೋಗಿ, ಒಂದು ಮೂಲಿಕೆಯನ್ನು ತರಬೇಕಾಗಿದೆ. ನನಗೆ ಪ್ರಯಾಣಕ್ಕೆ ಅನುಕೂಲಪಡಿಸಬೇಕೆಂದು ಕೇಳಿದಕೂಡಲೆ ಆ ರಾಜನ ಎದೆಯು ಒಡೆದುಹೋಗಿ ಭ್ರಾಂತನಾಗಿ ಬಿದ್ದನು, ಅನಂತರ ಎಚ್ಚತ್ತು, ರಾಜೋತ್ತಮಾ! ನನ್ನ ದೇಶದಲ್ಲಿ ಬೇಕಾದಷ್ಟು ಮೂಲಿಕೆಗಳಿವೆ, ನಾನು ಜಾಗ್ರತೆ ತರಿಸುವೆನು, ನೀನು ಮನೆಗೆ ಹೋಗಬಹುದೆಂದು ನುಡಿದನು. ಆದಕ್ಕೆ ಆ ರಾಜಪುತ್ರನು ಮಾವ! ಆ ಮೂಲಿಕೆಯು ಗುರುಗಳ ಆಪ್ಪಣೆಯಂತೆ ಸಿಂಹಳದ್ವೀಪವೊಂದರಲ್ಲಿದೆಯೇ ಹೊರತು ಬೇರೆಕಡೆ ಇಲ್ಲವು. ನನ್ನನ್ನು ಅಡ್ಡಗಿಸಬೇಡ, ನಾನು ಆಡಿದ ಮಾತನ್ನು ತಪ್ಪುವನಲ್ಲವೆಂದು ನುಡಿದನು, ಆಗ ರಾಜನು ತನ್ನ ಮನಸ್ಸಿನಲ್ಲಿ ಈತನಿಗೆ ಸಂಸವೇಣಿಯ ಸಮಾಚಾರವು ತಿಳಿದಿದೆಯೊ ಇಲ್ಲವೊ! ಹೇಳಿದರೆ ಹೇಗೊ ಹೇಳದೇಹೋದರೆ ಏನು ಅಪಾಯವೆಸ್ತೊ! ಹೀಗೆಂದು ಯೋಚಿಸಿ, ತನಗೆ ಏನೂ ತೋರದೆ, ತನ್ನ ಕುವರಿಯೆಬಳಿ ಬಂದು ನಡೆದ ವರ್ತಮಾನವನ್ನೆಲ್ಲಾ ಹೇಳಿದನು, ಶುಕವೇಣಿಯಾದರೊ! ತಂದೆಯೆ! ಈ ಮಹಾತ್ಮನ ಇಷ್ಟದಂತೆ ನಡೆಯದೆ ಹೋದರೆ ಮುಂದೆ ಏನು ಅಪಾಯ ಉಂಟಾಗುವುದೊ! ನನ್ನ ಅದೃಷ್ಟವಿದ್ದಂತೆಯೇ ನಡೆದೀತೇ ಹೊರತು ಅನ್ಯಥಾ ಆಗಲಾರದು, ಆ ಪುಣ್ಯಮೂರುತಿಯು ಇಷ್ಟದಂತೆಯೇ ನಡೆಯಿಸುವುದು ಯುಕ್ತವಾಗಿದೆ ಎನಲು, ರಾಜನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಪ್ರಯಾಣಕ್ಕೆ ಬೇಕಾದ ಆಹಾರಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿ, ಅವುಗಳನ್ನು ತೆಗೆಸಿಕೊಂಡು, ಅಳಿಯನನ್ನೂ ಮಗಳನ್ನೂ ಜೊತೆಯಲ್ಲಿ ಕರೆದುಕೊಂಡು ರಾಮೇಶ್ವರದ ವರೆಗೂ ಹೋಗಿ, ಭೋಜನಸಾಮಗ್ರಿಗಳನ್ನೆಲ್ಲಾ ನಾವೆಯೆಲ್ಲಿಡಿಸಿ, ನಾವಿಕರಿಗೆಲ್ಲಾ ಬಹು ಜಾಗರೂಕತೆಯಿಂದ ನಾವೆಯನ್ನು ಸಿಂಹಳದ್ವೀಪಕ್ಕೆ ನಡೆಯಿಸಿಕೊಂಡು ಹೋಗಬೇಕೆಂದು ಆಜ್ಞಾಪಿಸಿದನು. ವೀರಸೇನನೂ ಕೂಡ ಶುಕವೇಣಿಯನ್ನು ನಾನಾಪ್ರಕಾರನಾಗಿ ನಂಬಿಸಿ, ಮಾವನಿಗೆ ನಮಸ್ಕಾರಮಾಡಿ, ಅವರೀರ್ವರನ್ನೂ ಪಟ್ಟಣಕ್ಕೆ ಹೋಗುವಂತೆ ಒಡಂಬಡಿಸಿ, ತಾನು ನಾವೆಯನ್ನೇರಿ ಪ್ರಯಾಣೋನ್ಮುಖನಾದನು. ಆ ನಾವಿಕರಾದರೊ, ರಾಜಾಜ್ಞೆಗೆ ಅಂಜುತ್ತಾ, ತಡಮಾಡದೆ ನಾವೆಯನ್ನು ಬಹು ಜಾಗರೂಕತೆಯಿಂದ ನಡೆಯಿಸಿಕೊಂಡು ಹೋಗುತ್ತಿರುವಲ್ಲಿ, ದೈವವಶದಿಂದ ಏಳನೆಯ ದಿನ ಬಿರುಗಾಳಿಯು ಪ್ರಾಪ್ತವಾಗಿ, ನಾವೆಯು ನಾವಿಕರಿಗೆ ಸಾಧ್ಯವಾಗದೆ ಹೋಯಿತು, ನಾವಿಕರು ಗಾಬರಿಬಿದ್ದು ಗೋಳಾಡಲಾರಂಭಿಸಿದರು. ಇದನ್ನು ರಾಜಪುತ್ರನು ಕೇಳಿ, ತನ್ನ [illegible] ಅಹಾ! ನನಗೆ ಇನ್ನೇನು ಅಪಾಯಸಂಭವಿಸುವು

ದೊ ಕಾಣಿಸಿತು. ಏನು ಮಾಡಲೆಂದು ಹೆದರಿ, ಅನಂತರ ಸದ್ಗುರುಸ್ವಾಮಿ ಯಾದ ಅಗಸ್ತ್ಯಮಹರ್ಷಿಗಳನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ, ಹೋ ಗುತ್ತಿರುವಲ್ಲಿ ಇವರ ನಾಡೆಯೊಳ್ಳಿದ್ದವರಲ್ಲಿ ಕೆಲವರು ಸತ್ತುಹೋದರು, ಕೆಲ ವರು ನೀರಿನಲ್ಲಿ ತೇಲಾಡುತ್ತಿದ್ದರು, ರಾಜಪುತ್ರನು ಕಡುಧೈರ್ಯವಂತನಾಳಿ, ಮುನಿಯ ಪಾದಾರವಿಂದಗಳನ್ನು ಧ್ಯಾನಿಸುತ್ತಾ, ತೇಲಿಕೊಂಡು ಹೋಗು ತ್ತಿರುವಲ್ಲಿ ಒಂದು ಕೊಂಚೆ ಸಿಕ್ಕಿತು, ರಾಜಪುತ್ರನು ಅದನ್ನೆ ಹಿಡಿದುಕೊಂ ಡು ಮತ್ತುದಿನ ಒಂದು ದಡವನ್ನು ಸೇರಿದನು, ಕಾಲು ಕೈಗಳನ್ನು ಸರಿಮಾ ಡಿಕೊಂಡು, ಮೆಲ್ಲಮೆಲ್ಲಗೆ ಸ್ವಲ್ಪದೂರ ಹೋಗಿ, ಒಂದು ಮರದಮೇಲಕ್ಕೆ ಹತ್ತಿ, ನಾಲ್ಕುದಿಕ್ಕುಗಳನ್ನೂ ನೋಡುತ್ತಿರುವಲ್ಲಿ, ದೂರದಲ್ಲಿ ಒಂದಾನೊಂ ದುಪಟ್ಟಣವು ಕಾಣಿಸಿತು, ನಾನು ಅಲ್ಲಿಗೆ ಹೋಗಿ ಪ್ರಾಣಗಳನ್ನು ಉಳಿಸಿ ಕೊಳ್ಳಬಹುದೆಂದು ಯೋಚಿಸಿ, ಮೆಲ್ಲಗೆ ನಡೆದುಹೋಗುತ್ತಿರುವಲ್ಲಿ, ನೀಲಿ ಯ ಕಲ್ಲು ಮಣ್ಣುಗಳನ್ನು ನೋಡಿ, ಇದು ನೀಲಿ ಬಣ್ಣವಾಗಿದೆ. ಈ ಪಟ್ಟ ಣದಲ್ಲಿ ಮನುಷ್ಯರಿದ್ದರೂ, ರಾಕ್ಷಸರಿದ್ದರೂ ಹೋಗುವುದೇ ಅಪಾಯ ವೆಂದು ನಾನಾವಿಧವಾಗಿ ಯೋಚಿಸಿ, ಮುಂದಕ್ಕೆಹೋಗುತ್ತಿರುವಲ್ಲಿ ಸಮಾ ಪದಲ್ಲಿಯೇ ಒಂದು ನೀರಿನ ಕಾಲುವೆಯು ಸಿಕ್ಕಿತು, ಆಹಾ ! ದೈವವೇ ! ನಾನು ಇಂತಹ ದುರ್ಬಲನಾಗಿರುವಾಗ ಈ ಕಾಲುವೆಯೊಂದು ಅಡ್ಡವಾ ಯಿತೆ ! ಆಹಾ ! ನಾನು ಶೂರನಾಗಿ ಇದ್ದು, ಹೆಂಗಸರು ಸ್ನಾನಮಾಡಿ ನೀರೆಲ್ಲಾ ಕಲಕ್ಕಾಗಿರುವ ಈ ಕಾಲುವೆಯಲ್ಲಿಂದು ಹೋಗಬಹುದೆ ! ಎಂದಿಗೂ ಕೂಡದು ! ಹೀಗೆಂದು ಯೋಚಿಸಿ, ಅನಂತರ ತನ್ನಮನಸ್ಸಿಗೆ ಧೈರ್ಯವನ್ನು ತಂದುಕೊಂಡು, ಛಿ ! ಹೆಂಗಸರು ಸ್ನಾನಮಾಡುವ ಈ ಕಾಲುವೆಯನ್ನು ನೋಡಿ ಶೂರನಾದ ನಾನು ಹೆದರಬೇಕೆ ! ಎಂದು ಧೈರ್ಯ ದಿಂದ, ಕಾಲುವೆಯಿಂದ ಹತ್ತು ಅಡಿ ಹಿಂದಕ್ಕೆ ಹೋಗಿ, ಕೋಪಾವೇಶ ದಿಂದ ಜೀಗಜೀಗನೆ ಬಂದು ಆ ಕಾಲುವೆಯನ್ನು ದಾಟಿಬಿಟ್ಟನು. ಇದನ್ನು ಅಲ್ಲಿ ಕಾವಲಿದ್ದ ನೀಲಪುರೀರಾಜನ ಭಟರು ಕಂಡು, ರಾಜಪುತ್ರನ ಬಳಿ ಬಂದು, ನಮಸ್ಕರಿಸಿ, ಮಹಾನುಭಾವನೆ ! ನೀನು ಯಾವಲೋಕದಿಂದ ಬಂದದ್ದು ? ಇದು ನೀಲಪುರೀ ಎಂಬ ಪಟ್ಟಣವು ಇದನ್ನು ನೀಲಾಂಬರ ಮಹಾರಾಯನು ಆಳುತ್ತಿರುವನು, ಈ ರಾಜನಿಗೆ ನೀಲವೇಣಿಯೆಂಬೋ ಗ್ನಕುವರಿ ಇರುವಳು. ಇ ಪುತ್ರಿಕಾರತ್ನವು ಪ್ರತಿದಿನವೂ ಈ ಕಾಲುವೆ ಯಲ್ಲಿ ಸ್ನಾನ ಮಾಡುತ್ತಿರುವುದರಿಂದ ನೀನು ಅರಿಯದಿನಬಣ್ಣವಾಗಿದೆ. ಈ ಕಾಲುವೆಯೆನ್ನು ದಾಟಿ ಯಾರು ಈ ಪಟ್ಟಣವನ್ನು ಪ್ರವೇಶಿಸುವರೋ ಅಂತಹ ವರನಿಗೇ ಈ ಕನ್ಯಕಾಮಣಿಯನ್ನು ಕೊಟ್ಟು ಸ್ವಯಂವರಮಾಡು ವೆನೆಂದು ರಾಜನು ಪ್ರತಿಜ್ಞೆಮಾಡಿರುವನು, ಮಹಾನುಭಾವನೆ ! ನೀನು

ನಿರಾಯಾಸವಾಗಿ ಈ ಕಾಲುನೆಯನ್ನು ದಾಟಿ ಬಂದಿರುವೆ, ಆದುದರಿಂದ ನೀನು ಪಟ್ಟಣಕ್ಕೆ ಬಾರೆಂದು ಕರೆದುಕೊಂಡು ಹೋಗುತ್ತಿರುವಷ್ಟರಲ್ಲಿ ಮೀ ಕೆಲವು ಭಟರು ಹೋಗಿ ರಾಜನಿಗೆ ನಡೆದ ವರ್ತಮಾನವನ್ನೆಲ್ಲಾ ತಿಳಿಯಪಡಿಸಿದರು. ರಾಜನಾದರೊ, ಮಂತ್ರಿ ಪ್ರಧಾನಿಗಳೊಂದಿಗೆ ಹೊರಟು, ರಾಜಪುತ್ರನನ್ನು ಎದುರ್ಗೊಂಡು, ಪಟ್ಟಣಕ್ಕೆ ಕರೆದುಕೊಂಡುಹೋಗಿ, ತನ್ನರಮನೆಯಲ್ಲಿ ಉಚಿತಾಸನದಲ್ಲಿ ಕುಳ್ಳಿರಿಸಿ, ಸಕಲವರ್ತಮಾನಗಳನ್ನೂ ಕೇಳಿದನು, ಆಬಳಿಕ ರಾಜಪುತ್ರನಿಗೆ ಮಜ್ಜನಭೋಜನಾದಿಗಳನ್ನು ಮಾಡಿಸಿದನು, ಆ ರಾಜಪುತ್ರನು, ತನ್ನ ಮನಸ್ಸಿನಲ್ಲಿ, ಓಹೋ! ಈ ಭೂಮಿಯೂ, ಇಲ್ಲಿರುವ ಕಲ್ಲುಗಳೂ, ಇಲ್ಲಿಯ ನೀರೂ, ಇಲ್ಲಿಯ ಮನುಷ್ಯರೂ, ರಾಜನೂ ಸಹ ನೀಲವರ್ಣವಾಗಿಯೇ ಇರುವರು, ಇದರಿಂದ ರಾಜಪುತ್ರಿಯಾದ ನೀಲವೇಣಿಯೂ ನೀಲಿಯು ಇವಳಾಗಿಯೇ ಇರಬಹುದು, ನಾನು ಈ ಕನ್ಯಕೆಯನ್ನು ಮದುವೆಯಾಗದಿದ್ದರೆ ನಿನು ಅಪಾಯಬಂದು ಕಾರ್ಯಭಂಗವಾಗುವುದೊ ಎಂದು ಯೋಚಿಸುತ್ತಿರುವಲ್ಲಿ, ರಾಜೇಂದ್ರನು-ರಾಜಕುಮಾರನೆ? ನೀನು ನಿಂಗಳದ್ವೀಪಕ್ಕೆ ಹೋಗಿ ತರಬೇಕೆಂದಿರುವ ಮೂಲಿಕೆಯನ್ನು ನಾನು ಇಲ್ಲಿಯೇ ತರಿಸುವೆನು, ನೀನು ಹೋಗಬೇಕಾಗಿಲ್ಲ ನನ್ನ ಕುವರಿಯಾದ ನೀಲವೇಣಿಯನ್ನು ಮದುವೆ ಮಾಡಿಕೊಂಡು ಹೀಗೆಯೇ ನೀನು ಪಾಂಡ್ಯದೇಶಕ್ಕೆ ಹೊರಡೆನ್ನಲು, ರಾಜಪುತ್ರನಿಂತೆಂದನು. ರಾಜೇಂದ್ರನೆ! ನಾನೇ ಮೂಲಿಕೆಯನ್ನು ತರಬೇಕೆಂದು ಗುರುವು ಆಜ್ಞಾಪಿಸಿರುವನು, ಅದು ನನಗೇ ಹೊರತು ಇತರರಿಗೆ ಸಾಧ್ಯವಿಲ್ಲವು, ನಾನು ಆ ಮೂಲಿಕೆಯನ್ನು ತಂದಮೇಲೆ ನೀಲವೇಣಿಯನ್ನು ಮದುವೆ ಮಾಡಿಕೊಂಡು ನನ್ನ ದೇಶಕ್ಕೆ ಹೊರಡುವೆನೆಂದನು, ರಾಜನಿಗೆ ಏನೂ ತೋರದೆ, ತನ್ನ ಕುವರಿಯಬಳಿಗೆ ಹೋಗಿ, ನಡೆದ ವರ್ತಮಾನವನ್ನೆಲ್ಲಾ ವಿಸ್ತರಿಸಿದನು, ರಾಜಪುತ್ರಿಯಾದರೊ! ತಂದೆಯೆ! ಆ ಮಹಾತ್ಮನು ನನ್ನ ಭಾಗ್ಯವಶದಿಂದ ಈ ನಮ್ಮದೇಶಕ್ಕೆ ಬಂದಿರುವನು, ನನ್ನ ಅದೃಷ್ಟಕ್ಕೆ ಕಾರಣಕರ್ತರು ಯಾರೂ ಅಲ್ಲವು, ಈಗಲೇ ವಿವಾಹವನು ಮಾಡಬೇಕೆಂದಳು, ನೀಲಾಂಬರಮಹಾರಾಯನು, ಕುವರಿಯ ಇಷ್ಟದಂತೆ ಪಟ್ಟಣವನ್ನಲಂಕರಿಸಿ, ಶುಭಮುಹೂರ್ತದಲ್ಲಿ ನೀಲವೇಣಿಯನ್ನು ಆ ವೀರಸೇನಮಹಾರಾಯನಿಗೆ ಧಾರೆಯೆರದನು, ವೀರಸೇನನು ನೀಲವೇಣಿಯೊಂದಿಗೆ ಸುಖದಿಂದ ಕಾಲವಂಕಳೆಯುತ್ತಿದ್ದನು, ಅತ್ತ ಸಮುದ್ರದಲ್ಲಿ ನಾವೆಯು ಮುಳಿಗಿ, ತೇಲಾಡುತ್ತಿದ್ದವರಲ್ಲಿಂದ ಒಬ್ಬನಾವಿಕನು ಪ್ರಾಣಗಳನ್ನುಳಿಸಿಕೊಂಡು, ಪಾಂಡ್ಯದೇಶವನ್ನು ಸೇರಿದನು. ಅಲ್ಲಿನ ರಾಜನಿಗೆ ವೀರಸೇನನ ವರ್ತಮಾನವನ್ನು ತಿಳಿಸಿದ

ಮಂತ್ರಿಪ್ರಧಾನಿಗಳು ರಾಜನನ್ನು ಶೈತ್ಯೋಪಚಾರಂಗಳಿಂದ ಉಪಚರಿಸಿ, ಮೇಲಕ್ಕೆಬ್ಬಿಸಿ, ರಾಜಶ್ರೇಷ್ಠನೆ! ವೀರಸೇನನು ಯಾವುದೋ ಒಂದು ದಡವನ್ನು ಸೇರಿ ಜೀವವಂತನಾಗಿರಬಹುದು, ದೈವಯತ್ನಕ್ಕೆ ವ್ಯಥೆಪಟ್ಟು ಫಲವೇನು. ಈಗ ನಾವು ಶಾಂತವಚನಗಳಿಂದ ಶುಕವೇಣಿಯನ್ನು ಸಮಾಧಾನ ಮಾಡುವುದೇ ಯುಕ್ತವೆಂದನು. ಅನಂತರ ರಾಜನು ಕುವರಿಯಾದ ಶುಕವೇಣಿಗೆ ಶಾಂತವಚನಗಳಿಂದ ವೀರಸೇನನ ವರ್ತಮಾನವನ್ನೆಲ್ಲಾ ತಿಳಿಸಿದನು. ಅಲ್ಲದೆ ಅನೇಕವೀರರನ್ನು ಚತುರಂಗಬಲಸಮೇತವಾಗಿ ಸಮುದ್ರದ ದಡತಕ್ಕೆ ಕಳುಹಿಸಿ ಹೋಗಿಬರುವ ನಾವೆಗಳನ್ನು ಅಲ್ಲಿಯೇ ತಡೆದು ವೀರಸೇನನನ್ನು ಹುಡುಕಿ ಕರೆದುಕೊಂಡು ಬನ್ನಿರೆಂದು ಆಜ್ಞಾಪಿಸಿ ಕಳುಹಿದನು, ಹೀಗಿರುವಲ್ಲಿ ಆ ಶುಕವೇಣಿಯಾದರೊ ತನ್ನ ಗಂಡನಾದ ವೀರಸೇನನ ಧೈರ್ಯಶೌರ್ಯಗಳನ್ನೂ, ರೂಪಲೀಲಾಲಾವಣ್ಯಾದಿಗಳನ್ನೂ ಸ್ಮರಿಸಿಕೊಂಡು, ಬಹಳವಾಗಿ ದುಃಖಿಸುತ್ತಿದ್ದಳು, ಅಲ್ಲಿ ವೀರಸೇನಮಹಾರಾಯನಾದರೊ, ಸಕಿಯಾದ ನೀಲವೇಣಿಯನ್ನು ಕುರಿತು, ಪ್ರಾಣಕಾಂತೆಯೇ! ನಾನು ಇಲ್ಲಿಯೇ ಕಾಲಯಾಪನ ಮಾಡುತ್ತಿರುವುದು ಧರ್ಮವಲ್ಲವು. ಸಿಂಹಳದ್ವೀಪಕ್ಕೆ ಹೋಗಿಬರುವದಕ್ಕೆ ನನಗೆ ಪ್ರಯಾಣಕ್ಕೆ ತಕ್ಕ ಆಹಾರಸಾಮಗ್ರಿಗಳನ್ನು ಒದಗಿಸೆನ್ನಲು, ನೀಲವೇಣಿಯು, ಪ್ರಾಣಕಾಂತನೆ! ಅನೇಕ ರಾಜಪುತ್ರರು ಹಂಸವೇಣಿಯ ನಿಮಿತ್ತವಾಗಿ ನಶ್ಶುಹೋದರು, ನನ್ನ ತಂದೆಯೂ, ಸಹೋದರರೂ ಈ ಹಂಸವೇಣಿಯ ಸಲುವಾಗಿ ತಮ್ಮ ಪ್ರಾಣಗಳನ್ನು ಕಳೆದುಕೊಂಡರು. ಅಯ್ಯೊ! ನೀನು ಅಲ್ಲಿಗೆ ಹೋಗಲೇಕೂಡದೆಂದು ಹಟಮಾಡುತ್ತಿರುವ ನೀಲವೇಣಿಯನ್ನು ಕುರಿತು ಪ್ರಾಣಕಾಂತೆಯೇ! ನಾನು ಯಾವುದೋ ಒಂದು ಮೂಲಿಕೆಯನ್ನು ತರಲು ಹೋಗುವೆನೇ ಹೊರತು ಹಂಸವೇಣಿಯ ನಿಮಿತ್ತವಾಗಿ ಅಲ್ಲವೆಂದೂ, ಜಾಗ್ರತೆ ಹಿಂದಿರುಗಿ ಬರುವೆನೆಂದೂ, ನಾನಾಪ್ರಕಾರವಾಗಿ ನಂಬಿಸಿ, ನೀಲವೇಣಿಯು ಪ್ರಯಾಣಕ್ಕೆ ಸಿದ್ಧಪಡಿಸಿದ ಆಹಾರಸಾಮಗ್ರಿಗಳನ್ನು ನಾವೆಯಲ್ಲಿರಿಸಿಕೊಂಡು ಸಿಂಹಳದ್ವೀಪವನ್ನು ಹೋಗಿ ಸೇರಿದನು, ತನ್ನ ಜೊತೆಯಲ್ಲಿದ್ದ ಭಟರನ್ನೂ ಜೊತೆಮಾಡಿಕೊಂಡು, ಸಿಂಹಳೇಂದ್ರನ ರಾಜಧಾನಿಯನ್ನು ಸೇರಿದರು, ಸಿಂಹಳಾಧಿಪತಿಯಾದರೋ, ರಾಜಪುತ್ರನನ್ನು ಮರಾ ದೆಯಿಂದ ಸತ್ಕರಿಸಿ, ವೀರಸೇನನ ವರ್ತಮಾನವನೆಲ್ಲಾ ಕೇಳಿ, ರಾಜಪುತ್ರನೆ! ಅನೇಕರಾಜರು ಬಂದು ವಿಫಲಮನಸ್ಕರಾದರು, ನೀನು ಹೋಗಬಹುದೆಂದು ರಾಜಪುತ್ರನನ್ನು ಹಂಸವೇಣಿಯು ಬಳಿ ಕಳುಹಿಸಿ ಅಲ್ಲಿ ಕಟ್ಟಿದ್ದ ಗಂಟೆಯನ್ನು ಬಾರಿಸಿದನು. ಆಗ ಹಂಸವೇಣಿಯು ಯಾರೋ ರಾಜಪುತ್ರನು ಬಂದಿರುವನೆಂದು ಯೋಚಿಸಿ ಕೂಡಲೆ ತಾನೂ ಶಾಂತಿ

ಣಿಯೂ ಸಂಕೇತಸ್ಥಳವನ್ನು ಹೊಕ್ಕು ರತ್ನಪೀಠದಲ್ಲಿ ಕುಳಿತರು. ರಾಜಪುತ್ರನು ಕುಳಿತುಕೊಳ್ಳಲು ಎದುರಿಗೇ ನವರತ್ನಖಚಿತವಾದ ಸಿಂಹಾಸನದ ಒಂದನ್ನು ಹಾಕಿಸಿದರು. ಈ ಆಸನಗಳಿರಡರನಡುವೆ ಒಂದು ತೆರೆಯನ್ನು ಹಾಕಿಸಿದರು. ರಾಜಪುತ್ರನು ಬಂದು ಆ ಸಿಂಹಾಸನವನ್ನಲಂಕರಿಸುವಂತೆ ಹೇಳಿದರು. ಅದರಂತೆಯೇ ಆ ವೀರಸೇನನು ಆ ರತ್ನಪೀಠವನ್ನಲಂಕರಿಸಿದನು. ವೀರಸೇನನೊಂದಿಗೆ ಬಂದಿದ್ದ ಭಟರು ಬಹಳ ಗಾಬರಿಯಾಗಿ ರಾಜಪುತ್ರನಿಗೇನು ಅಪಾಯ ಸಂಭವಿಸುವುದೋ ಎಂದು ಚಿಂತಿಸುತ್ತಿದ್ದರು. ಆಗ ಹಂಸವೇಣಿಗೂ ವೀರಸೇನಮಹಾರಾಯನಿಗೂ ಈರೀತಿಯಾದ ಪ್ರಶ್ನೋತ್ತರವು ನಡೆಯುವುದು.

ಹಂಸವೇಣಿ—ಗಂಗಾ, ಯಮುನಾ, ಸರಸ್ವತಿಗಳು ಕೂಡಿದ ಸ್ಥಳದಲ್ಲಿರುವ ಬಿಳೀ ತಾವರೆಯ ತಿಳಿಯಾದ ಪರಾರ್ಥವೇನೆಂದು ಕೇಳಿದಳು. ವೀರಸೇನ—ಆ ತಿಳಿಯೆನ್ನುತೇಜಸ್ಸೆಂದೂ, ಗಳವೆಂತಲೂ, ಆಪೋಜ್ಯೋತಿಯೆಂಬುದಾಗಿಯೂ, ಎರುಕವೆಂಬುದಾಗಿಯೂ ಹೇಳುವರೆಂದು ಧೈರ್ಯವಾಗಿ ಪ್ರತ್ಯುತ್ತರವನ್ನು ಕೊಟ್ಟನು. ಹಂಸವೇಣಿ—ಇಂದ್ರಿಯಗಳಲ್ಲಿ ಯಾವುದರಿಂದ ಅಚಲಬ್ರಹ್ಮವನ್ನು ನೋಡಬಹುದೊ ಹೇಳಿಂದು ಪ್ರಶ್ನೆಗೈದಳು. ವೀರಸೇನ—ಇಂದ್ರಿಯಗಳಿಂದ ಅಚಲಬ್ರಹ್ಮವನ್ನು ನೋಡಲಾಗುವುದಿಲ್ಲ, ಆಪೋಜ್ಯೋತಿಗಳಿಂದ ಹಗಲು ರಾತ್ರಿಗಳಲ್ಲಿ ಅಚಲಪರಿಪೂರ್ಣಬ್ರಹ್ಮವನ್ನು ನೋಡಬಹುದೆಂದು ಹೇಳಿದನು. ಹಂಸವೇಣಿ—ನೀನು ಯಾರು? ಬ್ರಹ್ಮನು ಯಾರು? ನಿಮ್ಮಿಬ್ಬರಿಗೂ ಭೇದವೇನು? ಹೇಳೆಂದಳು. ವೀರಸೇನ— ನಾನೇ ಬ್ರಹ್ಮನು, ಬ್ರಹ್ಮನೇ ನಾನು, ನಾನೊಬ್ಬನೇ ಭೇದರಹಿತನಾಗಿ ಹದಿನಾಲ್ಕು ಲೋಕಗಳನ್ನೂ ಆವರಿಸಿರುವೆನು. ಭ್ರಾಂತಿಯಿಂದ ಭೇದವು ಉಂಟಿಂದು ಹೇಳುವುದು ಸತ್ಯವೆಂದನು.

ಈ ಮೂರುಪ್ರಶ್ನೆಗಳಿಗೂ ಸದುತ್ತರವನ್ನು ಕೊಟ್ಟದ್ದರಿಂದ ಹಂಸವೇಣಿಗೆ ಪರಮಾಶ್ಚರ್ಯವಾಯಿತು, ಮೂಗಿನಮೇಲೆ ಬೆರಳಿಟ್ಟುಕೊಂಡು, ಆಹಾ! ಮಹಾನುಭಾವನೆ! ನನ್ನನ್ನು ಜಯಿಸಲು ನೀವು ಯಾವಲೋಕದಿಂದ ಬಂದಿರಿ, ನೀವು ಮಮಷ್ಯಮಾತ್ರರಲ್ಲವು, ಗುರುಕಟಾಕ್ಷಕ್ಕೆ ಪಾತ್ರರಾಗಿ ದೇವಾಂಶದಿಂದ ಅವತರಿಸಿದ ಮಹಾನುಭಾವರೇನೆಂದು, ಹೀಗೆಂದು ನಾನಾಪ್ರಕಾರವಾಗಿ ಕೊಂಡಾಡಿ ತೆರೆಯನ್ನು ತೆಗಿಸಿಬಿಟ್ಟು, ಕಾರಿಕವೇಣೀಸಮೇತಳಾಗಿ ಆ ಮಹಾತ್ಮನಿಗೆ ಪ್ರದಕ್ಷಿಣೆ ಬಂದು ನಮಸ್ಕಾರಮಾಡಿ, ಇವರೀರ್ವರೂ ಆ ಮಹಾತ್ಮನಾದ ವೀರಸೇನನ ಕೊರಳಿಗೆ ಪುಷ್ಪ [illegible]

ವೇಣಿಯು ದೇಹಕಾಂತಿಯಿಂದ ವೀರಸೇನನ ಕಣ್ಣುಮುಚ್ಚುವಂತಾಯಿತು. ನಿಶ್ಚೇಷ್ಟಿತನಾಗಿ ನಿಂತನು, ಅಲ್ಲಿದ್ದ ಸಖಿಯರೆಲ್ಲಾ ವೀರಸೇನನನ್ನು ಉಪಚರಿಸಿದ ಬಳಿಕ ಆ ರಾಜಪುತ್ರನು ಚೇತರಿಸಿಕೊಂಡು, ಸುತ್ತಲೂ ನೋಡಿ ಹಂಸವೇಣಿಯನ್ನು ಕಾಣದೆ ಸಖಿಯರನ್ನು ಕೇಳಲು, ಅವರು ಹಂಸವೇಣಿಯೂ, ಶಾರಿಕಾವೇಣಿಯೂ ನಿನ್ನ ಕೊರಳಿಗೆ ಪ್ರೂಮಾಲೆಗಳನ್ನು ಹಾಕಿ, ತಮ್ಮ ತಮ್ಮ ಅಂತಃಪುರಕ್ಕೆ ಹೊರಟುಹೋದರೆಂದು ತಿಳಿಸಿ, ಈ ರಾಜಪುತ್ರನನ್ನು ಕರೆದುಕೊಂಡು ಹೋಗಿ ಸಿಂಹಳೇಂದ್ರನ ಸಭೆಯಲ್ಲಿ ಬಿಟ್ಟರು. ಆಗ ಸಿಂಹಳೇಶ್ವರನು ವೀರಸೇನನನ್ನು ಗಾಢಾಲಿಂಗನಮಾಡಿಕೊಂಡು ಮಹಾನುಭಾವನೆ! ನಮ್ಮ ವಂಶವನ್ನು ಉದ್ಧಾರ ಮಾಡುವುದಕ್ಕಾಗಿಯೇ ಅವತರಿಸಿದ ಪುಣ್ಯಮೂರುತಿಯು ನೀನು, ನಿನ್ನಿಂದ ನಮ್ಮವಂಶವು ಪಾವನವಾಯಿತೆಂದು ನಾನಾಪ್ರಕಾರವಾಗಿ ಕೀರ್ತಿಸಿ, ಪಟ್ಟಣವನ್ನೆಲ್ಲಾ ಇಂದ್ರಲೋಕದಂತೆ ಅಲಂಕರಿಸಿ, ಶುಭಮುಹೂರ್ತದಲ್ಲಿ ಹಂಸವೇಣಿಯನ್ನೂ ಶಾರಿಕಾವೇಣಿಯನ್ನೂ ರಾಜಪುತ್ರನಾದ ವೀರಸೇನ ಮಹಾರಾಯನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಬಳಿಯಿಸಿದನು. ಮಂಗಳವಾದ್ಯಗಳು ಭೋರ್ಗರೆಯುತ್ತಲಿದ್ದವು. ಅಳಿಯನನ್ನು ಸಿಂಹಳಾಧಿಪನು ನವರತ್ನಗಳಿಂದ ಪೂಜಿಸಿದನು. ಈ ವೀರಸೇನನ ಜೊತೆಯಲ್ಲಿ ಬಂದಿದ್ದ ನೀಲಪುರಿ ರಾಜನ ಭಟರು ಬಹಳ ಆಶ್ಚರ್ಯಾನಂದಗಳನ್ನು ಹೊಂದಿ, ನಾವೆಬಳಿ ಇದ್ದ ನಾವಿಕರಿಗೆಲ್ಲಾ ಈ ಸಂಗತಿಯನ್ನು ತಿಳಿಸಿದರು. ಎಲ್ಲರೂ ಆನಂದಪಡುತ್ತಲಿದ್ದರು, ಐದನೆಯದಿನ ರಾತ್ರೆ ಮಲಗುವ ಮನೆಯಲ್ಲಿ ಆ ಹಂಸವೇಣಿಯು ಪತಿಗೆ ಪ್ರದಕ್ಷಿಣೆನಮಸ್ಕಾರಗಳನ್ನು ಮಾಡಿ, ಪ್ರಾಣಕಾಂತಾ! ನಿನ್ನ ಗುರುವು ಯಾರೆಂದು ಕೇಳಿದಳು, ವೀರಸೇನನು ನಮ್ಮಗುರುವು ಅಗಸ್ತ್ಯಮಹರ್ಷಿಯೆಂದು ನುಡಿಯಲು, ಹಂಸವೇಣಿಯು ಅಮಹಾನುಭಾವನೇ ನಮಗೂ ಗುರುವೆಂದಳು. ಇಬ್ಬರೂ ಮುನಿವರ್ಯನನ್ನು ಕೊಂಡಾಡಿದರು. ಅನಂತರ ವೀರಸೇನನೂ ಕೂಡ ಪಂಸನೆಣಿ ಶಾರಿಕಾವೇಣಿಯೆರೊಂದಿಗೆ ಸುಖಸಂತೋಷಗಳನ್ನು ಅನುಭವಿಸುತ್ತಲಿದ್ದರು.

ಅತ್ತ ನೀಲವೇಣಿಯಾದರೊ ತನ್ನ ಪತಿಯು ಮೂರು ತಿಂಗಳಿಂದಲೂ ಬಾರದೆ ಇರುವುದರಿಂದ ನಾನಾ ಪ್ರಕಾರವಾಗಿ ದುಃಖಿಸುತ್ತಿದ್ದಳು. ಶುಕವೇಣಿಯೂ ಕೂಡ ಪ್ರಾಣನಾಥಾ! ನಿನ್ನನ್ನು ಪುನಃ ಕೂಡುವ ಭಾಗ್ಯವು ನನಗೆ ಇರುವುದೆ! ಅಯ್ಯೋ!! ಎಂದು ದುಃಖಪಡುತ್ತಿದ್ದಳು ನಿದ್ರಾಹಾರಂಗಳನ್ನೂ ಶರೀರ ಸುಖವನ್ನೂ ಮರೆತುಹೋದಳು. ಅತ್ತ ವೀರಸೇನ ಮಹಾರಾಯನಾದರೊ ಆರುತಿಂಗಳ ವರೆಗೆ ಹಂಸವೇಣಿ, ಶಾರಿಕಾವೇಣಿಯರೊಂದಿಗೆ ಸುಖಭೋಗಗಳನ್ನು ದೇವೇಂದ್ರನಿಗಿಮ್ಮಡಿಯಾಗಿ ಅನುಭ

ವಿಸಿದ ಬಳಿಕ ಒಂದಾನೊಂದು ದಿನ ವೀರಸೇನನು ಮೂವನಾದ ಸಿಂಹಳೇಂದ್ರನಿಗೆ ಶುಕವೇಣಿ, ನೀಲವೇಣಿಯರ ವೃತ್ತಾಂತವನ್ನೆಲ್ಲ ಹೇಳಿ, ತನ್ನ ಪ್ರಯಾಣಕ್ಕೆ ಅನುಮತಿಯನ್ನು ಕೊಡಬೇಕೆಂದು ಕೇಳಿದನು. ಸಿಂಹಳೇಂದ್ರನು ಅಳಿಯನ ಸಾಹಸಕ್ಕೆ ಅತ್ಯಾಶ್ಚರ್ಯವನ್ನು ಹೊಂದಿ, ರಾಜಪುತ್ರನೆ! ನಿನ್ನನ್ನು ಅಗಲಿ ಒಂದು ಗಳಿಗೆಯೆನ್ನು ಕಳೆಯುವುದೂ ಕೂಡ ಒಂದು ಯುಗವಾಗುತ್ತದೆ. ನಿನ್ನಂಥ ಪುಣ್ಯಪುರುಷನ ದರ್ಶನವೇ ಸುದಿನವೆಂದು ನಾನಾ ಪ್ರಕಾರವಾಗಿ ಕೊಂಡಾಡಿ, ಶುಭದಿನದಲ್ಲಿ ಪ್ರಯಾಣವನ್ನು ನಿಶ್ಚಯಿಸಿ, ಹಂಸವೇಣಿ, ಶಾರಿಕಾವೇಣಿಯರಿಗೆ ವಿಧವಿಧವಾದ ಸುವರ್ಣ ರಹಿತವಾಯವಾದ ಆಭರಣಗಳನ್ನೂ, ನವರತ್ನದ ಒಡವೆಗಳನ್ನೂ, ದಿವ್ಯ ದುಕೂಲಗಳನ್ನೂ, ಅಪರಂಜಿಯ ಬೊಂಬೆಗಳನ್ನೂ, ಸಖೀಜನರನ್ನೂ ಮರ್ಯಾದಾಪೂರ್ವವಾಗಿ ಕೊಟ್ಟನಲ್ಲದೆ, ಅಳಿಯನನ್ನು ಧನಕನಕ ವಸ್ತ್ರಾಭರಣಗಳಿಂದ ಮರಾ ದೆಮಾಡಿದನು. ಒಂದು ಹಡಗಿನಲ್ಲಿ ಭೋಜನಸಾಮಗ್ರಿಗಳನ್ನೂ ಹಂಸವೇಣಿ ಶಾರಿಕಾ ವೇಣಿಯರನ್ನೂ, ಕೆಲವು ಸಖೀಜನರನ್ನೂ ಕೂಡಿಸಿದನು. ಮೂರು ಹಡಗುಗಳಲ್ಲಿ ಚತುರಂಗ ಬಲವನ್ನೂ ಕೂಡಿಸಿದನು. ಈ ನಾಲ್ಕು ಹಡಗುಗಳೂ ನೀಲಪುರಿಯಿಂದ ಬಂದಿದ್ದ ನಾವೆಯೂ ಒಟ್ಟಾಗಿ ಹೊರಟು ಕೆಲವು ದಿನಗಳಲ್ಲಿ ನೀಲಪುರದ ತೀರಕ್ಕೆ ಬಂದಿಳಿದವು. ಇದು ನೀಲಾಂಬರ ಮಹಾರಾಯನಿಗೆ ತಿಳಿಯಿತು. ಕೂಡಲೆ ಚತುರಂಗ ಬಲ ಸಮೇತನಾಗಿ ಸಮುದ್ರದ ತೀರಕ್ಕೆ ಬಂದು, ಅಲ್ಲಿ ಬಿಡಾರಗಳನ್ನು ಮಾಡಿಸಿ, ಎಲ್ಲರನ್ನೂ ಇಳಿಸಿದನು; ಅನಂತರ ವೀರಸೇನನನ್ನು ಕೊಂಡಾಡಿ, ಮಹಾತ್ಮಾ! ನೀನು ಹೋಗಿ ಮೂಲಿಕೆಯನ್ನು ತಂದೆಯಾ ಎಂದನು. ರಾಜಪುತ್ರನು ಈ ಮಾತನ್ನು ಕೇಳಿ ಪಕ್ಕನೆ ನಕ್ಕು, ಒಂದು ಮೂಲಿಕೆಯನ್ನು ತರಲು ಹೋದರೆ ಎರಡು ಮೂಲಿಕೆಗಳು ಸಿಕ್ಕದವೆಂದು ಹಂಸವೇಣಿ, ಶಾರಿಕಾವೇಣಿಯರ ವರ್ತಮಾನವನ್ನೆಲ್ಲ ಹೇಳಿದನು. ನೀಲಾಂಬರ ಮಹಾರಾಯನಿಗೆ ಕ್ಷಿಪ್ರಮಾಶ್ಚರ್ಯವಾಗಿ ರಾಜಪುತ್ರನನ್ನು ಬಹಳವಾಗಿ ಕೊಂಡಾಡಿದನು. ಅನಂತರ ರಾಜಪುತ್ರನೂ ನೀಲಾಂಬರ ಮಹಾರಾಯನೂ ಪಟ್ಟಣಕ್ಕೆ ಬಂದರು. ಹಂಸವೇಣಿಯೂ ಶಾರಿಕಾವೇಣಿಯೂ ರಾಜಪುತ್ರನನ್ನು ಹಿಂಬಾಲಿಸಿದರು. ಆಗ ನೀಲವೇಣಿಯು ಪತಿಯು ಬಾದಗಳಿಗೆ ಅಡ್ಡಬಿದ್ದು, ಪತಿಯ ವರ್ತಮಾನವನ್ನೂ ಹಂಸವೇಣಿ ಶಾರಿಕಾವೇಣಿಯರ ಸಮಾಚಾರವನ್ನೂ ಕೇಳಿ, ಆಶ್ಚರ್ಯಾನಂದ ಭರಿತಳಾಗಿ, ಪತಿಯ ಆಜ್ಞೆಯಂತೆ ಬಾವನೆಯಾದ ಹಂಸವೇಣಿಗೆ ನಮಸ್ಕಾರ ಮಾಡಿದಳು. ನೀಲವೇಣಿಯೂ, ಹಂಸವೇಣಿ ಶಾರಿಕಾವೇಣಿಯರೂ ಅಲ್ಲಿಯೇ ವೀರಸೇನನೊಂದಿಗೆ ಹದಿನೈದು ದಿನಗಳು ಸುಖಭೋಗಗಳನ್ನು ಅ

ನುಭವಿಸಿದರು. ಆ ಬಳಿಕ ನೀಲಾಂಬರ ಮಹಾರಾಯನು ವೀರಸೇನನ ಇ
ಷ್ಟಪ್ರಕಾರ ಪ್ರಯಾಣಕ್ಕೆ ಸಿದ್ಧಮಾಡಿದನು. ಹಂಸವೇಣಿ, ಶಾರಿಕಾವೇ
ಣಿ, ನೀಲವೇಣಿಯರಿಗೆ ವೀರಚೀರೆ ಧನಕನಕ ವಸ್ತ್ರಾಭರಣಗಳಿತ್ತನು.
ಅಳಿಯನನ್ನು ನೀಲಮಣಿಗಳಿಂದಲೂ ನವರತ್ನಗಳಿಂದಲೂ ಪೂಜಿಸಿ, ವಿಧ
ವಿಧವಾದ ಭೋಜನಸಾಮಗ್ರಿಗಳನ್ನು ಸಿದ್ಧಪಡಿಸಿ, ಎರಡು ಹಡಗುಗಳಲ್ಲಿ
ಚತುರಂಗ ಬಲ ಸಹಿತವಾಗಿ ಅಳಿಯನನ್ನೂ, ಹಂಸವೇಣಿ, ಶಾರಿಕಾವೇಣಿ,
ನೀಲವೇಣಿಯರನ್ನೂ ಪ್ರಯಾಣಮಾಡಿಸಿ, ಸಿಂಹಳದ್ವೀಪದಿಂದ ಬಂದಿದ್ದ
ನಾವೆಗಳೊಂದಿಗೆ ಪಾಂಡ್ಯದೇಶಕ್ಕೆ ಕಳುಹಿಸಿದನು. ವೀರಸೇನಮಹಾರಾ
ಯನಾದರೊ, ಈ ಮೂವರು ಹೆಂಡತಿಯರೊಂದಿಗೆ ಸಂತೋಷದಿಂದ ಪ್ರ
ಯಾಣಮಾಡುತ್ತಿದ್ದನು. ಹೀಗೆ ಪ್ರಯಾಣಮಾಡುತ್ತಿರುವಲ್ಲಿ ಪಾಂಡ್ಯದೇ
ಶದ ತೀರವು ಸಿಕ್ಕಿತು. ಅಲ್ಲಿನ್ನ ಕಾವಲುಗಾರರು ಈ ನಾವೆಗಳು ಯಾರವು?
ನಾವು ಇವನ್ನು ಶೋಧಿಸಿದ ಹೊರತು ಮುಂದಕ್ಕೆ ಬಿಡುವುದಿಲ್ಲವೆಂದು ಅ
ಡ್ಡಗಿಸಲು, ಇದು ವೀರಸೇನಮಹಾರಾಜನ ನಾವೆಗಳೆಂದರು. ಕಾವಲುಗಾ
ರರಿಗೆ ನಂಬಿಕೆ ಹುಟ್ಟಲಿಲ್ಲ. ವೀರಸೇನ ಮಹಾರಾಯನನ್ನು ನಾವು ನೋಡಿ
ದಲ್ಲದೆ ಮುಂದಕ್ಕೆ ಬಿಡುವುದಿಲ್ಲವೆಂದರು. ಅಷ್ಟರೊತ್ತಿಗೆ ವೀರಸೇನನೂ ತ
ನ್ನ ನಾವೆಯಿಂದ ಹೊರಗೆ ಬಂದನು. ಆ ಕಾವಲುಗಾರರು ವೀರಸೇನನನ್ನು
ನೋಡಿದಕೂಡಲೆ ಆಶ್ಚರ್ಯಾನಂದಗಳಿಂದ ರಾಜಪುತ್ರನನ್ನು ನಾನಾ ಪ್ರಕಾ
ರವಾಗಿ ಕೊಂಡಾಡಿ, ಆ ನಾವೆಗಳನ್ನು ತೀರಕ್ಕೆ ಕರೆಯಿಸಿಕೊಂಡು,
ಪಾಂಡ್ಯರಾಜನಿಗೆ ಈ ಸುದ್ದಿಯನ್ನು ಹೇಳಿ ಕಳುಹಿಸಿದರು. ವೀರಸೇನ
ನೆಂಬ ಹೆಸರನ್ನು ಕೇಳಿದ ಕೂಡಲೆ ಪಾಂಡ್ಯಭೂಪತಿಗೆ ಬಹಳ ಸಂತೋ
ಷವಾಯಿತು. ಕೂಡಲೆ ಸೇನಾಸಮೇತನಾಗಿ ಸಮುದ್ರದ ದಡಕ್ಕೆ ಬಂದು
ಆ ನಾವೆಗಳನ್ನು ನಿಲ್ಲಿಸಿ, ಅಳೀಕ ಪಿತಾರಗಳನ್ನು ಮಾಡಿಸಿ, ಎಲ್ಲರನ್ನೂ
ಇಳಿಸಿದನು. ಆ ಬಳಿಕ ವೀರಸೇನನನ್ನು ಗಾಢಾಲಿಂಗನ ಮಾಡಿಕೊಂ
ಡನು. ಮಹಾನುಭಾವನೆ! ಇಷ್ಟುದಿನಗಳೂ ನಿನ್ನನ್ನು ಕಾಣದೆ ವ್ಯಥೆಪ
ಡುತ್ತಿದ್ದ ನನಗೆ ಜೀವನನಾದ ನೀನು ಸಿಂಹಳ ದ್ವೀಪಕ್ಕೆ ಹೋಗಿ ಬಂದ
ವರ್ತಮಾನವನ್ನೆಲ್ಲಾ ತಿಳಿಸೆಂದು ಕೇಳಿದನು. ವೀರಸೇನನೂ ತನ್ನ ವ
ರ್ತಮಾನವನ್ನೆಲ್ಲಾ ಪಾಂಡ್ಯಭೂಪತಿಗೆ ತಿಳಿಸಿ, ಹಂಸವೇಣಿ, ಶಾರಿಕಾ
ವೇಣಿ, ನೀಲವೇಣಿಯರನ್ನು ತೋರಿಸಿದನು. ಪಾಂಡ್ಯಭೂಪನು ಅತಾ
ಶ್ಚರ್ಯವನ್ನು ಹೊಂದಿ, ಮಹಾನುಭಾವನೆ; ನೀನು ನಾರಾಯಣಾಂಶಸಂ
ಭೂತನೆ ಹೊರತು ಜೀರೆ ಅಲ್ಲವು. ನನ ವಂಶವನ್ನು ಪಾವನಮಾಡಿ, ನ
ನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದೇ ಅವತರಿಸಿದ ಪುಣ್ಯಮೂರು
ತಿಯು ನೀನು. ಇಂದಿಗೆ ನಾನು ಧನ್ಯನಾದೆನೆಂದು ವೀರಸೇನನನು ನಾ

ನಾ ಪ್ರಕಾರವಾಗಿ ಕೀರ್ತಿಸಿ, ಸರ್ವರನ್ನೂ ಮರ್ಯಾದೆಯಿಂದ ಮಧುರಾ ಪಟ್ಟಣಕ್ಕೆ ಕರೆದುಕೊಂಡು ಹೋದನು. ಶುಕವೇಣಿಯೊದರೊ ಪತಿಗೆ ಸಂತೋಷವಿಂದ ನಮಸ್ಕಾರವಾಡಿ ತನ್ನ ಆನಂದಬಾಷ್ಪಗಳಿಂದ ಪತಿಯು ಕಾಲುಗಳನ್ನು ತೊಳೆದಳು. ವೀರಸೇನನೂ ಕೂಡ ಪರಮ ಪ್ರೀತಿಯಿಂ ದ ಸರ್ವವನ್ನೂ ಶುಕವೇಣಿಗೆ ತಿಳಿಸಿ ನೀನು ಎರಡನೆ ಹೆಂಡತಿಯೆಂದು ಹೇ ಳಿದನು. ಶುಕವೇಣಿಯು ಆ ಹಂಸವೇಣಿಯನ್ನು ನಾನಾ ಪ್ರಕಾರವಾಗಿ ಹೊಗಳಿ ಪತಿಯ ಆಜ್ಞೆಯಂತೆ ಆ ಹಂಸವೇಣಿಗೆ ನಮಸ್ಕಾರಮಾಡಿದಳು. ತನಗೆ ನಮಸ್ಕಾರವಂ ಮಾಡಿದ ಕಾರಿಕಾವೇಣಿ ನೀಲವೇಣಿಯರನ್ನು ಆದರಿ ಸಿದಳು. ಆ ವೀರಸೇನ ಮಹಾರಾಯನು ಈ ನಾಲ್ವರು ಸತಿಯರೊಂದಿಗೆ ಮೂರು ತಿಂಗಳ ವರೆಗೂ ಅಲ್ಲಿಯೇ ಸುಖಭೋಗಗಳನ್ನು ಅನುಭವಿಸುತ್ತ ಲಿದ್ದು, ಅನಂತರ ತನ್ನ ದೇಶಕ್ಕೆ ಹೊರಡಲುದ್ಯುಕ್ತನಾದನು. ಮಾವನು ಕೊಟ್ಟ ಧನಕನಕ ವಸ್ತುವಾಹನಂಗಳನ್ನೂ, ಚತುರಂಗ ಬಲವನ್ನೂ ತೆಗೆ ದುಕೊಂಡು, ನಾಲ್ವರು ಭಾರ್ಯೆಯರೊಂದಿಗೆ ಪ್ರಯಾಣಮಾಡುತ್ತಾ, ದಾ ರಿಯಲ್ಲಿ ಅಲ್ಲಲ್ಲಿಯೇ ನಿಂತು, ಮಜ್ಜನ ಭೋಜನಾದಿಗಳನ್ನ ತೀರಿಸಿಕೊಂ ಡು, ಕೆಲವು ದಿನಗಳಲ್ಲಿಯೇ ಅಗಸ್ತ್ಯ ಮಹರ್ಷಿಯ ಆಶ್ರಮವನ್ನು ಸೇರಿ, ಅಲ್ಲಿ ತನ್ನ ಪರಿವಾರವನ್ನೆಲ್ಲಾ ನಿಲ್ಲಿಸಿ, ತನ್ನ ನಾಲ್ವರು ಸತಿಯರೊಂದಿಗೆ ಅಗಸ್ತ್ಯಮುನಿಯ ಪಾದಗಳಿಗೆ ಅಪ್ಪಬಿದ್ದನು. ಆಗ ಮುನಿವರ್ಯನು ವೀರ ಸೇನನನ್ನು ಅವನ ನಾಲ್ವರು ಸತಿಯರನ್ನು ತಮ್ಮ ದಿವ್ಯದೃಷ್ಟಿಯಿಂದ ಕಂಡು, ಈ ಹಂಸವೇಣಿಯನ್ನು ಕುರಿತು, ಲೋಕಪೂಜ್ಯಳೆ! ಈ ಲೋಕಾಮುದ್ರೆಯ ಇಷ್ಟದಂತೆ ನಿನಗೆ ಪತಿಯು ಲಭಿಸಿದನು, ನೀನು ನಿನ್ನ ಪತಿಯೊಂದಿಗೆ ಅನೇಕ ಕಾಲ ಸಾಮ್ರಾಜ್ಯಪದವಿಯನ್ನನುಭವಿಸಿ, ಅನಂತರ ಪತಿಯೊಂದಿ ಗೆ ಸಹಗಮನವಂ ಮಾಡಿ, ಶಾಶ್ವತವಾದ ಪುಣ್ಯಲೋಕವನ್ನು ಪಡೆಯೆಂದು ಹರಸಿದನು, ಆ ವೀರಸೇನನಿಂದ ಶುಕವೇಣಿ, ನೀಲವೇಣಿಯರ ವರ್ತಮಾ ನವನ್ನೂ, ತಾನು ಪಟ್ಟ ಕಷ್ಟಗಳನ್ನೂ ಕೇಳಿದನು ಆ ಬಳಿಕ ಮಹ ರ್ಷಿಯು ಹಂಸವೇಣಿಗೂ ವೀರಸೇನನಿಗೂ ನಡೆದ ಪ್ರಶ್ನೋತ್ತರಗಳನ್ನೂ ಕೇಳಿ ಸಂತೋಷಪಟ್ಟು, ಮಹಾನುಭಾವನೆ! ನೀನು ಸ್ವರ್ಗಲೋಕದಲ್ಲಿ ರುವ ಪುಣ್ಯಪುರುಷರಲ್ಲಿ ಒಬ್ಬನಾಗಿರೆಂದು ಹರಸಿದನು. ವೀರಸೇನನೂ ಅವನ ಸತಿಯರೂ ಮಹರ್ಷಿಯನ್ನೂ ಮುನಿಪತ್ನಿಯರನ್ನೂ ವಸ್ತ್ರಾಭರ ಣಗಳಿಂದ ಪೂಜಿಸಿ, ಅವರ ಅಪ್ಪಣೆಯನ್ನು ಕೈಗೊಂಡು, ಪ್ರಯಾಣೋ ನ್ಮುಖರಾಗಿ ಕೆಲವು ದಿವಸಗಳಲ್ಲಿಯೇ ತನ್ನ ದೇಶವನ್ನು ಸೇರಿದಮೇಲೆ, ತಾನು ಬಂದಿರುವ ವರ್ತಮಾನವನ್ನು ಜನನೀ ಜನಕರಿಗೆ ಹೇಳಿ ಕಳುಹಿಸಿ ದನು. ಜನನೀ ಜನಕರು ವೀರಸೇನನ ವರ್ತಮಾನವನ್ನು ಕೇಳಿದೊಡ

ನೆಯೇ ಆಶ್ಚರ್ಯಾನಂದಗಳನ್ನು ಹೊಂದಿ, ಸಂತೋಷದಿಂದ ಮಂಗಳವಾದ್ಯಗಳನ್ನು ಮಾಡಿಸುತ್ತಾ, ಚತುರಂಗ ಬಲಸಮೇತನಾಗಿ ಎದುರಿಗೆ ಬಂದು ಮಗನನ್ನು ತಬ್ಬಿಕೊಂಡು, ವೀರಸೇನನು ದೇಶಾಟನೆ ಮಾಡಿಬಂದ ವರ್ತಮಾನವನ್ನೆಲ್ಲಾ ತಿಳಿದುಕೊಂಡನು. ಅನಂತರ ವೀರಸೇನ ಮಹಾರಾಯನು ಹಂಸವೇಣಿ, ಶಾರಿಕಾವೇಣಿ, ನೀಲವೇಣಿ, ಶುಕವೇಣಿಯರನ್ನು ಬೀರೆ ಬೀರೆ ತೋರಿಸಿ, ಅವರ ವರ್ತಮಾನವನ್ನೆಲ್ಲ ವಿವರಿಸಿದನು. ತಂದೆಯು ಪರಮ ಸಂತೋಷದಿಂದ ಹಂಸವೇಣಿಯನ್ನು ಆಲಿಂಗನನಾಡಿಕೊಂಡು, ಮಹಾತ್ಮಳೆ! ಮುನ್ನೂರು ವರ್ಷಗಳಿಂದಲೂ ಕನ್ಯಕೆಯಾಗಿಯೇ ಇದ್ದು ಯೌವರಾಜನಿಗೂ ಒಲಿಯುವೆ ಈ ನನ್ನಪುತ್ರರತ್ನವನ್ನು ನೀನು ವರಿಸಿದ್ದರಿಂದ ನಾನು ಧನ್ಯನಾದೆನು. ಮಹಾತ್ಮಳಾದ ನೀನು ನನಗೆ ಸೊಸೆಯಾದ್ದರಿಂದ ನಮ್ಮವಂಶವು ಪಾವನವಾಯಿತು. ಹೀಗೆಂದು ನಾನಾಪ್ರಕಾರವಾಗಿ ಕೊಂಡಾಡಿ, ಆ ನಾಲ್ವರನ್ನೂ ಮುತ್ತಿಟ್ಟುಕೊಂಡು, ಅನಂತರ ಕುವರನಾದ ವೀರಸೇನನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು, ದೇಹವನ್ನೆಲ್ಲಾ ಪ್ರೀತಿಯಿಂದ ತಡವಿ, ಶಿರವನ್ನಾಘ್ರಾಣಿಸಿ, ಆನಂದಬಾಷ್ಪಗಳನ್ನು ಸುರಿಸುತ್ತಾ, ಜೊತೆಯೆಲ್ಲ ಬಂದಿದ್ದ ಸತ್ಪಾತ್ರರಾದ ಬ್ರಾಹ್ಮಣರಿಗೆ ಮೂರುಕೋಟಿ ಧನವನ್ನು ದಾನವಾಡಿ, ಶುಭದಿನದಲ್ಲಿ ಕುವರನನ್ನೂ ಸೊಸೆಯರನ್ನೂ ಪುರಪ್ರವೇಶವಾಡಿಸಿದನು. ಶುಭಲಗ್ನದಲ್ಲಿ ಅತ್ಯಂತ ವೈಭವದಿಂದ ವಿವಾಹಮಹೋತ್ಸವವನ್ನು ಬಳಿಯಿಸಿ ನೇತಾನಂದವನ್ನು ಪಡೆದನು. ಆಬಳಿಕ ವೀರಸೇನಮಹಾರಾಯನು ಮಂತ್ರಿಯ ಮನೆಗೆ ಹೋಗಿ, ಮಹಾನುಭಾವನೆ, ನಿನ್ನ ಕರುಣೆಯಿಂದ ನನಗೆ ಅಗಸ್ತ್ಯಮಹರ್ಷಿಯ ಅನುಗ್ರಹವೂ, ವೇದಾಂತಸಾರವೂ, ಹಂಸವೇಣಿ, ಶುಕವೇಣಿ, ಶಾರಿಕಾವೇಣಿ, ನೀಲವೇಣಿಯರೆಂಬ ನಾಲ್ವರು ಸತಿಯರೂ ಚತುರಂಗಬಲವೂ, ಧನಕನಕ ವಸ್ತ್ರಾಭರಣಾಂಗಳೂ ಲಭಿಸಿದವು. ನೀನು ರಾಜಸಭೆಗೆ ಬರಬೇಕೆಂದು ನಾನಾಪ್ರಕಾರವಾಗಿ ಕೀರ್ತಿಸಿದನು, ಮಂತ್ರಿಯು ತುಂಬಾ ಸಂತೋಷಪಟ್ಟು, ತನ್ನ ಮನೋವ್ಯಾಕುಲವನ್ನು, ರಾಜಪುತ್ರನಿಗೆ ತಿಳಿಸಿ, ಅನಂತರ ರಾಜಪುತ್ರನೊಂದಿಗೆ ಮಂತ್ರಿಯೂ ರಾಜಸಭೆಗೆ ಹೋದನು. ಆಬಳಿಕ ಆ ವೀರಸೇನಮಹಾರಾಯನು ದಿಕ್ಕು ದಿಕ್ಕುಗಳಿಗೂ ದಂಡೆತ್ತಿ ಹೋಗಿ, ತನ್ನ ಭುಜಬಲದಿಂದ ಸಕಲ ರಾಜರನ್ನೂ ಗೆದ್ದು, ಚಕ್ರಾಧೀಶ್ವರನೆನ್ನಿಸಿಕೊಂಡು, ಧರ್ಮವನ್ನು ನಾಲ್ಕುವಾದಗಳಿಂದ ನಡೆಯಿಸುತ್ತಾ, ಇಂದ್ರ, ಯಮ, ಕುಬೇರ, ವರುಣರಿಗಿಂತಲೂ ಹೆಚ್ಚಾದ ಸುಖವನ್ನನುಭವಿಸುತ್ತಾ ಜ್ಞಾನಿಗಳನ್ನೂ, ಯೋಗಿಗಳನ್ನೂ, ಬ್ರಾಹ್ಮಣರನ್ನೂ ಪೂಜಿಸುತ್ತಾ, ಭೂಲೋಕದಲ್ಲೆಲ್ಲಾ ವೇದಾಂತಸಾರವನ್ನು ಹರ

ಡಿ, ಬಹುದಿನಗಳು ರಾಜ್ಯಸುಖಗಳನ್ನನುಭವಿಸಿದನಂತರ, ಹಂಸವೇಣಿಯೊಂದಿಗೆ ಈ ದೇಹವನ್ನು ಬಿಟ್ಟು, ತ್ರಿಮೂರ್ತಿಗಳ ಹಾಗೆ ಕೀರ್ತಿಯನ್ನು ಪಡೆದು, ಉತ್ತಮಲೋಕವನ್ನು ಹೊಂದಿದನೆಂದು ಶ್ರೀ ಕೃಷ್ಣಸ್ವಾಮಿಯು ಅರ್ಜುನನಿಗೆ ಬೋಧಿಸಿದನು. ಅರ್ಜುನನೂ ಕೂಡ ಪುಣ್ಯಮೂರುತಿಯಾದ ವೀರಸೇನಮಹಾರಾಯನನ್ನೂ, ಹಂಸವೇಣಿಯನ್ನೂ ಕೊಂಡಾಡಿ, ದೇವಾದಿದೇವನೆ! ಗುರುತವಿನಾಕನೆ! ನಿನ್ನದಯೆಯಿಂದ ನನಗೆ ವೇದಾಂತಸಾರವು ಚನ್ನಾಗಿ ತಿಳಿಯಬಂದಿತು, ಪುಣ್ಯಶ್ಲೋಕನಾದ ವೀರಸೇನನ ಚರಿತ್ರೆಯನ್ನು ಕೇಳಿ ನಾನು ಪಾವನನಾದೆನು. ನಿದ್ರೆಯಾದರೊ ಕಣ್ಣುಗಳನ್ನು ಮುಚ್ಚುತ್ತಿರುವುದು. ನಿದ್ರೆಮಾಡೋಣವೆನ್ನಲು, ಶ್ರೀ ಕೃಷ್ಣಭಗವಂತನು ನಮ್ಮುತಿಸಿದನು. ಇಬ್ಬರೂ ಸುಖನಿದ್ರೆಯಂ ಬ್ದರೆಂಬಲ್ಲಿಗೆ ಶ್ರೀ ಕೃಷ್ಣಬೋಧಾಮೃತ ಸಾರದೊಳು ಹತ್ತನೆ ಕಥೆಯು ಸಂಪೂರ್ಣವು.

ಹನ್ನೊಂದನೆ ಕಥಾಪ್ರಾರಂಭವು.

ಹನ್ನೊಂದನೆಯ ದಿನ ರಾತ್ರಿ ಕೃಷ್ಣಾರ್ಜುನರಿಬ್ಬರೂ ಯಮುನಾನದಿಯ ದಡದಲ್ಲಿರುವ ಮರಳದಿಬ್ಬದ ಮೇಲೆ ಕುಳಿತು, ತಾಂಬೂಲವನ್ನು ಸೇವಿಸುತ್ತಾ, ಗಂಧಪುಷ್ಪಂಗಳಿಂದಲಂಕೃತರಾಗಿ, ಸಂತೋಷದಿಂದಿರುವಾಗ, ಅರ್ಜುನನು ಕೃಷ್ಣಸ್ವಾಮಿಯನ್ನು ಕುರಿತು, ಮಹಾನುಭಾವನೆ! ದೇವಾದಿವಂದ್ಯನೆ! ಲೋಕರಕ್ಷಕನೆ! ಎರಕಪ್ರಭಾವವನ್ನುಳ್ಳಂದು ಪುಣ್ಯಚರಿತ್ರೆಯ ಮೂಲಕ ನನಗೆ ಬೋಧಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಕೇಳುತ್ತಿರುವ ಅರ್ಜುನನನ್ನು ಕುರಿತು, ಶ್ರೀಕೃಷ್ಣಮೂರುತಿಯು, ಸಂತೋಷದಿಂದ ಮುಗುಳ್ನಗೆಗೂಡಿ, ಇಂದ್ರಸುತನೆ! ಅಪ್ಪತವಾದ ಸೂರ್ಯದತ್ತಮಹಾರಾಯನ ಚರಿತ್ರೆಯನ್ನು ಬೋಧಿಸುವೆನು ಕೇಳಿಂದು ಸೂರ್ಯದತ್ತಮಹಾರಾಯನ ಕಥೆಯನ್ನು ಬೋಧಿಸಲು ಉಪಕ್ರಮಿಸಿದನು.

ಸೂರ್ಯದತ್ತ ಮಹಾರಾಯನ ಕಥೆಯು

ಅರ್ಜುನಾ! ಕೇಳು, ಪೂರ್ವದಲ್ಲಿ ದ್ಯುಮತ್ಸೇನನೆಂಬ ಮಹಾರಾಯನು ಆಂಧ್ರದೇಶಕ್ಕೆ ದೊರೆಯಾಗಿದ್ದನು. ಆ ರಾಜೇಂದ್ರನಿಗೆ ಸೂರ್ಯನ ವರದಿಂದ ಒಬ್ಬ ಪುತ್ರನು ಜನಿಸಿದನು. ರಾಜನು ಪರಮಸಂತೋಷದಿಂದ ಕೂಡಿ, ಸೂರ್ಯನ ವರದಿಂದ ಹುಟ್ಟಿದ ಆ ಶಿಶುವಿಗೆ ಸೂರ್ಯದತ್ತನೆಂದೇ

ನಾಮಕರಣವಂ ಮಾಡಿದನು. ಅನೇಕ ಬ್ರಾಹ್ಮಣರಿಗೆ ವಿಧವಿಧ ದಾನ ಧರ್ಮಗಳನ್ನು ಮಾಡಿದನು. ಆ ಬಾಲನು ದಿನದಿನಕ್ಕೆ ಅಭಿವೃದ್ಧಿಯಾಗುತ್ತಾ, ಸಕಲ ವಿದ್ಯೆಗಳನ್ನೂ ಅಭ್ಯಸಿಸಿದನು. ಆ ರಾಜನು ಕುವರನಾದ ಸೂರ್ಯದತ್ತನಿಗೆ ಚಿಕ್ಕವಯಸ್ಸಿನಲ್ಲಿಯೇ ವಿವಾಹವನ್ನು ಮಾಡಬೇಕೆಂದು, ತನ್ನ ಸನಿಹಬಂಧುವಾದ ಕಾಶೀರಾಜನಿಗೆ ಹೇಳಿಕಳುಹಿಸಿದನು. ಆರಾಜೇಂದ್ರನು ಐದನೆಯ ವಯಸ್ಸಿನ ತನ್ನ ಕುವರಿಯನ್ನು ಸೂರ್ಯದತ್ತನಿಗೆ ಕೊಡುವುದಾಗಿಯೂ, ಪಾಣಿಗ್ರಹಣಕ್ಕೆ ಮೇಲೆ ಮದುವೆ ಮಾಡುವಂತೆಯೂ ಹೇಳಿಕಳುಹಿಸಿದನು. ದ್ಯುಮತ್ಸೇನನಿಗೆ ಪರಮಸಂತೋಷವಾಯಿತು, ಪರಸ್ಪರ ಕ್ಷೇಮಸಮಾಚಾರದ ಪತ್ರಿಕೆಗಳೂ ಆಗಾಗ್ಗೆ ನಡೆಯುತ್ತಿದ್ದವು, ಹೀಗಿರುವಲ್ಲಿ ವಿಧಿವಶದಿಂದ ಆ ದ್ಯುಮತ್ಸೇನಮಹಾರಾಯನಿಗೆ ಜನ್ಮಭೂಮಿಯೆಡ್ಡು, ಬಹು ತೊಂದರೆಯನ್ನನುಭವಿಸಿ, ಒಂದು ದಿನ ಸಭೆಗೆ ತನ್ನ ಮಂತ್ರಿಯಾದ ಸುನೀತಿಯನ್ನು ಕರೆಯಿಸಿ, ಮಂತ್ರಿಯೇ! ನಮ್ಮ ಸೂರ್ಯದತ್ತನು ವಯಸ್ಕನಾಗುವ ವರೆಗೂ ರಾಣಿಯು ಆಜ್ಞೆಯಂತೆ ನೀನು ರಾಜ್ಯಭಾರ ಮಾಡುತ್ತಿರೆಂದು ಸಭಿಕರೆದುರಿಗೆಹೇಳಿ ತಾನು ಮೃತನಾದನು.

ಆ ಬಳಿಕ ಮಂತ್ರಿಯಾದ ಸುನೀತಿಯು ರಾಣಿಯ ಆಜ್ಞೆಯಂತೆ ರಾಜ್ಯಭಾರವಂ ಮಾಡುತ್ತಾ, ಕೆಲವು ದಿನಗಳಲ್ಲಿಯೇ, ತನ್ನ ಹೆಸರನ್ನು ಸಾರ್ಥಕವಾಡಿಕೊಳ್ಳಲಾರದೆ, ದುರ್ನೀತಿಪರನಾಗಿ, ತಾನೇ ರಾಜ್ಯವನ್ನು ಪರಿಸಬೇಕೆಂತಲೂ, ಕಾಶೀರಾಜನ ಮಗಳನ್ನು ತನ್ನ ಕುವರನಿಗೇ ಮದುವೆಮಾಡಬೇಕೆಂದೂ ಯೋಚಿಸಿ, ರಾಣಿಯನ್ನೂ, ರಾಜಪುತ್ರನನ್ನೂ ವಿಷಾಗ್ನಿಜ್ವಾಲೆಯಿಂದ ಕೊಲ್ಲಿಸಬೇಕೆಂದೆಣಿಸಿ, ಸಭಿಕರನ್ನೂ ತನ್ನ ವಶವರ್ತಿಗಳಾಗುವಂತೆ ಮಾಡಿಕೊಂಡನು.

ಮಂತ್ರಿಯು ಮಾಡಿದತಕ್ಕ ಈ ದುರಾಲೋಚನೆಯು ಕ್ರಮೇಣ ರಾಣಿಗೂ ತಿಳಿಯಿತು. ರಾಣಿಯು ಬಯದುಃಖಿತಳಾದಳು. ತನ್ನ ಪ್ರಾಣವನ್ನೂ ಮಗುವಿನ ಪ್ರಾಣವನ್ನೂ ಕಾಪಾಡಿಕೊಳ್ಳತಕ್ಕದ್ದೇಯುಕ್ತನೆಂದು ಯೋಚಿಸಿ, ಸ್ವಲ್ಪವಾದ ಧನವನ್ನೂ ಆಭರಣಂಗಳನ್ನು ತೆಗೆದುಕೂಂಡು, ಕುವರನನ್ನೂ ಕರೆದುಕೊಂಡು ರಹಸ್ಯವಾಗಿ ಪ್ರಯಾಣಮಾಡುತ್ತಿದ್ದಳು. ಹೀಗೆ ಇವರಿಬ್ಬರೂ ಪ್ರಯಾಣಮಾಡಿ ಹೊರಟುಹೋದರೆಂಬ ಸಂಗತಿಯನ್ನು ಕೇಳಿ, ಮಂತ್ರಿಯು ಚಿಂತಾಕ್ರಾಂತನಾಗಿ, ಇವರಿಬ್ಬರನ್ನೂ ಹುಡುಕಲು ದಿಕ್ಕುದಿಕ್ಕುಗಳಿಗೂ ದೂತರನ್ನು ಅಟ್ಟಿದನು. ಕೆಲವು ದಿನಗಳೊಳಗಾಗಿ ರಾಣಿಯೂ, ರಾಜಪುತ್ರನಾದ ಸೂರ್ಯದತ್ತನೂ ವಾರಣಾವತೀಪುರವನ್ನು ಸೇರಿದರು. ರಾಣಿಯು ತಾನು ಮಂತ್ರಿಯ ದುರಾಲೋಚನೆ

ರಾಜನಿಗೆ ತಿಳಿಸದೆ, ಆಲ್ಲಿ ಒಂದು ಬಿಡಾರವನ್ನು ಮಾಡಿಸಿ ತನ್ನ ಕುವರನಾದ ಸೂರ್ಯದತ್ತನನ್ನು ಕಂಡಿತು, ರಾಜಪುತ್ರನೇ! ಮಂತ್ರಿಯಿಂದ ನಮಿಗೆ ಈ ರೀತಿ ತೊಂದರೆಯಾಯಿತೆಂದು ತಿಳಿಸಿ, ನಿನಗೆ ಈಗ ಹದಿನೈದನೆಯ ವರ್ಷವಾದಕಾರಣ ಈ ಊರಲ್ಲಿ ನೀನು ಯಾವುದಾದರೂ ಪಾಠಶಾಲೆಗೆ ಹೋಗಿ ವಿದ್ಯಾಭ್ಯಾಸಮಾಡೆಂದು ಹೇಳಿದಳು. ರಾಜಪುತ್ರನು ತಾಯಿಯ ಮಾತಿನಂತೆ ಒಪ್ಪಿಕೊಂಡು, ಪ್ರಾತಃಕಾಲ ಒಂದು ಪಾಠಶಾಲೆಗೆ ಹೋಗಿ ಧರ್ಮಶಾಸ್ತ್ರವೇ ಮೊದಲಾದ ಸಕಲಶಾಸ್ತ್ರಗಳನ್ನೂ, ಮಧ್ಯಾಹ್ನ ಬೇರೊಂದು ಪಾಠಶಾಲೆಗೆ ಹೋಗಿ ಧನುರ್ವಿದ್ಯೆಯನ್ನೂ ಕಲಿಯುತ್ತಿದ್ದನು. ಸೂರ್ಯದತ್ತನು ಧರ್ಮಶಾಸ್ತ್ರಗಳನ್ನು ಕಲಿಯಲು ಹೋಗುತ್ತಿದ್ದ ಪಾಠಶಾಲೆಗೆ ಆ ದೇಶದ ರಾಜಪುತ್ರಿಯೂ ಶಾಸ್ತ್ರಗಳನ್ನು ಕಲಿಯಲು ಬರುತ್ತಿದ್ದಳು ರಾಜಪುತ್ರನು ಆ ಸುಂದರಿಯ ರೂಪು ರೇಖ ಲಾವಣ್ಯಗಳಿಗೆ ಮೆಚ್ಚಿ, ಆ ರಾಜಪುತ್ರಿಯಮೇಲೆ ಬಹಳ ಅನುರಾಗವುಳ್ಳವನಾಗಿದ್ದನು. ಆ ವಿಚಿತ್ರವತಿ ಎಂಬ ರಾಜಪುತ್ರಿಯೂ ಕೂಡ ಸೂರ್ಯದತ್ತನ ದೇಹಕಾಂತಿಯನ್ನೂ, ಸೌಂದರ್ಯವನ್ನೂ ನೋಡಿ, ಈತನು ಯಾವದೇಶದ ಅರಸುಮಗನೊ ಎಂದು ಯಾವಾಗಲೂ ಈ ರಾಜಪುತ್ರನನ್ನು ತನ್ನ ಮನದಲ್ಲಿ ಚಿಂತಿಸುತ್ತಿದ್ದಳು ಒಂದಾನೊಂದು ದಿನ ಆ ರಾಜಪುತ್ರಿಯು ಪಾಠಶಾಲೆಗೆ ಬರುತ್ತಾ, ತನಗೆ ನೀತಿಶಾಸ್ತ್ರದ ಪಾಠವು ಬಾರದ್ದರಿಂದ ಗುರುವು ದಂಡಿಸಬಹುದೆಂದು ಭಯವುಂಟಾಗಿ, ನನಗೆ ಪಾಠವನ್ನು ಹೇಳಿಕೊಡೆಂದು ಕೇಳಿದಳು. ರಾಜಪುತ್ರನಾದರೊ, ಕೆಲವುನಗೆಯಿಂದ ಕೂಡಿ, ನಿನಗೆ ಪಾಠ ಹೇಳಿಕೊಟ್ಟರೆ ನನಗೆ ಬರುವ ಭಾಗ್ಯವೇನೆಂದು ಕೇಳಿದನು, ರಾಜಪುತ್ರಿಯು ನೀನು ಏನುಕೇಳಿದರೂ ಕೊಡುವೆನೆಂದು ನುಡಿದಳು. ನಿನ್ನ ವಾಗ್ದಾನವನ್ನು ಮರೆಯಬೇಡವೆಂದು ಪಾಠವನ್ನು ಹೇಳಿಕೊಟ್ಟನು. ಅನಂತರದಲ್ಲಿ ಅವರಿಬ್ಬರೂ ಪರಮ ಮೈತ್ರಿಯಿಂದಿರುವಲ್ಲಿ, ಕೆಲವು ದಿನಗಳ ಮೇಲೆ ಆ ರಾಜನು ತನ್ನ ಕುವರಿಯು ವಯಸ್ಕಳಾಗಿರುವುದನ್ನು ಕಂಡು, ಅಮ್ಮಾ ನೀನು ಯುವತಿಯಾದೆ, ಆಂಧ್ರದೇಶದ ರಾಜಪುತ್ರನಾದ ಸೂರ್ಯದತ್ತಮಹಾರಾಯನಿಗೆ ನಿನ್ನನ್ನು ಕೊಟ್ಟು ಮದುವೆಮಾಡಬೇಕೆಂದಿರುವೆನು. ನಿಮ್ಮ ಮಾವನಾದ ದ್ಯುಮತ್ಸೇನ ಮಹಾರಾಯನು ಮೃತನಾದ್ದರಿಂದ ನಿನ್ನ ಪತಿಯಾದ ಸೂರ್ಯದತ್ತನನ್ನು ಆ ದೇಶದ ಮಂತ್ರಿಯು ಕರೆಸುಕೊಂಡು ಬರುತ್ತಿರುವನು. ವಿವಾಹವು ಸನಿಹವಾಯಿತು, ನೀನು ನಿಮ್ಮ ಗುರುಗಳಿಗೆ ಗುರುದಕ್ಷಿಣೆಯನ್ನು ಕೊಟ್ಟು ಅಂತಃಪುರದಲ್ಲಿಯೇ ಇರಬೇಕೆಂದನು. ಆ ವಿಚಿತ್ರವತಿಯಾದರೊ, ಆ ಸಾಧಾರಣವಾದ ವಸ್ತ್ರಾಭರಣಗಳನ್ನು ತೆಗೆದಿಟ್ಟುಕೊಂಡು ಹೋಗಿ, ತನ್ನ ಗುರುಗಳಿಗೆ ಸಮರ್ಪಿಸಿ, ತಂದೆಯ ಅಪ್ಪಣೆ

ಯೆನ್ನು ಗುರುಗಳಿಗೆ ತಿಳಿಸಿ, ಅವರ ಅನುಮತಿಯನ್ನು ಪಡೆದಳು. ಆಬಳಿಕ ಸೂರ್ಯದತ್ತನಿಗೂ ತನ್ನ ತಂದೆಯು ಅಭಿಪ್ರಾಯವನ್ನು ತಿಳಿಸಿದಳು. ಆಗ ಸೂರ್ಯದತ್ತನು ತನ್ನ ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ, ರಾಜಪುತ್ರಿಯನ್ನು ಕುರಿತು, ಸುಂದರಾಂಗಿಯೆ! ನೀನು ಹಿಂದೆ ನನಗೆ ಕೊಟ್ಟಿರುವ ವಾಗ್ದಾನವನ್ನು ನೆರವೇರಿಸದೆ ಹೊರಟುಹೋಗಬಹುದೆ ಎಂದು ಕೇಳಿದನು. ರಾಜಪುತ್ರಿಗೆ ತಾನು ಮಾಡಿದ್ದ ವಾಗ್ದಾನವು ಕೂಡಲೆ ಸ್ಮೃತಿಗೆಬಂದು, ರಾಜಪುತ್ರನೇ! ನಾನಾದರೊ ನಿನಗೆ ವಾಗ್ದಾನವಂ ಮಾಡಿರುವುದು ಸತ್ಯವು. ನಾನೆಂದಿಗೂ ಮಾತನ್ನು ಬದಲಾಯಿಸುವಳಲ್ಲ. ನೀನು ಏನು ಕೇಳಿದರೂ ಕೊಡುವೆನೆಂದು ನುಡಿದಳು. ರಾಜಕನ್ಯಕಾಮಣಿಯೇ! ನನಗೆ ಬೇರೆ ಕೋರಿಕೆಯೊಂದೂ ಇಲ್ಲವು, ನಿನ್ನನ್ನೇ ಕೋರಿರುವೆನು. ನೀನು ನನ್ನನ್ನು ಮದುವೆಯಾಗಬೇಕೆಂದು ಕೇಳಿದನು, ರಾಜಪುತ್ರಿಗೆ ಗುಂಡಿಗೆ ಜಲ್ಲೆಂಬಿತು, ಏನು ಹೇಳುವುದಕ್ಕೂ ತೋರಲಿಲ್ಲ, ತನ್ನ ವಾಗ್ದಾನವನ್ನು ತಪ್ಪಲು ಸಮರ್ಥಳಾಗಲಿಲ್ಲ. ಆದ್ದರಿಂದ ರಾಜಪುತ್ರನನ್ನು ಕುರಿತು ಇಂತಂದಳು. ರಾಜಕುಮಾರಾ! ನೀನು ಈ ಅಭಿಪ್ರಾಯವನ್ನಿಟ್ಟಿರುವುದು ನನಗೆ ತಿಳಿಯುಲಿಲ್ಲ. ತಂದೆಯು ಅಭಿಪ್ರಾಯವಾದರೊ, ಬೇರೆಯಾಗಿರುವುದು, ನಾನು ನನ್ನವಾಗ್ದಾನವನ್ನು ತಪ್ಪಲಾರೆ, ನಾವಿಬ್ಬರೂ ಇಲ್ಲಿದ್ದರೆ ನಮ್ಮಯತ್ನವು ಸಾಗುವುದಿಲ್ಲ. ನಾನು ನಾಳೆದಾತೆ ಹನ್ನೆರಡುಗಂಟೆ ಹೊತ್ತಿಗೆ ಈ ಊರಿಗೆ ಉತ್ತರದಿಕ್ಕಿನಲ್ಲಿರುವ ಊರಬಾಗಲಿಗೆ ಬರುವೆನು, ನೀನು ಆ ಹೊತ್ತಿಗೆ ಅಲ್ಲಿಗೆ ಬಂದುಬಿಡು, ಇಬ್ಬರೂ ಭೂಸಂಚಾರಾರ್ಥವಾಗಿ ಹೊರಡೋಣ, ಅನಂತರ ನಮ್ಮಿರ್ವರ ಇಷ್ಟವೂ ಸಿದ್ಧಿಸುವುದೆಂದು ರಾಜಕುಮಾರನಿಗೆ ಮಾತುಕೊಟ್ಟು ತಾನು ಅರಮನೆಗೆ ಹೋದಳು, ಮರುದಿನ ರಾತ್ರಿ ತನ್ನ ಆಪ್ತಸಖಿಯೋರ್ವಳಿಗೆ ಈ ಸಮಾಚಾರವನ್ನೆಲ್ಲಾ ತಿಳಿಸಿದಳು, ಆ ಸಖಿಯು ಕಣ್ಣೀರನ್ನು ಸುರಿಸುತ್ತಾ, ರಾಜಕನ್ಯಕಾಮಣಿಯೇ! ನೀನು ಬಾಲಭಾವದಿಂದ ಈರೀತಿಯಾದ ಯೋಚನೆಯನ್ನು ಮಾತಬಹುದೆ! ನಿಮ್ಮ ಜನನೀ ಜನಕರಿಗೆ ಅಹಿತವೂ ನಿಮ್ಮ ಕುಲಕ್ಕೆಅಪಕೀರ್ತಿಯೂ ಇದರಿಂದ ಉಂಟಾಗುವದಿಲ್ಲವೆ! ಇದರಿಂದ ನೀನು ತುಂಬಾ ಕಷ್ಟಪಡಬೇಕಾದೀತು! ಆದ್ದರಿಂದ ಈ ಯೋಚನೆಯನ್ನು ಬಿಟ್ಟುಬಿಡೆಂದು ನುಡಿದಳು. ರಾಜಪುತ್ರಿಯು ಸಖಿಯನ್ನು ಕುರಿತು, ಪ್ರಾಣಸಖಿ! ನನಗೆ ತಿಳಿಸಬೇನೆ ನಮ್ಮ ತಾಯಿತಂದೆಗಳು ನಿರ್ಧರಿಸಿರುವ ಕಾರ್ಯವನ್ನು ನಾನು ಹೇಗೆ ಸಮ್ಮತಿಸಲಿ! ಅವರು ನಿಶ್ಚಯಮಾಡಿರುವ ವರನು ಕೆಂಪೊ, ಕಪ್ಪೊ, ಕುರೂಪಿಯೊ, ಸುಂದರಾಂಗನೊ, ಬಾಲನೊ, ವೃದ್ಧನೊ, ಕುಂಟನೊ, ಗುಡ್ಡಿಯೊ, ಕುರುಡನೊ, ಕಿವುಡನೊ ಎಂತಹವನೊ ನಾನುಕಾಣೆ

ನು. ಹೀಗಿರುವುದರಿಂದ ತಾಯಿತಂದೆಗಳ ಅಭಿಪ್ರಾಯವನ್ನು ನಾನು ಹೇಗೆ ತಾನೆ ಒಡಂಬಡಬಹುದು, ನಾನು ವಾಗ್ದಾನ ಮಾಡಿ ನಿಶ್ಚಯಮಾಡಿಕೊಂಡಿರುವ ಪುರುಷನಾದರೊ, ಬಾಲನೂ, ಸುಂದರಾಂಗನೂ, ತೇಜೋವಂತನೂ ಆಗಿರುವುನಲ್ಲದೆ ನನ್ನಮನಸ್ಸಿಗೆ ಹಿತವಾಗಿರುವನು. ಹೀಗಿರುವಲ್ಲಿ ನಾನು ನನ್ನ ವಾಗ್ದಾನವನ್ನು ಹೇಗೆ ವಿಾರಿನಡೆಯಲಿ! ಎಂದು ನಾನಾಪ್ರಕಾರವಾಗಿ ಸಮಾಧಾನೋಕ್ತಿಗಳಿಂದ ಒಪ್ಪಿಸಿ, ಅನೇಕ ವಸ್ತ್ರಾಭರಣಗಳಿಂದ ಅವಳನ್ನು ಮನ್ನಿಸಿದಳು. ಅವಳಿಂದ ತನಗೆ ಪ್ರಯಾಣಕ್ಕೆ ಜೀಕ ಬೇಕಾದ ವಸ್ತುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು, ಅನೇಕ ಧನ, ವಸ್ತ್ರಾಭರಣಗಳನ್ನು ತೆಗೆದುಕೊಂಡು, ಅಶ್ವಾರೂಢಳಾಗಿ ಸಂಕೇತಸ್ಥಾನಕ್ಕೆ ಬಂದಳು, ಅಷ್ಟರೊಳಗಾಗಿಯೇ ಆ ಸೂರ್ಯದತ್ತನು ಇದೊಂದನ್ನೂ ತನ್ನತಾಯಿಗಾ ಕೂಡ ತಿಳಿಸದೆ, ಅಶ್ವಾರೂಢನಾಗಿ ಬಂದು ಕಾದಿದ್ದನು. ರಾಜಪುತ್ರಿಯು ಬಂದಕೂಡಲೆ, ಆ ಸುಂದರೀಮಣಿಯನ್ನು ಗಾಢಾಲಿಂಗನ ಮಾಡಿಕೊಂಡು, ಮುತ್ತಿಟ್ಟು, ಇಬ್ಬರೂ ಕುದುರೆ ಸವಾರಿ ಮಾಡುತ್ತಾ ಬೆಳಗಾಗುವುದರೊಳಗೆ ಬಹುದೂರ ಪ್ರಯಾಣವಂ ಮಾಡಿದರು. ಬೆಳಗಾದಮೇಲೆ ಅಂತಃಪುರದಲ್ಲಿನ್ನ ಸಖೀಜನರು, ರಾಜಪುತ್ರಿಯನ್ನು ಕಾಣದೆ, ಬಹು ದುಃಖದಿಂದ ರಾಜಪತ್ನಿಗೆ ತಿಳಿಸಿದರು. ರಾಜದಂಪತಿಗಳು ಪುತ್ರಿಯನ್ನು ಕಾಣದೆ ದುಃಖಾಶ್ಚರ್ಯವುಳ್ಳವರಾಗಿ ವ್ಯಸನಪಡುತ್ತಲಿದ್ದರು. ಊರಲ್ಲೆಲ್ಲಾ ರೋದನಶಬ್ದವೇ ನಿಬಿಡವಾಯಿತು. ಸೂರ್ಯದತ್ತನ ತಾಯಿಯೂ ಕೂಡ ಬೆಳಗಾದಮೇಲೆ ಮಗನನ್ನು ಕಾಣದೆ ದುಃಖಪಡುತ್ತಿದ್ದಳು. ಹೀಗಿರುವಲ್ಲಿ ಅಲ್ಲಿನ ಮಂತ್ರಿ ಪ್ರಧಾನಿಗಳು ರಾಜನ ಬಳಿ ಬಂದು, ಇದಕ್ಕೆ ಮುಂದೇನು ಮಾಡಬೇಕೆಂದು ಆಲೋಚಿಸಿ, ಕಡೆಗೆ ಏನೂ ತೋರದೆ, ರಾಜಪುತ್ರಿಗೆ ಐತಾಯಿಯೆಯಾಗಿರುವುದರಿಂದ ಈಗ ವಿವಾಹವನ್ನು ನಿಲ್ಲಿಸಿರುವುದಾಗಿ ಆಂಧ್ರದೇಶದ ಮಂತ್ರಿಗೆ ಕಾಗದ ಬರೆದು ಕಳುಹಿಸಿದ್ದಲ್ಲದೆ, ಆತನು ಪ್ರಯಾಣಮಾಡಬಹುದೆಂದೂ ಹೇಳಿ ಕಳುಹಿಸಿದರು. ಅತ್ತ ಸೂರ್ಯದತ್ತನೂ ರಾಜಪುತ್ರಿಯಾದ ವಿಚಿತ್ರವತಿಯೂ, ಬಹುದೂರ ಪ್ರಯಾಣವಂಮಾಡಿ, ಮಧ್ಯಾಹ್ನ ಕಾಲಕ್ಕೆ ಸರಿಯಾಗಿ ಒಂದಾನೊಂದು ಆಲದ ಮರದಡಿ ಇಳಿದು, ಅಲ್ಲಿ ಹಸಿವು ಬಾಯಾರಿಕೆಗಳನ್ನು ತೀರಿಸಿಕೊಂಡು ಸಂತೋಷದಿಂದ ಕುಳಿತಿರುವಾಗ, ಸೂರ್ಯದತ್ತನು ವಿಚಿತ್ರವತಿಯನ್ನು ಕುರಿತು, ಎಲೌ ಸುಂದರ ಸುಕುಮಾರೀ! ನೀನು ನಿಮ್ಮ ತಾಯಿತಂದೆಗಳನ್ನೂ, ಬಂಧುಮಿತ್ರರನ್ನೂ ಬಿಟ್ಟು ಅರ್ಧರಾತ್ರಿಯಲ್ಲಿ ಹೇಗೆ ಬಂದೆಯೆಂಬು ಪ್ರಶ್ನೆಮಾಡಿದನು. ಆಗ ರಾಜಪುತ್ರಿಯು ಕಣ್ಣೀರನ್ನು ಸುರಿಸುತ್ತಾ, ರಾಜಕುಮಾರಾ! ಆಂಧ್ರದೇಶದರಸನು ನಮ್ಮ ತಂದೆಯಿಂದ ಅವನ ಮಗ ಸೂರ್ಯದತ್ತ ಮಹಾರಾಯನಿಗೆ

ನನ್ನನ್ನು ಕೊಟ್ಟು ಮದುವೆ ಮಾಡಬೇಕಂತಲೂ, ಮಂತ್ರಿಯಾದ ಸುನೀತಿಯು ರಾಜಪುತ್ರನನ್ನು ಕರೆದುಕೊಂಡು ಬರುತ್ತಿರುವನೆಂದೂ ನಮ್ಮತಂದೆಯು ನನಗೆ ಹೇಳಿ ಮದುವೆಗೆ ಸಡಗರವಾಡುತ್ತಿರುವನು. ನಾನು ನಿನಗೆ ಕೊಟ್ಟಿರುವ ವಾಗ್ದಾನವನ್ನು ತಪ್ಪಿದರೆ ಅನೃತದೋಷಕ್ಕೆ ಭಾಗಿಯಾಗುವೆನೆಂದು ಹೆದರಿ, ಜನನೀ ಜನಕರನ್ನೂ, ಬಂಧು ಮಿತ್ರರನ್ನೂ ನಿರಾಸರವಾಗಿ ಎಣಿಸಿ ನಿನ್ನನ್ನೆ ನಂಬಿಕೊಂಡು ಬಂದಿರುವೆನೆಂದಳು. ಸೂರ್ಯದತ್ತನು ಇದನ್ನು ಕೇಳಿದ ಕೂಡಲೆ ಪರಮಾಶ್ಚರ್ಯದಿಂದ ಕೂಡಿ, ಸುಂದರೀಮಣೀ! ಇದೇನು ಆಶ್ಚರ್ಯವು! ಆಹಾ! ನಾನೇ ಅಂಧ್ರದೇಶದ ರಾಜಪುತ್ರನು. ನನ್ನ ಹೆಸರೇ ಸೂರ್ಯದತ್ತನೆಂದು, ನಮ್ಮ ಮಂತ್ರಿಯು ರಾಜಪುತ್ರನನ್ನು ಕರೆದುಕೊಂಡು ಬರುತ್ತಿರುವುದಾಗಿ ನಿಮ್ಮ ತಂದೆಯು ಹೇಳಿದ ಬಳಿಕ ನಮ್ಮ ಮಂತ್ರಿಯಾದ ಸುನೀತಿಯು ದುರ್ನೀತಿ ಪರನಾಗಿ ತನ್ನ ಕುವರನಿಗೇ ನಿನ್ನನ್ನು ಮದುವೆಮಾಡಿಕೊಂಡು ಹೋಗಬೇಕೆಂದು ಬರುತ್ತಿರಬೇಕು. ನಮ್ಮ ತಂದೆಯು ಮೃತನಾದ ಬಳಿಕ ನನ್ನನ್ನೂ ನಮ್ಮ ತಾಯಿಯನ್ನೂ ಮಂತ್ರಿಯು ವಿಷಾಗ್ನಿಯಿಂದ ನಾಶಮಾಡಬೇಕೆಂದು ಯತ್ನಿಸಿದ ಸುಳುವನ್ನು ತಿಳಿದು ನಮ್ಮ ತಾಯಿಯು ನಿಮ್ಮೂರಿಗೆ ನನ್ನನ್ನು ಕರೆದುಕೊಂಡು ಬಂದಳು. ನಾವು ಇದುವರೆಗೂ ನಿಮ್ಮೂರನಲ್ಲಯೇ ಹೇವಿಸುತ್ತಿದ್ದೆವು. ಇದು ಮಂತ್ರಿಯ ಮೋಸವೆಂದು ನುಡಿದನು. ಆಗ ರಾಜಪುತ್ರಿಯು ಆಶ್ಚರ್ಯಪಟ್ಟು, ಆಹಾ! ವಿನಾಶ್ಚರ್ಯವು, ದೇವರೇ ನನಗೆ ಮಂತ್ರಿಕುಮಾರನನ್ನು ತಪ್ಪಿಸಿ ಮೊದಲಿಂದಲೂ ಗೊತ್ತುಮಾಡಿದ್ದ ನಿನ್ನನ್ನೇ ಕೂಡುವಂತೆ ಮಾಡಿದನು! ಎಂದು ಪರಮ ಸಂತೋಷದಿಂದ ಆ ರಾಜಪುತ್ರನಿಗೆ ನಮಸ್ಕಾರಮಾಡಿದಳು. ಆಗ ಸೂರ್ಯದತ್ತನು ಆ ರಾಜಪುತ್ರಿಯನ್ನು ಆಲಿಂಗನಮಾಡಿಕೊಂಡು, ಮುತ್ತಿಟ್ಟು ಪ್ರಾಣಕಾಂತೆಯೇ! ನಮ್ಮ ತಾಯಿಯೂ ಕೂಡ ಕಾಶೀರಾಜನ ಮಗಳನ್ನು ನಿನಗೆ ಮದುವೆಮಾಡಲು ನಿಶ್ಚಯಮಾಡಿರುವುದಾಗಿ ನನ್ನೊಂದಿಗೆ ಹೇಳಿದ್ದಳೆಂದು ನುಡಿದು, ಇಬ್ಬರೂ ಮುಂದಕ್ಕೆ ಪ್ರಯಾಣಮಾಡಿದರು. ಅತ್ತ ಆ ಸುನೀತಿಯು ಕಾಶೀರಾಜನು ಕಳುಹಿಸಿದ ಕಾಗದವನ್ನು ಒಯಿಕೊಂಡು, ತನ್ನ ಮಗನ ದೌರ್ಭಾಗ್ಯಕ್ಕೆ ಬಹುವಾಗಿ ಚಿಂತಿಸಿ, ಬಂದವಾರಿಗೆ ಸುಂಕವಿಲ್ಲವೆಂದು ಹೊರಟುಕೋದನು, ಸೂರ್ಯದತ್ತನೂ ವಿಚಿತ್ರವತಿಯೂ ಬಹುದೂರ ಪ್ರಯಾಣಮಾಡಿ ಮೂರುತಿಂಗಳು ಕಳೆಯಲು, ಆ ವಿಚಿತ್ರವತಿಯು ಪುಷ್ಪವತಿಯಾಗಿ ಬಹುವಾಗಿ ಚಿಂತಿಸಿದಳು. ಆಗ ರಾಜಪುತ್ರನು, ಸುಂದರಾಂಗಿಯೇ! ದೈವತಂತ್ರಕ್ಕೆ ಯಾರೇನು ಮಾಡುವುದು, ಇದಕ್ಕಾಗಿ ದುಃಖಿಸಿ ಫಲವೇನೆಂದು ಸಮಾಧಾನೋಕ್ತಿಗಳನ್ನಾಡಿ, ಮಾಧುರ್ಯ ಫಲಗಳನ್ನೂ ಒಳ್ಳೀ ಜೀನುತುಪ್ಪವನ್ನೂ, ತಂದು

ಕೊಡುತ್ತಾ, ಅಲ್ಲಿಯೇ ಆರೇಳು ದಿನಗಳು ಕಳೆದು ಮುಂದಕ್ಕೆ ಪ್ರಯಾಣ ಮಾಡುತ್ತಿರುವಲ್ಲಿ, ನವರತ್ನಖಚಿತವಾಗಿ, ಅಪರಂಜಿಯಿಂದ ಕೆತ್ತಿದ ಧ್ವಜಗಳಿಂದ ಪ್ರಕಾಶಿಸುತ್ತಲಿರುವ ಮಂಟಪವನ್ನೂ, ಅದರ ಸಮೀಪದಲ್ಲಿ ಕಾಮು ಮಫಲಭರಿತಂಗಳಾದ ವಿವಿಧ ಫಲಗಳಿಂದ ಕೂಡಿರುವ ವನವನ್ನೂ, ಅದರ ಮಧ್ಯದಲ್ಲಿ ಮನೋಹರವಾಗಿರುವ ಸರೋವರವನ್ನೂ ನೋಡಿ ಸಂತೋಷ ಪಟ್ಟು, ತಮ್ಮ ಕುದುರೆಗಳಿಂದ ಇಳಿದು, ಆ ಮಂಟಪಕ್ಕೆ ಹೋಗಿ ನೋಡುವಲ್ಲಿ ಅದರ ಸುತ್ತಲೂ ಅಪರಂಜಿಯ ಬೊಂಬೆಗಳಿಂದಲಂಕರಿಸಿದ್ದರು, ಇದನ್ನು ನೋಡಿದ ಕೂಡಲೆ ಅವರಿರ್ವರೂ ಆನಂದಭರಿತರಾದರು. ಆ ದಿವ್ಯ ಮಂಟಪದಲ್ಲಿಯೂ, ಹೂಗಳನ್ನು ಬಿಟ್ಟಿರುವ ಪೊದರುಗಳಲ್ಲಿಯೂ ಸುರತ ಸುಖವನ್ನು ಅನುಭವಿಸುತ್ತಾ, ಜಲಕ್ರೀಡೆಗಳನ್ನು ಆಡುತ್ತಾ, ಯಥೇಚ್ಛವಾಗಿ ಭೋಗಿಸುತ್ತಾ, ಸಂತೋಷದಿಂದ ಕಾಲವಂ ಕಳೆದುಕೊಂಡು, ಅಲ್ಲಿ ಸಿಕ್ಕುವ ಮಾಧುರ್ಯ ಫಲಗಳನ್ನು ತಿಂದು ಜಲಪಾನವನ್ನು ಮಾಡಿ ಆನಂದಿಸುತ್ತಿದ್ದರು. ಹೀಗಿರುವಲ್ಲಿ ಆ ವಿಚಿತ್ರವಾದ ಮಂಟಪಕ್ಕೆ ಒಬ್ಬಾ ನೊಬ್ಬ ಮುದುಕಿಯು ಬಂದು ವಿಚಿತ್ರವತಿಯನ್ನು ಗಾಢಾಲಿಂಗನಮಾಡಿ ಕೊಂಡಳು. ವಿಚಿತ್ರವತಿಗೆ ಪರಮಾಶ್ಚರ್ಯವಾಯಿತು. ಆಗ ವಿಚಿತ್ರವತಿಯು ಆ ಮುದುಕಿಯನ್ನು ಕುರಿತು, ಅವ್ವಾ! ನೀನುಯಾರು? ನನ್ನನ್ನು ಅಪ್ಪಿಕೊಳ್ಳಲು ಕಾರಣವೇನೆಂದು ಕೇಳಲು, ಆ ಮುದುಕಿಯು ಭ್ರಾಂತಳಾಗಿ ವಿಚಿತ್ರವತಿಯನ್ನು ಕುರಿತು, ಅವ್ವಾ! ನಿನ್ನ ಮಗಳೆಂದು ಭಾವಿಸಿ, ನಿನ್ನನ್ನು ಅಪ್ಪಿಕೊಂಡೆನು. ನನ್ನ ಹೆಸರು ಕನಕಾಂಗಿಯು, ನನ್ನ ಮಗಳಾದ ರತ್ನಾಂಗಿಯು ಮೂರುಕೋಟಿ ಧನವನ್ನು ಸಂಪಾದಿಸಿ ಈಗ ಮೂರುತಿಂಗಳ ಹಿಂದೆ ದೈವವಶದಿಂದ ಮೃತಳಾದಳು. ಆ ರತ್ನಾಂಗಿಗಾಗಿಯೇ ಈ ಕ್ರೀಡಾಮಂಟಪವನ್ನು ನಾನು ಕಟ್ಟಿಸಿದ್ದೆನು. ನನ್ನ ಕುವರಿಯೊದ ರತ್ನಾಂಗಿಯು ಮೃತಿಯನ್ನೈದಿ ಇಲ್ಲಿ ಏನಾದರೂ ಇರುವಳೊ ಎಂಬ ಭ್ರಮೆಯಿಂದ ಇಲ್ಲಿಗೆ ಬಂದು ದೂರದಿಂದ ನಿನ್ನನ್ನು ನೋಡಿ, ನನ್ನ ಮಗಳೆಂದೇ ಭ್ರಮಿಸಿ, ಆಲಿಂಗನಮಾಡಿಕೊಂಡ ನನ್ನ ತಪ್ಪನ್ನು ಕ್ಷಮಿಸಿ, ನಿನ್ನ ವರ್ತಮಾನವನ್ನೆಲ್ಲಾ ಹೇಳೆಂದುಕೇಳಿ, ಆ ವಿಚಿತ್ರವತಿಯು ವರ್ತಮಾನವನ್ನು ತಿಳಿದಳು. ಆ ಬಳಿಕ ಆ ಕನಕಾಂಗಿಯು ವಿಚಿತ್ರವತಿಯನ್ನು ಕುರಿತು ಅವ್ವಾ! ನಮ್ಮ ಮನೆಯಲ್ಲಿ ಏಳುಕೋಟಿ ಧನವೂ, ನವರತ್ನದ ಆಭರಣಗಳೂ, ದಿವ್ಯದುಕೂಲಗಳೂ ತುಂಬಿವೆ ನೀವೀರ್ವರೂ ನಮ್ಮ ಮನೆಗೆ ಬಂದು ಅಲ್ಲಿಯೇ ನಿಂತು ಸುಖನಾಗಿರಬೇಕೆಂದು ಪ್ರಾರ್ಥಿಸಿ, ಅವರಿರ್ವರನ್ನೂ ತನ್ನ ಬಿಡಾರಕ್ಕೆ ಕರೆದುಕೊಂಡು ಬಂದು ಮಜ್ಜನ ಭೋಜನಾದಿಗಳನ್ನು ನಾಡಿಸಿದಳು. ಆರಾತಿ, ಕನಕಾಂಗಿಯು ಏಳುಕೋಟಿ ಧನವನ್ನೂ ನವ

ರತ್ನಗಳನ್ನೂ ಇಟ್ಟಿದ್ದ ಏಳು ಪೆಟ್ಟಿಗೆಗಳ ಬೀಗದ ಕೈಗಳನ್ನೂ ಚಿತ್ರವತಿಯು ಕೈಗೆ ಕೊಟ್ಟು, ಆ ಪೆಟ್ಟಿಗೆಯನ್ನು ಒಂದೊಂದಾಗಿ ತೆಗೆಯುವಂತೆ ಹೇಳಿದಳು. ವಿಚಿತ್ರವತಿಯು ಪ್ರತಿಯೊಂದರ ಬೀಗವನ್ನೂ ತೆಗೆದು ಪರಮಾಶ್ಚರ್ಯಪಟ್ಟು ತನ್ನ ಪತಿಗೂ ತೋರಿಸಿದಳು. ಅನಂತರ ಅವರಿರ್ವರೂ ರತ್ನಾಂಗಿಯು ಮಲಗುವ ಮನೆಗೆ ಹೋಗಿ ನೋಡಲು, ಅದು ಇಂದ್ರನ ಕ್ರೀಡಾವನಕ್ಕಿಂತಲೂ ಹಚ್ಚಾದ ಅಲಂಕಾರಗಳಿಂದ ಕೂಡಿ ದೀಪ್ಯಮಾನವಾಗಿತ್ತು, ನವರತ್ನಖಚಿತವಾದ ಹಾಸಿಗೆಯನ್ನು ನೋಡಿದಕೂಡಲೆ ರಾಜಪುತ್ರನಿಗೂ ಚಿತ್ರವತಿಗೂ ಕಾಮವಿಕಾರವಾಗಿ ಆರಾತ್ರಿ ಆ ಹಾಸಿಗೆಯಲ್ಲಿಯೇ ಮಲಗಿ ಸುಖಭೋಗಗಳನ್ನು ಅನುಭವಿಸಿ ನಿದ್ರಾಮಾಡಿದರು. ಮೂರನೆಯ ಝಾವದಲ್ಲಿ ಚಿತ್ರವತಿಗೆ ತಾವು ಸುಖಭೋಗಗಳನ್ನನುಭವಿಸುತ್ತಲಿದ್ದ ಆ ದಿವ್ಯ ಮಂಟಪದ ಸ್ಮರಣೆಯು ಬಂದಿತು. ವಿಚಿತ್ರವತಿಯು ತಾನು ಅಲ್ಲಿ ಮಲಗಿ ಸುಖಾನುಭವವನ್ನು ಮಾಡುತ್ತಿರುವಾಗ ತನ್ನ ಕೊರಳಲ್ಲಿದ್ದ ಚಂದ್ರಹಾರವನ್ನು ಅಲ್ಲಿದ್ದ ನವರತ್ನಖಚಿತವಾದ ಅಪರಂಜಿ ಮಂಚಯ ಕೊರಳಿಗೆ ಹಾಕಿದ್ದಳು. ಇದನ್ನು ಮರೆತುಬಂದಳು. ಈ ಸಂಗತಿಯನ್ನು ಸೂರ್ಯದತ್ತನಿಗೆ ಹೇಳಿದಳು. ಆಗ ರಾಜಪುತ್ರನು ಆಹಾ! ಇದು ರಾಜಯೋಗ್ಯವಾದ ಹಾರವು. ಇದನ್ನು ನಾನು ಈಗಲೇ ತರುವೆನೆಂದು ಅಶ್ವಾರೂಢನಾಗಿ ಹೊರಟನು. ವಿಚಿತ್ರವತಿಯು ಬೇಡವೆಂದು ಎಷ್ಟೋ ವಿಧವಾಗಿ ಸಮಾಧಾನಮಾಡಿದಳು. ಆದರೂ ರಾಜಪುತ್ರನು ಕೇಳದೆ, ಏಳಗಾಗುವುದರೊಳಗಾಗಿ ಬಂದುಬಿಡುವೆನೆಂದು ಹೇಳಿ, ಅಶ್ವಾರೂಢನಾಗಿ ಹೊರಟು, ಆ ದಿವ್ಯಮಂಟಪವನ್ನು ಸೇರಿ, ವಿಚಿತ್ರವತಿಯು ಹೇಳಿದ್ದ ಗುರುತನ್ನೆ ಹಿಡಿದು ಪರೀಕ್ಷಿಸಲು, ಅಲ್ಲಿ ಆ ಚಂದ್ರಹಾರವು ಸಿಕ್ಕಿತು, ರಾಜಪುತ್ರನು ಆ ಹಾರವನ್ನು ತನ್ನ ಕೊರಳಿಗೆ ಹಾಕಿಕೊಂಡನು. ಅಶ್ವಾರೂಢನಾಗಿ ಬರುತ್ತಿದ್ದನು. ಆ ಚಂದ್ರಹಾರಕ್ಕೆ ಒಂದು ಸಣ್ಣ ಹಾವು ಸುತ್ತಿಕೊಂಡಿತ್ತು. ರಾಜಪುತ್ರನಿಗೆ ಇದು ಗೊತ್ತಾಗಲಿಲ್ಲ ಅಶ್ವಾರೂಢನಾಗಿ ಬರುತ್ತಿರುವಲ್ಲಿ ದೈವವಶದಿಂದ ಆ ಹಾವು ರಾಜಪುತ್ರನ ಕತ್ತಿನಮೇಲೆ ಕಚ್ಚಿ ಬಿಟ್ಟಿತು. ಸ್ವಲ್ಪಹೊತ್ತಿನೊಳಗೆ ಆ ವಿಷವು ರಾಜಪುತ್ರನ ತಲೆಗೇರಿ ಪ್ರಜ್ಞೆತಪ್ಪಿ ನಿಶ್ಚೇಷ್ಟಿತನಾಗಿಬಿದ್ದನು. ಆ ಏಮಾಶ್ವವು ತನ್ನ ಯಜಮಾನನು ಪ್ರಜ್ಞೆತಪ್ಪಿರುವನೆಂದು ತಿಳಿದು, ಪಟ್ಟಣಕ್ಕೆ ಹೋಗಿ ಕನಕಾಂಗಿಯಿದ್ದ ಮನೆಯ ಗುರುತು ಸಿಕ್ಕದೆ ಮತ್ತೊಂದು ಮನೆಯ ಬಳಿ ನಿಂತಿತು. ಆ ಮನೆಯಲ್ಲಿದ್ದ ಜ್ಞಾನಾಂಬಾ ಎಂಬ ವೇಶ್ಯೆಯು ಹೊರಗೆ ಬಂದು ನೋಡಿ, ದಿವ್ಯಸುಂದರಾಕಾರನಾದ ರಾಜಪುತ್ರನು ಆಯಾಸಪಟ್ಟಿರಬಹುದೆಂದು ಯೋಚಿಸಿ, ನವೀಜನ[illegible]

ಜಪುತ್ರನಿಗೆ ಸ್ವಲ್ಪವೂ ಆಯಾಸವಾಗದಂತೆ ಒಳಗೆ ಕರೆದುಕೊಂಡುಹೋ
ಗಿ, ಮೃದುವಾದ ಹಾಸಿಗೆಯಲ್ಲಿ ಮಲಗಿಸಿ, ಶೈತ್ಯೋಪಚಾರಗಳನ್ನು ಮಾ
ಡಿದರೂ ಕೂಡ ರಾಜಪುತ್ರನಿಗೆ ಪ್ರಜ್ಞೆಯೇ ಬಾರದಿರಲು, ಆ ಜ್ಞಾನಾಂ
ಬಾ ಎಂಬ ವೇಶ್ಯೆಯು ರಾಜಪುತ್ರನ ದಿವ್ಯ ದೇಹವನ್ನು ನೋಡಿ ಮೋಹ
ಗೊಂಡು, ದುಃಖಾಶ್ಚರ್ಯಗಳಿಂದ ಕೂಡಿ ದೇವರನ್ನು ಧ್ಯಾನಿಸುತ್ತಿದ್ದಳು.
ಅತ್ತ ಚಿತ್ರವತಿಯು ತನ್ನ ಪತಿಯು ಎಷ್ಟುಹೊತ್ತಾದರೂ ಬಾರದಿರಲು ದಿ
ಗಲುಬಿದ್ದು, ಈ ವರ್ತಮಾನವನ್ನು ಕನಕಾಂಗಿಗೆ ಹೇಳಿದಳು. ಅವಳುರಾ
ಜಪುತ್ರನನ್ನು ಹುಡುಕಿಕೊಂಡು ಒರುವಂತೆ ಅನೇಕ ಪರಿಚಾರಕರನ್ನು ಕ
ಳುಹಿಸಿದಳು. ಅವರು ಆ ಮಂಟಪವನ್ನೂ ಇನ್ನೂ ಅನೇಕ ಸ್ಥಳಗಳನ್ನೂ
ಹುಡುಕಿದರು. ರಾಜಪುತ್ರನ ಸುಳಿವೇ ಇಲ್ಲದಿರಲು ಅವರು ಬಂದು ಕನ
ಕಾಂಗಿಗೆ ತಿಳಿಸಿದರು. ಅನಂತರ ಆ ಕನಕಾಂಗಿಯೂ ವಿಚಿತ್ರವತಿಯೂ
ಜ್ಯೋತಿಷ್ಕರನ್ನು ಕರಸಿ ಕೇಳಲು, ಜೋಯಿಸನು ಆ ಕಾಲದ ಗ್ರಹದ ಗ
ಣನೆಯುಂತೆ ಎಲ್ಲವನ್ನೂ ಪರೀಕ್ಷಿಸಿ, ರಾಜಪುತ್ರನಿಗೆ ಶೀರ್ಘ್ರಗ್ರಹವು
ಕ್ರೂರವಾಗಿದೆಯಾಗಿ ಪ್ರಜ್ಞೆತಪ್ಪಿ ಪತ್ತಿರದಲ್ಲಯೇ ಇರುವನು, ಗುರುದೆ
ಶೆಯ ಚನ್ನಾಗಿರುವುದರಿಂದ ಜಾಗ್ರತೆಯಲ್ಲಿಯೇ ಇಲ್ಲಿಗೆ ಬಂದು ಸೇರು
ವನೆಂದು ನುಡಿದರು, ವಿಚಿತ್ರವತಿಯಾದರೊ ನಿವಾಹಾರಗಳಿಲ್ಲದೆ ದುಃಖಿ
ಸುತ್ತಿದ್ದಳು. ಹೀಗಿರುವಲ್ಲಿ ಜ್ಞಾನಾಂಬಾ ಎಂಬ ವೇಶ್ಯೆಯಮನೆಗೆ
ಧರ್ಮದೇವತೆಯು ಬಂದು, ರಾಜಪುತ್ರನ ಕೈಯಲ್ಲಿದ್ದ ಸರ್ವವನ್ನು ಹಿಡಿ
ದು, ಅಭಿಮಂತ್ರಿಸಿ, ರಾಜಪುತ್ರನನ್ನು ಬದುಕಿಸಿ, ತಾನು ಮಾಯವಾದ
ಳು. ಜ್ಞಾನಾಂಬಾ ಎಂಬ ವೇಶ್ಯೆಯು ರಾಜಪುತ್ರನು ಬದುಕಿದ್ದನ್ನೂ, ಆ
ಮಾಯಗಾತಿಯು ಮಾಯವಾದ್ದನ್ನೂ, ಎಷ್ಟೆಷ್ಟು ಹುಡುಕಿಸಿದರೂ ಸಿಕ್ಕ
ದಿರುವುದನ್ನೂ ನೋಡಿ, ದುಃಖಾಶ್ಚರ್ಯಗಳಿಂದ ಕೂಡಿದಳು. ಆ ಬಳಿಕ
ಆ ಜ್ಞಾನಾಂಬಾ ಎಂಬ ವೇಶ್ಯೆಯು ಆ ರಾಜಪುತ್ರನನ್ನು ಬಾಚಿ ತಬ್ಬಿ
ಕೊಂಡು, ನಡೆದ ವರ್ತಮಾನವನ್ನೆಲ್ಲಾ ಹೇಳಿ, ರಾಜಪುತ್ರನಿಗೆ ಮಜ್ಜನ
ಭೋಜನಾದಿಗಳನ್ನು ಮಾಡಿಸಿ, ಅವನೊಂದಿಗೆ ಸುಖಭೋಗಗಳನ್ನು ಅನು
ಭವಿಸುತ್ತಾ, ತನ್ನಲ್ಲಿದ್ದ ದ್ರವ್ಯವನ್ನೆಲ್ಲಾ ಸ್ವೇಚ್ಛೆಯಾಗಿ ಖರ್ಚುಮಾಡು
ತ್ತಿದ್ದಳು, ಆ ರಾಜಪುತ್ರನಾದರೊ ತನ್ನ ಪತ್ನಿಯಾದ ವಿಚಿತ್ರವತಿಯನ್ನು
ಜ್ಞಾಪಕಕ್ಕೆ ತಂದುಕೊಂಡು ಅಯ್ಯೋ! ನನಗೆ ಇಷ್ಟು ಉಪಕಾರ ಮಾಡಿ
ರುವ ಈ ವೇಶ್ಯೆಯನ್ನು ಬಿಟ್ಟು ನಾನು ಹೇಗೆ ಹೋಗಲೆಂದು ಚಿಂತಿಸುತ್ತಿ
ದ್ದನು. ಹೀಗಿರುವಲ್ಲಿ ಆ ಜ್ಞಾನಾಂಬೆಯ ತಾಯಿಯಾದ ವಿಮಲಾಂಬಾ
ಎಂಬ ಮುದುಕಿಯು ತನ್ನ ಮಗಳು ಈದೀತಿ ದ್ರವ್ಯವನ್ನೆಲ್ಲಾ ನಾಶಮಾಡು

ಹಣವನ್ನು ಹಚ್ಚಾಗಿ ಕೊಡುವವರನ್ನು ಕೂಡದೆ ಈ ರಾಜಪುತ್ರನನ್ನು ಸೇರಿ ಹಣವನ್ನೆಲ್ಲಾ ಹಾಳುಮಾಡುತ್ತಲಿರುವುದು ನ್ಯಾಯವೆ? ಹೀಗೆಂದು ಹೇಳಿದಳು, ಜ್ಞಾನಾಂಬೆಯು ಕೋಪದಿಂದ ನಾನು ಸಂಪಾದಿಸಿದ ಹಣವನ್ನು ನನ್ನಿಷ್ಟ ಬಂದಂತೆ ಮಾಡುವೆನು. ನೀನು ಸುಮ್ಮನಿರೆಂದು ಗದರಿಸಿದಳು, ಇದರಿಂದ ವಿಮಲಾಂಬಿಗೆ ಅಸೂಯೆಯುಂಟಾಗಿ ಇದಕ್ಕೆ ತಕ್ಕ ಹಾಗೆ ಮಾಡಬೇಕೆಂದೆಣಿಸಿ, ಒಂದಾನೊಂದು ದಿನ ಮಂತ್ರಿಗಾರರಿಂದ ಒಂದು ಮಂತ್ರದ ಕಡ್ಡಿಯನ್ನು ಸಂಪಾದಿಸಿಟ್ಟುಕೊಂಡಳು, ತನ್ನ ಪುತ್ರಿಯಮೇಲೂ ಅಳಿಯನ ಮೇಲೂ ಬಹು ಪ್ರೇಮವಿರುವಂತೆ ನಟಿಸುತ್ತಾ, ಮಗಳನ್ನು ಕರೆದು ಈದಿನ ನಿಮ್ಮಾ ಇರ್ವರಿಗೂ ಮಗ್ಗಿನ ಜಪೆಯೆನ್ನು ಹಾಕುವೆನೆಂದು ಬಹು ಸಂಭ್ರಮದಿಂದ ಮಗಳಿಗೆ ಮಗ್ಗನ್ನು ಮುಡಿಸಿದಳು. ಅನಂತರ ರಾಜಪುತ್ರನಿಗೂ ಮಗ್ಗನ್ನು ಮುಡಿಸಿ ಕಾಣದಂತೆ ಜುಟ್ಟಿನಲ್ಲಿ ಆ ಮಾಯಾ ಸಂಬಂಧವಾದ ಕಡ್ಡಿಯನ್ನು ಒಳಗೆ ಸೇರಿಸಿದಳು. ಆ ಕೂಡಲೆ ರಾಜಪುತ್ರನು ಒಂದು ಗಿಳಿಯಾಗಿ ಕಿಕಕಿಕ ಎಂದು ಕೂಗುತ್ತಾ, ಮೇಲಕ್ಕೆ ಹಾರಿ, ಬಾಗಿಲಿಂದಾಚೆ ಹೊರಟುಕೋದನು. ಜ್ಞಾನಾಂಬೆಯು ಇದನ್ನು ನೋಡಿ, ಅಯ್ಯೋ! ಎಂದು ಗೋಳಿಡುತ್ತಾ, ದೈವಹಿಯಾದ ತಾಯೆಯೇ! ನಿನ್ನಿಂದಲೆ ಹೀಗಾಯಿತೆಂದು ಅವಳಮೇಲೆ ಬಿದ್ದು ಘೋರವಾಗಿ ದುಃಖಿಸುತ್ತಿದ್ದಳು. ಆ ರಾಜಗಿಳಿಯಾದರೊ, ಆ ಪಟ್ಟಣದ ಬಯಲುಗಳಲ್ಲಿಯೂ, ಮಗಗಳಲ್ಲಿಯೂ ಅಲೆದಾಡುತ್ತಾ ಸಾಯಂಕಾಲ ಅರಮನೆಯ ಬಳಿ ಹಾರಾಡುತ್ತಿದ್ದುದನ್ನು ಆ ದೇಶದ ರಾಜಪುತ್ರಿಯು ನೋಡಿದಳು. ಆಹಾ! ಈ ಅಗಳಿಯು ಬಹು ಸುಂದರವಾಗಿದೆ. ಇದನ್ನು ನಮ್ಮರಮನೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ಯೋಚಿಸಿ, ಸಖಿಯರಿಗೆ ಇದನ್ನು ಹಿಡಿದು ತರಹೇಳಿದಳು. ಅವರು ಮೆಲ್ಲಮೆಲ್ಲಗೆ ಕೋಗಿ ಆ ಗಿಳಿಯನ್ನು ಕೊಂಡು ಬಂದರು. ಅನಂತರ ಅದನ್ನು ನವರತ್ನಖಚಿತವಾದ ಪಂಜರದಲ್ಲಿಟ್ಟು ಪ್ರತಿದಿನವೂ ಹಾಲು ಸಕ್ಕರೆ ಮಾಮೂಲ್ಯ ಫಲಗಳನ್ನು ಕೊಟ್ಟು ಸಾಕುತ್ತ, ಕೈಯ್ಯಮೇಲೂ, ಭುಜದಮೇಲೂ ಕುಳ್ಳಿರಿಸಿಕೊಂಡು ಮುದ್ದಾಡುತ್ತಾ ಇದ್ದಳು. ಹೀಗಿರುವಲ್ಲಿ ಆ ರಾಜಪುತ್ರಿಯು ಒಂದಾನೊಂದು ದಿನ ಅರ್ಧರಾತ್ರಿಯಲ್ಲಿ ಆ ಗಿಳಿಯನ್ನು ತನ್ನ ಕೈಮೇಲೆ ಬಿಟ್ಟುಕೊಂಡು, ಸಂತೋಷದಿಂದ ಮಾತನಾಡಿಸುತ್ತಾ, ತಲೆಯನ್ನು ನವರುತ್ತಿರಲು, ಅದರ ತಲೆಯಲ್ಲಿ ಸಿಕ್ಕಿಸಿದ್ದ ಮಾಯಾಸಂಬಂಧನಾದ ಕಡ್ಡಿಯು ಕೆಳಗೆ ಬಿದ್ದುಹೋಗಲು ಆ ಗಿಳಿಯು ತನ್ನ ರೂಪವನ್ನು ಕಳೆದುಕೊಂಡು ಸುಂದರಾಂಗನಾದ ರಾಜಪುತ್ರನ ರೂಪವನ್ನು ಧರಿಸಿತು. ರಾಜಪುತ್ರಿಯು ಇದನ್ನು ನೋಡಿ ಪರಮಾಶ್ಚರ್ಯದಿಂದ ಕೂಡಿ, ಆ ಅರಸುಮಗನನ್ನು ಕುರಿತು, ನೀನು ಯಾರು?

ನಿನ್ನ ವರ್ತಮಾನವೇನೆಂದು ಕೇಳಿದಳು. ರಾಜಪುತ್ರನು ತನ್ನ ವರ್ತಮಾನವನ್ನೆಲ್ಲಾ ತಿಳಿಸಿದನು. ಅನಂತರ ಆ ರಾಜಕನ್ನಿಕೆಯು ಮೋಹಾತಿಶಯದಿಂದ ಆ ರಾಜಪುತ್ರನೊಂದಿಗೆ ಸುರತಕ್ರೀಡೆಗಳನ್ನಾಡಿ, ಕಡೆಯು ಝೂವದಲ್ಲಿ ಆ ಮಾಯೆಯ ಕಡ್ಡಿಯನ್ನು ರಾಜಪುತ್ರನ ತಲೆಯಲ್ಲಿರಿಸಿ, ಶುಕರೂಪವಾಗಿ ಮಾಡಿ, ಪಂಜರದೊಳಿಟ್ಟು ಕಾಪಾಡುತ್ತಾ, ಸಂತೋಷದಿಂದ ಕಾಲವಂ ಕಳೆಯುತ್ತಾ, ರಾತ್ರಿಯೊಳು ಕೂಡಲೆ ಆ ಮಾಯೋಕಡ್ಡಿಯನ್ನು ತೆಗೆದಿಟ್ಟು, ಆ ದಿವ್ಯಸುಂದರಗಾತ್ರನೊಂದಿಗೆ ಸುಖಭೋಗಗಳನ್ನು ಅನುಭವಿಸುತ್ತಾ ಕಾಲವಂ ಕಳೆಯುತ್ತಿದ್ದಳು. ಹೀಗೆಯೇ ಕೆಲವು ದಿನಗಳು ಕಳೆದ ಮೇಲೆ ಆ ರಾಜಪುತ್ರಿಯು ಗರ್ಭಿಣಿಯಾದಳು. ಈ ಸಂಗತಿಯು ರಾಜದಂಪತಿಗಳಿಗೆ ತಿಳಿದು, ದುಃಖಾಶ್ಚರ್ಯವ್ಯಗ್ರವರಾಗಿ, ಅಲ್ಲಿದ್ದ ಏಳು ಪಹರೆಯವರನ್ನೂ ಕರೆಯಿಸಿ ಚೆನ್ನಾಗಿ ಹೊಡಿಸಿದ್ದಲ್ಲದೆ, ಇನ್ನು ಒಂದು ತಿಂಗಳೊಳಗಾಗಿ ಆ ಚೋರನನ್ನು ಹುಡುಕಿ ಒಪ್ಪಿಸದಿದ್ದರೆ ನಿಮ್ಮನ್ನು ಕೊಲ್ಲುವೆನೆಂದು ಕ್ರೂರವಾದ ಆಜ್ಞೆಯನ್ನು ವಿಧಿಸಿದನು. ರಾಜನು ಈರೀತಿ ಆಜ್ಞಾಪಿಸಲು, ಅವರಲ್ಲಿ ಒಬ್ಬ ಮಂತ್ರವಾದಿಯು ಮಾಯೆಯಿಂದ ಅದೃಶ್ಯನಾಗಿ ರಾಜಪುತ್ರಿಯು ಅಂತಃಪುರದಲ್ಲಿದ್ದನು. ಆರಾತ್ರಿ ಎಂದಿನಂತೆ ರಾಜಪುತ್ರಿಯು ಆ ರಾಜಗಿಳಿಯನ್ನು ಅರ್ಧರಾತ್ರಿಯಲ್ಲಿ ಮನುಷ್ಯರೂಪವನ್ನು ಧರಿಸುವಂತೆ ಮಾಡಿ ಸುಖಾನುಭವವನ್ನು ಪಡೆಯುತ್ತಿದ್ದಳು. ಇದನ್ನು ಆ ಮಾಯಗಾರನು ಕಂಡು ಮರುದಿನ ಬೆಳಿಗ್ಗೆ ರಾಜನ ಬಳಿಗೆ ಬಂದು ಯಾರೊ ಒಬ್ಬ ರಾಜಪುತ್ರನು ಶುಕರೂಪವನ್ನು ತಾಳಿ ರಾಜಪುತ್ರಿಯೊಂದಿಗೆ ಸುಖಿಸುತ್ತಿರುವನೆಂದು ತಿಳಿಸಿದನು. ಆಗ ರಾಜನು ಆಶ್ಚರ್ಯಪಟ್ಟು ತನ್ನ ಸತಿಯೊಂದಿಗೆ ರಾಜಪುತ್ರಿಯ ಅಂತಃಪುರಕ್ಕೆ ಬಂದು, ಆ ಕುವರಿಯನ್ನು ಕುರಿತು, ಅಮ್ಮಾ! ನಿತ್ಯವೂ ನಿನ್ನ ಅಂತಃಪುರಕ್ಕೆ ಯಾರು ಬರುವರು? ನೀನು ಗರ್ಭವನ್ನು ಧರಿಸಲು ಕಾರಣವೇನು? ನಮ್ಮ ವಂಶಕ್ಕೇ ಅಪಕೀರ್ತಿಯನ್ನು ತಂದೆಯಲ್ಲಾ! ಹೀಗೆ ಮಾಡಬಹುದೇ ಎಂದು ಕೇಳಿದರು. ಆಗ ಆ ರಾಜಪುತ್ರಿಯು, ಜನನೀ ಜನಕರೆ! ಇಲ್ಲಿರುವ ಪಹರೆಯವರೂ ಈ ಗಿಳಿಯೆಲ್ಲದೆ ಇಲ್ಲಿಗೆ ಯಾರೂ ಬರುತ್ತಿಲ್ಲವೆಂದು ತಲೆ ತಗ್ಗಿಸಿಕೊಂಡು ನುಡಿದಳು. ರಾಜನು ಅಮ್ಮ! ಈ ಗಿಳಿಯನ್ನು ಇಲ್ಲಿ ಕೊಡೆಂದು ಕೇಳಿದನು. ಆಗ ಆ ಇಂದುವದನೆಯು ಆಹಾ! ನನಗೆ ಪ್ರೀತಿಪಾತ್ರವಾದ ಈ ಗಿಳಿಗೆ ಏನು ಅಪಾಯ ಬರುವುದೊ ಎಂದು ಯೋಚಿಸಿ, ಇದನ್ನು ಹಿಡಿದು ಕೊಡುವುದಕ್ಕಿಂತ ಸ್ವೇಚ್ಛೆಯಾಗಿ ಬಿಟ್ಟುಬಿಡುವುದೆ ಉತ್ತಮವೆಂದು ಹೊರಗೆ ಬಿಟ್ಟುಬಿಟ್ಟಳು. ಆ ಗಿಳಿಯು ಸ್ವೇಚ್ಛೆಯಾಗಿ ಹಾರಿಹೋಗುತ್ತಿತ್ತು. ರಾಜಪು[illegible]

ಆ ಮಂತ್ರವಾದಿಯು ತಾನು ಆ ಗಿಳಿಯನ್ನು ಹಿಡಿದು ತರುವೆನೆಂದು ದೂರಕ್ಕೆ ಹೋಗಿ, ಡೇಗೆಯ ರೂಪವನ್ನು ತಾಳಿ, ಆದನ್ನು ಹಿಂಬಾಲಿಸಿದನು. ರಾಜನು ಮಗಳ ದುಃಖವನ್ನು ತಡೆಯಲಾರದೆ ತಾನೂ ಚಿಂತಿಸುತ್ತಿದ್ದನು. ಆ ಗಿಳಿಯು ಡೇಗೆಗೆ ಸಿಕ್ಕದೆ ಬಹುದೂರದವರೆಗೂ ಗಿರಿದುರ್ಗಗಳನ್ನೂ ಕಾಡುಮೇಡುಗಳನ್ನೂ ದಾಟಿ ಹೋಗುತ್ತಾ ಇರುವಲ್ಲಿ, ಅಲ್ಲಿ ನಾರಾಯಣಾಶ್ರಮವು ಸಿಕ್ಕಿತು. ಗಿಳಿಯು ಆ ಆಶ್ರಮಕ್ಕೆ ಹೋಗಿ ಋಷಿಯ ಮಹಿಮೆಯಿಂದ ನಿಜರೂಪವನ್ನು ತಾಳಿ, ಆ ಮಾಯಾಕಡ್ಡಿಯನ್ನು ಭದ್ರವಾಗಿಟ್ಟುಕೊಂಡು, ಋಷಿಯ ಪಾದಾರವಿಂದಗಳಿಗೆ ಅಡ್ಡಬಿದ್ದು, ಮಹಾನುಭಾವನೆ! ನನಗೆ ಇಂತಹ ಆಪತ್ತುಗಳು ಒದಗಲು ಕಾರಣವೇನು? ಇಂತಹ ವಿಚಿತ್ರಗಳು ಉಂಟಾಗಲು ಕಾರಣವೇನೆಂದು ಕೇಳಿದನು. ನಾರಾಯಣ ಮಹರ್ಷಿಯು ವತ್ಸ! ನೀನು ಯಾವಯಾವ ಚಿತ್ರಗಳನ್ನು ನೋಡಿದೆ? ಇವೆಲ್ಲಾ ಸಹಜವೇ ಅಲ್ಲದೆ ವಿಚಿತ್ರವೇನೂ ಅಲ್ಲ. ಚಿತ್ರ ವಿಚಿತ್ರ, ಇಂದ್ರಜಾಲ ಮಹೇಂದ್ರಜಾಲ, ವಾಯುಸ್ತಂಭನ, ಅಗ್ನಿಸ್ತಂಭನ, ಜಲಸ್ತಂಭನ ಅಕಟವಿಕಟಾವಿ ತಂತ್ರಗಳಿಗೂ, ಮೋಹನವೇ ಮೊದಲಾದ ಪರಕಾಯ ಪ್ರವೇಶ ವಿದ್ಯೆಗಳಿಗೂ, ಎರಕವೇ ಕಾರಣವು. ಎರಕಪ್ರಭಾವವನ್ನು ದೇವರ್ಷಿಗಣವೂ, ತ್ರಿಮೂರ್ತಿಗಳೂ ತಿಳಿಯಲಾರರು. ನೀನು ಹೇಗೆ ತಿಳಿಯುವೆ ಎಂದು ನುಡಿದು ರಾಜಪುತ್ರನನ್ನು ಕುರಿತು ಇಂತೆಂದನು.

ನಾರಾಯಣ ಮಹರ್ಷಿಯು ಸೂರ್ಯದತ್ತ ಮಹಾರಾಯನಿಗೆ ತಿಳಿಸಿದ ಎರಕ ಪ್ರಭಾವವು.

ರಾಜಪುತ್ರನೆ! ದೇವರಹಸ್ಯವನ್ನು ಶ್ರದ್ಧಾಸಕ್ತಿಯುಳ್ಳವನಾಗಿ ಕೇಳು. ಅಂಡ ಪಿಂಡ ಬ್ರಹ್ಮಾಂಡಗಳಿಗೆಲ್ಲಾ ಪ್ರಪಂಚವೇ ಆಧಾರವಾದದ್ದು. ಹೀಗೆಂದು ದೊಡ್ಡವರು ಜಗನ್ಸ್ವರೂಪನಾದ ಆತ್ಮಾರಾಮ ಬ್ರಹ್ಮವನ್ನು ಜಪಯುಕ್ತವಾಗಿಟ್ಟುಕೊಂಡು, ಆ ಅಕ್ಷರದ್ವಯಂಗಳನ್ನು ಧ್ಯಾನಿಸುತ್ತಾ, ನೇತ್ರಗಳಲ್ಲಿ ಬ್ರಹ್ಮವನ್ನು ತೋರಿಸುತ್ತಲಿರುವರು. ಅಂತಹ ಬ್ರಹ್ಮವನ್ನೇ ಎರಕವೆಂದೂ, ಮಾಯೆಯೆಂದೂ ಕೇಳುವರು. ಎರಕವು ತೆಂಗಿನಕಾಯಿಯೊಳಗಿನ ನೀರಿನಂತೆ ಅಖಂಡಾಕೃತಿಯಾಗಿ, ಬ್ರಹ್ಮದಲ್ಲಿ ಉತ್ಪನ್ನವಾಗಿ, ಅಚಲ ಪರಿಪೂರ್ಣದಂತೆ ತಾನು ಅಖಂಡಾಕೃತಿಯನ್ನು ಹೊಂದಿದೆ, ಖಂಡರೂಪವನ್ನು ಪಡೆದು, ಲೋಕಗಳನ್ನೂ, ಲೋಕಗಳಲ್ಲಿರುವ ಹರಿಹರಾದಿಯಾಗಿ, ದೇವ ಮಾನವ ಮೃಗ ಪಕ್ಷಿ ಕ್ರಿಮಿಕೀಟಾವಿಗಳನ್ನೂ ಹುಟ್ಟಿಸಿ ತಾನು ಭಗವಚ್ಛಬ್ದವನ್ನು ಹೊಂದಿ,ಆತ್ಮನೆಂದು ಎನ್ನಿಸಿಕೊಂಡು, ದೇವ ಮಾನವರ ಇಷ್ಟಾರ್ಥವನ್ನು ಸಿದ್ಧಿಸುತ್ತಾ, ತನ್ನ ಮಾಯಾಶಕ್ತಿಗೆ ಒಳಪ

ರೊಂದುಕಡೆ ಹಾಡುತ್ತಲೂ, ಒಂದುಕಡೆ ಹುಟ್ಟಿ ಮತ್ತೊಂದೆಡೆ ಸಾಯುತ್ತಲೂ, ಈ ಪ್ರಕಾರವಾಗಿ ಅನೇಕ ಆಶ್ಚರ್ಯಕಾರ್ಯಗಳನ್ನು ಮಾಡುತ್ತಲಿರುವುದು. ಎರಕಪ್ರಭಾವದ ಉತ್ಪತ್ತಿ ಕ್ರಮವನ್ನೂ ಲಯವಾಗುವ ಬಗೆಯನ್ನೂ, ಅದರ ಪ್ರಭಾವವನ್ನೂ ಹೇಳಲು ಯಾರಿಗೂ ಸಾಧ್ಯವಲ್ಲ. ಹಿಡಿದುನೋಡಿದರೆ ನಿಲ್ಕುಡೆಯೇ ಇಲ್ಲದೆ ಭ್ರಾಂತಿರೂಪವಾಗಿಯೂ, ಮಿಥ್ಯಾರೂಪಕವಾಗಿಯೂ ಇರುವುದು. ಶರೀರಗಳಿಗೆ ಒಂಭತ್ತು ರಂಧ್ರಗಳುಂಟು. ಅವುಗಳ ಪೈಕಿ ಎರಡರಲ್ಲಿ ಅಂದರೆ ನಾಸಿಕಾರಂಧ್ರಗಳೆರಡರೊಳಗೆ ಕೆಂಪಾಗಿರುವುದು ಸೂರ್ಯನಾಡಿಯು, ಬಿಳ್ಳಗಿರುವುದು ಚಂದ್ರನಾಡಿಯು, ಕಪ್ಪಾಗಿರುವುದು ಇಡಾಪಿಂಗಳ ನಾಡಿಗಳು. ಇವನ್ನೆಡನ್ನೂ ಒಂದಾಗಿ ಮಾಡುವುದು ಜಪಕುಂಡಲಿಯು. ಕಪ್ಪಾಗಿರುವುದು ಸುಷುಮ್ನನಾಡಿಯು, ಇದರ ಮುಂಬೆ ಎರಕವೆಂದು ಬಿಳುಕ್ರಿಮಿಗಳಂತಿವೆ. ಅವನ್ನೆ ಶಂಕವೆಂದೂ, ಇಂದ್ರಜಾಲಕನೆಂದೂ, ಪರಬ್ರಹ್ಮನೆಂದೂ, ನಾರಾಯಣನೆಂದೂ, ಈಶ್ವರನೆಂದೂ, ಮಹಾಲಿಂಗವೆಂತಲೂ, ಗಳಾಸ್ವರೂಪನೆಂಬುದಾಗಿಯೂ, ಸರ್ವಸಾಕ್ಷಿಯೆಂತಲೂ, ಆಪ್ತೋಜ್ಯೋತಿಯೆಂದೂ, ಸಚ್ಚಿದಾನಂದವೆಂದೂ ಹೇಳುವರು. ಪವಿನಾಲ್ಕು ಲೋಕಗಳನ್ನೂ ಎರಕವೆಂದೇ ತಿಳಿ. ಅಂಥ ಎರಕಕ್ಕೆ ಮೂಲವಿಲ್ಲ. ಇದು ತನ್ನಷ್ಟಕ್ಕೆ ತಾನೆ ಭ್ರಾಂತಿಗೊಳಿಸತಕ್ಕವ್ಯಾಗಿದೆ. ಹೀಗೆಂದು ಆ ರಾಜಪುತ್ರನಿಗೆ ಎಲ್ಲವನ್ನೂ ಬೋಧಿಸಿದನು. ಹೀಗೆ ನಡಿಯುತ್ತಿರುವಾಗ ಅತ್ತ ಮಂತ್ರವಾದಿಯು ಪಟ್ಟಣಕ್ಕೆ ಹೊರಟು ಹೋಗಿ, ಆ ರಾಜನಿಗೆ ನನುಸ್ಕಾರಮಾಡಿ, ರಾಜೇಂದ್ರನೆ ಕೇಳು! ನಾನು ತರಿಸಿಕೊಂಡು ಹೋದ ಆ ಗಿಳಿಯು ನನ್ನ ಕೈಗೆ ಸಿಕ್ಕದೆ ನಾರಾಯಣಾಶ್ರಮವನ್ನು ಹೊಕ್ಕು, ಅಲ್ಲಿ ತನ್ನ ನಿಜರೂಪವನ್ನು ತಾಳಿ, ಮುನಿಶಿಕೂಷೆಯನ್ನು ಮಾಡುತ್ತಿರುವುದರಿಂದ ನನಗೆ ಅಸಾಧ್ಯವಾಗಿ ಹಿಂದಿರುಗಿದೆನೆಂದು ಹೇಳಿದನು. ಈ ಮಾತುಗಳನ್ನು ರಾಜಪುತ್ರಿಯು ಕೇಳಿ, ಆಹಾ! ಋಷಿಶಿಕೂಷೆಯಲ್ಲಿರುವ ನನ್ನ ಪತಿಯು ಪುನಃ ಇನ್ನು ಇಲ್ಲಿಗೆ ಬರಲಾರನು. ವೈರಾಗ್ಯಬುದ್ಧಿಯಿಂದ ತಾನೂ ವಿರಕ್ತನಾಗಬಹುದು. ನಾನು ಇಲ್ಲಿ ತಡಮಾಡಿದರೆ ಅಪಾಯವಾಗಬೇತೆಂದು ಚಿಂತಿಸಿ, ಆ ಆಶ್ರಮಕ್ಕೆ ತಾನೂ ಹೊರಡಬೇಕೆಂದಿದ್ದಳು. ಅತ್ತ ನಾರಾಯಣಾಶ್ರಮದಲ್ಲಿಯಾದರೊ, ಮಹರ್ಷಿಯು ರಾಜಪುತ್ರನನ್ನು ಕುರಿತು, ರಾಜಾತ್ಮಜಾ! ನಿನಗೆ ಈಗ ಎರಕ ಪ್ರಭಾವವನ್ನು ಸಾಂಗವಾಗಿ ತಿಳಿಯಿತು. ನಿನ್ನ ಇಷ್ಟಗಳೆಲ್ಲಾ ಇಹಲೋಕದಲ್ಲಿ ನಿದ್ಧಿಸುವವು ಚಕ್ರಾಧೀಶ್ವರನಾಗಿ ಸುಖಾನಂದಗಳನ್ನು ಪಡೆಯುವೆ, ಶಾಶ್ವತವಾದ ಮುಕ್ತಿಯೂ ನಿನಗೆ ಉಂಟಾಗುವುದು ನೀನು ಸುಖವಾಗಿರೆಂದು ಕಳುಹಿದನು. ಅನಂತರ ರಾಜಕುಮಾರನನ್ನು ಕುರಿತು, ಮಗೂ! ನೀನು ಕ

ಣ್ಣುಗಳನ್ನು ಮುಚ್ಚಿಕೊ, ನಿಮಿಷಮಾತ್ರದಲ್ಲಿ ಕಾಶ್ಮೀರದೇಶದ ರಾಜನಸಭೆಯಲ್ಲಿರುವಿಯೆಂದು ನುಡಿಯಲು ರಾಜಪುತ್ರನು ಹಾಗೆಯೇ ಮಾಡಿದನು. ಕ್ಷಣಮಾತ್ರದಲ್ಲಿ ರಾಜಸಭೆಯನ್ನು ನೇರಿದನು, ಅಲ್ಲಿನ ರಾಜನೂ, ಸಭಿಕರೂ, ಸುಂದರಾಂಗನಾದ ಈ ರಾಜಪುತ್ರನನ್ನು ಕಂಡು ಆಶ್ಚರ್ಯಪಟ್ಟು, ಈ ಮಹನೀಯನು ಯಾರೊ! ಯಾವ ದೇಶದಿಂದ ಬಂದಿರುವನೊ! ಎಂದು ಯೋಚಿಸಿ ಮರ್ಯಾದೆಯಿಂದ ಉಚಿತಾಸನದಲ್ಲಿ ಕುಳ್ಳಿರಿಸಿ, ಮಹಾತ್ಮಾ! ನೀವು ಯಾವ ಲೋಕದಿಂದ ಬಂದಿರಿ. ನಿಮ್ಮಹೆಸರೇನು? ಎಂದು ಕೇಳಲು ಆ ರಾಜಪುತ್ರನು ತನ್ನ ವರ್ತಮಾನವನೆಲ್ಲಾ ಕಾಶ್ಮೀರಪತಿಗೆ ತಿಳಿಸಿ, ಆ ಮಾಯಾಕಡ್ಡಿಯಿಂದ ಶುಕರೂಪವನ್ನು ಧರಿಸಿ, ನಂಬಿಕೆಯುಂಟಾಗುವಂತೆ ಮಾಡಿದನು. ರಾಜೇಂದ್ರನಿಗೂ ಸಭಿಕರಿಗೂ ಪರಮಾಶ್ಚರ್ಯವಾಯಿತು, ಅನಂತರ ರಾಜನು ರಾಜಕುಮಾರನಾದ ಸೂರ್ಯದತ್ತನನ್ನು ತನ್ನ ಕುವರಿಯು ಅಂತಃಪುರಕ್ಕೆ ಕಳುಹಿಸಿದನು. ತನ್ನ ಪತಿಯಾದ ರಾಜಪುತ್ರನನ್ನು ನೋಡಿದಕೂಡಲೆ, ಆ ಕನಕವೇಣಿಯೆಂಬ ರಾಜಪುತ್ರಿಯು, ಬಡವನಿಗೆ ಐಶ್ವರ್ಯಬಂದಷ್ಟು ಸಂತೋಷದಿಂದ ಆ ಸೂರ್ಯದತ್ತ ಮಹಾರಾಯನನ್ನು ಗಾಢಾಲಿಂಗನ ಮಾಡಿಕೊಂಡು, ಆನಂದಬಾಷ್ಪಗಳನ್ನು ಸುರಿಸುತ್ತ ಸಮೀಪದಲ್ಲಿದ್ದಳು. ಆ ಬಳಿಕ ಸೂರ್ಯದತ್ತನು ತನ್ನ ಪತಿಯಾದ ಕನಕವೇಣಿಯು ಇಷ್ಟದಂತೆ ಸರ್ವಾಲಂಕಾರಭೂಷಿತನಾಗಿ, ಇಬ್ಬರೂ ಅಶ್ವಾರೂಢರಾಗಿ, ತನ್ನನ್ನೆ ಅಹೋರಾತ್ರಿಯೂ ಚಿಂತಿಸುತ್ತ ಕುಷ್ಮವಾಗಿ ಹೋಗಿದ್ದ ವಿಚಿತ್ರವತಿಯನ್ನು ಸಂತೋಷಪಡಿಸಿ, ವಿಚಿತ್ರವತಿಯನ್ನೂ, ಕನಕಾಂಗಿಯನ್ನೂ ಜೊತೆಯಲ್ಲಿ ಕರೆದುಕೊಂಡು, ಜ್ಞಾನಾಂಬಾ ಎಂಬ ನೇತ್ಯೆಯ ಮನೆಗೆ ಹೋಗಿ, ಅವಳನ್ನು ಕುರಿತು, ಎಲ್ಲೆ ಪ್ರಿಯೆ! ನಿಮ್ಮ ತಾಯಿಯಿಂದ ನನಗೆ ಒದಗಿದ ಆಪತ್ತುಗಳನ್ನು ಕೇಳಿದೆಯೊ ಎಂದು ತನ್ನ ವರ್ತಮಾನವನ್ನೆಲ್ಲಾ ತಿಳಿಸಿ ಜ್ಞಾನಾಂಬೆಯನ್ನೂ ತನ್ನೊಂದಿಗೆ ಕರೆದುಕೊಂಡು, ರಾಜಪುತ್ರಿಯಾದ ಕನಕವೇಣಿಯ ಅಂತಃಪುರಕ್ಕೆ ಹೋಗಿ ನೇರಿದನು. ಆ ಪೂರ್ಣೇಂದುವದನೆಯು ಪತಿಯೊಂದಿಗೆ ಬಂದಿರುವ ವಿಚಿತ್ರವತಿಗೆ ನಮಸ್ಕಾರವಂಮಾಡಿ, ಜ್ಞಾನಾಂಬೆಯನ್ನು ಆದರಿಸಿ ಪತಿಯೊಂದಿಗೆ ಪರಮ ಸಂತೋಷವಿಂದಿದ್ದಳು. ಕಾಶ್ಮೀರಾಧೀಶನಾದರೊ, ತನ್ನ ಪುತ್ರಿಯಾದ ಕನಕವೇಣಿಗೂ, ವಿಚಿತ್ರವತಿಗೂ. ಸೂರ್ಯದತ್ತನಿಗೂ ಮಂಗಳಸ್ನಾನವಂ ಮಾಡಿಸಿ, ಶುಭಮುಹೂರ್ತದಲ್ಲಿ ಅತ್ಯಂತ ವೈಭವದಿಂದ ವಿವಾಹಮಹೋತ್ಸವವನ್ನು ಬಳಿಯಿಸಿದನು. ಆ ಸೂರ್ಯದತ್ತನು ಅಲ್ಲಿಯೇ ಕೆಲವು ದಿನಗಳು ಸಂತೋಷದಿಂದಿದ್ದನು. ಕನಕವೇಣಿಯು ಪೆತ್ತ ಮಗುವಿಗೆ ದ್ಯುಮತ್ಸೇನನೆಂದು ನಾಮಕರಣವಂ ಮಾಡಿದರು. ಅನಂತರ ಸೂರ್ಯದತ್ತನು ತನ್ನ

ಲ್ಲಿ ಕರೆದುಕೊಂಡು, ವಿಧವಿಧವಾದ ಸುವರ್ಣರಹಿತ ನವರತ್ನಾಭರಣಂಗಳನ್ನೂ, ಹತ್ತುಕೋಟಿ ಧನವನ್ನೂ ತೆಗೆಯಿಸಿಕೊಂಡು, ಚತುರಂಗಬಲಸಮೇತನಾಗಿ ಹೊರಟು, ಕಾಶೀ ಪಟ್ಟಣವನ್ನು ಸೇರಿದನು. ಅಲ್ಲಿ ಅರ್ಧಯೋಜನದ ವರೆಗೂ ತನ್ನ ಸೈನ್ಯವನ್ನೆಲ್ಲಾ ನಿಲ್ಲಿಸಿ, ವಿಚಿತ್ರವತಿಯನ್ನೂ ಕನಕಾಂಗಿಯನ್ನೂ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಅವರ ತಾಯಿತಂದೆಗಳ ಬಳಿಗೆ ಕಳುಹಿಸಿದನು. ವಿಚಿತ್ರವತಿಯು ಕನಕಾಂಗಿಯೊಂದಿಗೆ ತನ್ನ ತಾಯಿಯ ಅಂತಃಪುರಕ್ಕೆ ಹೋಗಿ ತಾಯಿಗೆ ನಮಸ್ಕಾರಮಾಡಿದಳು. ಮಗಳನ್ನು ಕಂಡು ಪರಮ ಸಂತೋಷದಿಂದ ರಾಣಿಯು ಗಾಢಾಲಿಂಗನಮಾಡಿಕೊಂಡು, ಪುತ್ರಿಯೇ! ನೀನು ಎಂಥಾ ದೊಗ್ಗಳಿಯು. ನಿನ್ನಿಂದ ನಮ್ಮ ವಂಶಕ್ಕೇ ಅಪಕೀರ್ತಿಯುಂಟಾಯಿತು. ನಿನ್ನ ತಂದೆಯು ಈ ದುಃಖವನ್ನು ಸಹಿಸಲಾರದೆ ಸಭೆಗೇ ಹೋಗದಿರುವನು. ಬಂದ ಸುದ್ದಿಯನ್ನು ಕೇಳಿದರೆ ನಿನ್ನನ್ನು ಏನುಮಾಡುವನೊ ಕಾಣೆನೆಂದು ಚಿಂತಾಕ್ರಾಂತಳಾಗಿದ್ದಳು. ಆಗ ವಿಚಿತ್ರವತಿಯು ತಾಯಿಯನ್ನು ಕುರಿತು ನಡೆದ ವರ್ತಮಾನವನ್ನೂ ಮಂತ್ರಿಯಾದ ಸುನೀತಿಯ ದೊಗ್ಗಳಚಿಂತನೆಯನ್ನೂ ಹೇಳಿದಳು. ರಾಣಿಯು ಪರಮ ಸಂತೋಷದಿಂದ ಕುವರಿಯನ್ನು ತಬ್ಬಿಕೊಂಡು, ಮಗಳನ್ನೂ ಕನಕವೇಣಿಯನ್ನೂ ತನ್ನ ಜೊತೆಯಲ್ಲಿಯೇ ಕರೆದುಕೊಂಡು, ರಾಜನ ಬಳಿಗೆ ಹೋಗಿ ನಡೆದ ವರ್ತಮಾನವನ್ನೆಲ್ಲಾ ತಿಳಿಸಿದಳು. ರಾಜೇಂದ್ರನು ಪರಮ ಸಂತೋಷದಿಂದ ಮಗಳನ್ನೂ ಕನಕವೇಣಿಯನ್ನೂ ಆದರಿಸಿದನು. ಅನಂತರ ಅವರಿರ್ವರನ್ನೂ ಕರೆದುಕೊಂಡು ಸಭಿಕರೊಂದಿಗೆ ಸೂರ್ಯದತ್ತನ ಬಿಡಾರಕ್ಕೆ ಹೋಗಿ, ದೇವೇಂದ್ರನಂತೆ ಪ್ರಕಾಶಿಸುತ್ತಿದ್ದ ಸೂರ್ಯದತ್ತ ಮಹಾರಾಯನನ್ನು ಕಂಡು ಆಲಿಂಗನಮಾಡಿಕೊಂಡು, ಆಳಿಯನಿಂದ ಎಲ್ಲ ವರ್ತಮಾನವನ್ನೂ ತಿಳಿದುಕೊಂಡನು. ಕಾಶೀರಾಜನು ಸೂರ್ಯದತ್ತನ ವರ್ತಮಾನವನ್ನೆಲ್ಲಾ ಕೇಳಿ, ಸಂತೋಷ ಸಮುದ್ರದಲ್ಲಿ ಮಗ್ನನಾಗಿ, ಪುಣ್ಯಾತ್ಮಾ! ಸುನೀತಿಯ ದುರಾಲೋಚನೆಯಿಂದ ನೀನು ಇಷ್ಟೊಂದು ಸಂಕಟಪಡಬೇಕಾಯಿತಲ್ಲಾ! ಒಳ್ಳೇದು ಇರಲಿ! ನಾನು ಅವನಿಗೆ ತಕ್ಕ ಪ್ರತೀಕಾರವನ್ನು ಮಾಡುವೆನೆಂದು ನುಡಿದು, ಕನಕವೇಣಿಯನು ಆದರಿಸಿ ಆ ಕನಕವೇಣಿಯ ಮಗುವನ್ನು ಮುತ್ತಿಟ್ಟುಕೊಂಡು, ಎಲ್ಲರನ್ನೂ ಕರೆದುಕೊಂಡು ಪಟ್ಟಣಕ್ಕೆ ಹೋದನು. ಅನಂತರ ಆ ಸೂರ್ಯದತ್ತನ ತಾಯಿಯನ್ನು ಕರೆಯಿಸಿ, ಅಮ್ಮಾ! ನಿನ್ನಿಂದಲ್ಲವೆ ಇಷ್ಟು ಸಂಕಟಗಳುಂಟಾಯಿತೆಂದನು. ಸೂರ್ಯದತ್ತನು ಇಬ್ಬರು ಸತಿಯರೊಂದಿಗೆ ತಾಯಿಗೆ ನಮಸ್ಕಾರಮಾಡಿ ನಡೆದ ವರ್ತಮಾನವನ್ನೆಲ್ಲಾ ವಿವರಿಸಿದನು. ಅನಂತರ ಕಾಶೀರಾಧೀಶನು ತನ್ನ ಕುವರಿಯಾದ ವಿಚಿತ್ರವತಿಗೆ ವಿವಾಹಮಹೋತ್ಸವ

ವನ್ನು ಬಳೆಯಿಸುವಂತೆಯೂ, ಸೂರ್ಯದತ್ತ ಮಹಾರಾಯನನ್ನ ಕರೆದು ಕೊಂಡು ಬರಬೇಕೆಂದೂ ಸುನೀತಿಗೆ ಶುಭಲೇಖನವನ್ನ ಬರೆಯಿಸಿದನು. ಸುನೀತಿಯು ಅತ್ಯಂತ ಸಂತೋಷದಿಂದ ಮಗನನ್ನೂ ಕರೆದುಕೊಂಡು ಚತುರಂಗ ಬಲ ಸಮೇತನಾಗಿ ಬಂಧುವರ್ಗದೊಂದಿಗೆ ಪ್ರಯಾಣವಮಾಡಿ, ಕೆಲವು ದಿನಗಳಲ್ಲಿ ಕಾಶೀ ಪಟ್ಟಣವನ್ನು ಸೇರಿ, ತನಿಗಾಗಿ ಏರ್ಪಡಿಸಿದ್ದ ಬಿಡಾರದಲ್ಲಿಳಿದು ಮಜ್ಜನ ಭೋಜನಾದಿಗಳನ್ನು ತೀರಿಸಿಕೊಂಡು ಮರುದಿನ ಬೆಳಿಗ್ಗೆ ರಾಜಸಭೆಗೆ ಹೋಗಿ, ಕಾಶೀರಾಜನ ದರ್ಶನವಂ ಮಾಡಿಕೊಂಡನು. ರಾಜನಾದರೊ, ಸುನೀತಿಯನ್ನು ಕರೆದು, ಮಂತ್ರಿಶ್ರೇಷ್ಠನೆ ! ಸೂರ್ಯದತ್ತ ಮಹಾರಾಯನೆಲ್ಲೆಂದು ಕೇಳಲು ಇವನೇ ಸೂರ್ಯದತ್ತನೆಂದು ಮಗನನ್ನು ತೋರಿಸಿದನು. ಕಾಶೀರಾಜನಿಗೆ ಬಹು ಕೋಪಬಂದು ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ನೀಚನೆ! ಹಂದಿ ಎಷ್ಟುದೊಡ್ಡದಾಗರೆತಾನೆ ಅನೆಗೆ ಸಮನಾಬೀತು! ಅಲ್ಪನಿಗೆ ಎಷ್ಟು ಐಶ್ವರ್ಯಬಂದರೆತಾನೆ ಅವನು ಐಶ್ವರ್ಯವಂತನೆನ್ನಿಸಿಕೊಂಡಾನು! ನೀನು ಮಾಡಿರುವ ದ್ರೋಹವೆಲ್ಲವೂ ನನಗೆ ತಿಳಿಯೆ ಬಂದಿದೆ. ನೀನು ಸೂರ್ಯದತ್ತನನ್ನು ನೋಡೆಂದು ಅಳಿಯನನ್ನು ತೋರಿಸಿದನು. ಮಂತ್ರಿಯಾದ ಸುನೀತಿಯು ಸೂರ್ಯದತ್ತ ಮಹಾರಾಯನನ್ನು ನೋಡಿದ ಮಾತ್ರಕ್ಕೇ ಎದೆಯ ಗುಂಡಿಗೆಯು ಒಡೆದು, ಬಾಯೊಡೊದಲಿನಿಂದ ಏನೂ ಮಾತನಾಡಲಾರದೆ ಗಡಗಡನೆ ನಡುಗುತ್ತಾ, ತಲೆಯನ್ನು ಬಾಗಿಸಿ ನಿಂತನು. ಕಾಶೀರಾಜನು ದುರಾತ್ಮನಾದ ಆ ಮಂತ್ರಿಯನ್ನು ಪಟ್ಟದಾನೆಯ ಕಾಲಿಗೆ ಕಟ್ಟಿಸಿ, ಬೇದಿಬೇಡಿಯಲ್ಲಿಯೂ ಎಳದಾಡಿಸಿ, ಆ ಮಂತ್ರಿಕುಮಾರನನ್ನು ಬಂಧುವರ್ಗದೊಂದಿಗೆ ಕಾರಾಗೃಹದಲ್ಲಿಡಿಸಿ, ಚತುರಂಗ ಬಲವನ್ನೂ ಬೆದರಿಸಿ, ಸೂರ್ಯದತ್ತನಿಗೆ ವಶವರ್ತಿಗಳಾಗುವಂತೆ ಮಾಡಿ, ಶುಭಮುಹೂರ್ತದಲ್ಲಿ ತನ್ನ ಪುತ್ರಿಯಾದ ವಿಚಿತ್ರವತಿಯನ್ನು ಸೂರ್ಯದತ್ತಮಹಾರಾಯನಿಗೆ ಕೊಟ್ಟು ಬಹಳ ಅಬ್ಬರದಿಂದ ವಿವಾಹಮಹೋತ್ಸವವನ್ನು ಬಳೆಯಿಸಿದನು. ಅಳಿಯನಾದ ಸೂರ್ಯದತ್ತಮಹಾರಾಯನಿಗೂ, ಪುತ್ರಿಕಾ ರತ್ನವಾದ ವಿಚಿತ್ರವತಿಗೂ, ಕನಕವೇಣಿಗೂ ಅಮೂಲ್ಯವಾದ ರತ್ನಾಭರಣಂಗಳನ್ನೂ, ದಿವ್ಯದುಕೂಲಗಳನ್ನೂ ಚತುರಂಗಬಲವನ್ನೂ ಕೊಟ್ಟು ಸಂತೋಷ ಸಮುದ್ರದಲ್ಲಿ ಮುಳುಗಿದ್ದರು.

ಆ ಸೂರ್ಯದತ್ತ ಮಹಾರಾಯನು ಬಹಳ ಸಂತೋಷದಿಂದ ತನ್ನ ತಾಯಿಯನ್ನೂ, ಹೆಂಡತಿಯೆರನ್ನೂ, ಜ್ಞಾನಾಂಬ ಕನಕಾಂಬ ಎಂಬುವರನ್ನೂ, ಜೊತೆಯಲ್ಲಿ ಕರೆದುಕೊಂಡು, ಕೋಟಿಪ್ರಕಾರವಾದ ಧನವನ್ನೂ, ಚತುರಂಗ ಬಲವನ್ನೂ ಜೊತೆಮಾಡಿಕೊಂಡು [illegible]

ನ್ನ ದೇಶಕ್ಕೆ ಹೋಗಿ ಸೇರಿಸನು. ಅಲ್ಲಿ ತನ್ನ ರಾಜ್ಯವನ್ನೆಲ್ಲಾ ಸ್ವಾಧೀನ ಮಾಡಿಕೊಂಡು, ತನಗೆ ಬಾಲ್ಯಸ್ನೇಹಿತನಾಗಿದ್ದ ಶತಕೀರ್ತಿಯನ್ನು ಆಪ್ತ ಮಂತ್ರಿಯನ್ನಾಗಿ ಮಾಡಿಕೊಂಡು, ನೀಚರಾದ ಸಚಿವರನ್ನೆಲ್ಲಾ ಯಮುನ ಅರಮನೆಗೆ ಕಳುಹಿಸಿ, ಪೌರಜನರಿಗೆ ಸಂತೋಷವನ್ನುಂಟುಮಾಡುತ್ತಾ, ಚತುರಂಗ ಬಲಸಮೇತನಾಗಿ ದೇಶದೇಶಗಳಿಗೂ ದಂಡೆತ್ತಿ ಹೋಗಿ, ಸಕಲ ರಾಜರನ್ನೂ ಗೆದ್ದು, ಅವರಿಂದ ಕಪ್ಪಕಾಣಿಕೆಗಳನ್ನೂ ತೆಗೆದುಕೊಳ್ಳುತ್ತಾ ಮಂಡಲೇಶ್ವರನೆನ್ನಿಸಿಕೊಂಡು, ತನ್ನ ಕೀರ್ತಿಯನ್ನು ಅಷ್ಟದಿಕ್ಕುಗಳಿಗೂ ಪಸರಿಸಿದನು. ಅನೇಕ ಯಾಗಗಳನ್ನೂ ಮಾಡಿ ದೇವತೆಗಳನ್ನೂ ಬ್ರಾಹ್ಮಣರನ್ನೂ ತೃಪ್ತಿಪಡಿಸಿದನು. ತನ್ನ ದೇಶದಲ್ಲಿ ಧರ್ಮವನ್ನು ನಾಲ್ಕು ಪಾದಗಳಿಂದಲೂ ನಡೆಯಿಸುತ್ತ, ನಾರಾಯಣ ಮಹರ್ಷಿಯಿಂದ ಲಭಿಸಿದ ಏಕಪತ್ನೀವ್ರತವನ್ನು ಕೊಂಡಾಡಿ, ಗುರುವನ್ನು ಸ್ಮರಿಸುತ್ತಾ, ಜ್ಞಾನಿಗಳನ್ನೂ ಯೋಗಿಗಳನ್ನೂ ಪೂಜಿಸುತ್ತಾ, ಬಹು ದಿನಗಳು ರಾಜ್ಯಭಾರವನ್ನು ಮಾಡಿ, ಚಿತ್ರವತಿ ಕನಕವೇಣಿಯರೊಂದಿಗೆ ಭೋಗಭಾಗ್ಯಗಳನ್ನನುಭವಿಸಿ, ಅನಂತರ ಈ ದೇಹವನ್ನು ಬಿಟ್ಟು ಮುಕ್ತಿಯನ್ನು ಪಡೆದನೆಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದನು. ಆಗ ಅರ್ಜುನನು ಕೃಷ್ಣಮೂರ್ತಿಯನ್ನು ಕುರಿತು, ಮಹಾನುಭಾವನೆ! ನಿನ್ನ ದಯೆಯಿಂದ ಏಕಪತ್ನೀವ್ರತಾವನ್ನುಳಿದು ನಾನು ಧನ್ಯನಾದೆನು. ಸೂರ್ಯದತ್ತಮಹಾರಾಯನ ಚರಿತ್ರೆಯು ಅತ್ಯದ್ಭುತವಾದದ್ದು. ಇದನ್ನು ಕೇಳಿ ನಾನು ಕೃತಕೃತ್ಯನಾದೆನು. ಮಹಾನುಭಾವನೆ! ನಿದ್ರೆಯು ಕಣ್ಣುಗಳನ್ನು ಮುಚ್ಚುತ್ತಿರುವುದು. ಬಾ. ನಿದ್ರೆಮಾಡೋಣವೆನ್ನಲು, ಶ್ರೀ ಕೃಷ್ಣನೂ ಒಪ್ಪಿ, ಇಬ್ಬರೂ ಸುಖನಿದ್ರೆಯಲ್ಲಿ ಮಗ್ನರಾದರೆಂಬಲ್ಲಿಗೆ ಶ್ರೀ ಕೃಷ್ಣಚೋಳಧಾವ್ಯತ ಸಾರದೊಳು ಮನ್ನೂರನೆಯ ಕಥೆಯು ಸಂಪೂರ್ಣವಾದುದು.

ಹನ್ನೆರಡನೆಯ ಕಥಾಪ್ರಾರಂಭವು.

ಆನಂತರದಲ್ಲಿ ಆ ರಾತ್ರಿ ಕೃಷ್ಣಾರ್ಜುನರಿಬ್ಬರೂ ಆ ಯಮುನಾನದೀ ದಡದಲ್ಲಿರುವ ಮರಳಿನಿಬ್ಬದ ಮೇಲೆ ಕುಳಿತು, ಸುಗಂಧಪರಿಮಳವನ್ನು ಬಳಿದುಕೊಂಡು, ತಾಂಬೂಲವನ್ನು ಸೇವಿಸುತ್ತಾ, ಸುಖದಿಂದ ಇರುವಲ್ಲಿ, ಶ್ರೀ ಕೃಷ್ಣಸ್ವಾಮಿಯನ್ನು ಕುರಿತು, ಅರ್ಜುನನು- ದೇವಾದಿದೇವನೆ! ದುರಿತವಿನಾಶಕನೆ! ಭಕ್ತಜನರಕ್ಷಕನೆ! ಜನನಮರಣ ಸ್ರವಾಹದಿಂದ ದಾಟಿ, ಶಾಶ್ವತಮುಕ್ತಿಯು ನನಗುಂಟಾಗುವಂತೆ ಅಚಲಪರಿಪೂರ್ಣ ಬ್ರಹ್ಮವನ್ನು ಕುರಿತು, ಒಂದಾನೊಂದು ಪುಣ್ಯಚರಿತ್ರೆಯನ್ನು

ಬೋಧಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡೆಂದು ಕೇಳಿಕೊಂಡನು. ಕೃಷ್ಣ ಭಗವಂತನಾದರೊ, ಮಂದಹಾಸವಿಂದಕೂಡಿದ ಮುಖವುಳ್ಳವನಾಗಿ ಧರ್ಮತನುಜಾ! ಮೂರುಲೋಕಗಳಿಗೂ ಅಸಾಧ್ಯವಾದ ಪ್ರಶ್ನೆಮಾಡಿದೆ. ಅಹಾ! ನೀನು ನನಗೆ ಪ್ರಾಣಪ್ರಿಯವು, ಆದುದರಿಂದ ನಿನ್ನ ಮೇಲಿನ ಕರುಣೆಯಿಂದ, ನಮ್ಮ ಗುರುವಾದ ಸಾಂದೀಪಮಹಾಮುನಿಗೆ ಸಾಷ್ಟಾಂಗ ದಂಡಪ್ರಣಾಮಮಂಗಳನ್ನರ್ಪಿಸಿ, ಆ ಪರಮರಹಸ್ಯವನ್ನು ನಾನು ನಿನಗೆ ಬೋಧಿಸುವೆನು, ನಿರ್ಮಲಚಿತ್ತನಾಗಿ ಚಂದ್ರಕೇತುಮಹಾರಾಯನ ಚರಿತ್ರೆಯನ್ನು ಕೇಳೆಂದು ಇಂತೆಂದನು.

ಚಂದ್ರಕೇತು ಮಹಾರಾಯನ ಕಥೆಯು.

ಕೇಳೈ ಅರ್ಜುನಾ! ಪೂರ್ವದಲ್ಲಿ ಪಾಟಲೀಪುರವನ್ನು ಸೂರ್ಯಕೇತು ವೆಂಬ ಮಹಾರಾಜನು ಆಳುತ್ತಿದ್ದನು ಅವನಿಗೆ ಬಾಳ ಸುಂದರನಾದ ಒಬ್ಬ ಮಗನು ಹುಟ್ಟಿದನು. ರಾಜನು ಆ ಶಿಶುವಿಗೆ ಚಂದ್ರಕೇತುವೆಂದು ನಾಮಕರಣವಂ ಮಾಡಿದನು, ಅನೇಕ ಬ್ರಾಹ್ಮಣರಿಗೂ ಗುರುಹಿರಿಯರಿಗೂ ಬೇಕುಬೇಕಾದ ದಾನಧರ್ಮಗಳನ್ನು ಮಾಡಿದನು. ಆ ಮಗುವನ್ನು ಅತ್ಯಂತಪ್ರೇಮದಿಂದ ಸಾಕುತ್ತಿದ್ದನು, ಆ ಮಗುವಿಗೆ ಐದನೇವರ್ಷವು ಆರಂಭಿಸಲು, ರಾಜನು ಆ ಸುಕುಮಾರನಿಗೆ ವಿದ್ಯಾಭ್ಯಾಸವನ್ನು ಆರಂಭಿಸಿದನು. ಆ ಸುಂದರನಾದ ಬಾಲನು ಸಕಲ ಧರ್ಮಶಾಸ್ತ್ರಗಳಲ್ಲಿಯೂ ಪಂಡಿತನಾದನು, ಧನುರ್ವಿದ್ಯೆಯಲ್ಲಿ ಅಗ್ರಗಣ್ಯನೆಂದೆನಿಸಿಕೊಂಡನು, ವಿವಾಸ್ತ್ರಪ್ರಯೋಗಗಳನ್ನೂ, ಅವುಗಳ ಉಪಸಂಹಾರಕ್ರಮವನ್ನೂ, ವ್ಯೂಹರಚನೆಯನ್ನೂ, ಅದನ್ನು ಭೇದಿಸುವಿಕೆಯನ್ನೂ ಚನ್ನಾಗಿ ತಿಳಿದನು. ಈ ರೀತಿ ಸಕಲವಿದ್ಯೆಗಳಲ್ಲಿಯೂ ಪರಿಣತಿಯನ್ನು ಪಡೆದು, ಬಾಲ್ಯವಯಸ್ಕನಾದ ಆ ಚಂದ್ರಕೇತುವು, ಭೂಸಂಚಾರ ಮಾಡಬೇಕೆಂದುದ್ಯುಕ್ತನಾಗಿ, ತನಗೆ ಬೇಕಾದಷ್ಟು ಧನ ವಸ್ತ್ರಾಭರಣಗಳನ್ನು ತೆಗೆದುಕೊಂಡು, ಅರ್ಧರಾತ್ರಿಯಲ್ಲಿ ಯಾರಿಗೂ ಹೇಳದಂತೆ ಅಶ್ವಾರೂಢನಾಗಿ ಉತ್ತರದಿಕ್ಕಿಗೆ ಅಭಿಮುಖನಾಗಿ ಪ್ರಯಾಣಮಾಡಿ ಬಹು ಜಾಗ್ರತೆಯಾಗಿ ಹೋಗುತ್ತಿದ್ದನು, ಬೆಳಗಾದನಮೇಲೆ ಅರಮನೆಯಲ್ಲಿ ಜನನೀಜನಕರು ಚಂದ್ರಕೇತುವನ್ನು ಕಾಣದೆ ಪಟ್ಟಣವನ್ನೆಲ್ಲ ಹುಡುಕಿಸಿದರೂ ಚಂದ್ರಕೇತುವಿನ ಸುದ್ದಿಯೆನ್ನು ಹೇಳುವವರೇ ಇಲ್ಲದಿರಲು, ಇವನು ಭೂಸಂಚಾರಕ್ಕಾಗಿ ಹೊರಟಿರಬೇಕೆಂದು ಜನನೀಜನಕರು ಯೋಚಿಸಿ, ದಿಕ್ಕುದಿಕ್ಕುಗಳಿಗೂ ದೂತರನ್ನು ಅಟ್ಟಿದರು. ಚಂದ್ರಕೇತುವು ಎಲ್ಲಿಯೂ ಸಿಕ್ಕಲಿಲ್ಲ. ರಾಜನೂ ರಾಜಪತ್ನಿಯೂ ಬಹಳವಾಗಿ ದುಃಖಿಸುತ್ತಿದ್ದರು. ಅತ್ತ ಚಂದ್ರಕೇತು ಮಹಾರಾಯನಾದರೊ

ಆ ದೂತರಿಗೆ ಕಾಣದೆ, ನಿರ್ಭಯವಾಗಿ ದಟ್ಟವಾದ ಕಾಡುಮೇಡುಗಳಲ್ಲಿ ಅಲೆಯುತ್ತಾ, ಎದುರಾಗಿ ಬರುವ ಹೆಬ್ಬುಲಿಗಳನ್ನು ಕೊಲ್ಲುತ್ತಾ, ಕರಡಿಗಳನ್ನು ಓಡಿಸುತ್ತಾ, ಮದದಾನೆಗಳ ಸೊಂಡಲುಗಳನ್ನು ಕಡಿದು ಕಳಗೆ ಹಾಕುತ್ತಾ, ಜೇನು ಬಾಳೆಹಣ್ಣುಗಳನ್ನು ತಿನ್ನುತ್ತಾ, ಹಲಸು ಮಾವುಗಳನ್ನು ಭಕ್ಷಿಸಿ, ತೀರ್ಥವಾಗಿಯೂ ತಣ್ಣಗೂ ಇರುವ ನೀರನ್ನು ಕುಡಿಯುತ್ತಾ, ಅಲ್ಲಲ್ಲಿ ಸಿಕ್ಕುವ ಪ್ರವಾಹಗಳಲ್ಲಿ ಈಜಾಡುತ್ತಾ, ಅಲ್ಲಲ್ಲಿ ಸಿಕ್ಕುವ ಸುವಾಸನೆಯಾದ ಹೂಗಳನ್ನು ಕೊಯ್ದು ಆಘ್ರಾಣಿಸುತ್ತಾ, ಮೂರುತಿಂಗಳ ವರೆಗೆ ಬಹುದೂರ ಪ್ರಯಾಣಮಾಡಿದರೂ ಒಂದು ಪಟ್ಟಣವಾಗಲಿ, ಹಳ್ಳಿಯಾಗಲೀ ಕಾಣದಿರಲು ಚಿಂತಾಕ್ರಾಂತನಾಗಿ ಮಾನವಭೂಮಿಯನ್ನು ದಾಟಿ ದೇವಭೂಮಿಗೆ ಬಂದನು. ಅಲ್ಲಿಂದ ಮುಂದಕ್ಕೆ ಹೋಗುತ್ತಿರುವಲ್ಲಿ ದಿವ್ಯವಾದ ನವರತ್ನಗಳು ಕಾಣಬಂದವು. ಅವುಗಳನ್ನು ನೋಡುತ್ತಾ ಮುಂದೆ ಹೊರಡಲು ದೇವಕನ್ಯಮಗಳ ಸೊಬಗನ್ನು ನೋಡಿ ಆಘ್ರಾಣಿಸುತ್ತಾ ಮುಂದೆ ಹೊರಡಲು, ಸ್ಫಟಿಕ ಶಿಲೆಯಿಂದ ಕಟ್ಟಿದ ಸೋಪಾನವುಳ್ಳದ್ದಾಗಿಯೂ, ಹಾಲಿನಂತೆ ತಿಳಿಯಾದ ನೀರಿನ ಮಧ್ಯಭಾಗದಲ್ಲಿರುವ ತಾವರೆಕಮಲಗಳ ಮನೋಹರತೆಯಿಂದ ಆನಂದದಾಯಕವಾಗಿಯೂ ಇರುವ ದಿವ್ಯ ಸರಸ್ಸನ್ನು ಕಂಡು, ಕುದುರೆಯಿಂದಿಳಿದು, ಸರೋವರದಲ್ಲಿ ಸ್ನಾನಪಾನಗಳನ್ನು ತೀರಿಸಿಕೊಂಡು, ಇದು ದೇವತಾಸರೋವರವೆಂದು ಆನಂದದಿಂದ ಅದರ ಸೋಪಾನದಮೇಲೆ ಮಲಗುವಾಗ ಸಂಧ್ಯಾಕಾಲವಾಗಿತ್ತು. ಸ್ವಲ್ಪ ಹೊತ್ತಾದ ಮೇಲೆ ದೇವವಾದ್ಯಗಳೂ ಕೋಲಾಹಲ ಧ್ವನಿಯೂ ಕೇಳಿಬಂದವು. ಚಂದ್ರಕೇತುವು ತಟ್ಟನೆ ಎದ್ದು ಕುಳಿತನು. ಆಹಾ! ಇದು ದೇವವಾದ್ಯವು. ಯಾರೊ ಗುಂಪುಗುಂಪಾಗಿ ಸರೋವರಕ್ಕೆ ಬರುತ್ತಿರುವರೆಂದು ಯೋಚಿಸುತ್ತಿರುವಷ್ಟರಲ್ಲಿಯೇ ಪೂರ್ವದಿಕ್ಕಿನಲ್ಲಿ ಬಹು ಬೊಡ್ಡದಾದ ತೇಜಸ್ಸುಂಟಾಯಿತು. ಇದರಿಂದ ಚಂದ್ರಕೇತುವಿನ ಕಣ್ಣುಗಳು ತೆರೆಯಲ್ಪಡಲಾರದೆ ಹೋಗಿ ಚಂದ್ರಕೇತುವು ನಿಶ್ಚೇಷ್ಟಿತನಾದನು ಸ್ವಲ್ಪ ಹೊತ್ತಿನೊಳಗಾಗಿ ಅನೇಕ ಸ್ತ್ರೀಯರು ಗುಂಪಾಗಿ ಬಂದು, ಆ ದಿವ್ಯಸರಸ್ಸಿನಲ್ಲಿಳಿದು, ಜಲಕ್ರೀಡೆಯನ್ನು ಆಡುತ್ತಾ ಸ್ವೇಚ್ಛೆಯಾಗಿ ಮಾತನಾಡಿಕೊಳ್ಳುತ್ತಾ, ಪಕಪಕನೆ ನಗುತ್ತಾ, ಬಹು ಸಡಗರದಿಂದಿರುವುದನ್ನು ಚಂದ್ರಕೇತುವು ನೋಡಬೇಕೆಂದರೂ ತನ್ನ ಕಣ್ಣುಗಳನ್ನು ತೆರೆಯಲಾರದೆ ಹೋದನು. ರಾಜಪುತ್ರನು ಅಲ್ಲಿಯೇ ಮಲಗಿದರೂ ನಿದ್ರೆಹತ್ತದೆ ಕೋಲಾಹಲ ಧ್ವನಿಯಿಂದ ಆನಂದಿಸುತ್ತಿದ್ದನು. ಇದರಿಂದ ಆ ರಾತ್ರಿಯೆಲ್ಲಾ ನಿದ್ರೆಯೇ ಹತ್ತಲಿಲ್ಲ. ಬೆಳಗಾದಮೇಲೆ ರಾಜಪುತ್ರನು ಕಣ್ತೆರೆದು ನೋಡುವಲ್ಲಿ ಅಲ್ಲೆಲ್ಲಾ ದೇವಕನ್ಯಮಗಳು ಬಿದ್ದಿದ್ದವು. ಆಗ ರಾಜಪುತ್ರನು ಆಹಾ!

ಈ ಕುಸುಮುಂಗಳನ್ನು ನೋಡಿದರೆ ನಿನ್ನೆ ರಾತ್ರಿ ಇಲ್ಲಿಗೆ ದೇವಕನ್ನಿಕೆಯರು ಬಂದಿದ್ದಂತೆ ತೋರುವುದು, ಅವರ ಪ್ರಭಾವದಿಂದ ನನಗೆ ನಿನ್ನೆ ಕಣ್ಣೆರೆಯದಂತಾಗಿರಬೇಕು, ಇದನ್ನು ನಾನು ಯಾರಿಂದ ತಿಳಿದುಕೊಳ್ಳಲಿ, ದೇವರೇಯೆಂದು ಚಿಂತಿಸುತ್ತಾ, ಮುಂದೆ ಹೋಗುತ್ತಿರುವಲ್ಲಿ ಕೆಲವುದಿನಗಳಿಗೆ ಭೃಗುಮುಪರ್ಷಿಯು ಆಶ್ರಮವು ಸಿಕ್ಕಿತು, ಅಲ್ಲಿ ಓಡಾಡುತ್ತಲಿದ್ದ ಮುನಿಶಿಷ್ಯರಿಂದ ಮುನೀಂದ್ರನ ಪ್ರಭಾವವನ್ನೆಲ್ಲಾ ತಿಳಿದನು, ಅನಂತರ ರಾಜಪುತ್ರನಾದ ಚಂದ್ರಕೇತುವು ತನ್ನಲ್ಲಿ ತಾನೆ, ಆಹಾ! ನಾನು ಈ ಮುಪರ್ಷಿಯಿಂದ ನನ್ನ ಮನಃಸಂಶಯವನ್ನು ಹೋಗಲಾಡಿಸಿಕೊಳ್ಳಬೇಕೆಂದು ಯೋಚಿಸಿ, ಮುನಿನಾಥನ ಪಾದಾರವಿಂದಗಳಿಗೆ ಅಡ್ಡಬಿದ್ದನು, ತಪಶ್ರೇಷ್ಠನಾದ ಭೃಗುವು ರಾಜಪುತ್ರನನ್ನು ಆದರಿಸಿ, ರಾಜನಂದನಾ! ನೀನು ಯಾರು? ನಿಮ್ಮತಾಯಿತಂದೆಗಳು ಯಾರು? ಈ ದೇವಭೂಮಿಗೆ ಮಾನವರು ಬರಬಹುದೆ? ನೀನು ಬಾಲಭಾವದಿಂದ ತಿಳಿಯುವೆ ಇಲ್ಲಿಗೆಬಂದಿರುವೆ, ಹೊರಡು ಎಂದನು, ಆಗ ರಾಜಪುತ್ರನು ಆ ಮುಪರ್ಷಿಗೆ ತನ್ನ ತಾಯಿ ತಂದೆಗಳ ಹೆಸರನ್ನೂ, ತನ್ನದೇಶವನ್ನೂ ಹೇಳಿ, ಮಹಾನುಭಾವನೆ! ನಾನು ಒಂದು ಸರೋವರವನ್ನು ನೋಡಿದನು. ಅಲ್ಲಿ ವಿಶ್ರಮಿಸಿಕೊಳ್ಳುತ್ತಿರುವಾಗ ಹೆಚ್ಚಾದ ಬೆಳಕುಂಟಾಗಿ ನನ್ನ ಕಣ್ಣುಗಳು ಕಾಣದಂತಾದವು, ದಿವ್ಯವಾದ ಘೋಷವೂ, ಸ್ತ್ರೀಯೆರು ಜಲಕ್ರೀಡೆಯನ್ನಾಡುವ ವಿನೋದವೂ, ಸ್ತ್ರೀಯೆರ ಮಧುರ ವಾಕ್ಯಗಳೂ ಕೇಳಿ ಬಂದವು, ಮಹಾನುಭಾವನೆ! ನನ್ನ ಕಣ್ಣುಗಳು ಮುಚ್ಚಿ ನಾನು ಅದನ್ನು ನೋಡದಂತಾಗಲು ಕಾರಣವೇನೆಂದು ಪ್ರಶ್ನೆ ಮಾಡಿದನು, ಆ ಮುನಿಯು ತನ್ನ ಮನದಲ್ಲಿ ಆಹಾ! ಈ ರಾಜಪುತ್ರನಿಗೆ ನಾನು ಸರಿಯಾದ ಉತ್ತರವನ್ನು ಹೇಳಿದರೆ ಕಾವೋದ್ರೇಕವುಂಟಾಗಿ ಪ್ರಾಣಗಳನ್ನೇ ಕಳೆದುಕೊಂಡಾನು! ಮುಂದೆ ಅಪಾಯವಾದೀತೆಂದು ಚಿಂತಿಸಿ, ಕಠಿನವಾಕ್ಯಗಳಿಂದಲೇ ಇವನ ಮನಸ್ಸನ್ನು ಭೇದಿಸಿ, ತಾಯಿತಂದೆಗಳ ಬಳಿಗೆ ಕಳುಹಿಸಬೇಕೆಂದು ಅಂದುಕೊಂಡು, ರಾಜಾತ್ಮಜಾ! ನೀನು ನಿನ್ನ ತಾಯಿತಂದೆಗಳನ್ನು ಬಿಟ್ಟು ಈ ದೇವಭೂಮಿಗೆ ಬಂದದ್ದೇ ದೊಡ್ಡತಪ್ಪಾಗಿದೆ, ಇದರಮೇಲೆ ಬೆ ವರಸ್ಸನ್ನೂ ಹೇಳಬೇಕೆಂದು ಕೇಳುತ್ತೀಯೊ? ಅಯ್ಯೋ! ಇಲ್ಲಿದ್ದರೆ ನಿನಗೆ ಕೆಡಕಾಗುವುದು, ತಡಮಾಡದೆ ನಿಮ್ಮ ತಾಯಿತಂದೆಗಳ ಬಳಿ ಹೋಗಿ ಸೇರಿಕೊ ಎಂದನು, ಮಹಾತ್ಮನಾದ ರಾಜಪುತ್ರನು ಬಹು ಸುಂಖದಿಂದ ಋಷಿಯುಪಾದಾರವಿಂದಗಳನ್ನು ತನ್ನನೇತ್ರೋದಕದಿಂದ ತೊಳೆದು, ಋಷಿವರ್ಯನೆ! ನಿಮ್ಮಂಥ ಮುನೀಯರು ನನ್ನಂಥ ದೀನನನ್ನು ಸಂರಕ್ಷಿಸಬೇಕೇಹೊರತು ಈ ರೀತಿ ಭಯೋತ್ಪಾತವನ್ನು ಮಾಡುವುದು ನ್ಯಾಯವೆ! ಇದು ಸಾಧುಮಾ

ರ್ಗವಲ್ಲವು, ಈ ಅರಣ್ಯದಲ್ಲಿ ನನಗೆ ನಿಮಗಿಂತಲೂ ರಕ್ಷಕರು ಯಾರು? ನಾನು ಪಟ್ಟಣಕ್ಕೆ ಹೆದರಿಕೆಯಿಂದ ಎಂದೆಂದಿಗೂ ಹಿಂದಿರುಗೆನು, ನನಗೆ ಪ್ರಾಣದಮೇಲೆ ಲೇಶವಾದರೂ ಆಸೆಯೇ ಇಲ್ಲವು, "ಜಾತಸ್ಯ ಧ್ರುವೋ ಮೃತ್ಯುಃ" ಎಂಬಂತೆ ಹುಟ್ಟಿದ ಮೇಲೆ ಎಂದಾದರೂ ಒಂದುದಿನ ಸಾಯುವೆನೀಕು. ಹೀಗೆಂದು ಆ ತಪೋನಿಧಿಯನ್ನು ಕೊಂಡಾಡಿ, ಅತನ ಶಿಶ್ರೂಷೆಯನ್ನು ಮಾಡುತ್ತಿದ್ದನು, ತಪಃಶ್ರೇಷ್ಠನಾದ ಭೃಗುಮುನಿಯು ರಾಜಪುತ್ರನ ಸ್ಥಿರಚಿತ್ತವನ್ನು ನೋಡಿ ಸಂತೋಷದಿಂದ ಇಂತೆಂದನು.

ಭೃಗುಮುನಿಯು ಚಂದ್ರಕೇತು ಮಹಾರಾಯನಿಗೆ ಬೋಧಿಸಿದ್ದ ಪರಮರಹಸ್ಯವು.

ಶ್ಲೋ ॥ ಅನನ್ತವೈಕುಣ್ಠ ಮುಕುನ್ದಕೃಷ್ಣ ।
ಗೋವಿನ್ದದಾಮೋದರ ಮಾಧವೇತಿ ॥
ವಕ್ತುಂ ಸಮರ್ಥೋ ಪಿ ನವಕ್ತಿ ಕಶ್ಚಿತ್ ।
ಅಹೋಜನಾನಾಂ ವ್ಯಸನಾಭಿಮುಖ್ಯಂ ॥

ರಾಜಪುತ್ರನೆ ಕೇಳು! ನಾನು ನಿನ್ನ ದೃಢಚಿತ್ತವನ್ನು ಪರೀಕ್ಷಿಸಬೇಕೆಂದು ಈರೀತಿ ಭಕ್ತಿನೋಕ್ತಿಗಳನ್ನಾಡಿದೆನೆ ಹೊರತು ಬೇರೆಯಿಲ್ಲವು. ನೀನು ಹೆಚ್ಚಾದ ಧೈರ್ಯವಂತನು, ದೇವರಹಸ್ಯವನ್ನು ಹೇಳುವೆನು, ಕೇಳು! ಮರುತ್ತನೆಂಬ ಗಂಧರ್ವರಾಜನಿಗೆ ಮಾಣಿಕ್ಯಪ್ರಭಾ ಎಂಬ ಪುತ್ರಿಯುಂಟು, ಆ ಸುಂದರಿಯ ಸೌಭಾಗ್ಯವನ್ನು ವರ್ಣಿಸುವರೇ ಇಲ್ಲವು, ತ್ರಿಲೋಕಗಳಲ್ಲಿಯೂ ಅಂತಹ ಸುಂದರೀಮಣಿಯೇ ಇಲ್ಲವೆನ್ನಬಹುದು, ಆ ಇಂದುಮುಖಿಯು ನವರತ್ನಖಚಿತವಾದ ಬಿಳು ಪಲ್ಲಕ್ಕಿಗಳಿಂದ ಹೊರಟು ಪುಣ್ಯಮಯವಾದ ಆ ಸರೋವರಕ್ಕೆ ಬಂದು ಜಲಕ್ರೀಡೆಯನ್ನಾಡುವಳು, ಆ ಕಾಲದಲ್ಲಿ ಯಾರಾದರೂ ತನ್ನ ಮಗಳ ಸೌಂದರ್ಯವನ್ನು ನೋಡಿ, ಅವಳನ್ನು ಅಪಹರಿಸಿಯಾರೆಂದು ಮರುತ್ತನು ಈರೀತಿ ಶಪಿಸಿರುವುದರಿಂದ ನಿನ್ನ ಕಣ್ಣುಗಳು ಮುಚ್ಚಿಹೋದವೆಂದು ಹೇಳಿದನು. ಚಂದ್ರಕೇತುವು ಆಶ್ಚರ್ಯದಿಂದ ಮೌನಿಯವೇಲಿ ಬೆರಳನ್ನಿಟ್ಟುಕೊಂಡು, ಆಹಾ! ದೈವವೇ! ನಾನು ಆ ಮಾಣಿಕ್ಯಪ್ರಭೆಯನ್ನು ಹೇಗೆ ಕೂಡಿಯೇನು! ಎಂದು ಚಿಂತಿಸುತ್ತಾ, ಮುನಿನಾಥನೆ! ಮಹಾತ್ಮನಾದ ನಿನಗೆ ಆ ಸುಂದರಿಯನ್ನು ನನಗೆ ಕೂಡಿಸುವುದು ಕಷ್ಟವೇ! ನನ್ನ ಕೋರಿಕೆಯನ್ನು ನೆರವೇರಿಸಬೇಕೆಂದು ಮುನಿಯೆಪಾದಾರವಿಂದಗಳಿಗೆ ಅಡ್ಡಬೀಳಲು, ಆ ಋಷಿಯು ರಾಜಪುತ್ರನ ಮಾತಿಗೆ ಪಕ್ಕನೆ ನಕ್ಕು, ಮಗೂ! ಆ ಮರುತ್ತನು ಹೆಚ್ಚಾದ ಮಾಯೆಗಾರನು, ರಣವೀರನು, ನನಗೂ ನಿನಗೂ ಸಾಧ್ಯವಾಗತಕ್ಕವನಲ್ಲವು. ಅವನನ್ನು

ಜಯಿಸಲು ಜೀರೆ ದಾರಿಯಿರುವುದು, ಹೇಳುವೆನು ಕೇಳು,—ನೀನು ಇಲ್ಲಿಂ
ದ ನೇರವಾಗಿ ಉತ್ತರದಿಕ್ಕಿಗೆ ಪ್ರಯಾಣ ಮಾಡಿದರೆ ಸತ್ತುಗಾವ್ರದದ ಆಚೆ
ಕಾಲಭೈರವನ ಗುಡಿ ಕಾಣುವುದು, ಅಲ್ಲಿ ಒಂದು ವೃಕ್ಷವನ್ನು ಕಾಣುವುದು.
ಅಲ್ಲಿಂದ ಪಶ್ಚಿಮದಿಕ್ಕಿಗೆ ಸತ್ತುಗಾವುದನೇಗವಾಗಿ ಹೋದರೆ ಅಲ್ಲಿ ನಾಗವ
ಲ್ಲಿಗೆಯ ತೋಟವು ಕಾಣುವುದು, ಆ ತೋಟದ ನಟ್ಟನಡುವೆ ಒಂದು ದೊ
ಡ್ಡಕಲ್ಲಿನ ಬಂಡೆಯೂ, ಒಂದು ಅಶ್ವತ್ಥಮರವೂ ಕಾಣುವುದು, ಆ ಮರದ
ಕಟ್ಟಕಡೆಯ ಕೊಂಬೆಯಮೇಲಿಕ್ಕುಳಿತು, ನಾನು ಉಪದೇಶಿಸಿರುವ ಮಹಾ
ಮಂತ್ರವನ್ನು ಉಪದೇಶ ಮಾಡಿದ್ದಾದರೆ ಆ ಬಂಡೆ ಹೋಗಿ ಬಿಲವು ಕಾಣು
ವುದು, ಆಗ ನೀನು ಕೆದರಬೇಡ, ಧೈರ್ಯದಿಂದ ಆ ಬಿಲದೊಳಗೆ ಒಂದು
ಗಾವುದ ನುಗ್ಗಿಹೋದರೆ ಅಲ್ಲಿ ಸೊಗಸಾದ ಒಂದು ಮನೆಯೂ ಒಂದು
ಸರೋವರವೂ ಕಾಣುವುದು. ಅದರ ಪಡಪಲ್ಲಿ ಒಬ್ಬಮುದುಕಿಯು ಕುಳಿ
ತು ಭಗುಶ್ರೂಷೆಯಳು, ಅವಳಿಗೆ ನನ್ನ ಹೆಸರು ಹೇಳಿ ಅವಳನ್ನು ನನ್ನ ಬಳಿಗೆ
ಕರೆದುಕೊಂಡು ಬಾ, ಅವಳಿಂದ ನಿನ್ನ ಇಷ್ಟಸಿದ್ಧಿಯಾಗುವುದೆಂದು ಹೇಳಿ,
ಆ ಮಂತ್ರವನ್ನು ಪವೇಶಮಾಡಿ ಕಳುಹಿಸಿದನು, ಆ ಚಂದ್ರಕೇತುವು ಬಹಳ
ಸಂತೋಷದಿಂದ ಅತ್ಯಾರೂಢನಾಗಿ ಹೊರಟು, ಖಡ್ಗದ ಅಪ್ಪಣೆಯಂತೆ
ಉತ್ತರದಿಕ್ಕಿಗೆ ಸತ್ತುಗಾವುದ ದೂರ ಪ್ರಯಾಣ ಮಾಡಲು ಅಲ್ಲಿ ಒಂದು
ಮಗವ್ರ ಕಾಲಭೈರವನ ದೇವಸ್ಥಾನವೂ ಕಾಣಿಸಿದವು, ಚಂದ್ರಕೇತುವು
ಆ ಕಾಲಭೈರವನನ್ನ ಪೂಜಿಸಿ, ಆ ಗುಡಿಯ ಪಶ್ಚಿಮದಿಕ್ಕಿನಲ್ಲಿರುವ ನಾಗ
ವಲ್ಲಿಗೆಯ ತೋಟವನ್ನೂ, ಅದರ ಮಧ್ಯದಲ್ಲಿರುವ ಕಲ್ಲಿನ ಬಂಡೆಯನ್ನೂ,
ಆ ಬಂಡೆಯ ಬಳಿ ಇರುವ ಅಶ್ವತ್ಥ ಮರವನ್ನೂ ನೋಡಿ, ಆ ಮರದಮೇ
ಲಕ್ಕೆ ಹೋಗಿ, ಕೊನೆ ಕೊಂಬೆಯಲ್ಲಿ ಕುಳಿತು, ಮುನಿಯು ಹೇಳಿಕೊ
ಟ್ಟಿದ್ದ ಮಹಾಮಂತ್ರವನ್ನು ಜಪಿಸಿ, ಧೈರ್ಯದಿಂದ ಆ ಬಿಲದೊಳಕ್ಕೆ ನುಗ್ಗಿ,
ಆ ಬಿಲದೊಳಗೆ ಅಲ್ಲಲ್ಲಿ ಸೂರ್ಯಚಂದ್ರರಂತೆ ಬೆಳಗುತ್ತಲಿದ್ದ ದಿವ್ಯರತ್ನಗಳ
ನ್ನು ನೋಡುತ್ತಾ ಹೋಗಿ, ಒಂದು ಶ್ರೇಷ್ಠವಾದ ಮನೆಯನ್ನು ನೋಡಿ,
ಅತ್ಯಾಶ್ಚರ್ಯದಿಂದ, ಆಹಾ! ಇದು ಯಾರಮಂದಿರವೋ ಕಾಣೆನು, ಇಂತ
ಹ ಮನೆಯನ್ನು ನಾನೆಂದೂ ಕಾಣೆನು. ಇದರಲ್ಲಿ ನಿನು ಆಶ್ಚರ್ಯಗಳಿ
ವೆಯೊ ಕಾಣೆನು, ಇಷ್ಟುದೂರ ಬಂದು ಇದನ್ನು ನೋಡದೆ ಹಾಗೆಯೇ
ಹೋಗುವುದು ರಾಜಧರ್ಮಕ್ಕೆ ವಿರುದ್ಧವು, ಮಹರ್ಷಿಯಾಜ್ಞೆಯಲ್ಲದಿದ್ದ
ರೂ ಚಿಂತೆಯಿಲ್ಲ, ಒಳಗೆ ಹೋಗಿ ನೋಡಿಬರುವೆನೆಂದು ಯೋಚಿಸಿ, ಮೊ
ದಲನೆಯ ಪ್ರಾಕಾರದಲ್ಲಿ ಹೋಗಿ ನೋಡಲು, ಅಲ್ಲಿ ಸೂರ್ಯನಂತೆ ಪ್ರಕಾಶಿ
ಸುತ್ತಲಿದ್ದ ಒಂದು ದಿವ್ಯರತ್ನವನ್ನು ನೋಡಿ, ಕಣ್ಣುಗಳು ಮುಚ್ಚಿಹೋ
ಗಲು, ಸ್ವಲ್ಪಹೊತ್ತಿನಮೇಲೆ ಪೂರ್ವಸ್ಥಿತಿಯನ್ನು ಹೊಂದಿ, ಆ ತೋಟದ
[illegible] ಬಾವಿಯಾಗು

ನಾಲ್ಕುಮೂಲೆಗಳಲ್ಲಿಯೂ ದಿವ್ಯವಸನಾಭರಣಾಂಗೆಳಿಂದಲಂಕರಿಸಿ ನಿಲ್ಲಿಸಿದ್ದ ಅಪರಂಜಿಯು ಬೊಂಬೆಗಳನ್ನು ನೋಡಿ, ದೇವನಾಗಕನ್ನಿಕೆಯೆರಿರಬಹು ದೆಂದು ಭಾವಿಸಿ, ಏನು ಅಪಾಯ ಒದಗುವುದೋ ಎಂದು ಭಯಪಟ್ಟು, ಸ್ವಲ್ಪಕಾಲ ನಿರೀಕ್ಷಿಸಿ, ಆ ಕನ್ನೆಯರು ಮಾತನಾಡದೆ ಸುಮ್ಮನಿರಲು ಕಾರಣವೇನು? ಅಯ್ಯೋ! ಮಾತೆ ಬಂಗಾರವಾಗಿದೆಯೇ! ನಾವೇ ಮಾತನಾಡಿಸಲಿ ಎಂದು ಯೋಚಿಸಿ, ನೀವು ಈರೀತಿ ಮಾತನಾಡದಿರಲು ಕಾರಣವೇನು? ನನ್ನನ್ನು ಈರೀತಿ ನಿರ್ಲಕ್ಷ್ಯವಾಗಿ ಕಾಣಬಹುದೇ! ನಾನು ರಾಜಪುತ್ರನಲ್ಲವೆ! ನನ್ನೊಂದಿಗೆ ಸಂಭಾಷಿಸಿದರೆ ನಿಮಗೆ ಅಪಾಯವುಂಟೆ ಅಯ್ಯೋ! ನಾನು ಅಂತಹ ನಿರ್ಭಾಗ್ಯನೆ! ಹೀಗೆಂದರೂ ಕೂಡ ಆ ಅಪರಂಜಿಯ ಬೊಂಬೆಗಳಿಂದ ಪ್ರತ್ಯುತ್ತರವೇ ಇಲ್ಲವು. ಇದರಿಂದ ರಾಜಪುತ್ರನು ಭಯಾಶ್ಚರ್ಯಗಳಿಂದ ಕೂಡಿ, ಸ್ವಲ್ಪ ಮತ್ತರಕ್ಕೆ ಹೋಗಿ, ಕಾಂತಾರತ್ನಗಳೆ! ಪರರನ್ನು ನೀವು ಹೀಗೆ ಭಯಪಡಿಸಬಹುದೆ! ನಿಮ್ಮ ಮುಖಭಾವದಿಂದಲಾದರೂ ನನ್ನನ್ನ ಪ್ರೀತಿಸುವಾರದೆ ಎಂದು ಗಟ್ಟಿಯಾಗಿ ಮಾತನಾಡಿಸಿದನು. ಆದರೂ ಅವ್ರು ಚಲಿಸಲೆ ಇಲ್ಲ. ಆಗ ರಾಜಪುತ್ರನು; ಆಹಾ' ಇದೇನು! ನಾನು ಎಷ್ಟೆಷ್ಟು ವಿಧವಾಗಿ ಮಾತನಾಡಿಸಿದರೂ ಈ ಸುಂದರಿಯರಿಗೆ ದಯೆಬರಲಿಲ್ಲವಲ್ಲಾ! ಏನು ಅಪಾಯವಿನುವುದೊ ಎಂದು ಭಯಪಟ್ಟು, ಸ್ವಲ್ಪಹೊತ್ತಿನನೆಲೆ ಕಾಮವಿಕಾರದಿಂದ ಒಂದು ಬೊಂಬೆಯ ಬಳಿಗೆ ಹೋಗಿ ಗಾಢಾಲಿಂಗನವಾಡಿಕೊಂಡು ಮುತ್ತಿಟ್ಟನು. ಆಗ ಚಂದ್ರಕೇತುವಿಗೆ ಇವು ಅಪರಂಜಿಯ ಬೊಂಬೆಗಳಿಂದು ಗೊತ್ತಾಯಿತು. ಆಗ ಚಂದ್ರಕೇತುವು ಅಯ್ಯಯ್ಯೋ! ನಾನು ಇನ್ನೆಂತಹ ಮೂಢನು. ಅಪರಂಜಿಯ ಬೊಂಬೆಗಳೆಂದು ತಿಳಿಸುಕೊಳ್ಳಲಾರದೆ ಇಷ್ಟೊಂದು ವ್ಯಥೆಪಟ್ಟೆನಲ್ಲಾ! ಅಯ್ಯೋ! ಎಂದು ತನ್ನನ್ನು ತಾನೆ ನಿಂದಿಸಿಕೊಂಡು, ಅನಂತರ ಆ ಕೂಟದಿಂದ ದಾಟಿ ಒಳಗೆ ಹೋಗಿ ನೋಡಲು ಅಲ್ಲೊಂದು ನವರತ್ನಖಚಿತವಾದ ಅಪರಂಜಿಯ ಕಾಲುಗಳಿರುವ ಮಂಚವನ್ನು ನೋಡಿದನು. ಅದರ ನಾಲ್ಕು ಕಡೆಗೂ ನಾಲ್ಕು ನಾಗರಹೆಗಳನ್ನು ಇಟ್ಟಿದ್ದರು. ಅವುಗಳ ಕಾಂತಿಯೊದರೊ ನೋಟಕರ ಕಣ್ಣನ್ನು ಮುಚ್ಚಿಬಿಡುತ್ತಿದ್ದವು. ಆ ಮಂಚದ ಮೇಲೆ ದಿವ್ಯವಾದ ನವರತ್ನ ಖಚಿತವಾದ ಹಾಸಿಗೆಯ ದಿಂಡನ್ನು ಇಟ್ಟಿತ್ತು. ಅತ್ತರು ಪೆಟ್ಟಿಗೆಗಳನ್ನೂ, ಅಪರಂಜಿಯ ಸುವಸ್ತುಗಳನ್ನ ಸುತ್ತಲೂ ಇರಿಸಿದ್ದರು. ಚಂದ್ರಕೇತುವು ದಿವ್ಯವಾದ ಆ ಮಂಚವನ್ನೂ ಹಾಸಿಗೆಯನ್ನೂ ನೋಡಿ, ಆಶ್ಚರ್ಯಾನಂದಗಳನ್ನು ಹೊಂದಿ, ಆ ದಿವ್ಯವಾದ ಹಾಸಿಗೆಯಮೇಲೆ ಮಲಗಿ ವಿಶ್ರಮಿಸಿಕೊಂಡರೆ ಇಂದ್ರಭೋಗವೆಂದು ಭಾವಿಸಿ ಆ ದಿವ್ಯವಾದ ಕಯ್ಯಿಗಳಿಲಿ ಮಲಗಿದನು. ರಾಜಪುತ್ರನು ಸುಖದಿಂದ ವಿಶ್ರಮಿಸಿಕೊಳ್ಳುತ್ತಾ,

ಸುಗಂಧ ಪರಿಮಳವನ್ನು ಆಘ್ರಾಣಿಸುತ್ತಾ, ಅಲ್ಲಿಯೇ ಮೈಮರೆತು ನಿದ್ರೆಯಿಂಗೈದನು. ಅವೇ ರಾತ್ರಿಯೇ ಒಬ್ಬ ನಾಗಕನ್ಯಕೆಯು ತನ್ನ ಸಖಿಯರೊಂದಿಗೆ ಆ ಮಂದಿರಕ್ಕೆ ಬಂದು, ಮೊದಲನೆಯು ಕೂಡಲೆ ಸ್ವಲ್ಪಹೊತ್ತು ಗಾನಮಾಡುತ್ತಲಿದ್ದು, ಆಯಾಸನಾಪಬಳಿಕ ವಿಶ್ರಮಿಸಿಕೊಳ್ಳಬೇಕೆಂದು, ಅನೇಕ ಭಕ್ಷ್ಯಗಳನ್ನೂ ಮಧುವನ್ನೂ ತೆಗೆದುಕೊಂಡು, ತನ್ನ ಹಾಸಿಗೆಯ ಬಳಿಗೆ ಹೋಗಿ, ನಿದ್ರಿಸುತ್ತಲಿದ್ದ ಆ ರಾಜಪುತ್ರನನ್ನು ನೋಡಿ, ಎಬ್ಬಿಸಿ, ಓಹೊ! ನೀನುಯಾರು? ಇಷ್ಟು ನಿರ್ಭಯವಾಗಿ ನನ್ನ ಹಾಸಿಗೆಯ ಮೇಲೆ ಮಲಗಿ ನಿದ್ರೆಮಾಡುತ್ತಿರಲು ಕಾರಣವೇನು? ಎನಲು, ರಾಜಪುತ್ರನು ಗಾಬರಿಯಿಂದ ಮೇಲಕ್ಕೆದ್ದು ಹಾಸಿಗೆಯ ಮೇಲೆ ಕುಳಿತು, ಆ ಇಂಪುವದನೆಯ ಸೌಂದರ್ಯವನ್ನು ನೋಡಿ, ಕಾಮಾತುರನಾಗಿ, ಎಲೌ ಸುಂದರೀಮಣೀ! ನಾನು ರಾಜಪುತ್ರನು, ಸುಷುಪ್ತ್ಯವಸ್ಥೆಯಿಂದ ದೇಹವನ್ನು ಮರೆತು ನಿದ್ರೆಗೈದೆನು. ಈ ಹಾಸಿಗೆಯು ನಿನ್ನದಾದ ಮಾತ್ರಕ್ಕೆ ನನಗೆ ನೀನು ನಿದ್ರಾಭಂಗ ಮಾಡಬಹುದೇ! ನೀನು ಯಾರು? ನಿನ್ನ ವರ್ತಮಾನವನ್ನೆಲ್ಲ ಹೇಳಿ ನೀನು ಬಂದು ಈ ಹಾಸಿಗೆಯಮೇಲೆ ನನ್ನೊಂದಿಗೆ ನಿದ್ರಿಸೆಂದನು, ಆ ನಾಗಕನ್ಯೆಯು ರಾಜಪುತ್ರನ ಧೈರ್ಯಕ್ಕೂ, ಯೌವನಕ್ಕೂ, ಸೌಂದರ್ಯಕ್ಕೂ ಮೆಚ್ಚಿ, ರಾಜಪುತ್ರನೆ! ಅನಂತನೆಂಬ ನಾಗರಾಜನಿಗೆ ಕಾಂತಾಮಣಿ, ಚಂದ್ರಕಾಂತಾಮಣಿ, ಪೂರ್ಣಚಂದ್ರಕಾಂತಾಮಣಿ, ಪರಿಪೂರ್ಣ ಚಂದ್ರಕಾಂತಾಮಣಿ, ಸರ್ವಪರಿಪೂರ್ಣ ಚಂದ್ರಕಾಂತಾಮಣಿ ಎಂಬ್ಕಿವರು ಪುತ್ರಿಯರುಂಟು, ಅವರಲ್ಲಿ ಮೊದಲನೆಯವಳಾದ ಕಾಂತಾಮಣಿಯು ನಾನು, ನಾವು ಕಾಮಗಮನದಿಂದ ಲೋಕದಲ್ಲೆಲ್ಲ ತಿರುಗುತ್ತಿರುವೆವು, ಇದು ನಮಗೆ ವಿನೋದಾರ್ಥವಾಗಿ ರಚಿಸಿರುವ ಮಂದಿರವು, ತಿಂಗಳಿಗೊಂದಾವರ್ತಿ ನಾವು ಈ ಮಂದಿರಕ್ಕೆಬರುವೆವು. ಹೀಗೆಂದು ಹೇಳಿ, ರಾಜಪುತ್ರನ ವರ್ತಮಾನವನ್ನೆಲ್ಲಾ ಕೇಳಿ, ತಿಳಿದುಕೊಂಡು, ಆ ಹಾಸಿಗೆಯ ಮೇಲಕ್ಕೆ ತಾನೂ ಹತ್ತಿ, ರಾಜಪುತ್ರನೊಂದಿಗೆ ಗಾಢರತಿಯನ್ನು ಕೈಗೊಂಡು, ರಾಜಪುತ್ರನು ಮೈಮರೆತು ನಿದ್ರಿಸುತ್ತಿರುವಾಗ ತಾನು ಎದ್ದು ತನ್ನ ಸಖಿಯರೊಂದಿಗೆ ಹೊರಟುಹೋದಳು, ಬೆಳಗಾದ ಕೂಡಲೆ ತನ್ನ ಪಕ್ಕದಲ್ಲಿದ್ದ ನಾಗಕನ್ನಿಕೆಯನ್ನು ಕಾಣದೆ, ವಿಚಾರಗ್ರಸ್ತನಾಗಿ ಅಲ್ಲೆಲ್ಲಾ ಹುಡುಕಿದರೂ ಎಲ್ಲಿಯೂ ಸಿಕ್ಕಲಿಲ್ಲ, ರಾಜಪುತ್ರನು ಹಗಲೆಲ್ಲಾ ಹುಡುಕಿ ಆಯಾಸಪಟ್ಟು ನಾಗಕನ್ನಿಕೆಯನ್ನು ಕಾಣದೆ, ಪುನಃ ಅಲ್ಲಿಗೇ ಬಂದು ಅಲ್ಲಿದ್ದ ಭಕ್ಷ್ಯಗಳನ್ನು ತಿಂದು, ಮಧುಪಾನವಂ ಮಾಡಿ, ಸಾಯಂಕಾಲವಾದಮೇಲೆ ಆ ಹಾಸಿಗೆಯಲ್ಲಿ ಮಲಗಿ ನಿದ್ರೆಮಾಡಿದನು, ಆ ದಿನ ರಾತ್ರಿ ಎರಡನೆ ನಾಗಕನ್ನಿಕೆಯು ಬಂದು ರಾಜಪು[illegible]

ತ್ರನನ್ನು ನಿದ್ರೆಯಿಂದ ಎಬ್ಬಿಸಿದಳು. ರಾಜಪುತ್ರನು ಮೇಲಕ್ಕೆದ್ದು, ಓಹೋ ಚಂದ್ರಕಾಂತಾಮಣಿ! ಬಾ, ಬಾರೆಂದು ಕರೆದನು, ಆ ಸುಂದರಿಯು ಆಶ್ಚರ್ಯಪಟ್ಟು, ಓಹೊ! ನನ್ನ ಹೆಸರು ನಿನಗೆ ಹೇಗೆ ಗೊತ್ತು ಎಂದು ಕೇಳಿದಳು. ಆಗ ರಾಜಪುತ್ರನು ನಿಮ್ಮ ತಂದೆಯಿಂದ ತಿಳಿಯಿತೆಂದು ಎಲ್ಲವನ್ನೂ ಹೇಳಿದನು, ಚಂದ್ರಕಾಂತಾಮಣಿಯು ಆಮೇಲೆ ಸಂತೋಷದಿಂದ ಹಾಸಿಗೆಯನ್ನೇರಿ, ರಾಜಪುತ್ರನೊಂದಿಗೆ ಮನ್ಮಥನಿಕಾರವನ್ನು ತೀರಿಸಿಕೊಂಡು, ರಾಜಪುತ್ರನು ನಿದ್ರೆ ಮಾಡುವಾಗ ತಾನು ಎದ್ದು ತನ್ನ ಸಖಿಯರೊಂದಿಗೆ ಹೊರಟುಹೋದಳು. ಹೀಗೆಯೇ ಚಂದ್ರಕೇತುವು ಐದು ದಿನ ರಾತ್ರಿಯೂ ಐವರು ನಾಗಕನ್ನಿಕೆಯರೊಂದಿಗೆ ಸುರತಸುಖವನ್ನನುಭವಿಸಿದನು. ಆನಂತರ ರಾತ್ರಿಯಾದಾಗ ಬಾರದಿರಲು ರಾಜಪುತ್ರನ ಕಣ್ಣುಗಳಿಗೆ ನಿದ್ರೆ ಹತ್ತದೆ, ಕಾಮವಿಕಾರದಿಂದ ಆಹಾ! ನಿರ್ಭಾಗ್ಯನಾದ ನನಗೆ ನಾಗಕನ್ನೆಯರು ದೊರೆಯುವುದೆಂದರೇನು! ಹೀಗೆಂದು ಚಿಂತಿಸಿ, ನಾನು ಒಂದು ತಿಂಗಳವರೆಗೂ ಇಲ್ಲಿ ನಾಗಕನ್ನಿಕೆಯರಿಗಾಗಿ ನಿಂತುಬಿಟ್ಟರೆ ಮುಷಿಯಂತೆ ನನ್ನ ಅವಾಯ ಒದಗುವುದೊ ಎಂದು ಹೆದರಿ ಅಲ್ಲಿಂದ ಪ್ರಯಾಣಮಾಡಿ, ಮುಂದು ಮುಂದಕ್ಕೆ ಹೋಗುತ್ತಿರಲು, ಅಲ್ಲೊಂದು ಸರೋವರವು ಕಾಣಿಸಿತು, ಅದರ ತಡಿಯಲ್ಲಿ ಒಬ್ಬ ಮುದುಕಿಯು ಕುಳಿತು ಅಳುತ್ತಿದ್ದಳು. ರಾಜಪುತ್ರನು ಅವಳನ್ನು ನೋಡಿ, ಅವ್ವಾ! ಭೃಗುಮಹರ್ಷಿಯು ನಿನ್ನನ್ನು ಕರೆದುಕೊಂಡು ಬಾರೆಂದು ನನ್ನನ್ನು ಕಳುಹಿಸಿದನು, ಹೋಗೋಣಬಾರೆಂದನು. ಆ ಮುದುಕಿಯು ಗಟ್ಟಿಯಾಗಿ ಒಂದಾವರ್ತಿ ಕೂಗಿದಳು, ರಾಜಪುತ್ರನು ಭಯದಿಂದ ಕೆಳಗೆ ಬಿದ್ದನು, ಆಗ ಆ ಮುದುಕಿಯು ಅವನನ್ನು ಎತ್ತಿಕೊಂಡು ಮುದ್ದಾಡುತ್ತಿರಲು, ರಾಜಪುತ್ರನು ಆ ಮುದುಕಿಯನ್ನು ಕುರಿತು, ಮುದುಕಿಯಾವ ನಿನಗೆ ನನ್ನನ್ನೆತ್ತಿಕೊಂಡು ಮುದ್ದಾಡುವಷ್ಟು ತಾರಾಣವೆಲ್ಲಿ ಬಂತೆಂದು ಕೇಳಿದನು. ಆಗ ಆ ಮುದುಕಿಯು ರಾಜಪುತ್ರನನ್ನು ಕುರಿತು, ಮಗೂ! ನಾನು ಧೂಮಕೇತುವೆಂಬ ರಾಕ್ಷಸಿ. ಯಾರ ಹೆದರಿಕೆಯೂ ಇಲ್ಲದೆ ಮೂರು ಲೋಕಗಳಲ್ಲಿಯೂ ತಿರುಗಬಲ್ಲೆ, ದೇವಮಾನವರನ್ನು ಕಟ್ಟಿಹಿಡಿದುಕೊಂಡು ಬರಬಲ್ಲೆನು, ಒಂದಾನೊಂದುದಿನ ಭೃಗುಮಹರ್ಷಿಯ ಶಿಷ್ಯರಲ್ಲೊಬ್ಬನನ್ನು ನಾನು ಹಿಡಿದು ನುಂಗಿದ್ದರಿಂದ, ಮಹರ್ಷಿಯು ಕೋಪಿಸಿಕೊಂಡು, ನನಗೆ ಶಾಪವನ್ನು ಕೊಟ್ಟನು. ಆದ್ದರಿಂದ ನಾನು ಈ ವೃದ್ಧರೂಪವನ್ನು ಧರಿಸಿ, ಈ ಸರೋವರದ ದಿಣ್ಣೆಯಮೇಲೆ ಕುಳಿತು, ಅಳುತ್ತಿರುವೆನು, ಪುಣ್ಯಾತ್ಮ! ನಿನ್ನಿಂದ ನನ್ನ ಶಾಪವು ವಿಮೋಚನೆಯಾಯಿತು. ಎಂದು [illegible] ರಾಜಪುತ್ರನನ್ನು ತನ್ನ ಹೆಗಲಮೇಲೆ ಕುಳ್ಳಿರಿಸಿ

ಕೊಂಡು, ನಿಮಿಷಮಾತ್ರದಲ್ಲಿ ಮಹರ್ಷಿಯ ಬಳಿ ಸೇರಿ, ಆತನ ಪಾದಕ
ಮಲಗಳಿಗೆ ನಮಸ್ಕಾರ ಮಾಡಿ ಎಲ್ಲವನ್ನೂ ತಿಳಿಸಿದಳು. ಚಂದ್ರಕೇತುವೂ
ತಾನು ಹೋಗಿಬಂದ ಸಮಾಚಾರವನ್ನೆಲ್ಲ ಮುನಿವರ್ಯನಿಗೆ ತಿಳಿಸಿ, ಆ
ಮಹನೀಯನ ಪಾದಾರವಿಂದಗಳಿಗೆ ಅಡ್ಡಬಿದ್ದನು, ಆಗ ಭೃಗುಮುನಿಯು
ಸಂತೋಷಪಟ್ಟು, ರಾಜಪುತ್ರನನ್ನು ಕುರಿತು, ಮಗೂ! ಆ ನಾಗಕನ್ನಿಕೆ
ಯರು ಬಹುಕಾಲದಿಂದಲೂ ಅನೇಕರೊಂದಿಗೆ ಭೋಗಭಾಗ್ಯಗಳನ್ನು
ಭವಿಸುತ್ತಲಿರುವ ವೈಶ್ಯರು, ನಿನ್ನ ಬಲವೆಲ್ಲವನ್ನೂ ಹೀರಿಸಿಬಿಡುತ್ತಾರೆ,
ನೀನು ಅವರೊಂದಿಗೆ ಭೋಗಸುಖವನ್ನು ಕೋರದಿರು, ಅವರಿಂದ ಮೋ
ಕ್ಷದಾಯಕವಾದ ಅಚ್ಯುತ ಪರಿಪೂರ್ಣಭಾವವನ್ನು ತಿಳಿದುಕೊಳ್ಳಿಂದು ಹೇಳಿ,
ಆ ಧೂಮಕೇತುವನ್ನು ಕುರಿತು, ಓ ರಾಕ್ಷಸೇ! ನೀನು ಈ ರಾಜಪುತ್ರ
ನನ್ನು ನಿನ್ನ ಮಗನಂತೆ ಭಾವಿಸಿ, ಸಹಾಯಕನಾಗಿ, ಅವನ ಸಕಲ ಇಷ್ಟಾ
ರ್ಥಗಳನ್ನೂ ನೆರವೇರಿಸೆಂದು ಆಜ್ಞಾಪಿಸಿ, ಆ ರಾಜಪುತ್ರನನ್ನು ಆದರಿಸಿ,
ಅವನ ದೇಶಕ್ಕೆ ಹೋಗಲು ಅಪ್ಪಣೆಯನ್ನಿತ್ತನು. ಅನಂತರ ಆ ಧೂಮಕೇ
ತುವು ಮಹರ್ಷಿಗೆ ನಮಸ್ಕಾರವಂ ಮಾಡಿ, ಆ ರಾಜಪುತ್ರನನ್ನು ತನ್ನ ಹೆಗ
ಲಮೇಲೆ ಕುಳ್ಳಿರಿಸಿಕೊಂಡು, ಅವನ ಪಟ್ಟಣದಬಳಿ ಕರೆದುಕೊಂಡು ಬಂದು
ಬಿಟ್ಟು, ಮಗೂ! ನೀನು ಯಾವಾಗ ಸ್ಮರಿಸಿದರೆ ಆಗ ನಾನು ಬಂದು
ನಿನ್ನಿಷ್ಟವನ್ನು ನೆರವೇರಿಸುವೆನೆಂದು ಹೇಳಿ ಹೊರಟುಹೋಯಿತು, ಆ
ಚಂದ್ರಕೇತುವು ಪಟ್ಟಣದೊಳಕ್ಕೆ ಹೋಗಿ, ತಾಯಿತಂದೆಗಳಿಗೆ ನಮಸ್ಕಾ
ರವಂಮಾಡಿ, ತಾನು ಧೂಮಕೇತುವಾರ ಮಾಡಿಕೊಂಡು ಬಂದ ವರ್ತಮಾನವ
ನ್ನೆಲ್ಲಾ ಹೇಳಿ, ಅವರನ್ನು ಸಂತೋಷಪಡಿಸಿದನು, ತಾನು ಸುಲಗುವ ಮನೆ
ಯನ್ನು ಇಂದ್ರಭವನದಂತೆ ಅಲಂಕಾರ ಮಾಡಿಸಿದನು. ರಾಜಪುತ್ರನು
ಒಂದಾನೊಂದು ದಿನ ಆ ಧೂಮಕೇತುವನ್ನು ಸ್ಮರಿಸಿದನು, ಕೂಡಲೇ
ಧೂಮಕೇತುವು ರಾಜಪುತ್ರನ ಎದುರಿನಲ್ಲಿ ಬಂದು ನಿಂತಳು, ಆಗ ಚಂದ್ರ
ಕೇತುವು ಧೂಮಕೇತುವನ್ನು ಕುರಿತು, ನನಗೆ ಗಂಧರ್ವಸ್ತ್ರೀಯರ ಸಂ
ಭೋಗಕ್ಕೆ ಅರ್ಹವಾಲ ಮಲಗುವ ಮನೆಯನ್ನು ರಚಿಸೆಂದನು. ಧೂಮ
ಕೇತುವು ಹಾಗೆಯೇ ಆಗಲೆಂದು, ದೇವಲೋಕದಿಂದ ದೇವರತ್ನಗಳನ್ನೂ,
ನಾಗಲೋಕದಿಂದ ನಾಗರತ್ನಗಳನ್ನೂ ತಂದು, ಶ್ರೇಷ್ಠವಾದ ಮಂಚದ
ಮೇಲೆ ನವರತ್ನಖಚಿತವಾದ ಹಾಸಿಗೆ ದಿಂಡನ್ನು ಹಾಕಿ, ರತ್ನಗಳನ್ನು ಅ
ಲಂಕರಿಸಿ, ರಾಜೇಂದ್ರನನ್ನು ದೇವೇಂದ್ರನಂತೆ ಅಲಂಕರಿಸಿ, ಮಗೂ!
ನೀನು ತಪ್ಪುಗಳಪಟ್ಟೇಪ, ಸುಂದರಸುಕುಮಾರನಾಗಿ ಗಂಭೀರವಾಗಿರೆಂದು
ಹೇಳಿ ಹೊರಟುಹೋಗಿ, ಆ ಮಾಣಿಕ್ಯಪ್ರಭೆಯು ಒಂಭತ್ತು ಜನ ಕಾವಲ್ಗಾ
ರರ ಮೇಲೂ ಮಂಕುಬೂದಿಯನ್ನು ಚೆಲ್ಲಿ, ಒಂಭತ್ತು ಪದಾರ್ಥಗಳನ್ನೂ
ಮಾಡಿಸಿಟ್ಟಲ್ಲಿಂದಲೇ ಸಕಲ ಲೋಕಗಳೂ ಬಾಡಿಯಾಗು

ದಾಟಿ, ವಜ್ರದ ಅರಮನೆಗೆ ಹೋಗಿ, ಸಾವಿರಜನ ಕಾವಲ್ಗಾರರ ಮುಖ್ಯದಲ್ಲಿ ಪ್ರಕಾಶವಾನಳಾಗಿ ನಿಲ್ಲಿಸುತ್ತಿದ್ದ ಆ ಮಾಣಿಕ್ಯಪ್ರಭೆಯಮೇಲೂ, ಕಾವಲ್ಗಾರರಮೇಲೂ ಮುಂಕುಡುಬಿಯನ್ನು ಎರಚಿ, ಆ ಸುಂದರಿಯನ್ನು ಎತ್ತಿಕೊಂಡುಬಂದು, ಆ ರಾಜಪುತ್ರನ ಹಾಸಿಗೆಯಮೇಲೆ ಮಲಗಿಸಿದಳು. ಆ ರಾಜಪುತ್ರನಾದರೊ ಆ ಸುಂದರಿಯ ಸೊಬಗನ್ನು ನೋಡಲಾರದೆ ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳಲು, ಆ ರಾಕ್ಷಸಿಯು ಆ ಸುಂದರೀಮಣಿಯ ಮುಖದಮೇಲೆ ಪನ್ನೀರನ್ನೆರಚಿ, ತಾನು ಮರೆಯಾದಳು. ಆ ಚಂದ್ರಮುಖಿಯು ಥಿಗ್ಗನೆದ್ದುಕುಳಿತು, ನಾಲ್ಕುದಿಕ್ಕುಗಳಲ್ಲಿಯೂ ನೋಡಿ, ತನ್ನ ದಾದಿಯುರನ್ನೂ ಕಾಣದೆ, ಓಹೊ! ಇದೇನು ಆಶ್ಚರ್ಯ! ರಾತ್ರಿ ನನ್ನ ಹಾಸಿಗೆಯಮೇಲೆ ಮಲಗಿಸ್ಪೆನಲ್ಲಾ! ಈಗ ಈ ಮನುಷ್ಯನ ಪಕ್ಕದಲ್ಲಿ ಮಲಗಿನಿದ್ರಿಸಲು ಕಾರಣವೇನು? ಈ ಮನುಷ್ಯನನ್ನು ನಾನು ಹಿಂದೆ ಜಲಕ್ರೀಡೆಗೆ ಹೋಗಿದ್ದಾಗ ನೋಡಿರುವಂತೆ ತೋರುವುದು ಆಹಾ! ಇವನಿಗೆ ನನ್ನನ್ನು ತರುವ ಸಾಮರ್ಥ್ಯವೆಲ್ಲಿಬಂದಿತೆಂದು ಯೋಚಿಸುತ್ತಿರುವಲ್ಲಿ, ಆ ರಾಕ್ಷಸಿಯು, ಆ ಸುಂದರಿಗೆ ಮುಂಕುಡುಬಿಯನ್ನೆರಚಿ, ಪುನಃ ಅವಳನ್ನು ಎತ್ತಿಕೊಂಡುಹೋಗಿ, ಅವಳ ಹಾಸಿಗೆಯಮೇಲೆಯೇ ಮಲಗಿಸಿ ಪುನಃ ರಾಜಪುತ್ರನ ಬಳಿ ಬಂದಳು ರಾಜಪುತ್ರನು ತನ್ನ ದೌರ್ಭಾಗ್ಯಕ್ಕೆ ಚಿಂತಿಸಿ, ಆ ರಾಕ್ಷಸಿಯನ್ನು ನೋಡಿ, ತಾಯೀ! ನಾಳೆಯವಿನ ಧೈರ್ಯವಾಗಿರುವೆನೆಂದು ಹೇಳಿಕಳುಹಿಸಿದನು.

ಆ ಮಾಣಿಕ್ಯಪ್ರಭೆಯು ಬೆಳಗಾದಮೇಲೆ ನಿದ್ರೆಯಿಂದೆದ್ದು, ತನ್ನ ದಾದಿಯುರನ್ನೂ ಹಾಸಿಗೆಯನ್ನೂ ನೋಡಿ, ಆ ಮನುಷ್ಯನನ್ನು ಕಾಣದೆ ಆಶ್ಚರ್ಯಪಡುತ್ತಾ, ತನ್ನ ದಾದಿಯುರನ್ನು ನಿದ್ರೆಬಿಡಿಸಿ, ಅವರೊಂದಿಗೆ ನಡೆದ ವರ್ತಮಾನವನ್ನೆಲ್ಲ ಹೇಳಿದಳು. ಅವರು ತಾಯೀ! ನೀನು ಹೇಳುವಂತೆ ಎಂದಿಗೂ ನಡೆದಿರಲಾರದು, ನೀನು ಹಿಂದೆ ರಾಜಪುತ್ರನನ್ನು ನೋಡಿದ್ದೆಯೆಂದು ಹೇಳುವುದಾದರೆಂದ ಮನ್ಮಥವಿಕಾರವಿಂದ ನಿನಗೆ ಹೀಗೆ ಸ್ವಪ್ನವುಂಟಾಗಿರಬೇಕೆ ಹೊರತು ಬೇರೆಯಿಲ್ಲವು. ಒಂಭತ್ತುಜನ ಮಂತ್ರವಾದಿಗಳೂ ಸಾವಿರಜನ ದಾದಿಯರೂ ಕಾವಲಿರುವ ಇಲ್ಲಿಗೆ ಬಂದು ನಿನ್ನನ್ನು ಎತ್ತಿಕೊಂಡುಹೋಗಲು ತ್ರಿನೇತ್ರನಿಗೂ ಸಾಧ್ಯವಲ್ಲವು. ನೀನು ಸಂಶಯಪಡಬೇಡವೆಂದು ಸಮಾಧಾನಪಡಿಸಿದರೂ ಮಾಣಿಕ್ಯಪ್ರಭೆಗೆಮಾತ್ರ ಮನಸ್ಸಿನ ಸಂದೇಹವು ನಿವೃತ್ತಿಯಾಗಲಿಲ್ಲ. ಎರಡನೆಯ ದಿವಸವೂ ರಾತ್ರಿ ಆ ಧೂಮಕೇತುವು ಮಾಣಿಕ್ಯಪ್ರಭೆಯೆನ್ನು ಎತ್ತಿಕೊಂಡು ಬಂದು ರಾಜಪುತ್ರನ ಪಕ್ಕದಲ್ಲಿ ಮಲಗಿಸಿತು. ಆಗ ಚಂದ್ರಕೇತುವು ಎದ್ದುಕುಳಿತು, ಚಂದ್ರಮುಖಿಯ ಮುಖವನ್ನು ದೃಷ್ಟಿಸಿ ನೋಡುತ್ತಾ, ತನ್ನ ನೇತ್ರಗಳಿಗೆ ಪ

ಟುತ್ವಮಾಡಿಕೊಂಡು, ಮುತ್ತಿಟ್ಟು ಆ ಸುಂದರಿಯು ಮುಖದಮೇಲೆ ಪನ್ನೀರನ್ನು ಚೆಲ್ಲಿದನು. ಆ ಬಾಲಿಕಾಮಣಿಯು ಕಣ್ಣುಗಳನ್ನು ಬಿಟ್ಟು, ಆ ರಾಜಪುತ್ರನನ್ನು ನೋಡಿ, ಆಶ್ಚರ್ಯದಿಂದ ತನ್ನ ವಸ್ತ್ರಾಭರಣಗಳನ್ನು ಸವರಿಸಿ ಎದ್ದು ಕುಳಿತುಕೊಂಡು, ಓಹೋ! ಭೂಲೋಕದ ಅರಸುಕುವರನೆ. ನೀನು ಸಾಹಸದಿಂದ ನನ್ನಂತಪ ಕನ್ನೆಯನ್ನು ಇಲ್ಲಿಗೆ ತರುವುದು ನ್ಯಾಯವಲ್ಲ. ನಿನ್ನ ಮಹಿಮೆಯೂ ಮಂತ್ರ ತಂತ್ರಗಳೂ ನಮ್ಮ ತಂದೆಯು ಎದುರಿಗೆ ನಿಲ್ಲಲಾರವು. ಆತನು ಮೂರುಲೋಕಗಳಿಗೂ ಅಸಾಧ್ಯನು. ಭೂಲೋಕವನ್ನೆಲ್ಲಾ ಒಂದೇ ನಿಮಿಷದಲ್ಲಿ ಹಾಳುಮಾಡಬಲ್ಲನು. ಅಯ್ಯೋ! ನಿನಗೆ ಕೇಡುಂಟಾಗಲು ಸಂದೇಹವಿಲ್ಲ. ಜಾಗ್ರತೆಯಾಗಿ ನಿನ್ನನ್ನು ನನ್ನ ಮನೆಗೆ ಕಳುಹಿಸೆಂದಳು. ಚಂದ್ರಕೇತುವು ನಗುತಾ, ಓಹೋ! ಕನ್ಯಕಾಮಣೀ! ನನ್ನ ಮಹಿಮೆಯನ್ನು ತಿಳಿಯುವುದಕ್ಕಾಗಲಿ ನನ್ನನ್ನು ಜಯಿಸುವುದಕ್ಕಾಗಲಿ ನಿನ್ನ ತಂದೆಗೆ ಸಾಧ್ಯವಿಲ್ಲವು ಅದಕ್ಕಾಗಿ ನೀನು ಹೆದರಬೇಡ, ಪರಸ್ತ್ರೀಗಮನವು ಪಾಪವೇ ಹೊರತು ಕನ್ನೆಯನ್ನು ವರಿಸುವುದು ಪಾಪವಲ್ಲವು. ನೀನು ಹುಸಿನಗುವಿನಿಂದ ಮುಖವನ್ನೆತ್ತಿ ನನ್ನನ್ನು ನೋಡು, ಮನ್ಮಥನು ಸುರಿಯಿಟ್ಟ ಬಾಣದಿಂದ ಹೊಡೆಯುತ್ತಿರುವನು. ನಾನು ಆ ಏಟುಗಳನ್ನು ತಡೆಯಲಾರೆನೆಂದು ಆ ಸುಂದರಿಯನ್ನಾಲಿಂಗಿಸಿದನು. ರಾಜಪುತ್ರನು ಮಾಣಿಕ್ಯಪ್ರಭೆಯನ್ನಾಲಿಂಗಿಸಿದ ಮಾತ್ರಕ್ಕೆ ಆ ಸುಂದರಿಗೆ ರೋಮಾಂಚವುಂಟಾಗಿ ಕಾಮಬಾಧೆಯನ್ನು ತಡೆಯಲಾರದೆ ರಾಜಪುತ್ರನೊಂದಿಗೆ ಸುಖಭೋಗವನ್ನನುಭವಿಸಿ, ಸರಸಸಲ್ಲಾಪಗಳನ್ನು ಮಾಡುತಾ ಸ್ವಲ್ಪಕೊತ್ತು ಮಲಗಿದ್ದು, ಆ ಬಳಿಕ ರಾಜಪುತ್ರನನ್ನು ತನ್ನ ಮನೆಗೆ ಬರಬೇಕೆಂದು ಪ್ರಾರ್ಥಿಸಿದಳು. ರಾಜಪುತ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡನು, ಆಬಳಿಕ ಅಲ್ಲಿ ಇಬ್ಬರೂ ಸುಖನಿದ್ರೆಯನ್ನು ಮಾಡಿದರು. ಬೆಳಗಾಗುವುದಕ್ಕೆ ಮುಂಚೆಯೇ ಆ ಧೂಮಕೇತುವು ಮಾಣಿಕ್ಯಪ್ರಭೆಯನ್ನು ಎತ್ತಿಕೊಂಡು ಹೋಗಿ ಅವಳ ಹಾಸಿಗೆಯ ಮೇಲೆ ಮಲಗಿಸಿ ಬಂದಿತು, ಮೂರನೆಯ ದಿನ ರಾತ್ರಿ ಆ ಚಂದ್ರಕೇತುವು ರಾಕ್ಷಸಿಯ ಸಹಾಯದಿಂದ, ಆ ಮಾಣಿಕ್ಯಪ್ರಭೆಯ ಮನೆಗೆ ಹೋಗಿ, ಅಲ್ಲಿರುವ ತೊಂದರೆಗಳನ್ನು ನೋಡಿ ಆಶ್ಚರ್ಯಪಡುತಾ, ಅವಳ ಹಾಸಿಗೆಯಮೇಲೆ ಕುಳಿತು ಆ ಸುಂದರಿಯನ್ನು ನಿದ್ರೆಯಿಂದೆಬ್ಬಿಸಿದನು. ಅವರಿಬ್ಬರೂ ಆ ರಾತ್ರಿ ರತ್ಯುಪರತಿಗಳಿಂದ ಆನಂದಪಟ್ಟು, ದಿವ್ಯವಾದ ಭಕ್ಷ್ಯಗಳನ್ನುತಿಂದು, ತಾಂಬೂಲವನ್ನು ಸೇವಿಸಿ, ಸುಗಂಧವನ್ನು ಬಳಿದುಕೊಂಡು, ಪುನಃ ಭೋಗಭಾಗ್ಯವನ್ನನುಭವಿಸಿ ಆಲಸ್ಯದಿಂದ ನಿದ್ರೆಗೈದರು. ಅನಂತರ ಆ ರಾಕ್ಷಸಿಯು ರಾಜಪುತ್ರನನ್ನು ಎತ್ತಿಕೊಂಡು ಬಂದು ಅವನ ಹಾಸಿಗೆಯ ಮೇಲೆ ಮಲಗಿಸಿಬಂದಳು

ಬೆಳಗಾದ ಮೇಲೆ ಆ ಮಾಣಿಕ್ಯಪ್ರಭೆಯು ದಾಸಿಯರು, ಮಾಣಿಕ್ಯಪ್ರಭೆಯು ನಿದ್ರೆಗೈಯ್ಯುತ್ತಿರುವುದನ್ನು ನೋಡಿ ಆಶ್ಚರ್ಯಪಡುತ್ತಾ, ಓ ದಾಸಿಯರೇ! ಅವಮಾನವುಂಟಾಯಿತು, ಪುರುಷನಾವನೋ ಬಂದು, ಆ ಸುಂದರಿಯೊಂದಿಗೆ ಭೋಗಿಸಿ ಹೋಗಿರುವಂತೆ ಕಾಣುತ್ತಿದೆ, ಇಲ್ಲದಿದ್ದರೆ ಈ ಬಾಲೆಯು ನೀರೆಯು ಬಿಚ್ಚಿ ಹೋಗಿ ನಲುಗಿರುವುದಕ್ಕೂ, ಕುಪ್ಪಸದ ಗಂಟು ಬಿಚ್ಚಿರುವುದಕ್ಕೂ, ಸ್ತನಗಳ ಮೇಲೆ ಉಗುರಿನ ಗುರ್ತುಗಳು ಕಾಣುತ್ತಿರುವುದಕ್ಕೂ, ಒಡವೆಗಳೆಲ್ಲಾ ಚೆಲ್ಲರಿರುವುದಕ್ಕೂ, ಹಣೆಯಲ್ಲಿಟ್ಟುಕೊಂಡಿದ್ದ ಕಸ್ತೂರಿಯು ತಿಲಕವು ಕರಗಿರುವುದಕ್ಕೂ, ಪುಷ್ಪಶಯನವೆಲ್ಲ ನಲುಗಿಹೋಗಿರುವುದಕ್ಕೂ, ಮುಖವೆಲ್ಲಾ ಬಾಡಿರುವುದಕ್ಕೂ, ಕೆನ್ನೆಗಳು ನಲುಗಿರುವುದಕ್ಕೂ ಕಾರಣವೇನು? ಹೀಗೆಂದು ಎಲ್ಲರೂ ಗುಂಪಾಗಿ ಸೇರಿ ಯೋಚನೆ ಮಾಡಿ, ಆಬಳಿಕ ಸುಂದರಿಯಾದ ಮಾಣಿಕ್ಯಪ್ರಭೆಯನ್ನು ನಿದ್ರೆಯಿಂದೆಬ್ಬಿಸಿ, ಆ ಸುಂದರಿಯಿಂದ ಯಾವ ಪ್ರತ್ಯುತ್ತರವೂ ಬಾರದಿರಲು ಅವರೆಲ್ಲರೂ ಹೋಗಿ ಈ ಸಂಗತಿಯನ್ನು ಮಾಣಿಕ್ಯಪ್ರಭೆಯ ತಾಯಿಗೆ ತಿಳಿಸಿದರು, ಆ ಗಂಧರ್ವರಾಜ ಸತಿಯು ದಾಸಿಯರ ಮಾತನ್ನು ಕೇಳಿ, ತನ್ನ ಮಗಳ ವಿಷಯವಾಗಿ ಮನಸ್ಸಿನಲ್ಲಿ ಚಿಂತಿಸುತ್ತಾ, ನಾಳೆಯ ದಿನ ಪರೀಕ್ಷಿಸಿ ನೋಡಬೇಕೆಂದು ಸುಮ್ಮನಿದ್ದಳು. ಮರುದಿನ ರಾತ್ರಿಯೂ ಕೂಡ ಆ ಚಂದ್ರಕೇತುವು ರಾಕ್ಷಸಿಯ ಸಹಾಯದಿಂದ ಮಾಣಿಕ್ಯಪ್ರಭೆಯ ಅಂತಃಪುರಕ್ಕೆ ಬಂದು ಸಕಲಭೋಗಗಳನ್ನೂ ಅನುಭವಿಸಿ, ಬೇಕಾದ ಭಕ್ಷ್ಯಗಳನ್ನು ತಿಂದು, ತಾಂಬೂಲವನ್ನು ಸೇವಿಸಿ, ಸುಗಂಧವನ್ನು ಲೇಪಿಸಿಕೊಂಡು, ಮಾಣಿಕ್ಯಪ್ರಭೆಯೊಂದಿಗೆ ರತ್ಯುಪರತಿಗಳಿಂದ ಆನಂದವನ್ನು ಅನುಭವಿಸಿ, ನಿದ್ರಿಸಿದ ಬಳಿಕ ಆ ರಾಕ್ಷಸಿಯು ಸಹಾಯದಿಂದ ಬೆಳಗಾಗುವುದರೊಳಗೆ ತನ್ನ ಹಾಸಿಗೆಯಲ್ಲಿ ಮಲಗಿದ್ದನು. ಮಾಣಿಕ್ಯಪ್ರಭೆಯು ಆಯಾಸದಿಂದ ಮೈಮರೆತು ನಿದ್ರಿಸಿದಳು. ಅರುಣೋದಯವಾದ ಕೂಡಲೆ ಗಂಧರ್ವಸತಿಯು ಮಗಳ ಅಂತಃಪುರಕ್ಕೆ ಬಂದು ನೋಡಿ, ದಾಸಿಯರ ಮಾತೆಲ್ಲಾ ನಿಜವೆಂದು ತಿಳಿದು ಕೊಂಡು, ಮಗಳನ್ನು ನಿದ್ರೆಯಿಂದೆಬ್ಬಿಸಿ, ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಪ್ರಮಾಣವಾಗಿ ನಿಜತ್ವವನ್ನು ಹೇಳಬೇಕೆಂದು ಮಗಳಿಂದ ಎಲ್ಲವನ್ನೂ ತಿಳಿದುಕೊಂಡು, ಮಗೂ! ಪೆದರಬೇಡವೆಂದು ಧೈರ್ಯವನ್ನು ಕೇಳಿ, ತನ್ನ ಅಂತಃಪುರಕ್ಕೆ ಬಂದು ಪತಿಗೆ ತಿಳಿಸಿದಳು. ಆಗ ಮನುತ್ತನಾದರೋ ತೋಕೆಯಮೇಲೆ ಕಾಲಿಟ್ಟ ಹಾವಿನಂತೆ ಉಸ್ಸೆಂದು ತನ್ನ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ಮಗಳ ಅಂತಃಪುರಕ್ಕೆ ಬೇಗ, ನಿನ್ನಿಂದ ನನಗೆ ಅಪಯಶಸ್ಸು ಬಂದಿತು, ನಿನಗೆ ಮೋಸಮಾಡಿ ತೆಗೆದುಕೊಂಡು ಹೋದ ನರಾಧಮನ ಪಟ್ಟಣವ

ನ್ನೆಲ್ಲ ಬೂದಿ ಮಾಡಿ, ಅವನ ತಲೆಯನ್ನು ಕತ್ತರಿಸಿಕೊಂಡು ಬಂದು ನಿನ್ನ ಅಂತಃಪುರಕ್ಕೆ ಕಟ್ಟುವೆನೆಂದು ಹೇಳಿ, ಅಲ್ಲಿದ್ದ ಹನ್ನೆರಡು ಜನ ಪರಿಚಾರಿಯವರನ್ನೂ ಶಿಕ್ಷಿಸಿ, ರಣಭೇರಿಯನ್ನು ಹೊಡೆಯಿಸಿ, ರಣಶೂರನನ್ನೂ, ಮಾಯಾವಿಗಳನ್ನೂ, ಮಂತ್ರಗಾರರನ್ನೂ ಹಿಂಬಿಟ್ಟುಕೊಂಡು, ಐನೂರು ಗಂಧರ್ವಹಯಗಳನ್ನು ತೆಗೆದುಕೊಂಡು ಹೋಗಿ, ಆ ಪಾಟಲೀಪುರವನ್ನು ಮುತ್ತಿದನು. ಈ ವೃತ್ತಾಂತವನ್ನು ಚಂದ್ರಕೇತುವು ಕೇಳಿ, ತನ್ನ ತಂದೆಗೆ ಧೈರ್ಯವನ್ನು ಹೇಳಿ, ಪುರಜನರಿಗೆ ಅಭಯವನ್ನು ಕೊಟ್ಟು, ಆ ಧೂಮಕೇತುವನ್ನು ಧ್ಯಾನಿಸಿ ಈ ಸಂಗತಿಯನ್ನು ಹೇಳಿದನು, ಆ ಭೂತವಾದರೊ, ಮಗೂ! ಹೆದರಬೇಡವೆಂದು ಘೋರಾಕಾರವನ್ನು ಧರಿಸಿ, ಗಂಧರ್ವಸೈನ್ಯದ ಮೇಲೆ ಬಿದ್ದು, ಕೆಲವರನ್ನು ಕೊಲ್ಲುತ್ತಲೂ, ಕೆಲವರನ್ನು ನುಂಗುತ್ತಲೂ, ಚಿತ್ರವಧೆಮಾಡುತ್ತಲಿತ್ತು. ಆ ಮರುತ್ತನು ಕೋಪಾವೇಶದಿಂದ, ಆ ರಾಕ್ಷಸನಮೇಲೆ ವಿವ್ಯಾಸ್ತ್ರಗಳನ್ನು ಪ್ರಯೋಗಿಸಲು. ಆ ರಾಕ್ಷಸನು ಆ ಬಾಣಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಆಚೆಗೆ ಬಿಸಾಡುತ್ತಾ, ಆ ಮರುತ್ತನನ್ನು ಹಿಡಿದುಕೊಂಡು, ನನ್ನನ್ನು ಮರೆತೆಯಾ! ನಾನು ಧೂಮಕೇತುವೆಂದು ನಿನಗೆ ಗೊತ್ತಿಲ್ಲವೇ! ಎಂದು ಆ ಮರುತ್ತನನ್ನು ತೆಗೆದುಕೊಂಡು ಹೋಗಿ, ಆ ಚಂದ್ರಕೇತುವಿನ ಬಳಿಯಲ್ಲಿಟ್ಟು, ಮಗನೀಯನೆ! ಇವನೇ ನಿಮ್ಮ ಮರುತ್ತನೆಂದೂ, ನಿನ್ನ ಅಪ್ಪಣೆಯಾದರೆ ಇವನನ್ನು ನನ್ನ ಆಹಾರವಾಗಿ ಮಾಡಿಕೊಳ್ಳುವೆನೆಂದೂ ನುಡಿಯಿತು. ಚಂದ್ರಕೇತುವು ಬೇಡವೆಂದು ಆ ಧೂಮಕೇತುವಿಗೆ ಅಡ್ಡಬಿದ್ದು, ಆ ಗಂಧರ್ವಪತಿಗೆ ಅನೇಕ ಮರ್ಯಾದೆಗಳನ್ನು ಮಾಡಿದನು, ಮರುತ್ತನಾದರೊ ಬಗ್ಗಿಸಿದ ತಲೆಯನ್ನು ಮೇಲಕ್ಕೆತ್ತದೆ ದುಃಖಿಸುತ್ತಿದ್ದನು. ಇಷ್ಟರಲ್ಲಿ ಹತಶೇಷರಾದ ಗಂಧರ್ವರು ಓಡಿಹೋಗಿ ಕುಬೇರನಿಗೆ ತಿಳಿಯಪಡಿಸಿದರು, ಆ ಕುಬೇರನು ತನ್ನ ಜೊತೆಗಾರನಾದ ಮರುತ್ತನ ವಿಷಯದಲ್ಲಿ ವೃತ್ತಾಂತವನ್ನು ಹೇಳಿ, ಇಂದ್ರಾದಿ ಸಕಲದೇವತೆಗಳನ್ನೂ, ತನ್ನ ಮಿತ್ರನಾದ ಈಶ್ವರನನ್ನೂ ಜೊತೆ ಮಾಡಿಕೊಂಡು, ಯುದ್ಧಪ್ರಯತ್ನವನ್ನುಮಾಡಿ, ಆ ಪಾಟಲೀಪುರದ ಬಳಿ ಬಂದನು. ದೇವದುಂದುಭಿಗಳು ಮೊಳಗಲು, ಸೂರ್ಯಕೇತು ಮಹಾರಾಯನು ತತ್ತರಿಸಿಹೋಗಿ, ಮಗನ ಬಳಿ ಬಂದು, ಓ ಸುಪುತ್ರರತ್ನವೆ! ಈಶ್ವರನು ಷಣ್ಮುಖ ಮೊದಲಾದವರೊಂದಿಗೂ, ನಂದೀಶ್ವರ ಭೃಂಗೀಶ್ವರ ಮೊದಲಾದ ಪ್ರಮಥಗಣಗಳೊಂದಿಗೂ, ಇಂದ್ರಾದಿ ದೇವತೆಗಳೊಂದಿಗೂ, ಕುಬೇರನೆ ಮೊದಲಾದ ಯಕ್ಷ ಗಂಧರ್ವರೊಂದಿಗೂ ಸೇರಿ ಯುದ್ಧಕ್ಕೆ ಬಂದಿರುವನು, ಆತನು ದೃಷ್ಟಿಸಿ ನೋಡಿದ ಮಾತ್ರದಿಂದಲೇ ಸಕಲ ಲೋಕಗಳೂ ಬೂದಿಯಾಗು

ವವು. ಅಯ್ಯೋ! ನೀನು ಎಂತಹ ತಪ್ಪುಮಾಡಿದೆ! ಎಂದು ಕೇಳಲು, ಚಂದ್ರಕೇತುವು ತಂದೆಗೆ ನಮಸ್ಕಾರ ಮಾಡಿ, ಧೈರ್ಯವನ್ನು ಹೇಳಿ, ರಾಕ್ಷಸಿಯನ್ನು ಸ್ಮರಿಸಿ ಈ ಸಂಗತಿಯನ್ನು ತಿಳಿಸಿದನು, ಆ ರಾಕ್ಷಸಿಯು ಮಗೂ! ನೀನು ಭಯಪಡಬೇಡವೆಂದು ನುಡಿದು, ಘೋರಾಕಾರದಿಂದ ಹೊರಟು, ಅನೇಕ ರಾಕ್ಷಸರನ್ನು ತನ್ನ ಮಾಯೋಬಲದಿಂದ ನಿರ್ಮಿಸಿ, ದೇವಸೈನ್ಯದಮೇಲೆ ನುಗ್ಗಿ, ಅವರನ್ನೆಲ್ಲ ಜಜ್ಜುಗುಟ್ಟಿ, ಭೂಮಿಯ ಮೇಲೆ ಕೆಲವರನ್ನು ಬಡಿಯುತ್ತ, ಕೆಲವರನ್ನು ಕೊಲ್ಲುತಾ, ಮತ್ತೆ ಕೆಲವರನ್ನು ನುಂಗುತಾ ಇರುವುದನ್ನು ಇಂದಾದಿ ದೇವತೆಗಳು ಕಂಡು ಸಹಿಸಲಾರದೆ, ಕೋಪದಿಂದ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು. ಆ ಭೂತವು ದಿವ್ಯಾಸ್ತ್ರಗಳನ್ನೆಲ್ಲಾ ಲೀಲಾಜಾಲದಿಂದ ಕೈಯ್ಯಲ್ಲಿ ಹಿಡಿದು ಆಚೆಗೆ ಬಿಸಾಡುತ್ತ, ಷಣ್ಮುಖ ಮೊದಲಾದ ಪ್ರಮಥಗಣಂಗಳಿಗೆ ಬಾಧೆ ಇಡುತಾ, ಅವರ ವಿಮಾನಗಳನ್ನು ಎತ್ತಿ ಸಮುದ್ರಸೊಳಕ್ಕೆ ಬಿಸಾಡುತಾ ಇರಲು ಇದನ್ನು ಸಹಿಸಲಾರದೆ ಈಶ್ವರನು ತಾನೇ ಆ ಭೂತದ ಮೇಲೆ ಬಿದ್ದು ಘೋರವಾಗಿ ಕಾದುತ್ತಿದ್ದನು, ಈ ವರ್ತಮಾನವನ್ನ ನಾರದರು ಕೂಡಲೇ ಬ್ರಹ್ಮಲೋಕಕ್ಕೆ ಹೋಗಿ ಚತುರ್ಮುಖನಿಗೆ ತಿಳಿಸಲು, ಆಗ ಬ್ರಹ್ಮದೇವನು, ಆಹಾ! ಪ್ರಪಂಚವೇ ಲಯವಾಗುವ ಹೊತ್ತು ಬಂದಿತಲ್ಲಾ! ಎಂದು ಬೇಗನೆ ವಿಷ್ಣುಲೋಕಕ್ಕೆ ಹೋಗಿ, ಶ್ರೀಮನ್ನಾರಾಯಣನಿಗೆ ಇದನ್ನು ತಿಳಿಸಿದನು. ಮಹಾವಿಷ್ಣುವಾದರೊ ತಡಮಾಡದೆ, ಗರುಡಾರೂಢನಾಗಿ ರಣಭೂಮಿಗೆ ಬಂದು, ಈಶ್ವರನನ್ನೂ ಇಂದಾದಿ ಸಕಲ ದೇವತೆಗಳನ್ನು, ಸಮಾಧಾನಗೊಳಿಸಿ, ಯುದ್ಧವನ್ನು ಅಲ್ಲಿಗೆ ನಿಲ್ಲಿಸಿ, ಶಿವನನ್ನು ಕುರಿತು, ಓ ಪಾರ್ವತೀಪತೇ! ಇದು ಭೂಮಿಕೇತುವು! ಇವನ್ನು ಕೊಲ್ಲುವುದು ನಮಗೆ ಸಾಧ್ಯನೆ! ನಿನಗೆ ತಿಳಿಯದೆ? ಆ ರಾಕ್ಷಸಿಯು ಭೃಗುಮಹರ್ಷಿಯು ಆಜ್ಞಾಯಂತೆ ರಾಜಪುತ್ರನಿಗೆ ಸಹಾಯವಾಗಿ ಇಷ್ಟು ಕಾರ್ಯಗಳನ್ನು ನಡೆಸಿರುವುದೆಂದು ತಿಳಿ ಹೀಗೆಂದು ಶಿವನನ್ನು ಸಮಾಧಾನಪಡಿಸಿ, ಎಲ್ಲರೂ ಶಾಂತವಾಗುವಂತೆ ಮಾಡಿ, ಆ ಮರುತ್ತನ ಮಗಳಾದ ಮಾಣಿಕ್ಯಪ್ರಭೆಯನ್ನು ಆ ಚಂದ್ರಕೇತು ಮಹಾರಾಯನಿಗೆ ಕೊಡಿಸಿ, ವಿವಾಹ ಮಹೋತ್ಸವವನ್ನು ಬಳೆಯಿಸಿ, ಎಲ್ಲರೂ ತಮ್ಮ ತಮ್ಮ ನಿಲಯಗಳಿಗೆ ಹೊರಟುಹೋದರು. ಅನಂತರ ಚಂದ್ರಕೇತುವು ಸುಂದರಿಯಾದ ಮಾಣಿಕ್ಯಪ್ರಭೆಯೊಂದಿಗೆ ಸುಖಾನಂದಗಳನ್ನು ಅನುಭವಿಸುತ್ತಲಿದ್ದನು. ಹೀಗೆಯೇ ಕೆಲವು ದಿನಗಳು ಕಳೆದ ಬಳಿಕ ಆ ಸೂರ್ಯಕೇತು ಮಹಾರಾಯನು ಕುವರನಾದ ಚಂದ್ರಕೇತು ಮಹಾರಾಯನನ್ನು ಕುರಿತು, ಮಗೂ! ನಮ್ಮ ಕುಲಾಚಾರ ಪದ್ಧತಿಯಂತೆ ನೀನು ಭೂಲೋ

ಕಗ ರಾಜಪುತ್ರಿಯನ್ನು ಮದುವೆಮಾಡಿಕೊಂಡು ಕೀರ್ತಿ ಪ್ರತಿಷ್ಠೆಗಳನ್ನು ಪಡೆಯುವೀಕೆಂದನು. ರಾಜಪುತ್ರನು ಆ ಧೂಮಕೇತುವನ್ನು ಸ್ಮರಿಸಿ, ಅದನ್ನು ಕುರಿತು ಅವರ ತಂದೆಯು ಅಭಿಪ್ರಾಯವನ್ನು ತಿಳಿಸಿದನು ಆ ಧೂಮಕೇತುವು ಒಳ್ಳೆಯದೆಂದುಕೇಳಿ, ಅಲ್ಲಿಂದಹೊರಟು, ಕ್ಷಣಮಾತ್ರದಲ್ಲಿ ಸಕಲದೇಶದ ರಾಜಪುತ್ರಿಯರನ್ನೂ ತಂದು ಎದುರಿಗೆ ನಿಲ್ಲಿಸಿ, ಓ ಕನ್ಯಕಾಮಣಿಯರೇ! ಈ ರಾಜಪುತ್ರನು ನಿಮ್ಮಗಳಲ್ಲಿ ಯಾರ ಕೊರಲಲ್ಲಿರುವ ಚಂದ್ರಹಾರವನ್ನು ತಗೆದುಕೊಂಡು ತಾನು ಧರಿಸುವನೊ ಅಂತವರು ಈ ಪುಷ್ಪಮಾಲಿಕೆಯನ್ನು ಈ ರಾಜಪುತ್ರನ ಕೊರಲಿಗೆ ಹಾಕಿರೆಂದು ಎಲ್ಲರ ಕೈಯಲ್ಲೂ ಒಂದೊಂದು ಹೂವಿನ ಹಾರವನ್ನು ಕೊಟ್ಟು ರಾಜಪುತ್ರನಿಗೂ ಒಂದು ಹೂವಿನ ಹಾರವನ್ನ ಕೊಟ್ಟನು. ಅನಂತರ ರಾಜಪುತ್ರನನ್ನು ಕುರಿತು, ಪ್ರತಿಯೊಬ್ಬ ರಾಜಕುಮಾರಿಯನ್ನೂ ತೋರಿಸಿ ಅವರ ತಾಯಿತಂದೆಗಳನ್ನೂ, ದೇಶಕೋಶಗಳನ್ನೂ ಹೇಳುತ್ತಿರಲು ಆ ಚಂದ್ರಕೇತುವು ಸಿಂಧೂದೇಶದ ರಾಜಪುತ್ರಿಯಾದ ಚಂದ್ರಪ್ರಭೆಯನ್ನು ಕೋರಿ, ಆ ಸುಂದರಿಯ ಕೊರಲಿಗೆ ಅಮೂಲ್ಯವಾದ ಚಂದ್ರಹಾರವನ್ನು ಹಾಕಿ, ಆ ಸುಕುಮಾರಿಯ ಕೈಯೆಲ್ಲಿದ್ದ ಪ್ರವಾಲಮಾಲೆಯನ್ನು ತನ್ನ ಕೊರಲಿಗೆ ಹಾಕಿಸಿಕೊಂಡನು. ಆ ಬಳಿಕ ಆ ರಾಕ್ಷಸಿಯು ಎಲ್ಲಾ ರಾಜಪುತ್ರಿಯರನ್ನೂ ಎತ್ತಿಕೊಂಡುಹೋಗಿ, ಅವರವರ ಹಾಸಿಗೆಯ ಮೇಲೆ ಮಲಗಿಸಿ ಬಂದಳು. ಬೆಳಗಾದಮೇಲೆ ಆ ರಾಜಪುತ್ರಿಯರು ತಮ್ಮತಮ್ಮ ತಾಯಿತಂದೆಗಳಿಗೆ ನಡೆದ ವರ್ತಮಾನವನ್ನೆಲ್ಲಾ ವಿವರಿಸಿದರು. ಆ ತಾಯಿತಂದೆಗಳಾದರೊ, ಮಕ್ಕಳಿರಾ! ನಿಜವಾಗಿ ನಡೆಯಿಲ್ಲ, ನಿಮಗ ಸ್ವಪ್ನವಾಗಿರಬಹುದು, ಹೀಗೆಂದರೂ ಕೂಡ ಅವರು ಸ್ವಪ್ನವಲ್ಲವೆಂದೂ ನಿಜವಾಗಿಯೇ ನಡೆದದ್ದೆಂದೂ, ಆ ರಾಜಪುತ್ರನ ಸೌಂದರ್ಯವನ್ನೂ ಮಾಣಿಕ್ಯಪ್ರಭೆಯ ಸೊಬಗನ್ನೂ ವರ್ಣಿಸುತ್ತಿದ್ದರು. ಅವರೂ ಸಂಶಯದಿಂದ ಆಲೋಚಿಸುತ್ತಿದ್ದರು. ಅತ್ತ ಆ ಚಂದ್ರಕೇತುವು ತಾನು ಸಿಂಧುದೇಶದ ರಾಜಪುತ್ರಿಯನ್ನು ಕೋರಿರುವೆನೆಂದು ಜನನೀಜನಕರಿಗೆ ತಿಳಿಸಲು, ಅವರು ಸಂತೋಷಪಟ್ಟು, ಸಿಂಧೂದೇಶಾಧೀಶನಿಗೆ ನಡೆದ ವರ್ತಮಾನವನ್ನೆಲ್ಲಾ ತಿಳಿಸಿದರು. ಆ ಸಿಂಧೂರಾಜನು ಸೂರ್ಯಕೇತು ಮಹಾರಾಜನ ಶುಭಲೇಖನವನ್ನು ಓದಿನೋಡಿಕೊಂಡು, ಆಶ್ಚರ್ಯಾನಂದಗಳಿಂದ ಕೂಡಿ, ಕೂಡಲೆ ತನ್ನ ಪತ್ನಿಯನ್ನೂ ಬಂಧುವರ್ಗವನ್ನೂ ಜೊತೆಯಲ್ಲಿಯೇ ಕರೆದುಕೊಂಡು, ಪಾಟಲೀಪುರಕ್ಕೆ ಬಂದು, ತನ್ನ ಪುತ್ರಿಯು ಮದುವೆಯನ್ನು ನೆರವೇರಿಸಿ, ಅಳಿಯನನ್ನು ಕೊಂಡಾಡಿ, ಮಗಳಿಗೆ ಬುದ್ಧಿಮಾತುಗಳನ್ನು ಕೇಳಿ, ಆನಂದಾತಿಶಯದಿಂದ ಅನೇಕ ವಸ್ತ್ರವಾಭರಣಗಳನ್ನು ಅಳಿಯನಿಗೆ ಕೊಟ್ಟು, ತಾನು ತನ್ನ ದೇಶವ

ನ್ನು ಸೇರಿದನು. ಆಬಳಿಕ ಚಂದ್ರಕೇತುವು ಪಟ್ಟಾಭಿಷಿಕ್ತನಾಗಿ, ರಾಜ್ಯವನ್ನು ಪರಿಪಾಲಿಸುತ್ತಾ, ನವಖಂಡಮಂಡಲಾಧಿಪತಿಯಾಗಿ, ಸಕಲ ರಾಜರನ್ನೂ ಅಧೀನರನ್ನಾಗಿ ಮಾಡಿಕೊಂಡು, ಅವರಿಂದ ಕಪ್ಪಕಾಣಿಕೆಗಳನ್ನು ಪಡೆಯುತ್ತಾ, ಚಕ್ರವರ್ತಿಯೆನಿಸಿಕೊಂಡು. ಅನೇಕ ಯಜ್ಞಯಾಗಾದಿಗಳನ್ನು ಮಾಡಿ, ಧರ್ಮವನ್ನು ನಾಲ್ಕು ಪಾದಗಳಿಂದ ನಡೆಯಿಸುತ್ತಾ, ಬಹುದಿನಗಳು ರಾಜ್ಯಸುಖವನ್ನನುಭವಿಸುತ್ತಾ, ಪುತ್ರೀ ಪುತ್ರರನ್ನು ಪಡೆದು, ಸಕಲ ಭೋಗಭಾಗ್ಯಗಳನ್ನೂ ಅನುಭವಿಸಿ, ಅನಂತರ ವಿರಕ್ತನಾಗಿ ಒಂದಾನೊಂದುದಿನ ಧೂಮಕೇತುವನ್ನು ಸ್ಮರಿಸಿಕೊಂಡು, ಮಹರ್ಷಿಯು ಆ ಜ್ಞಾಪ್ರಕಾರವಾಗಿ, ಆ ನಾಗಕನ್ನಕೆಯರಿಂದ ಅಚಲಪರಿಪೂರ್ಣ ಪ್ರಭಾವವನ್ನು ಗ್ರಹಿಸಿ, ಪ್ರಕೃತಿದ್ವಯರು ದೋಷರಹಿತನಾಗಜೀಕೆಂದಿರುವೆನು, ನೀನು ನನ್ನಲ್ಲಿ ಪುತ್ರನಾತ್ಸ್ನೇಹವನ್ನಿಟ್ಟು, ನಾಗಲೋಕಕ್ಕೆಹೋಗಿ, ಅನಂತನೆಂಬ ನಾಗೇಂದ್ರನ ಕುವರಿಯೆರಾದ ಕಾಂತಾಮಣಿ, ಚಂದ್ರಕಾಂತಾಮಣಿ, ಪೂರ್ಣಚಂದ್ರಕಾಂತಾಮಣಿ, ಪರಿಪೂರ್ಣಚಂದ್ರಕಾಂತಾಮಣಿ, ಸರ್ವಪರಿಪೂರ್ಣ ಚಂದ್ರಕಾಂತಾಮಣಿಯೆರೆಂಬ ಕಾಮನಂಚಾರಿಗಳಾದ ಐವರನ್ನೂ ಕರೆದುಕೊಂಡು ಬರಬೇಕೆನ್ನಲು, ಆ ಧೂಮಕೇತುವು ಹಾಗೆಯೇ ಆಗಲೆಂದು ಹೊರಟು, ಆ ಐವರು ಕನ್ನಿಕೆಯರನ್ನೂ ತೆಗೆದುಕೊಂಡುಬಂದು ರಾಜಪುತ್ರನಿಗೆ ಎದುರಾಗಿ ನಿಲ್ಲಿಸಿತು. ಆ ನರೇಂದ್ರನು ಅವರಿಗೆ ಪೂರ್ವದ ತನ್ನ ಸಂಬಂಧವನ್ನು ಹೇಳಿ, ಮರಾತೆಯಿಂದ ಉಚಿತಾಸನದಲ್ಲಿ ಕುಳ್ಳಿರಿಸಿ, ಮಹಾಪ್ರಭಾವದಿಂದ ಕೂಡಿದ ಕನ್ನೆಯರಿರಾ! ನಿಮ್ಮಮಹಿಮೆಯೆಲ್ಲವೂ ಭೃಗುಮಹರ್ಷಿಯಿಂದ ಗೊತ್ತಾಗಿದೆ. ನಾನು ಪರಮ ಪದವನ್ನು ಹೊಂದಬೇಕೆಂದಿರುವೆನು. ನನಗೆ ಅಚಲ ಪರಿಪೂರ್ಣ ಪ್ರಭಾವವನ್ನು ಬೋಧಿಸಬೇಕೆಂದು ಪ್ರಾರ್ಥಿಸಲು, ಆ ನಾಗಕನ್ನಿಕೆಯರು ಪರಮಾಶ್ಚರ್ಯದಿಂದ ಕೂಡಿ, ಪುಣ್ಯಮೂರುತಿಯೇ! ನೀನು ಪುನರ್ಜನ್ಮವುಂಟಾಗಬಾರದೆಂದು ಅಚಲ ಪರಿಪೂರ್ಣ ಪ್ರಭಾವವನ್ನು ಬೋಧಿಸೆಂದು ಕೇಳಿರುವೆ. ಆಹಾ! ರಾಜಪುತ್ರನೆ! ನಿನ್ನಂಥ ಭಾಗ್ಯವಂತರು ಲೋಕದಲ್ಲಿಯಾರಿರುವರು! ರಾಜಾತ್ಮಜಾ! ನಾವು ಹೇಳುವುದನ್ನು ಶ್ರದ್ಧೆಯಿಂದ ಕೇಳೆಂದು ಇಂತೆಂದರು.

ನಾಗಕನ್ಯಕೆಯರು ಚಂದ್ರಕೇತು ಮಹಾರಾಯನಿಗೆ ಬೋಧಿಸಿದ ಅಚಲ ಪರಿಪೂರ್ಣ ಪ್ರಭಾವವು.

ಮೊದಲನೆಯ ನಾಗಕನ್ನಕೆಯಾದ ಕಾಂತಾಮಣಿಯು ಚಂದ್ರಕೇತುವನ್ನು ಕುರಿತು ಇಂತೆಂದಳು;—ರಾಜಾಧಿರಾಜಾ!

ಶ್ಲೋ॥ ಭ್ರಮೇಣಾಹಂ ಭ್ರಮೇಣತ್ವಂ|ಭ್ರಮೇಣೋಯಂನಗಕಾಜನಾಃ ॥

ಹೀಗೆಂದು ಹೇಳಲ್ಪಟ್ಟಿರುವ ಕಾರಣ ಪ್ರಕೃತಿದ್ವಯವೂ, ಆ ರೂಪವನ್ನು ಪಡೆದಿರುವ ತ್ರಿಲೋಕ ವಾಸಿಗಳೆಲ್ಲರೂ, ಹೊನ್ನು ಹೆಣ್ಣುಗಳಲ್ಲಿ ಆಸೆಯುಳ್ಳವರಾಗಿರುವರು. ಆ ಆಶೆಗೆ ಭ್ರಮೆಯು ಮೂಲವು. ಭ್ರಮೆಗೆ ಚಿತ್ತವು ಮೂಲವು. ಆ ಚಿತ್ತಕ್ಕೆ ಮುದ್ದುಗುವರನು ಮನ್ಮಥನು. ಆ ಕಾಮಿನಿಯಿಂದಲೇ ಸಕಲ ಭೂತಗಳ ಉತ್ಪತ್ತಿಯು. ಆ ಸತ್ತು ಚಿತ್ತುಗಳ ಸಂಧಾನವೇ ಆನಂದವು. ಇದನ್ನೇ ಸಚ್ಚಿದಾನಂದವೆಂದೂ, ನಾದ ಬಿಂದುಕಳೆಗಳೆಂದೂ, ಇದನ್ನೇ ತತ್ಪದ ತ್ವಂಪದ ಅಸಿಪದಗಳೆಂದೂ, ಇದನ್ನೇ ಕಾರಣ ಕಾರ್ಯಗಳಿಂದೂ ಹೇಳುವರು. ಇದನ್ನೇ ಪ್ರಪಂಚವೆಂದೂ, ಮಿಥ್ಯಾ ಸ್ವರೂಪವೆಂದೂ, ಭ್ರಾಂತಿಯೆಂದೂ ಕರೆಯುವರು. ಭ್ರಾಂತಿಗೆ ಮೂಲವಿಲ್ಲ. ಯಾವಾಗಲೂ ಸಚ್ಚಿದಾನಂದರಾಹಿತ್ಯವೆಂದು ಹೇಳಿದಳು.

ಎರಡನೆಯ ಕನ್ನೆಯಾದ ಕಂದ್ರಕಾಂತಾಮಣಿಯು ದೊರೆಯನ್ನು ನೋಡಿ, ಚಂದ್ರಕೇತು ಮಹಾರಾಯನೆ!

ಶ್ಲೋ॥ ಜನ್ಮಾಭಾವೆ ಕರ್ಮನಾಸ್ತಿ ಕರ್ಮಾಭಾವೆಫಲಂನಹಿ।
ಫಲಾಭಾವೆ ಭಯಂ ಕುತ್ರ ಭಯಾಭಾವೆ ನಸಂಶಯಃ॥

ಎಂದು ಹೇಳಲ್ಪಟ್ಟಿರುವುದರಿಂದ ನಾಮರೂಪಗಳಿರುವ ಎಲ್ಲವನ್ನೂ ಭ್ರಾಂತಿ ಎರಕವೆಂದು ಹೇಳುವರು. ಮಾಯೆಗೆ ಮೂಲವಿಲ್ಲ. ಪ್ರಕೃತಿದ್ವಯವೆನಾದ ಶರೀರಾತ್ಮಕವೇ ಎರಕ. ಎರಕಕ್ಕೆ ನಿಲ್ಲುಪಿಯಿಲ್ಲ. ಇಂದ್ರಜಾಲವು ನಟಿಸುತ್ತಿರುವುದು. ಈ ಪ್ರಪಂಚದಲ್ಲಿ ಎರಕವೇ ಮಾಯಾಭೂತವಾದದ್ದು. ಅಚಲ ಪರಿಪೂರ್ಣಬ್ರಹ್ಮವೇ ಕಾಲದಲ್ಲಿಲ್ಲವೆ ಹೋಗದು. ಅನೇಕ ಮಾಯೆಗಳನ್ನೂ ಎರಕವನ್ನೂ ಬ್ರಹ್ಮವೆಂದು ಭಾವಿಸಿ, ಈಷ್ಣಾತ್ರಯಮತಗಳುಳ್ಳವರಾಗಿ, ತಮಗೆ ಸುಖ ಸಂತಾಪಗಳೂ, ಪುಣ್ಯಪಾಪಗಳೂ, ಬಂಧನೋಕ್ಷಗಳುಂಟಾಗುವುವೆಂದೂ, ಭಕ್ತಿ ವೈರಾಗ್ಯ ಯೋಗ ಜ್ಞಾನಗಳೇ ಪದವಿಗಳಿಗೆ ಮಾರ್ಗಗಳೆಂದೂ, ಸಚ್ಚಿದಾನಂದವೇ ಸತ್ಯವೆಂತಲೂ, ವೃಥಾ ಮನುಷ್ಯಯಿಂದ ನಿಜಸ್ವರೂಪವನ್ನು ತಿಳಿಯಲಾರದೆ ಮಾಡಾನೆಯು ತನ್ನ ಮೇಲೆ ಮಣ್ಣನ್ನು ಎರಚಿಕೊಳ್ಳುವಂತೆ ನಿಧಿನಿಷೇಧ ನಿಯಮ ನಿಷ್ಠ ಉಪವಾಸ ಸ್ನಾನಜಪಹೋಮಾದಿ ಕ್ರಿಯೆಗಳನ್ನು ಮಾಡುವರೆಂದು ತಿಳಿಸಿದಳು.

ಮೂರನೆಯ ಕನ್ನೆಯಾದ ಪೂರ್ಣಚಂದ್ರಕಾಂತಾಮಣಿಯು ರಾಜನನ್ನು ಕುರಿತು ಇಂತೆಂದಳು, ರಾಜಶ್ರೇಷ್ಠನೆ ಕೇಳು!

ಶ್ಲೋ॥ ಇಂದ್ರಜಾಲಮಿದಂಸರ್ವಂ। ಯಥಾ ಮರುಮರೀಚಿಕಾ॥
ಅಖಂಡಿತಮನಾಕಾರಂ। ವರ್ತತೆ ಕೇವಲಂ ಶಿವಂ॥

ಈಗೆಂದು ಹೇಳಲ್ಪಟ್ಟಿರುವುದರಿಂದ ಒಣಗಿದ ಮಾವಿನಕಾಯಿಯಲ್ಲಿ ನೀರು ಇಲ್ಲದಿರುವಂತೆ, ಅಚಲಪರಿಪೂರ್ಣ ಬ್ರಹ್ಮದಲ್ಲಿ ವ್ಯಸನವು ಸೇರಿಲ್ಲವು

ನಾಮರೂಪಗಳಿಂದ ಕೂಡಿದ ಚೇತನವೆಲ್ಲವೂ ಮಾಯೆಯು, ನೀನೂ, ನಾನೂ ಪ್ರಪಂಚವು. ನೀನೂ ನಾನೂ ರಾಮತ್ವವೇ ಪ್ರಪಂಚರಾಮತ್ವವು. ಈ ಪರಿಪೂರ್ಣಕ್ಕಿಂತಲೂ ಬೇರೆ ಯಾವುದೂ ಇಲ್ಲ. ಸರ್ವವೂ ಭ್ರಾಂತಿರೂಪವೆಂದು ತಿಳಿಯಲಾರದೆ, ಅನೇಕರು ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧಿಗಳೆಂಬ ಅಷ್ಟಾಂಗಯೋಗಗಳನ್ನೂ, ಮಂತ್ರ, ಲಯ, ಹಠ, ರಾಜಯೋಗಗಳನ್ನೂ, ನಾನಾವಿಧವಾದ ಮುದ್ರೆಗಳನ್ನೂ, ಪ್ರಣವವೇ ಮೊದಲಾದ ಮಹಾಮಂತ್ರಗಳನ್ನೂ ಅಭ್ಯಾಸಮಾಡಿ, ಹೆಚ್ಚಿದ ಪ್ರಯಾಸವನ್ನು ಪಡೆಯುವರು. ಸಾಧಕನಿಗೆ ಇವುಗಳಿಂದ ಪ್ರಯೋಜನವಿಲ್ಲ. ಸಚ್ಚಿದಾನಂದವು ನಿಲ್ಲುವುದಿಲ್ಲ. ನಿರ್ಮಲವಾದ ದೇಹಕ್ಕೆ ಅಮೇಧ್ಯವನ್ನು ಬಳಿದುಕೊಂಡು, ಅದರ ದುರ್ಗಂಧವನ್ನು ನೀರಿನಲ್ಲಿ ತೊಳೆದು ಬಿಟಿಮಾಡುವಂತೆ ತಾನೂ ನಿರ್ಮಲವಾದ ಅಚಲ ಪರಿಪೂರ್ಣನಾಗಿದ್ದಾಗ್ಯೂ, ಭ್ರಾಂತಿಯಿಂದ ಅನೇಕ ಕರ್ಮಗಳನ್ನು ಮಾಡಿ, ಜನನ ಮರಣ ಪ್ರವಾಹವನ್ನು ಬಿಡಲಾರದೆ ಇರುವರೆಂದು ಹೇಳಿದಳು.

ನಾಲ್ಕನೆಯ ಕನ್ನೆಯಾದ ಪರಿಪೂರ್ಣ ಚಂದ್ರಕಾಂತಾಮಣಿಯು ರಾಜನನ್ನು ನೋಡಿ, ರಾಜವರ್ಯಾ!

ಶ್ಲೋ॥ ಕ್ಷೇತ್ರಕ್ಷೇತ್ರಜ್ಞಯೋರನ್ಯಂ । ನಾಮರೂಪವಿವರ್ಜಿತಂ ॥
ಸದಾತ್ರಿಪುಟಿರಾಹಿತ್ಯಂ । ಸರ್ವಂದ್ವಂದ್ವವಿವರ್ಜಿತಂ ॥

ಎಂದು ಹೇಳಲ್ಪಟ್ಟಿರುವುದರಿಂದ ಅಚಲಪರಿಪೂರ್ಣಬ್ರಹ್ಮವು ಜ್ಞಾನವಲ್ಲವು, ಅಜ್ಞಾನವೂ ಅಲ್ಲ, ಸತ್ಯಾಸತ್ಯಗಳೂ, ಧರ್ಮಾಧರ್ಮಗಳೂ ಅಲ್ಲವು. ಮತ್ತು ಪರಮಾತ್ಮನಾತ್ಮವೂ, ಜೀವೇಶ್ವರರೂ, ದೇಹಿದೇಹಗಳೂ, ಕ್ಷರಾಕ್ಷರಗಳೂ ಅಲ್ಲವು, ಸಚ್ಚಿದಾನಂದವೂ ಅಲ್ಲ, ಪ್ರಕೃತಿದ್ವಯರಹಿತವಾದ ಪರಿಪೂರ್ಣವಾದುದರಿಂದ ಮಾತನಾಡುವುದಿಲ್ಲ, ಮಾತನಾಡಿಸುವುದೂ ಇಲ್ಲ, ಕೇಳುವುದೂ ಇಲ್ಲ, ತಿನ್ನುವುದೂ ಇಲ್ಲ, ಚಲಿಸುವುದೂ ಇಲ್ಲ, ಸರ್ವಕಾಲದಲ್ಲಿಯೂ, ಸರ್ವಾವಸ್ಥೆಯಲ್ಲಿಯೂ ವಿಕರೀತಿಯಾಗಿರುವುದು, ನಾಮರೂಪಗಳಿಲ್ಲಿದ ಪರಿಪೂರ್ಣವನ್ನು ನೋಡಲಾಗುವುದಿಲ್ಲವೆಂದು ಹೇಳುವರು ಅಚಲಪರಿಪೂರ್ಣದಿಂದ ಮಾಯು ಎರಕವು ಹುಟ್ಟಿರುವುದೆಂದು ಹೇಳುವರು. ಅಖಂಡಪರಿಪೂರ್ಣವು ಯಾವಕಾಲದಲ್ಲಿಯೂ ಅಖಂಡವಾಗಿರಲಿಲ್ಲ, ಅಂಡ ಪಿಂಡ ಬ್ರಹ್ಮಾಂಡಗಳಲ್ಲಿ ಆನಂದಿಸುವ ಯೋಗಿಗಳೂ ಜ್ಞಾನಿಗಳೂ ಅಚಲಪರಿಪೂರ್ಣ ಬ್ರಹ್ಮವನ್ನು ತಿಳಿಯದೆ ಭ್ರಾಂತಿರೂಪಕವಾದ ಎರಕವನ್ನು ಬ್ರಹ್ಮನೆಂದು ಭಾವಿಸಿ, ತಮ್ಮ ಭ್ರಾಂತಿಯನ್ನು ಬಿಡಲಾರದೆ ಜನನ ಮರಣಗಳನ್ನು ಹೊಂದುತ್ತಿರುವರೆಂದು ಹೇಳಿದಳು.

ಐದನೆ ಕನ್ನೆಯಾದ ಸರ್ವಪರಿಪೂರ್ಣ ಚಂದ್ರಕಾಂತಾಮಣಿಯು ಶ್ಲೋಕವನ್ನು ನೋಡಿ, ರಾಜವರ್ಯನೆ!

ಆತ್ಮಾತೀತಂ ಕೇವಲಾತ್ಮಾ | ವೇಹೋನಾಸ್ತಿ ಕದಾಚನ ॥
ಅಸ್ತಿನಾಸ್ತೀತಿ ಕೋ ವೇದ | ನಿರ್ಣಯೊನಾಸ್ತಿ ಸರ್ವದಾ ॥ ಎಂದೂ
ನದಂತಿ ವೇದಶಾಸ್ತ್ರಾಣಿ | ವದಂತಿ ಭುವನತ್ರಯಂ ॥ ಎಂದೂ
ಅಶರೀರಂ ಸರ್ವದಾಸ್ತಿ | ಶರೀರಂ ರಹಿತಂಸದಾ ॥ ಎಂದೂ

ಹೇಳಲ್ಪಡುತ್ತಿರುವುದರಿಂದ ಅಚಲಪರಿಪೂರ್ಣ ಬ್ರಹ್ಮದಲ್ಲಿ ಭ್ರಾಂತಿರೂಪವಾದ ಎರಕವು ಉತ್ಪನ್ನವಾಗಿರುವುದು, ಆ ಎರಕವೇ ಇಂದ್ರಜಾಲವು ಹೇಂದ್ರಜಾಲಕನು, ಎರಕವೇ ಲೋಕಾಲೋಕಗಳು, ಎರಕವೇ ಪಾಪವಿಯು, ಎರಕವೇ ನಾಮರೂಪವೂ, ವೇದಶಾಸ್ತ್ರವೂ ಆಗಿರುವುದು, ಎರಕವೇ ಜನನ ಮರಣಗಳು, ಕಾರ್ಯಕಾರಣವೂ ಎರಕವೇ, ಸೂತ್ರಧಾರಿಯೂ ಎರಕವೇ, ಎರಕವೇ ಸರ್ವಸಾಕ್ಷಿಯು, ನಾಮರೂಪಗಳಿಂದ ಕೂಡಿರುವ ಸರ್ವವೂ ಎರಕವೇ, ಆ ಎರಕವೇ ಭ್ರಾಂತಿಯು, ಎರಕವೇ ಚಂಡಾಲತ್ವವು. ತಾಯಿತಂದೆಗಳು ಸತ್ತರೂ ಈ ಎರಕಕ್ಕೆ ಮೂಲವಿಲ್ಲ, ಅನೆಯು ತಿಂದ ಬೀಲದಹಣ್ಣಿನಲ್ಲಿರುವ ತಿಗುಳಿಲ್ಲಾ ಹೋಗಿ ಬುರುಡೆಯಾಗಿರುವಂತೆ ಈ ಎರಕವು ಮಾಯವಾಗಿ ಹೋಗುವುದು. ಹೀಗೆಂದು ಆರ್ಯದರ್ಪದ ಆಪ್ತೋಪದೇಶಜ್ಯೋತಿಗಳನ್ನು ತೋರಿಸಿ, ಎರಕವು ಕಣ್ಣುರೆಪ್ಪೆಗಳನ್ನು ಮುಚ್ಚಿಕೊಂಡು, ಅಚಲಪರಿಪೂರ್ಣ ಬ್ರಹ್ಮವನ್ನೂ ಪ್ರತ್ಯಕ್ಷವಾಗಿ ನೋಡೆಂದು ಸಂಜ್ಞೆಯಂ ಮಾಡಿದಳು. ಆ ರಾಜವರ್ಯನು ಹಾಗೆಯೇ ಅಚಲಪರಿಪೂರ್ಣ ಬ್ರಹ್ಮವನ್ನು ನೋಡುತ್ತಾ, ಆಕ್ಷರ್ಯವನ್ನು ಹೊಂದಿ, ಆ ದೇವಿಯರನ್ನು ನಾನಾವಿಧವಾಗಿ ಹೊಗಳಿ, ಆ ಕನ್ನೆಯರ ಪಾದಗಳಿಗೆ ಅಡ್ಡಬಿದ್ದನು, ಅವರು ತನ್ನನ್ನು ಮೇಲಕ್ಕೆಬ್ಬಿಸಿ, ಏಳೂ! ಅಚಲಪರಿಪೂರ್ಣ ಬ್ರಹ್ಮದಿಂದ ಏನೂ ಪುಟ್ಟುವುದಿಲ್ಲ, ಹಗ್ಗವನ್ನು ಹಾವೆಂದು ಭ್ರಾವಿಸುವಂತೆಯೂ, ಒಣಗಿದ ಮಾನಿನಮರದಲ್ಲಿ ಕಾಣಬರುವ ನೀರಿನಹಾಗೂ, ಭ್ರಾಂತಿರೂಪವಾಗಿರುವುದು, ಸ್ವಪ್ನದಲ್ಲಿನ ಶರೀರದಂತೆ ಇರುವದು ಇದೇ ಗುರುಮಂತ್ರವು, ಇದೇ ಷೋಡಶಾಕ್ಷರಿ, ಎರಕವನ್ನೇ ಗುರುದಕ್ಷಿಣೆಯಾಗಿ ಕೊಟ್ಟು, ಎರಕವಿಲ್ಲದ ಈ ಪರಿಪೂರ್ಣಕ್ಕಿಂತಲೂ ಬೇರೆ ಯಾವುದೂ ಇಲ್ಲ, ಎಲ್ಲವೂ ಉತ್ತಮ ಪರಿಪೂರ್ಣವು, ಇದೇ ಗುರುವಾಕ್ಯವು, ಇದಕಿಂತಲೂ ಬೇರೆ ಇಲ್ಲವು. ಹೀಗೆಂದು ದ್ವಾದಶಾಕ್ಷರೀಮಂತ್ರವನ್ನು ಉಪದೇಶಿಸಿದಳು. ಆ ರಾಜೇಂದ್ರನು ಮಹಾತ್ಮರಾದ ತಾಯಿಯರೇ! ಅಚಲಪರಿಪೂರ್ಣಬ್ರಹ್ಮಕ್ಕೂ ಆಕಾಶಕ್ಕೂ ಭೇದವೇನೆಂದು ವಿನಯದಿಂದ ಕೇಳಲು, ಆ ನಾಗಕನ್ನೆಯು, ರಾಜೇಂದ್ರಾ! ಅವೆರಡಕ್ಕೂ ಭೇದವುಂಟು, "ಆಕಾಶಕ್ಕೆ ಗುಣಶ್ಚೈವ ನಿಶ್ಚೈವ ಬ್ರಹ್ಮಉಚ್ಯತೇ" ಎಂಬುದಾಗಿ ಹೇಳಲ್ಪಡುತ್ತಲಿರುವ ಶ್ರುತಿಪ್ರಮಾಣರೀತ್ಯಾ ಆಕಾಶಕ್ಕೆ ಒಬ್ಬ ಗುಣಕವೆಂದೂ, ಅಚಲಪರಿಪೂರ್ಣ ಬ್ರಹ್ಮಕ್ಕೆ ಒಬ್ಬ ಗುಣಿಯಿಲ್ಲವೆಂದೂ ತಿಳಿಯಬೇಕಾದ

ಲಿವೆ. ಸರ್ವಲೋಕಗಳಲ್ಲಿಯೂ, ಸಕಲ ದೇಶಗಳಲ್ಲಿಯೂ, ಸಕಲ ವಸ್ತು ಗಳಲ್ಲಿಯೂ, ಎಲ್ಲಾ ಕಾಲದಲ್ಲಿಯೂ ಪರಿಪೂರ್ಣವು ಚಲಿಸದೆ ಒಂದಾಗಿರು ತ್ತವೆ, ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲವೆಂದು ಜ್ಞೋಧಿಸಿ, ರಾಜೇಂ ದ್ರನ ಸಂಶಯವನ್ನು ಹೋಗಲಾಡಿಸಿ, ದಿವ್ಯರತ್ನಗಳಿಂದ ಪೂಜಿಸಲ್ಪಟ್ಟವ ರಾಗಿ ಆ ನಾಗಕನ್ಯೆಯರು ಅಂತರ್ಧಾನವನ್ನು ಹೊಂದಿದರೆಂದು ಶ್ರೀಕೃಷ್ಣ ನು ಅರ್ಜುನನಿಗೆ ಜ್ಞೋಧಿಸಿದನು, ಆಗ ಅರ್ಜುನನು ಶ್ರೀಕೃಷ್ಣಸ್ವಾಮಿಗೆ ನಮಸ್ಕಾರವಂ ಮಾಡಿ, ಆಪದ್ಬಾಂಧವ! ಭಕ್ತಜನರಕ್ಷಕಾ! ಚಂದ್ರಕೇ ತುಮಹಾರಾಯನ ಚರಿತ್ರೆಯು ಬಹಳ ಪರಿಶುದ್ಧವಾದದ್ದು, ಜನನ ಮರಣ ಪ್ರವಾಸ ರಹಿತವಾದದ್ದು, ಭ್ರಾಂತಿಯನ್ನು ಪರಿಹರಿಸತಕ್ಕದ್ದೆಂದು ಅನೇ ಕವಿಧವಾಗಿ ಕೊಂಡಾಡಿ, ಆ ರಾಜೇಂದ್ರನ ಮುಂಬಿನ ಕಥಾವೃತ್ತಾಂತ ವನ್ನೂ, ಇದನ್ನು ಅಭ್ಯಾಸ ಮಾಡಿದರೆ ಉಂಟಾಗುವ ಫಲವನ್ನೂ ತಿಳಿಸ ಬೇಕೆಂದು ಪ್ರಾರ್ಥಿಸಿದ ಅರ್ಜುನನನ್ನು ಕುರಿತು ಶ್ರೀಕೃಷ್ಣನಿಂತೆಂದನು.

ಅರ್ಜುನಾ ಕೇಳು! ಆ ಚಂದ್ರಕೇತುಮಹಾರಾಯನು ಅಚಲನಾ ಗಯೂ, ಪರಿಪೂರ್ಣನಾಗಿಯೂ, ಪ್ರಕೃತಿಜ್ವಯ ದೋಷರಹಿತನಾಗಿ ಯೂ, ಅನೇಕ ದಿನಗಳು ರಾಜ್ಯಭಾರವಂ ಮಾಡಿ, ಅನಂತರ ದೇಹಪರಿ ತ್ಯಾಗವನ್ನು ಮಾಡಿ, ಶುದ್ಧಾತ್ಮನಾಗಿ ಶಾಶ್ವತವಾದ ಮುಕ್ತಿಯನ್ನು ಪಡೆ ದನು ಅಭ್ಯಾಸಿಗಳಾದವರಿಗೆ ಮೋಕ್ಷಕ್ಕೆ ಸಮನಾದ ಪದವಿಗಳು ಐಂ ದರೆ- ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಸಾಷ್ಟ್ರ್ಯತ್ವ ಎಂಬ ಐದು ಪದವಿಗಳೂ ಸಂಭವಿಸುವವು, ಆದರೆ ಇತರಿಗಾದರೊ ಎರಕವನ್ನು ಬಿಡರಾದಕಾರಣ ಭ್ರಮರೂಪಕವಾದ ಮೋಕ್ಷವನ್ನು ಪಡೆದು ಮತ್ತೆ ಜ ನ್ಮವನ್ನು ಪಡೆಯುವರು, ಹರಿಸರಾಮಿಗಳ ಅಂಶವನ್ನು ಪಡೆದು, ಇಹಲೋ ಕದಲ್ಲಿ ಅವತಾರ ಮಾಡಿದ ಸಾಕಾರಸ್ವರೂಪನಾದ ಸದ್ಗುರುಸ್ವಾಮಿಯ ನ್ನು ವಿಷ್ಣುವೆಂದೂ, ಪರಮೇಶ್ವರನೆಂದೂ ಭಾವಿಸಿ, ಆ ಮಹಾತ್ಮರಿಗೆ ಅರ್ಚನೆ ವಂದನೆಗಳನ್ನು ಮಾಡಿ, ಆ ಗುರುಮುಖದಿಂದ ಭಕ್ತಿಯೋಗಜ್ಞಾ ನಗಳನ್ನು ಪಡೆದು, ಸುಖವಾಗಿ ಮೋಕ್ಷವನ್ನು ಹೊಂದಬಹುದೇ ಹೊರತು ದೇಹಾಚಾರ ನಿಷ್ಠರಿಂದಲೂ, ಮಣಿಚೂರ್ಣಾದಿಗಳಿಂದಲೂ, ವಿಭೂತಿ ರುದ್ರಾಕ್ಷಿಗಳ ಆಡಂಬರವಿರುವವರಿಂದಲೂ, ಅಷ್ಟಾಕ್ಷರಿ, ಷಡಕ್ಷರಿ, ಪಂ ಚಾಕ್ಷರಿ, ಚತುರಕ್ಷರೀ ಮಂತ್ರಪಠನ ಮಾತ್ರದಿಂದಲೂ ಎಂದಿಗೂ ಮೋ ಕ್ಷವನ್ನು ಪಡೆಯಲಾರರು. ಅವಿವೇಕಿಗಳಾದ ಕೆಲವರು ಪರಸ್ಪರ ಮಾತ್ಸರ್ಯ ತೆಯನ್ನು ಸಹಿಸದೆ ಗುಡಿ ಗೋಪುರಾದಿಗಳಿಗೆ ಹೋಗಿ, ವಿಧವಿಧವಾದ ದಾರು ಪಾಷಾಣ ಮಾರಿ ಲೋಹಾದಿ ಪ್ರತಿಮೆಗಳನ್ನು ಪೂಜಿಸುವರು, ಪ್ರತಿಮೆಗ ಳಿಗೆ ಅರ್ಚನೆ ವಂದನೆಗಳನ್ನು ಮಾಡುವುದು ನಿಷ್ಪ್ರಯೋಜನವೆಂದೂ,

ಅಜ್ಞಾನಿಗಳಿಗೆ ಹೀಗಾದರೂ ಭಕ್ತಿಯುಂಟಾಗಲೆಂದು ತ್ರೇತಾಯುಗದಲ್ಲಿ ಪರಿಪರಾದಿಗಳು ಪ್ರತಿಮೆಗಳನ್ನು ಕಲ್ಪಿಸಿದರೆಂದೂ, ಶ್ರೀ ಭಾಗವತ ಮಹಾಪುರಾಣದಲ್ಲಿ ಸಾರಿ ಹೇಳುತ್ತಿರುವುದು. ಹೀಗಿರುವಲ್ಲಿ ವಿವೇಕಿಗಳಾದವರೇ ದಾರು ಪಾಷಾಣ ಲೋಹಾದಿಗಳಲ್ಲಿ ಪರಿಪೂರ್ಣ ಬ್ರಹ್ಮವಿರುವುದೆಂದು ತಿಳಿಯಬೇಕೇಕೊರತು ದಾರು ಪಾಷಾಣ ಲೋಹಾದಿ ವಿಗ್ರಹಗಳಲ್ಲಿ ಮಾತ್ರವಿರುವುದೆಂದು ಭಾವಿಸಿರುವರು ಎಂದೆಂದಿಗೂ ಮುಕ್ತರಾಗಲಾರರು, ಜನನ ಮರಣ ಪ್ರವಾಹದಲ್ಲಿಯೇ ಸದಾ ಈಜುತ್ತಿರಬೇಕಾಗುವುದೆಂದು ಶ್ರೀ ಕೃಷ್ಣಸ್ವಾಮಿಯು ಬೋಧಿಸಿದನು.

ಅರ್ಜುನಾ ಕೇಳು! ಮತ್ತೆ ಕೆಲವರು ಸದ್ಗುರುವಾದ ತೀರ್ಥವೇ ಗಂಗಾ ತೀರ್ಥವೆಂದು ತಿಳಿಯದೆ, ಅನೇಕ ತೀರ್ಥಯಾತ್ರೆಗಳನ್ನು ಮಾಡಿ, ನೀರುಕಾಗೆಗಳಂತೆ ಆ ತೀರ್ಥಗಳಲ್ಲಿ ಮುಳುಗುವರು, ಆ ತೀರ್ಥಗಳಲ್ಲಿಯೆ ಸದಾ ವಾಸಿಸುವ ನೊಣಹೆಗ್ಗಣಗಳಿಗೂ, ಮೀನುಗಳಿಗೂ, ಏಡಿಕಾಯಿಗಳಿಗೂ ಎಷ್ಟರಮಾತ್ರ ಫಲವೊ ಇಂತಹ ತೀರ್ಥಯಾತ್ರಿಕರಿಗೂ ಅಷ್ಟೇ ಫಲವೆಂದು ಕಾಶೀಖಂಡದ ಮಾಹಾತ್ಮ್ಯೆಯು ಸಾರುತ್ತಲಿದೆ. ದೇಹಾಚಾರನಿಷ್ಠರು ನಿಷ್ಕಾಯೋಜನವೆಂದು ತಿಳಿಯದೆ, ಆತ್ಮನನ್ನು ನಾರಾಯಣಮೂರ್ತಿಯಲ್ಲಿ ಸಂಧಾನಮಾಡಿ, ಗುರುಮಂತ್ರವೇ ಮುಕ್ತಿಮಾರ್ಗವೆಂದು ತಿಳಿದು, ಭಿನ್ನ ಭಾವವಿಂದಿರುವುದು ಪ್ರಯೋಜನವಿಲ್ಲ. ಈ ಹನ್ನೆರಡು ಪುಣ್ಯಚರಿತ್ರೆಗಳನ್ನು ಯಾರು ಓದುತ್ತಾರೆಯೋ, ಯಾರು ಕೇಳುತ್ತಾರೆಯೋ, ಯಾರು ಮಹರ್ಷಿಗಳ ಸೇವೆಯುಂ ಮಾಡಿ ಕೀರ್ತಿಸುವರೋ, ಅಂಥ ಮಹನೀಯರು ಪುಣ್ಯಲೋಕವನ್ನು ಪಡೆಯುವುದರಲ್ಲಿ ಯಾವ ಸಂಶಯವೂ ಇಲ್ಲವು. ಗುರುಮುಖದಿಂದ ಅಚಲಪರಿಪೂರ್ಣಪ್ರಭಾವವನ್ನ ತಿಳಿದ ಪುಣ್ಯಾತ್ಮರಿಗೆ ಮೋಕ್ಷವೂ, ವಿದೇಹಕೈವಲ್ಯವೂ, ಸಾಯುಜ್ಯಪದವಿಯೂ ಉಂಟಾಗುವುದರಲ್ಲಿ ಅನುಮಾನವಿಲ್ಲವು. ನೀನೂಕೂಡ ನಿನ್ನೆಸ್ವರೂಪವನ್ನು ದರ್ಶಿಸಿ ಈ ವಿಶ್ವರೂಪಕವಾದ ಶರೀರಾತ್ಮಕವಾದ ಎರಕವನ್ನು ಸಮಾನವಾಗಿ ಬಿಟ್ಟುಬಿಟ್ಟು, ಶ್ರೇಷ್ಠವಾದ ಮುಕ್ತಿಯನ್ನು ಹೊಂದು ಎಂಬುದಾಗಿ ಷೋಡಶಾಕ್ಷರೀಮಂತ್ರವನ್ನು ಬೋಧಿಸಿ, ಶರೀರದ ಮೇಲಣ ಮಮತೆಯನ್ನು ತೊಲಗಿಸಿ, ದ್ವಾದಶಾಕ್ಷರೀ ಮಂತ್ರವನ್ನು ಉಪದೇಶ ಮಾಡಿದನು. ಅನಂತರ ಶ್ರೀಕೃಷ್ಣನು ಅರ್ಜುನನನ್ನು ಕುರಿತು, ಅರ್ಜುನಾ! ನಿನಗೆ ಪುನರ್ಜನ್ಮವುಂಟಾಗದಿರಲೆಂದೂ, ಪರಮಪದವಿಯನ್ನೂ ಪಡೆಯೆಂದೂ ಅಚಲಪರಿಪೂರ್ಣವನ್ನು ಸಂಜ್ಞೆಮಾಡಿ ಬೋಧಿಸಿದನು. ಶ್ರೀಕೃಷ್ಣಸ್ವಾಮಿಯಿಂದ ಬೋಧಿಸಲ್ಪಟ್ಟ ಅರ್ಜುನನಾದರೊ ಪರಮಾನಂದಭರಿತನಾಗಿ ಶ್ರೀಕೃಷ್ಣನೆಂಬ ಗುರುರಾಯನ ಪಾದಪದ್ಮಕ್ಕೆ ಅಷ್ಟಾಂಗ ನಮಸ್ಕಾರವನ್ನು

ನನನ್ನು ಮೇಲಕ್ಕೆತ್ತಿ, ಆದರಿಸಿ, ಆನಂದದಿಂದ ದೇವರಥವನ್ನು ಭಾಷಿಸುತ್ತಾ ಇದ್ದು, ಸ್ವಲ್ಪಹೊತ್ತಿನ ಮೇಲೆ ಇಬ್ಬರೂ ಸುಖನಿದ್ರೆಯಿಂಗೈದರೆಂಬಲ್ಲಿಗೆ ಶ್ರೀ ಕೃಷ್ಣಚೋಧಾಮೃತಸಾರದೊಳು ಹನ್ನೆರಡನ ಕಥೆಯು ಸಮಾಪ್ತವಾಯಿತು.

ನರನಾರಾಯಣರು ಖಾಂಡವನವನ್ನು ದಹಿಸಿದ ಕಥೆಯು.

ಹದಿಮೂರನೆಯ ದಿನ ಪ್ರಾತಃಕಾಲದಲ್ಲಿ ಶ್ರೀ ಕೃಷ್ಣಸ್ವಾಮಿಯು ಅರ್ಜುನನನ್ನು ನೋಡಿ, ಕುಂತೀಸುತನೆ! ನಾವು ಈ ಸ್ಥಳದಲ್ಲಿ ಹನ್ನೆರಡು ದಿನಗಳು ಕಳೆದೆವು. ಇನ್ನು ಮುಂದೆ ನಾವು ಮಾಡತಕ್ಕ ಕಾರ್ಯನೇನಿರುವುದು, ನಾನು ಇಲ್ಲಿ ಹೆಚ್ಚು ದಿನಗಳಿದ್ದರೆ ನಮ್ಮ ತಾಯಿತಂದೆಗಳು ಯೋಚಿಸುವರು ಗೋಪಿಕಾಸ್ತ್ರೀಯರು ದುಃಖದಿಂದ ನಾನಾ ಪ್ರಕಾರವಾಗಿ ಯೋಚಿಸುವರು. ಆದ್ದರಿಂದ ನೀನೂ ಜಾಗ್ರತೆಯಾಗಿ ಹೊರಡು. ಇಲ್ಲಿಗೆ ಬಹು ಸಮೀಪದಲ್ಲಿಯೇ ದೇವೇಂದ್ರನ ಖಾಂಡವನವಿರುವುದು. ಅದನ್ನು ನೋಡಿಕೊಂಡು ಅನಂತರ ಪಟ್ಟಣಕ್ಕೆ ಹೋಗೋಣವೆನ್ನಲು ಅರ್ಜುನನೂ ಸಮ್ಮತಿಸಿದನು. ಇಬ್ಬರೂ ಪ್ರಯಾಣಮಾಡಿ ಆ ವನವನ್ನು ಹೊಕ್ಕು, ವಿಭವಿಭವಾದ ಹಣ್ಣುಗಳನ್ನೂ, ಹೂಬಳ್ಳಿಗಾವ ಲತೆಗಳನ್ನೂ ನೋಡುತ್ತಾ ಆ ವನಶೃಂಗಾರವನ್ನೀಕ್ಷಿಸಿ ಆನಂದಿಸುತ್ತಿದ್ದರು. ಆಗ್ನಿದೇವನು ತನ್ನ ವ್ಯಾಧಿಯುಂ ಹೋಗಲಾಡಿಸಲಿಕ್ಕಾಗಿಯೇ ನರನಾರಾಯಣರಿರ್ವರೂ ಈ ವನಕ್ಕೆ ಬಂದಿರುವರೆಂದು ಭಾವಿಸಿ, ಅವರಬಳಿಗೆ ಹೋಗಿ, ಅವರನ್ನು ಸಾಷ್ಟಾಂಗವಾಗಿ ನಮಸ್ಕರಿಸಿ, ತನಗೆ ಬಂದಿರುವ ಸಾಂಸ್ಪರೋಗವನ್ನೂ, ಬ್ರಹ್ಮನಿಂದ ತನಗೆ ಬಂದಿರುವ ವರವನ್ನೂ ತಿಳಿಸಿ, ಶ್ರೀ ಕೃಷ್ಣಸ್ವಾಮಿಗೆ ಪಂಚಜನ್ಯಶಂಖವನ್ನೂ ಅರ್ಜುನನಿಗೆ ಶ್ವೇತಾಶ್ವಗಳನ್ನು ಕಟ್ಟಿರುವ ದಿವ್ಯ ರಥವನ್ನೂ, ಅಕ್ಷಯ ತೂಣೀರವನ್ನೂ ಕೊಟ್ಟು, ಅವುಗಳ ಪ್ರಭಾವವನ್ನು ವಿವರಿಸಿ ಹೇಳಿದನು. ನರನಾರಾಯಣರಿಬ್ಬರೂ ಸಂತೋಷಾತಿಶಯದಿಂದ, ಆ ಅಗ್ನಿಪುರುಷನಿಗೆ ನಮಸ್ಕಾರವಂ ಮಾಡಿಸಿ, ಸರ್ವದರ್ಶನಾ ಅಗ್ನಿಪುರುಷನೆ! ಸಕಲ ಲೋಕಗಳಲ್ಲಿರುವ ಯಜ್ಞಯಾಗಾದಿಗಳನ್ನು ಮಾಡುವುದಕ್ಕೂ ಸ್ವರ್ಗಸಾಧನೆಗೂ ಸಹಾಯಕನಾಗಿರುವನು ನೀನಲ್ಲವೆ! ಅಹಹ! ತ್ರಿಲೋಕಗಳನ್ನೂ ಪವಿತ್ರವಾಗಿ ಮಾಡುವ ನಿನಗೂ ಅವಜ್ಞೆತೆಯನ್ನು ಕಲ್ಪಿಸುವರುಂಟೆ! ಒಳ್ಳೀದು ಇರಲಿ; ನೀನು ಧೈರ್ಯದಿಂದ ದೇವೇಂದ್ರನ ವನವನ್ನು ದಹಿಸೆಂದು ಆಜ್ಞಾಪಿಸಿದೆನೆನ್ನಿತ್ತರು. ಆಗ ಅಗ್ನಿದೇವನಿಗೆ ಅತ್ಯುತ್ಸಾಹವಾಯಿತು. ಭೂಭಾರವನ್ನು ಹೋಗಲಾಡಿಸಿ, ಲೋಕರಕ್ಷಣೆಗಾಗಿಯೇ ಅವತರಿಸಿಬಂದ ಆ ಕೃಷ್ಣಾರ್ಜುನರನ್ನು ನಾನಾವಿಧ ಪ್ರಕಾರವಾಗಿ ಕೀರ್ತಿಸಿ, ಕೂಡಲೆ ಆ ವನವನ್ನು ನಾ

ಲ್ಲು ದಿಕ್ಕುಗಳಲ್ಲಿಯೂ ಭಸ್ಮಮಾಡುವುದಕ್ಕೆ ಆರಂಭಿಸಲು, ಆ ವನಪಾಲಕರು ಕೂಡಲೆ ಹೋಗಿ ದೇವೇಂದ್ರನಿಗೆ ತಿಳಿಯಪಡಿಸಿದರು. ಆಗ ದೇವೇಂದ್ರನು ಅಷ್ಟಮೇಘಗಳನ್ನೂ ಕರೆದುಕೊಂಡು ವೇಗವಾಗಿ ಬರುತ್ತಲಿದ್ದನು. ಅಷ್ಟರಲ್ಲಿಯೇ ಅರ್ಜುನನು ತನ್ನ ಬಾಣಗಳಿಂದ ಆ ವನವನ್ನೆಲ್ಲಾ ಆವರಿಸಿ, ಒಳಗಡೆ ಅಗ್ನಿಪುರುಷನನ್ನು ನಿರ್ಭಯವಾಗಿರೆಂದು ಹೇಳಿ, ಆ ವನಕ್ಕೆ ಎರಡು ಬಾಗಿಲುಗಳನ್ನು ನಿರ್ಮಿಸಿ, ಒಂದು ಬಾಗಿಲಿನಲ್ಲಿ ತಾನೂ, ಮತ್ತೊಂದು ಬಾಗಿಲಿನಲ್ಲಿ ಶ್ರೀ ಕೃಷ್ಣನೂ ಕಾವಲಿದ್ದರು. ದೇವೇಂದ್ರನು ಅಷ್ಟಮೇಘಗಳಿಂದ ಅಪರಿಮಿತವಾಗಿ ವರ್ಷಿಸಿದರೂ ಕೂಡ ಆ ವನಕ್ಕೆ ಒಂದು ಹನಿಯಾದರೂ ಬಿಳಲಿಲ್ಲ. ಇಂದ್ರನಿಗೆ ಬಹು ಕೋಪವುಂಟಾಗಿ ಪಾಷಾಣವರ್ಷವನ್ನು ಕರೆದನು. ಅದೂ ನಿಷ್ಫಲವಾಯಿತು, ಆ ಬಳಿಕ ಇಂದ್ರನಿಗೂ ಅರ್ಜುನನಿಗೂ ಘೋರ ಯುದ್ಧವಾಯಿತು. ದೇವೇಂದ್ರನು ಅರ್ಜುನನನ್ನು ಜಯಿಸಲಾರದೆಕೋಗಿ, ಆಶ್ಚರ್ಯಪಟ್ಟು, ಇದು ನರನಾರಾಯಣರ ಪ್ರಭಾವವೆಂದು ತಿಳಿದು, ಆಕೃಷ್ಣ ಭಗವಂತನನ್ನು ಕೊಂಡಾಡಿ, ಅರ್ಜುನನನ್ನು ಆಲಿಂಗಿಸಿ, ಮುದ್ದಿಟ್ಟುಕೊಂಡು, ಕೋರಿದ ವರಗಳನ್ನು ಕೊಟ್ಟು, ಅವರನ್ನು ಆದರಿಸಿ, ತನ್ನ ಲೋಕಕ್ಕೆ ಹೊರಟುಕೊಂಡನು. ಅನಂತರ ಕೃಷ್ಣಾರ್ಜುನರಿಬ್ಬರೂ ಸಂತೋಷದಿಂದ ತಮಗೆ ಶರಣಾಗತನಾದ ಅಗ್ನಿಪುರುಷನನ್ನೂ ಕರೆದುಕೊಂಡು ಇಂದ್ರಪ್ರಸ್ಥಪುರಕ್ಕೆ ಹೋಗಿಸೇರಿ, ಧರ್ಮಪುತ್ರನನ್ನು ನಮಸ್ಕರಿಸಿ ಅಗ್ನಿದೇವನಿಂದ ತಮಗೆ ಲಭಿಸಿದ ವಾಸುದೇವ ಅಸ್ತ್ರಶಸ್ತ್ರಗಳ ಸಂಗತಿಯನ್ನೂ, ದೇವೇಂದ್ರನು ಸೋತುಹೋದ ವೃತ್ತಾಂತವನ್ನು ಅಗ್ನಿಪುರುಷನ ಸಂತೋಷವನ್ನೂ, ದೇವೇಂದ್ರನ ಸನ್ಮಾನವನ್ನೂ ಧರ್ಮರಾಯನಿಗೆ ತಿಳಿಸಲು, ಧರ್ಮತನಯನು ಸಂತೋಷದಿಂದ ಶ್ರೀ ಕೃಷ್ಣಸ್ವಾಮಿಯನ್ನು ಆಲಿಂಗನಮಾಡಿಕೊಂಡು, ಮಹಾನುಭಾವನೆ! ದೇವಾದಿದೇವನೆ! ಲೋಕರಕ್ಷಕಾ! ನಿನ್ನ ಮಹಿಮೆಯೆಂದಲ್ಲವೆ ನನ್ನ ತನುಜನಾದ ಅರ್ಜುನನು ಅಸಾಧಾರಣವಾದ ಕೀರ್ತಿ ಶೌರ್ಯ ಸಾಹಸಗಳನ್ನು ಪಡೆದದ್ದು. ಹೀಗೆಂದುಹೇಳಿ ಶ್ರೀ ಕೃಷ್ಣಮೂರುತಿಯನ್ನು ಹೊಗಳಿ ಮಯನನ್ನು ಆದರಿಸಿದನು. ಆಗ ಮಯನು ಧರ್ಮರಾಯನ ಶಾಂತಗುಣವನ್ನು ನೋಡಿ, ಒಂದು ಸಭೆಯನ್ನು ನಿರ್ಮಿಸಿದನು. ಭೀಮಸೇನನ ಕಾರ್ಯಕ್ಕೆತಕ್ಕ ಒಂದು ಗದೆಯನ್ನು ಕೊಟ್ಟು ಹೊರಟುಹೋದನು. ಆಬಳಿಕ ಕೃಷ್ಣಸ್ವಾಮಿಯು ಕುಂತೀದೇವಿ ಧರ್ಮರಾಜಾದಿಗಳಿಂದ ತನ್ನ ಪಟ್ಟಣಕ್ಕೆ ಹೊರಡಲು ಅನುಜ್ಞೆಯಂಪಡೆದು, ಸುಭದ್ರಾದೇವಿಗೆ ಬುದ್ಧಿಮಾತುಗಳನ್ನು ಹೇಳಿ, ಅರ್ಜುನನು ತನ್ನ ಹಿಂದೆಯೇ ಬರಲು, ಪ್ರಯಾಣೋನ್ಮುಖನಾಗಿ ಸ್ವಲ್ಪದೂರ ಹೋದಬಳಿಕ ಇಂದ್ರಜಿತ್ತುವಾದ ಪಾರ್ಥನು ಶ್ರೀ ಕೃ

ಷ್ಣಮೂರ್ತಿಯ ಅನುಮತಿಯಂತೆ ಇಂದ್ರಪ್ರಸ್ಥ ಪಟ್ಟಣಕ್ಕೆ ಹಿಂದಿರುಗಿ ಹೋದನು.

ದ್ವಾರಕಿಯಲ್ಲಿಯಾದರೊ, ಶ್ರೀ ಕೃಷ್ಣಸ್ವಾಮಿಯು ಬಂದನೆಂದು ಸುವಾರ್ತೆಯನ್ನು ಕೇಳಿದ ಗೋಪಿಕಾಸ್ತ್ರೀಯರೂ ದೇವಕೀವಸುದೇವರೂ ಸಂತೋಷಪಟ್ಟರು. ಭಕ್ತವತ್ಸಲನಾದ ಸ್ವಾಮಿಯು ಸಂತೋಷಾತಿಶಯದಿಂದ ತಾಯಿತಂದೆಗಳ ಬಳಿಗೆ ಹೋಗಿ, ಸಾಷ್ಟಾಂಗದಂಡಪ್ರಣಾಮವಂಗೈದು, ಸುಭದ್ರಾದೇವಿಯ ಸುಖಸಂತೋಷವನ್ನೂ, ಸೋದರತ್ತೆಯಾದ ಕುಂತಿಯು ಸುಖವಾಗಿಟ್ಟುಕೊಂಡಿರುವುದನ್ನೂ, ಸುಭದ್ರೆಗೆ ಅತ್ತೆಯನೆಮೇಲೂ, ಭಾವಂದಿರ ಮೇಲೂ, ನೈದಂದಿರ ವಿಷಯದಲ್ಲಿಯೂ, ಗಂಡನನೆಮೇಲೂ ಇರುವ ಭಕ್ತಿಪ್ರೇಮಗಳನ್ನೂ ತಿಳಿಸಿ, ತಾಯಿತಂದೆಗಳಿಗೆ ಪರಮ ಸಂತೋಷವನ್ನುಂಟುಮಾಡಿ, ತಾನೂ ಲೀಲಾಜಾಲದಿಂದ ನಿತ್ಯಾನಂದವನ್ನು ಪಡೆಯುತ್ತಲಿದ್ದನು.

ಮೋಕ್ಷದಾಯಕವಾದ ಈ ಮಹಾಗ್ರಂಥವನ್ನು ಓದುವರೂ, ಕೇಳುವರೂ, ಭಾವವಿಮುಕ್ತರಾಗಿ ಇಹಲೋಕದಲ್ಲಿ ನಿತ್ಯಸುಖವನ್ನೂ ಆಮುಷ್ಮಿಕ ಸಂಬಂಧವಾದ ಶಾಶ್ವತ ಸುಖವನ್ನೂ ಪಡೆಯುವರು. ಈ ಹನ್ನೆರಡು ವೇದಾಂತ ಮಾರ್ಗಗಳನ್ನೂ ಯಾರು ಗುರುಮುಖದಿಂದ ಪಡೆಯುವರೊ ಅಂತಹ ಮಹನೀಯರು ಮೋಕ್ಷವನ್ನೂ ವಿದೇಹಕೈವಲ್ಯವನ್ನೂ ಪಡೆಯುವರು. ಇದಕ್ಕೆ ಯಾವ ಅನುಮಾನವೂ ಇಲ್ಲವು. ಉದ್ಗ್ರಂಥಗಳನ್ನು ಪಠಿಸಿ, ಗುರುಕಾರ್ಯವಂಮಾಡಿ, ವೇದಾಂತಪ್ರವರ್ತಕನಾಗುವುದರಿಂದಲೇ ಮೋಕ್ಷಕ್ಕೆ ದಾರಿಯು. ಅನೇಕ ಉಪವಾಸ ವ್ರತಗಳನ್ನಾಚರಿಸಿ, ಅನೇಕ ಭಾಷೆಗಳನ್ನು ಕಲಿತು, ಪದ್ಮಾಸನ ಬದ್ಧನಾಗಿ ನೀರಿನಮೇಲೆ ಕುಳಿತರೂ, ಸನ್ಯಾಸಿಯ ವೇಷವನ್ನು ತಾಳಿ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದರೂ, ತುಳಸೀ ಮಾಲಿಕೆಯನ್ನು ಅಲಂಕರಿಸಿಕೊಂಡರೂ, ನಾರುಸೀರೆ ಜಡೆಗಳನ್ನು ಧರಿಸಿದರೂ, ದಿಗಂಬರರಾಗಿ ತಿರುಗಿದರೂ, ದೇವರನ್ನು ನೋಡಲಾರದೆಯೂ, ಸಚ್ಚಿದಾನಂದವನ್ನು ಬಿಡನೆಯೂ ಇದ್ದರೂ ಕಡಡ ಜನ್ಮರಹಿತರಾಗಲಾರರು.

ಅನುಜರೇ! ನೀವು ಕುಟಿಲ ಬುದ್ಧಿಯನ್ನೂ ಕಪಟ ಚಿತ್ತವನ್ನೂ ಬಿಟ್ಟು ದೇವರನ್ನು ತೋರಿಸತಕ್ಕ ಸದ್ಗುರುಸ್ವಾಮಿಯನ್ನು ಹುಡಕಿ, ಅಂತಹ ಆಚಾರ್ಯನ ಪಾದಾರವಿಂದಗಳಿಗೆ ಅರ್ಚನ ವಂದನಾದಿ ಪೂಜೆಗಳನ್ನು ಮಾಡಿ, ಧೂಪ ದೀಪ ನೈವೇದ್ಯಗಳಿಂದ ಸಂತೋಷಪಡಿಸಿ, ಆ ಆಚಾರ್ಯವರ್ಯನ ತೀರ್ಥ ಪ್ರಸಾದಗಳನ್ನು ಗ್ರಹಿಸಿ, ಆ ಮಹಾತ್ಮನ ಕೃಪೆಗೆ ಪಾತ್ರರಾಗ್ಬೇಕು. ದೇವರ ದರ್ಶನವಂ ಮಾಡಿಕೊಂಡು ಜನ್ಮರಹಿತರಾಗಿರಿ. ಮತಗಳೆ

ಲ್ಲಾ ನಿಷ್ಪ್ರಯೋಜನವು. ಯಾವ ಮತಗಳಿಂದಲೂ ದೇವದರ್ಶನವಾಗುವುದಿಲ್ಲ. ದೇವರಿಗೆ ಸ್ವರೂಪನಾಮಗಳಿಲ್ಲ. ದಾರುಪಾಷಾಣಾದಿ ಪ್ರತಿಮೆಗಳನ್ನು ದೇವರಾಗಿ ಭಾವಿಸಿ ಪೂಜಿಸುವುದು ನಿಷ್ಪ್ರಯೋಜನವು. ವೇದಾಂತಮಾರ್ಗಗಳು ಯಾವಾಗಲೂ ಸುಖದಾಯಕಗಳೇ ಹೊರತು ಕಷ್ಟ ಮಾರ್ಗವಲ್ಲವು. ವಿಕೃತವಾದ ದೇಹ ಸನ್ಯಾಸಿವೇಷವನ್ನು ನೋಡಿ ಭ್ರಾಂತಿಪಡಬಾರದು. ಅವರ ಮಾರ್ಗಗಳು ಅಭ್ಯಾಸಮಾರ್ಗಗಳಾಗಿವೆಯೇ ಹೊರತು ಅವರು ವೇದಾಂತಿಗಳಲ್ಲವು. ವೇದಾಂತಿಗಳೆ ಆರೂಢರು. ಅವರಿಗೆ ಯಾವ ನಿಯಮವೂ ಇಲ್ಲ. ಅವರು ಸಚ್ಚಿದಾನಂದದಿಂದ ಅತೀತರಾದ ಮಹನೀಯರು. ನಿಜಸ್ವರೂಪವನ್ನು ನೋಡಿರುವ ಅವರಿಗೆ ಭೇದಭಾವನೆಯಿಲ್ಲ. ಅವರು ಮನೆಗಳಲ್ಲಿಯಾಗಲಿ, ಅರಣ್ಯಗಳಲ್ಲಿಯೇ ಆಗಲಿ ಇರುವರು ಅವರನ್ನು ಕಂಡುಹಿಡಿದು, ಅವರಿಂದ ಅನಾಯಾಸವಾಗಿ ದೇವರ ದರ್ಶನವನ್ನು ಮಾಡಿಕೊಂಡು, ಜನನಮರಣ ಪ್ರವಾಹದಿಂದ ದಾಟುವುದೇ ಮೇಲಲ್ಲದ್ದು. ಸೂಕ್ಷ್ಮವಿಂದ ಮೋಕ್ಷವೆಂದೂ, ಭ್ರಮಾರಾಹಿತ್ಯವೇ ಒಟ್ಟು ಬಯಲೆಂದೂ ಹೇಳುವ ಹಿರಿಯರ ಮಾತು ಯುಕ್ತವಾದದ್ದು. ವೇದಾಂತವೇ ಸತ್ಯವು. ಇದೇ ಗುರುವಾಕ್ಯವು. ಇದಕ್ಕಿಂತಲೂ ಚೀರೆಯಾದ ಮಹಾವಾಕ್ಯವಿಲ್ಲವು. ಪ್ರಪಂಚದಲ್ಲಿರುವ ಸಮಸ್ತವೂ ಇಂದ್ರಜಾಲವು. ಎಲ್ಲಾ ಮಾಯಾಮಯವು. ಈ ಎರಕಕ್ಕೆ ಮೂಲವಿಲ್ಲವು. ಮಾಯಾ ಕರೀರವನ್ನು ಎಂದೆಂದಿಗೂ ನಂಬಬಾರದು. ಆದುದರಿಂದ ಈ ಕಲಿಯುಗದ ಲೌಕಿಕ ಮಾರ್ಗಗಳಲ್ಲಿ ಕುಂಬಳದ ಹೂಳುಗೆಳಂತೆ ನಟಿಸುತ್ತಾ, ಸದಾ ಭಗವಧ್ಯಾನವಿಂದ ಅಪಾರವಾದ ಭಕ್ತಿಯನ್ನೂ, ಹಿರಿಯರಲ್ಲಿ ಶ್ರದ್ಧೆಯನ್ನೂ, ಅತಿಥಿಗಳಮೇಲೆ ಪ್ರೇಮವನ್ನೂ, ಜೀವರಾಶಿಗಳಲ್ಲಿ ಕನಿಕರವನ್ನೂ, ತಾಯಿತಂದೆಗಳಲ್ಲಿ ಶ್ರದ್ಧಾ ಭಕ್ತಿ ವಿಶ್ವಾಸಗಳನ್ನೂ, ಕಾರಣಗುರುವಿನ ಅನುಮತಿಯನ್ನು ಪಡೆದು ವರ್ತಿಸುತ್ತಾ, ಇದ್ದರೆ ಮೋಕ್ಷವು ಅಂತಹ ಮಹನೀಯನಿಗೆ ಹಸ್ತಗತವಾಗುವುದೆಂದು ಧರ್ಮತನಯನು ತನ್ನ ಅನುಜರಿಗೆ ಬೋಧಿಸಿದನೆಂಬಲ್ಲಿಗೆ

ಶ್ರೀ ಕೃಷ್ಣಬೋಧಾಮೃತಸಾರವು ಸಂಪೂರ್ಣವು.

ಶ್ಲೋ॥ ನಮಾಮಿ ನಾರಾಯಣಪಾದಪಙ್ಕಜಂ |
ಕರೋಮಿ ನಾರಾಯಣ ಪೂಜನಂ ಸದಾ ॥
ವದಾಮಿ ನಾರಾಯಣ ನಾಮ ನಿರ್ಮಲಂ |
ಸ್ಮರಾಮಿ ನಾರಾಯಣ ತತ್ವಮವ್ಯಯಂ ॥

ಶ್ರೀ ಕೃಷ್ಣಾರ್ಪಣಮಸ್ತು.

ವಿಜ್ಞಾಪನಾ.

ನಮ್ಮಪುಸ್ತಕಶಾಲೆಯಲ್ಲಿ ಕನ್ನಡ, ಸಂಸ್ಕೃತ, ತೆನಗು ಭಾಷೆಗಳಲ್ಲಿ ಕಥೆ, ಕಾವ್ಯ, ವೇದಾಂತ, ಪುರಾಣ, ಜೋತಿಷ್ಯ, ನಾಟಕ ಮೊದಲಾದ ಗ್ರಂಥಗಳು. ಪಂಚಾಂಗಗಳು, ಕ್ಯಾಲೆಂಡರ್ ಇವು ಯಾವಾಗಲೂ ಬಿಕರಿಗೆ ಸಿದ್ಧವಾಗಿರುತ್ತವೆ. ಸ್ಫುಟವಾದ ಅಕ್ಷರಗಳಿಂದ ಸೊಗಸಾದ ಕಾಗದದಲ್ಲಿ ಛಾಪಿಸಲ್ಪಟ್ಟಿವೆ, ಪುಸ್ತಕಗಳನ್ನು ತರಿಸುವವರಿಗೆ ಸುಲಭವಾಗಿರುವಂತೆ ಕ್ರಯವನ್ನು ಸರಿಮಾಡಿರುತ್ತೇವೆ ಬೇಕಾದವರು ನಮ್ಮ ಕಂಪನಿಗೆ ಬರೆದು ವಿ. ಪಿ. ಟಪಾಲ್ ಮೂಲಕ ತರಿಸಿಕೊಳ್ಳಬಹುದು.

ನಮ್ಮ ಮುದ್ರಾಕ್ಷರಶಾಲೆಯಲ್ಲಿ ಪ್ರಸಿದ್ಧಪತ್ರಿಕೆ, ಲಗ್ನಪತ್ರಿಕೆ, ಬಿಲ್‌ಫಾರಂ, ವಿಜಿಟಿಂಗ್ ಕಾರ್ಡ್ಸ್, ಬ್ಯಾಲನ್ಸ್‌ಷೀಟ್ ನೋಟೀಸ್‌ಫಾರಂ, ಮತ್ತು ಕನ್ನಡಪುಸ್ತಕಗಳು ಇವೇ ಮೊದಲಾದ ವಿವಿಧವಾದ ಮುದ್ರಿಸುವ ಕೆಲಸಗಳು ಸೊಗಸಾಗಿಯೂ ನೇತ್ರಾನಂದಕರವಾಗಿಯೂ ಸುಲಭದರಗಳಿಗೆಮಾತಲ್ಲಡುತ್ತೆ.

ಕಾಗದ ಬರೆಯುವವರು ತಮ್ಮ ಹೆಸರು ಊರು ಹೋಬಳಿ ತಾಲ್ಲೂಕು ಡಿಸ್ಟ್ರಿಕ್ಟು, ಇವುಗಳನ್ನು ಚನ್ನಾಗಿ ತಿಳಿಯುವಂತೆ ಸ್ಪಷ್ಟವಾಗಿ ಬರೆಯಬೇಕು. ವಿಳಾಸವು ಚನ್ನಾಗಿ ತಿಳಿಯದಪಕ್ಷದಲ್ಲಿ ಭಾಂಗಿಯನ್ನು ಕಳುಹಿಸುವುದಕ್ಕಾಗುವುದಿಲ್ಲ.

ಕಾಗದಗಳು ಬಂದದಿವಸವಾಗಲಿ ಇಲ್ಲದಿದ್ದರೆ ಎರಡನೆಯ ದಿವಸವಾಗಲಿ ಪುಸ್ತಕಗಳನ್ನು ಕಳುಹಿಸುತ್ತೇವೆ. ಒಂದು ವಾರದೊಳಗಾಗಿ ಕಳುಹಿಸದೆ ಹೋದರೆ ನಿಮ್ಮ ಕಾಗದವು ನಮಗೆ ಸೇರಲಿಲ್ಲವೆಂದು ಮತ್ತೊಂದು ಕಾಗದವನ್ನು ಬರೆದರೆ ಉತ್ತಮ.

ವಿಳಾಸ.—

ಟಿ. ಯು. ಕೃಷ್ಣಯ್ಯಶೆಟ್ಟಿ,

ಶ್ರೀ ವೆಂಕಟೇಶ ಪ್ರಸ್ ಪ್ರೊಪ್ರೈಟರ್, ಚಿಕ್ಕಪೇಟೆ ಬೆಂಗಳೂರು ಸಿಟಿ.